ಮಂಗಳವಾರ, ಅಕ್ಟೋಬರ್ 26, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 297 | ಪುಟ 14

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ಅನುದಿನವೂ ಅನುರಣಿಸುವ ಏಕತಾನತೆಯನ್ನು, ಉತ್ತರವೇ ಇರದ ಪ್ರಶ್ನೆಗಳ ಸುಳಿಯನ್ನು ಬಿಡಿಸಿಕೊಂಡು ಮುಂದಡಿಯಿಡುವ ಚೈತನ್ಯವನ್ನು ಹವ್ಯಾಸಗಳು ನಮಗೆ ಒದಗಿಸುತ್ತವೆ.

ಆಳ-ಅಗಲ

ಚೀನಾ ಗಡಿ ತಕರಾರು ಅಕ್ರಮ ಸಕ್ರಮದ ಹುನ್ನಾರ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,967 ▲	18,125 ▲	₹49,760 (ಬೆಂಗಳೂರು)	₹67,800 (ಬೆಂಗಳೂರು)	75.08 ▼

ಮಳೆ ಆರ್ಭಟ: ಕೃಷಿ ಭೂಮಿ ಜಲಾವೃತ 6

ಲಂಚ ಆರೋಪದ ತನಿಖೆಗೆ ಒತ್ತಡ: ಎನ್‌ಸಿಬಿ ಅಧಿಕಾರಿ ಸಮೀರ್‌ಗೆ ಇಕ್ಕಟ್ಟು

ಡ್ರಗ್ಸ್ ಪ್ರಕರಣ: ದಿನವೂ ತಿರುವು

ಪ್ರಜಾವಾಣಿ ವಾರ್ತೆ

ಮುಂಬೈ: ಮುಂಬೈ ಕಡಲ ಕಿನಾರೆಯ ಸಮೀಪ ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಸೇವನೆ ಪ್ರಕರಣವು ದಿನಕ್ಕೊಂದು ತಿರುವು ಪಡೆಯುತ್ತಿದೆ. ಐಷಾರಾಮಿ ಹಡಗಿನ ಮೇಲೆ ದಾಳಿ ನಡೆಸಿದ್ದ ಮಾದಕ ಪದಾರ್ಥ ನಿಯಂತ್ರಣ ಬ್ಯೂರೊದ (ಎನ್‌ಸಿಬಿ) ಅಧಿಕಾರಿ ಸಮೀರ್ ವಾಂಖೆಡೆ ಅವರೇ ಈಗ ಸಮಸ್ಯೆಗೆ ಸಿಲುಕಿಕೊಂಡಿದ್ದಾರೆ ಎನ್ನಲಾಗುತ್ತಿದೆ.

ಆರ್ಯನ್ ಖಾನ್

ಬಾಲಿವುಡ್ ಸೂಪರ್‌ಸ್ಟಾರ್ ಶಾರುಕ್ ಖಾನ್ ಅವರ ಮಗ ಆರ್ಯನ್ ಖಾನ್ ಮತ್ತು ಇತರರು ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಸೇವನೆ ಪ್ರಕರಣದಲ್ಲಿ ಆರೋಪಿಗಳಾಗಿದ್ದಾರೆ. ಆದರೆ, ಈ ಪ್ರಕರಣದ ಬಗ್ಗೆಯೇ ಈಗ ಹಲವು ಅನುಮಾನಗಳು ಹುಟ್ಟಿಕೊಂಡಿವೆ. ಉದ್ಧವ್ ಠಾಕ್ರೆ ನೇತೃತ್ವದ ಮಹಾರಾಷ್ಟ್ರ ಸರ್ಕಾರದ ಹಲವು ಸಚಿವರು ಇದೊಂದು ನಕಲಿ ಪ್ರಕರಣ ಎಂಬ ಗಂಭೀರ ಆರೋಪ ಮಾಡಿದ್ದಾರೆ.

ಪ್ರಕರಣದಿಂದ ಆರ್ಯನ್‌ನನ್ನು ಕೈಬಿಡಲು ವಾಂಖೆಡೆ ಮತ್ತು ಇತರರು ₹25 ಕೋಟಿಗೆ ಬೇಡಿಕೆ ಇರಿಸಿದ್ದರು ಎಂದು ಪ್ರಮುಖ ಸಾಕ್ಷಿ ಪ್ರಭಾಕರ ಸೈಲ್ ಎಂಬುವವರು ಆರೋಪ ಮಾಡಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಎನ್‌ಸಿಬಿ ನೈರುತ್ಯ ವಲಯ ಕಚೇರಿ ಉಪ ಪ್ರಧಾನ ನಿರ್ದೇಶಕರಿಗೆ ಪ್ರಮಾಣಪತ್ರ ಸಲ್ಲಿಸಿದ್ದಾರೆ. ಈ ಪ್ರಮಾಣ ಪತ್ರವನ್ನು ನೈರುತ್ಯ ವಲಯ ಕಚೇರಿಯು, ಎನ್‌ಸಿಬಿ ಕೇಂದ್ರ ಕಚೇರಿಗೆ ರವಾನಿಸಿತ್ತು. ಇದರ ಆಧಾರದಲ್ಲಿ, ಎನ್‌ಸಿಬಿ ಕೇಂದ್ರ ಕಚೇರಿಯು ಸೋಮವಾರ ಮಧ್ಯಾಹ್ನವೇ ತನಿಖೆಗೆ ಆದೇಶಿಸಿದೆ.

ಲಂಚದ ಆರೋಪ ಕುರಿತಂತೆ ವಿಶೇಷ ತನಿಖಾ ತಂಡದಿಂದ ತನಿಖೆ ಆಗಬೇಕು ಎಂದು ಆಡಳಿತಾರೂಢ ಮಹಾ ವಿಕಾಸ ಅಘಾಡಿಯ ಅಂಗಪಕ್ಷಗಳಾದ ಶಿವಸೇನಾ, ಎನ್‌ಸಿಪಿ ಮತ್ತು ಕಾಂಗ್ರೆಸ್ ಒತ್ತಾಯಿಸಿವೆ. ಅದರ ಬೆನ್ನಿಗೇ, ಉದ್ಧವ್ ಅವರು ರಾಜ್ಯದ ಗೃಹ ಸಚಿವ ದಿಲೀಪ್ ವಲ್ಸೆ ಪಾಟೀಲ್ ಅವರ ಜತೆಗೆ ಚರ್ಚೆ ನಡೆಸಿದ್ದಾರೆ.

ಆರ್ಯನ್ ಜಾಮೀನು ಅರ್ಜಿಯು ಬಾಂಬೆ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬರುವುದಕ್ಕೆ ಒಂದು ದಿನ ಮೊದಲು ಈ ಎಲ್ಲ ಬೆಳವಣಿಗೆಗಳು ಆಗಿವೆ.

10ನೇ ಪುಟ ನೋಡಿ

ಜಾತಿ ಪ್ರಮಾಣಪತ್ರ ತಿರುಚಿದ ಸಮೀರ್: ನವಾಬ್ ಆರೋಪ

'ಎನ್‌ಸಿಬಿ ವಲಯ ನಿರ್ದೇಶಕ ಸಮೀರ್ ವಾಂಖೆಡೆ ಕೆಲಸಕ್ಕೆ ಸೇರುವುದಕ್ಕಾಗಿ ತಮ್ಮ ಜಾತಿ ಪ್ರಮಾಣಪತ್ರವನ್ನು ತಿರುಚಿದ್ದಾರೆ. ವಾಂಖೆಡೆ ಮುಸ್ಲಿಂ, ಆದರೆ ತಾನು ಹಿಂದೂ ಎಂದು ಪ್ರಮಾಣ ಪತ್ರ ಸೃಷ್ಟಿಸಿ ಭಾರತೀಯ ರೆವೆನ್ಯೂ ಸೇವೆಗೆ ಸೇರಿದ್ದಾರೆ' ಎಂದು ಮಹಾರಾಷ್ಟ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ನವಾಬ್ ಮಲಿಕ್ ಆರೋಪಿಸಿದ್ದಾರೆ.

ಸಮೀರ್ ವಾಂಖೆಡೆ

ಈ ಆರೋಪವನ್ನು ಸಮೀರ್ ವಾಂಖೆಡೆ ಅಲ್ಲಗಳೆದಿದ್ದಾರೆ. 'ನಾನು ಜಾತಿ ಪ್ರಮಾಣಪತ್ರವನ್ನು ತಿರುಚಿಲ್ಲ. ನನ್ನ ವೈಯಕ್ತಿಕ ಮತ್ತು ಖಾಸಗಿ ಜೀವನಕ್ಕೆ ಸಂಬಂಧಿಸಿದ ವಿವರಗಳನ್ನು ನವಾಬ್ ಮಲಿಕ್ ಅವರು ಸಾರ್ವಜನಿಕವಾಗಿ ಬಹಿರಂಗಗೊಳಿಸುತ್ತಿದ್ದಾರೆ. ಇದು ಮಾನಹಾನಿ ಪ್ರಕರಣ' ಎಂದು ಸಮೀರ್ ವಾಂಖೆಡೆ ಮಾಧ್ಯಮಗೋಷ್ಠಿಯಲ್ಲಿ ಹೇಳಿದ್ದಾರೆ.

ಸಮೀರ್ ವಾಂಖೆಡೆ ಅವರ ಬೆಂಬಲಕ್ಕೆ ಅವರ ತಂದೆ ಮತ್ತು ಪತ್ನಿ ಬಂದಿದ್ದಾರೆ. ಸಮೀರ್ ಅವರು ಯಾವುದೇ ರೀತಿಯಲ್ಲಿ ವಂಚನೆ ಮಾಡಿಲ್ಲ ಎಂದು ಅವರು ಸ್ಪಷ್ಟನೆ ನೀಡಿದ್ದಾರೆ. ಅಲ್ಲದೆ, 'ನವಾಬ್ ಮಲಿಕ್ ಅವರು ಅಕ್ರಮವಾಗಿ ಆಸ್ತಿ ಸಂಪಾದನೆ ಮಾಡಿದ್ದಾರೆ. ಅದರ ವಿರುದ್ಧ ತನಿಖೆ ನಡೆಸಬೇಕು' ಎಂದು ಸಮೀರ್ ಅವರ ತಂದೆ ಆಗ್ರಹಿಸಿದ್ದಾರೆ.

ನನಗೆ ರಕ್ಷಣೆ ನೀಡಿ: ಸಾಕ್ಷಿಯ ಮನವಿ

ಎನ್‌ಸಿಬಿ ಅಧಿಕಾರಿ ವಿರುದ್ಧ ಲಂಚದ ಆರೋಪ ಮಾಡಿರುವ ಸಾಕ್ಷಿ ಪ್ರಭಾಕರ್ ಸೈಲ್ ಅವರು, 'ನನಗೆ ಜೀವ ಬೆದರಿಕೆ ಇದೆ. ರಕ್ಷಣೆ ನೀಡಿ' ಎಂದು ಮುಂಬೈ ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ.

ಸೋಮವಾರ ಬೆಳಿಗ್ಗೆ ಆಯುಕ್ತರ ಕಚೇರಿಗೆ ಭೇಟಿ ನೀಡಿದ್ದ ಪ್ರಭಾಕರ್ ಅವರು, ಆಯುಕ್ತರ ಜತೆಗೆ ಸುಮಾರು 1 ಗಂಟೆ ಮಾತುಕತೆ ನಡೆಸಿದ್ದಾರೆ. ತಮಗೆ ರಕ್ಷಣೆ ನೀಡುವಂತೆ ಕೋರಿದ್ದಾರೆ. ನಂತರ ತಮ್ಮ ಹುಟ್ಟೂರಿನಲ್ಲಿ ಕುಟುಂಬದವರಿಗೂ ಬೆದರಿಕೆ ಇದೆ. ಅವರಿಗೂ ರಕ್ಷಣೆ ನೀಡಬೇಕು ಮತ್ತು ಅವರನ್ನು ಭೇಟಿ ಮಾಡಲು ಹೋದಾಗ ತಮಗೂ ರಕ್ಷಣೆ ನೀಡಬೇಕು ಎಂದು ಮನವಿ ಸಲ್ಲಿಸಿದ್ದಾರೆ.

ಜಿಯೊಫೋನ್ ನೆಕ್ಸ್ಟ್‌ಗೆ 'ಪ್ರಗತಿ ಒಎಸ್'

ನವದೆಹಲಿ (ಪಿಟಿಐ): ಜಿಯೊ ಕಂಪನಿಯು ಸೋಮವಾರ ಬಿಡುಗಡೆ ಮಾಡಿರುವ ವಿಡಿಯೊದ ಪ್ರಕಾರ, ಜಿಯೊ ಪ್ಲಾಟ್‌ಫಾರಂ ಮತ್ತು ಗೂಗಲ್ ಕಂಪನಿ ಜೊತೆಯಾಗಿ ಜಿಯೊಫೋನ್ ನೆಕ್ಸ್ಟ್‌ಗೆ 'ಪ್ರಗತಿ ಒಎಸ್' ಅಭಿವೃದ್ಧಿಪಡಿಸಿವೆ. ದೀಪಾವಳಿಗೆ ವೇಳೆಗೆ ಈ ಫೋನ್ ಬಿಡುಗಡೆ ಆಗುವ ನಿರೀಕ್ಷೆ ಇದೆ.

'ಪ್ರಗತಿ ಓಎಸ್' ಆಂಡ್ರಾಯ್ಡ್‌ನಿಂದ ಚಾಲಿತವಾಗಿದೆ. ಜಿಯೊ ಮತ್ತು ಗೂಗಲ್‌ನಲ್ಲಿ ಇರುವ ಉತ್ತಮ ಮನಸ್ಸುಗಳನ್ನು ಒಟ್ಟುಗೂಡಿಸುವ ಉತ್ಸಾಹಭರಿತ ಪ್ರಯತ್ನದ ಫಲಿತಾಂಶ ಇದಾಗಿದೆ ಎಂದು ಆಂಡ್ರಾಯ್ಡ್‌ನ ಪ್ರಧಾನ ವ್ಯವಸ್ಥಾಪಕ ರಾಮ್ ಪಾಪಟ್ಲಾ ಹೇಳಿದ್ದಾರೆ.

ಹತ್ತು ಭಾರತೀಯ ಭಾಷೆಗಳಿಗೆ ಅನುವಾದ ಮಾಡಬಲ್ಲ ವೈಶಿಷ್ಟ್ಯವನ್ನು ಜಿಯೊಫೋನ್ ನೆಕ್ಸ್ಟ್ ಹೊಂದಿರಲಿದೆ. ರಿಲಯನ್ಸ್ ಸಮೂಹದ ನಿಯೋಲಿಂಕ್ ಕಂಪನಿಯು ತಿರುಪತಿ ಮತ್ತು ಶ್ರೀಪೆರಂಬದೂರಿನಲ್ಲಿ ತಯಾರಿಸಲಿರುವ ಕ್ವಾಲ್ಕಂ ಪ್ರೊಸೆಸರ್ ಅನ್ನು ಈ ಫೋನ್ ಹೊಂದಿರಲಿದೆ ಎಂದು ಕಂಪನಿಯು ತಿಳಿಸಿದೆ.

ಐಪಿಎಲ್ ಟೂರ್ನಿಗೆ ಲಖನೌ, ಅಹಮದಾಬಾದ್ ತಂಡಗಳು

ದುಬೈ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಗೆ ಎರಡು ಹೊಸ ತಂಡಗಳು ಸೇರ್ಪಡೆಯಾಗಿವೆ. ಸೋಮವಾರ ನಡೆದ ಬಿಡ್ ಪ್ರಕ್ರಿಯೆಯಲ್ಲಿ ಲಖನೌ ಮತ್ತು ಅಹಮದಾಬಾದ್ ಫ್ರಾಂಚೈಸಿಗಳ ಮಾಲೀಕರು ಯಶಸ್ಸು ಗಳಿಸಿದ್ದಾರೆ.

ಸಂಜೀವ್ ಗೋಯೆಂಕಾ ಅವರ ಆರ್.ಪಿ–ಎಸ್‌ಸಿ ಗ್ರೂಪ್ ಕಂಪನಿಯು ಲಖನೌ ಫ್ರಾಂಚೈಸ್‌ನ ಮಾಲೀಕತ್ವ ಹೊಂದಿದ್ದು, ಅಹಮದಾಬಾದ್ ಫ್ರಾಂಚೈಸ್‌ನ ಒಡೆತನ ಸಿವಿಸಿ ಕ್ಯಾಪಿಟಲ್ ಕಂಪನಿಯ ಪಾಲಾಗಿದೆ. ಕ್ರಮವಾಗಿ ₹ 7090 ಕೋಟಿ ಮತ್ತು ₹ 5600 ಕೋಟಿ ಮೊತ್ತಕ್ಕೆ ಈ ಕಂಪನಿಗಳು ಬಿಡ್ ಪಡೆದುಕೊಂಡಿವೆ.

ಮುಂದಿನ ವರ್ಷದ ಆವೃತ್ತಿಯಲ್ಲಿ ಎರಡು ಹೊಸ ತಂಡಗಳು ಕಣಕ್ಕಿಳಿಯಲಿವೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಈಚೆಗೆ ತಿಳಿಸಿತ್ತು.



ಇವುಗಳ ಫ್ರಾಂಚೈಸ್ ನಿಂದ ₹ 10 ಸಾವಿರ ಕೋಟಿಯಷ್ಟು ಆದಾಯ ಗಳಿಸುವುದು ಮಂಡಳಿಯ ಗುರಿಯಾಗಿತ್ತು. ಆದರೆ ಅಚ್ಚರಿ ಎಂಬಂತೆ ಒಟ್ಟು ₹ 12,690 ಕೋಟಿ ವ್ಯಯಿಸಲು ಫ್ರಾಂಚೈಸ್‌ಗಳು ಮುಂದಾಗಿವೆ.

ಗೌತಮ್ ಅದಾನಿ ಅವರ ಅದಾನಿ ಗ್ರೂಪ್ ಕೂಡ ತಂಡವೊಂದರ ಮಾಲೀಕತ್ವ ಹೊಂದಲು ಬಯಸಿತ್ತು. ಆದರೆ ₹ 5000 ಕೋಟಿ ವ್ಯಯಿಸುವುದಕ್ಕಷ್ಟೇ ಆ ಕಂಪನಿ ಸಿದ್ಧವಾಗಿತ್ತು. ಮ್ಯಾಂಚೆಸ್ಟರ್ ಯುನೈಟೆಡ್‌ನ ಗ್ಲೇಜರ್ಸ್ ಮತ್ತು ಟೊರೆಂಟ್ ಗ್ರೂಪ್ ಕೂಡ ಬಿಡ್ ಪಡೆದುಕೊಳ್ಳುವಲ್ಲಿ ವಿಫಲವಾದವು.

ತಲಾ ₹ 10 ಲಕ್ಷ ಮೊತ್ತದ ಟೆಂಡರ್ ದಾಖಲೆ ಪತ್ರಗಳನ್ನು ಒಟ್ಟು 22 ಕಂಪನಿಗಳು ಪಡೆದುಕೊಂಡಿದ್ದವು. ಆದರೆ ಮೂಲ ಬೆಲೆಯನ್ನು ₹ 2000 ಕೋಟಿಗೆ ನಿಗದಿ ಮಾಡಿದ್ದರಿಂದ ಕೊನೆಯದಾಗಿ ಆರು ಕಂಪನಿಗಳು ಮಾತ್ರ ಬಿಡ್‌ನಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದವು. ದಾಖಲೆ ಪತ್ರಗಳನ್ನು ಖರೀದಿಸುವ ದಿನಾಂಕಗಳನ್ನು ಬಿಸಿಸಿಐ ಎರಡು ಬಾರಿ ಮುಂದೂಡಿತ್ತು.

ಸಂಜೀವ್ ಗೋಯೆಂಕಾ ಅವರ ಕೋಲ್ಕತ್ತ ಮೂಲದ ಆರ್.ಪಿ–ಎಸ್‌ಸಿ 2016 ಮತ್ತು 2017ರ ಆವೃತ್ತಿಗಳಲ್ಲಿ ಕಣದಲ್ಲಿದ್ದ ರೈಸಿಂಗ್ ಪುಣೆ ಸೂಪರ್ ಜೈಂಟ್ಸ್ ತಂಡದ ಮಾಲೀಕತ್ವ ಹೊಂದಿತ್ತು.

ಬೆಂಗಳೂರಿನ ಗಿರಿನಗರದ ಜ್ಞಾನದೀಪ್ತಿ ಇಂಗ್ಲಿಷ್ ಶಾಲೆಗೆ ಸೋಮವಾರ ಬಂದ ವಿದ್ಯಾಥಿಗಳ ಜೊತೆ ಶಿಕ್ಷಕಿಯೊಬ್ಬರು ಕುಶಲೋಪರಿಯಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ

ನೀಟ್–ಪಿಜಿ ಕೌನ್ಸೆಲಿಂಗ್‌ಗೆ ಸುಪ್ರೀಂ ತಡೆ

ನವದೆಹಲಿ: ಇತರ ಹಿಂದುಳಿದ ವರ್ಗ (ಒಬಿಸಿ) ಹಾಗೂ ಆರ್ಥಿಕವಾಗಿ ದುರ್ಬಲ ವರ್ಗಕ್ಕೆ (ಇಡಬ್ಲ್ಯುಎಸ್) ವೈದ್ಯ ಶಿಕ್ಷಣದ ಅಖಿಲ ಭಾರತ ಕೋಟಾದಲ್ಲಿ ನಿಗದಿ ಮಾಡಿದ ಮೀಸಲಾತಿ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳನ್ನು ಇತ್ಯರ್ಥಪಡಿಸುವವರೆಗೆ ನೀಟ್ ಸ್ನಾತಕೋತ್ತರ ಕೌನ್ಸೆಲಿಂಗ್ ಪ್ರಕ್ರಿಯೆ ಆರಂಭಿಸಬಾರದು ಎಂದು ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರಕ್ಕೆ ಸೋಮವಾರ ನಿರ್ದೇಶಿಸಿದೆ. 6

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬಿಕೋ ಎನ್ನುತ್ತಿದ್ದ ವಾತಾವರಣದಲ್ಲಿ ಸಂಭ್ರಮ

ಶಾಲಾವರಣ: ಚಿಣ್ಣರ ಬಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ಕಲರವ, ಶಿಕ್ಷಕರ ಪ್ರೀತಿಯ ದನಿ ಇಲ್ಲದೆ ಸ್ತಬ್ಧವಾಗಿದ್ದ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲಿ 1ರಿಂದ 5ರವರೆಗೆ ಭೌತಿಕ ತರಗತಿಗಳು ಸೋಮವಾರ (ಅ. 25) ಆರಂಭವಾಗುತ್ತಿದ್ದಂತೆ, ಕಲಿಕೆ–ಬೋಧನಾ ಚಟುವಟಿಕೆ ಗರಿಗೆದರಿದೆ. ಬಿಕೋ ಎನ್ನುತ್ತಿದ್ದ ವಾತಾವರಣಕ್ಕೆ ಮೊದಲಿನ ಕಳೆ ಮರಳಿದೆ.

ಪ್ರಾಥಮಿಕ ಹಂತದ ತರಗತಿಗಳಿರುವ ಒಟ್ಟು 62,032 ಶಾಲೆಗಳ ಪೈಕಿ 24,761 (ಶೇ 39.92) ಶಾಲೆಗಳಲ್ಲಿನ ವಿದ್ಯಾರ್ಥಿಗಳ ಹಾಜರಾತಿ ಮಾಹಿತಿ ಲಭ್ಯವಾಗಿದೆ. ಅದರ ಪ್ರಕಾರ, ಒಂದನೇ ತರಗತಿಗೆ ಶೇ 27.39, 2ನೇ ತರಗತಿಗೆ ಶೇ 24.69, 3ನೇ ತರಗತಿಗೆ ಶೇ 23.58, 4ನೇ ತರಗತಿಗೆ ಶೇ 24.13, 5ನೇ ತರಗತಿಗೆ 23.95 ವಿದ್ಯಾರ್ಥಿಗಳು ಹಾಜರಾಗಿದ್ದಾರೆ.

ಕೋವಿಡ್ ಕಾರಣ ಒಂದು ವರ್ಷ ಎಂಟು ತಿಂಗಳಿನಿಂದ ಮುಚ್ಚಿದ್ದ ಶಾಲೆಯ ತರಗತಿಯ ಕೊಠಡಿಗಳಲ್ಲಿ ಶನಿವಾರ ಮತ್ತು ಭಾನುವಾರವೇ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಗಿತ್ತು. ಅಂತರ ಕಾಯ್ದುಕೊಳ್ಳಲು ವೃತ್ತಾಕಾರದಲ್ಲಿ ಗುರುತುಗಳನ್ನು ಮಾಡಲಾಗಿತ್ತು. ಪ್ರವೇಶ ದ್ವಾರಗಳನ್ನು ತಳಿರು ತೋರಣ, ಬಲೂನಿನಿಂದ ಅಲಂಕರಿಸಲಾಗಿತ್ತು.

ಶಾಲೆಯ ಪ್ರವೇಶದ್ವಾರದಲ್ಲಿ ಮಕ್ಕಳ ದೇಹದ ಉಷ್ಣತೆ ಪರೀಕ್ಷಿಸಿ ಬಳಿಕ ಒಳಗೆ ಬಿಡಲಾಯಿತು. ಕೆಲವು ಕಡೆ ಮಕ್ಕಳ ಮೇಲೆ ಶಿಕ್ಷಕರು ಪುಷ್ಪಾರ್ಚನೆ ಮಾಡಿ ಸ್ವಾಗತಿಸಿದರು. ಬ್ಯಾಂಡ್, ವಾದನದ ಮೂಲಕವೂ ಬರಮಾಡಿಕೊಂಡರು. ಗುಲಾಬಿ ಹೂವು, ಸಿಹಿ ನೀಡಿ ಶಾಲಾರಂಭಕ್ಕೆ ಸಡಗರ ತಂದರು. ಮಹಿಳೆಯರು ಕಲಶ ಹೊತ್ತು ಮಕ್ಕಳ ಜೊತೆ ಮೆರವಣಿಗೆಯಲ್ಲಿ ಬಂದರು.

ಈ ನಡುವೆ, 'ಮಕ್ಕಳಿಗೂ ಲಸಿಕೆ ಹಾಕಿಸಿದ ನಂತರವೇ ಶಾಲೆ ಆರಂಭಿಸಿದ್ದರೆ ಒಳ್ಳೆಯದಿತ್ತು' ಎಂದು ಕೆಲವು ಪೋಷಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. 'ಮನೆಯಲ್ಲಿ ನಾವು ಎಷ್ಟು ಹೇಳಿದರೂ ಮಕ್ಕಳು ಕೇಳುವುದಿಲ್ಲ. ಮಗ್ಗಿ ಕೂಡ ಮರೆತಿದ್ದಾರೆ. ಶಾಲೆ ಆರಂಭವಾಗಿದ್ದು ಒಳ್ಳೆಯದಾಯಿತು' ಎಂದು ಶಾಲೆ ಆರಂಭಿಸಿದ ಸರ್ಕಾರದ ತೀರ್ಮಾನವನ್ನು ಕೆಲವು ಪೋಷಕರು ಮೆಚ್ಚಿ ಮಾತನಾಡಿದರು.

ಶಿವಮೊಗ್ಗದ ಗಾಡಿಕೊಪ್ಪ ತಾಂಡ, ಮಲವಗೊಪ್ಪ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕೀರಮಟ್ಟಿ ಕಿರಿಯ ಪ್ರಾಥಮಿಕ ಶಾಲೆಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಭೇಟಿ ನೀಡಿ ಮಕ್ಕಳಿಗೆ ಸಿಹಿ ಹಂಚುವ ಮೂಲಕ ಸ್ವಾಗತಿಸಿದರು. ಶಾಲೆಯಲ್ಲಿ ಕೈಗೊಳ್ಳಲಾಗಿರುವ ಮುಂಜಾಗ್ರತಾ ಕ್ರಮಗಳನ್ನೂ ಪರಿಶೀಲಿಸಿದರು.

'ಪಠ್ಯ ಕಡಿತ ಡಿಸೆಂಬರ್‌ನಲ್ಲಿ ನಿರ್ಧಾರ'

ಶಿವಮೊಗ್ಗ: 'ಒಂದೂವರೆ ವರ್ಷದ ನಂತರ ಶಾಲೆಗಳು ಆರಂಭವಾಗಿವೆ. ಸದ್ಯಕ್ಕೆ ಪಠ್ಯ ಕಡಿತಗೊಳಿಸುವ ಚಿಂತನೆ ಇಲ್ಲ. ಈ ಕುರಿತು ಡಿಸೆಂಬರ್‌ನಲ್ಲಿ ನಿರ್ಧರಿಸಲಾಗುವುದು' ಎಂದು ಸಚಿವ ಬಿ.ಸಿ. ನಾಗೇಶ್ ಹೇಳಿದರು. 4

ಮಕ್ಕಳು, ಪೋಷಕರು, ಶಿಕ್ಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮುಖ್ಯಮಂತ್ರಿ ನೇತೃತ್ವದಲ್ಲಿ ಸಭೆ ನಡೆಸಿ ಎಲ್‌ಕೆಜಿ, ಯುಕೆಜಿ ಆರಂಭಿಸುವ ಕುರಿತು ನಿರ್ಧರಿಸಲಾಗುವುದು

ಬಿ.ಸಿ ನಾಗೇಶ್
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

3 ವರ್ಷವಾದರೂ ಡಾಂಬರು ಕಾಣದ ರಸ್ತೆ: ಯಲಹಂಕದ ಅಟ್ಟೂರು ವಾರ್ಡ್ ನಿವಾಸಿಗಳ ಗೋಳು ಕೇಳುವವರಿಲ್ಲ

ಬೇಸಿಗೆಯಲ್ಲಿ ಕೆಂದೂಳು, ಮಳೆಗಾಲದಲ್ಲಿ ಕೆಸರು

• ಜಿ.ಶಿವಕುಮಾರ

ಪ್ರಜಾವಾಣಿ ವಿಶೇಷ

ಬೆಂಗಳೂರು: ಹಳ್ಳದಂತಾಗಿರುವ ರಸ್ತೆ. ಮನೆಯ ಎದುರೇ ಹರಡಿಕೊಂಡಿರುವ ಕೆಸರಿನ ರಾಡಿ. ಅಲ್ಲಲ್ಲಿ ನಿಂತಿರುವ ಮಳೆ ನೀರು. ರಸ್ತೆ ದಾಟಲು ಹರಸಾಹಸ ಪಡುತ್ತಿರುವ ಮಕ್ಕಳು.

ಇದು ಯಲಹಂಕ ಅಟ್ಟೂರು ವಾರ್ಡ್‌ನ ದೊಡ್ಡಬೆಟ್ಟಹಳ್ಳಿ ಲೇಔಟ್‌ನ ಗಿರಿಧಾಮನಗರದ ಚಿತ್ರಣ.

2007ರಲ್ಲಿ ಬಿಬಿಎಂಪಿಗೆ ಸೇರ್ಪಡೆಯಾದ 110 ಹಳ್ಳಿಗಳಲ್ಲಿ ದೊಡ್ಡಬೆಟ್ಟಹಳ್ಳಿ ಕೂಡ ಒಂದು. ಅಭಿವೃದ್ಧಿಯ ಹೆಸರಿನಲ್ಲಿ ಮೊದಲಿದ್ದ ರಸ್ತೆಯನ್ನೂ ಅಗೆಯಲಾಗಿದ್ದು, ಮೂರು ವರ್ಷವಾದರೂ ಅದಕ್ಕೆ ಡಾಂಬರು ಹಾಕುವ ಕೆಲಸ ಆಗಿಲ್ಲ. ಹೀಗಾಗಿ, ಬೇಸಿಗೆ ಬಂದರೆ ರಸ್ತೆಯ ಮೇಲಿನ ದೂಳೆಲ್ಲಾ ಮನೆಯೊಳಗೆ ಸೇರುತ್ತದೆ. ಮಳೆ ಬಂದರೆ ವಾರ್ಡ್‌ನ ರಸ್ತೆಗಳೆಲ್ಲಾ ಕೆಸರು ಗದ್ದೆಗಳಂತಾಗುತ್ತವೆ. ಅವುಗಳ ಮೂಲಕ ಸಾಗುವುದೇ ವಾಹನ ಸವಾರರಿಗೆ ದೊಡ್ಡ ಸವಾಲು.

ಈ ಸಮಸ್ಯೆಯನ್ನು ಬಗೆಹರಿಸುವಂತೆ ಸ್ಥಳೀಯರು ಕ್ಷೇತ್ರದ ಶಾಸಕ ಎಸ್.ಆರ್. ವಿಶ್ವನಾಥ್ ಅವರಿಗೆ ಹಲವು ಬಾರಿ ಮನವಿ ಮಾಡಿದ್ದಾರೆ. ಹೀಗಿದ್ದರೂ ಪರಿಸ್ಥಿತಿ ಕೊಂಚವೂ ಸುಧಾರಿಸಿಲ್ಲ.

'ವಾರ್ಡ್‌ನಲ್ಲೆಲ್ಲಾ ಕೆಮ್ಮಣ್ಣಿನ ರಸ್ತೆಗಳೇ ಇವೆ. ಮಳೆ ಬಂದರೆ ಅವು ರಾಡಿಯಾಗುತ್ತವೆ. ಅಲ್ಲಲ್ಲಿ ಗುಂಡಿಗಳೂ ಬೀಳುತ್ತವೆ. ಆ ಮಾರ್ಗದಲ್ಲಿ ಬೈಕ್ ಅಥವಾ ಸೈಕಲ್ ಚಲಾಯಿಸುವುದು ಕಷ್ಟಸಾಧ್ಯ. ಕಾರುಗಳ ಸಂಚಾರವೂ ಸರಾಗವೇನಲ್ಲ. ಶಾಲಾ ಮಕ್ಕಳು ಹಾಗೂ ವೃದ್ಧರು ರಸ್ತೆ ದಾಟಲು ತಿಣುಕಾಡಬೇಕಾಗುತ್ತದೆ. ನಿತ್ಯದ ಕೆಲಸಗಳಿಗಾಗಿ ಮನೆಯಿಂದ ಹೊರಗೆ ಕಾಲಿಡಲೂ ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ತುಂತುರು ಮಳೆಯಾದರೆ ರಸ್ತೆಗಳು ಜಾರುತ್ತವೆ. ಮಕ್ಕಳು ಆಟ ಆಡಲು ಹೋದರೆ ಜಾರಿಬಿದ್ದು ಕೈಕಾಲಿಗೆ ಗಾಯ ಮಾಡಿಕೊಳ್ಳುವ ಅಪಾಯವಿದೆ' ಎಂದು ರಂಗಸ್ವಾಮಿ ಅಳಲು ತೋಡಿಕೊಂಡರು.

'ರಸ್ತೆಯ ಎರಡೂ ಬದಿಗಳಲ್ಲಿ ತಾತ್ಕಾಲಿಕವಾಗಿ ಚಪ್ಪಡಿ ಕಲ್ಲುಗಳನ್ನಾದರೂ ಹಾಕಿದರೆ ಪಾದಚಾರಿಗಳ ಪಡಿಪಾಟಲು ತಪ್ಪುತ್ತದೆ. ಆ ಕೆಲಸ ಮಾಡಲೂ ಅಧಿಕಾರಿಗಳು ಮನಸ್ಸು ಮಾಡುತ್ತಿಲ್ಲ. ಬಡಾವಣೆಯಲ್ಲಿ 500ಕ್ಕೂ ಹೆಚ್ಚು ಮನೆಗಳಿವೆ. ಯಾರಿಗಾದರೂ ಅನಾರೋಗ್ಯ ಬಾಧಿಸಿದರೆ ಈ ರಸ್ತೆಗಳ ಮೂಲಕ ಅವರನ್ನು ಆಸ್ಪತ್ರೆಗೆ ಸಾಗಿಸುವುದೂ ಕಷ್ಟ. ಭಾರಿ ವಾಹನಗಳು ಸಾಗಿದರೆ ರಸ್ತೆಯ ಮೇಲಿನ ನೀರು ಮನೆಯ ಗೋಡೆ ಹಾಗೂ ಕಾಂಪೌಂಡ್ ಮೇಲೆ ಸಿಡಿಯುತ್ತದೆ' ಎಂದೂ ಅವರು ದೂರಿದರು.

'ಶಾಸಕರನ್ನು ಭೇಟಿಯಾದಾಗಲೆಲ್ಲಾ ಒಳಚರಂಡಿ ಕಾಮಗಾರಿ ಮುಗಿದ ಬಳಿಕ ರಸ್ತೆ ಕಾಮಗಾರಿ ಕೈಗೆತ್ತಿಕೊಳ್ಳುವುದಾಗಿ ಹೇಳುತ್ತಾರೆ. ಮೂರು ವರ್ಷದಿಂದಲೂ ಅವರ ಮಾತು ಕೇಳಿ ಕೇಳಿ ಸಾಕಾಗಿ ಹೋಗಿದೆ. ಬಡಾವಣೆಯ ಜನರು ಡಾಂಬರು ರಸ್ತೆಗಳನ್ನು ಕಾಣಲು ಇನ್ನೆಷ್ಟು ವರ್ಷಗಳು ಬೇಕಾಗಬಹುದೋ' ಎಂದು ಕಿರಣ್ ಬೇಸರ ವ್ಯಕ್ತಪಡಿಸಿದರು.

ಈ ಬಗ್ಗೆ ಪ್ರತಿಕ್ರಿಯೆಗೆ ಶಾಸಕ ಎಸ್.ಆರ್.ವಿಶ್ವನಾಥ್ ಸಿಗಲಿಲ್ಲ.

ಕೆಸರಿನ ರಾಡಿಯಿಂದ ಕೂಡಿರುವ ರಸ್ತೆ

ಗುಂಡಿ ಬಿದ್ದಿರುವ ರಸ್ತೆಯಲ್ಲಿ ನೀರು ಸಂಗ್ರಹವಾಗಿರುವುದು

ಸುದ್ದಿ 2 ನಿಮಿಷ

ವಾರ್ಡ್‌ಗಳ ಮರುವಿಂಗಡಣೆ: ಸಿದ್ಧವಾಗುತ್ತಿದೆ ಕರಡು-ಗೌರವ್ ಗುಪ್ತ

ಬೆಂಗಳೂರು: 'ಬಿಬಿಎಂಪಿ ವಾರ್ಡ್‌ಗಳ ಮರುವಿಂಗಡಣೆಗೆ ಸಂಬಂಧಿಸಿದ ಕರಡು ಸಿದ್ಧಪಡಿಸುತ್ತಿದ್ದೇವೆ. ಈ ಕುರಿತು ಕೆಲವು ಗೊಂದಲಗಳಿದ್ದು, ಅವುಗಳನ್ನು ಬಗೆಹರಿಸುವಂತೆ ಸರ್ಕಾರವನ್ನು ಕೋರಿದ್ದೇವೆ. ಸರ್ಕಾರದ ನಿರ್ದೇಶನ ಆಧರಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

ಸುದ್ದಿಗಾರರ ಪ್ರಶ್ನೆಗೆ ಸೋಮವಾರ ಉತ್ತರಿಸಿದ ಅವರು, 'ವಾರ್ಡ್ ಮರುವಿಂಗಡಣೆ ಬಗ್ಗೆ ನಾವು ವರದಿ ನೀಡಿದ ಬಳಿಕ ಸರ್ಕಾರ ಅಧಿಸೂಚನೆ ಹೊರಡಿಸಲಿದೆ. ಬಳಿಕ ರಾಜ್ಯ ಚುನಾವಣಾ ಆಯೋಗಕ್ಕೆ ಸರ್ಕಾರ ಮಾಹಿತಿ ನೀಡಲಿದೆ. ಬಳಿಕ ಆಯೋಗದ ನಿರ್ದೇಶನದ ಪ್ರಕಾರ ಚುನಾವಣೆ ನಡೆಯಲಿದೆ' ಎಂದರು.

'ಶಿಥಿಲಗೊಂಡ ಕಟ್ಟಡಗಳ ಪಟ್ಟಿಯಲ್ಲಿ ಗುರುತಿಸಿರುವ ಎಲ್ಲ ಕಟ್ಟಡಗಳನ್ನು ಕೆಡವಲೇಬೇಕೆಂದಿಲ್ಲ. ಆ ಕಟ್ಟಡಗಳಲ್ಲಿ ವಾಸ್ತವ್ಯ ಇರುವವರಿಗೆ ತಮ್ಮ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡುತ್ತೇವೆ. ಅನಿವಾರ್ಯ ಇದ್ದರೆ ಅಥವಾ ಕಟ್ಟಡ ತೀರಾ ಅಪಾಯಕಾರಿಯಾಗಿದ್ದರೆ ಮಾತ್ರ ಅಂತಹವುಗಳನ್ನು ಕೆಡವಲು ಕ್ರಮ ಕೈಗೊಳ್ಳುತ್ತೇವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಅಪರಾಧ ಹಿನ್ನೆಲೆ: ಚುನಾವಣೆ ಸ್ಪರ್ಧೆಗೆ ಅವಕಾಶ ಬೇಡ'

ಬೆಂಗಳೂರು: 'ಅಪರಾಧ ಹಿನ್ನೆಲೆಯುಳ್ಳ ವ್ಯಕ್ತಿಗಳಿಗೆ ಯಾವುದೇ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶ ನೀಡಬಾರದು ಹಾಗೂ ಅಂತಹವರನ್ನು ಸ್ಪರ್ಧೆಗೆ ಇಳಿಸುವ ರಾಜಕೀಯ ಪಕ್ಷಗಳ ವಿರುದ್ಧ ಚುನಾವಣಾ ಆಯೋಗ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಅಖಿಲ ಭಾರತ ಹಿಂದೂ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಡಿ.ವಿವೇಕಾನಂದ ಸ್ವಾಮಿ ಆಗ್ರಹಿಸಿದರು.

ಸೋಮವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಭ್ಯರ್ಥಿಗಳು ಅಪರಾಧ ಮುಕ್ತವಾಗಿದ್ದರೆ ಮಾತ್ರ ಸ್ಪರ್ಧಿಸಲು ಅವಕಾಶ ಕಲ್ಪಿಸಬೇಕು' ಎಂದರು.

'ಕಾಶ್ಮೀರದ ಹಿಂದೂಗಳಿಗೆ ಧೈರ್ಯ ತುಂಬಿ, ನಿರ್ಭೀತಿಯಿಂದ ವಾಸಿಸುವ ವಾತಾವರಣ ಕಲ್ಪಿಸಲು ಮಹಾಸಭಾ 'ಕಾಶ್ಮೀರಿ ಚಲೋ' ಚಳವಳಿಗೆ ಕರೆ ನೀಡಿದೆ. ಮಥುರಾದಲ್ಲಿ ಹಿಂದೂ ದೇವಾಲಯವನ್ನು ನೆಲಸಮಗೊಳಿಸಿ, ಮಸೀದಿ ನಿರ್ಮಿಸಿದ್ದಾರೆ. ಅಲ್ಲಿ ಹಿಂದೂ ದೇವಾಲಯವನ್ನು ಮತ್ತೆ ನಿರ್ಮಿಸಲು ಚಳವಳಿ ನಡೆಸಲಿದ್ದೇವೆ' ಎಂದರು.

'ದೇಶದಲ್ಲಿ ಜನಸಂಖ್ಯಾ ಹೆಚ್ಚಳ ಗಂಭೀರ ಸಮಸ್ಯೆಯಾಗಿ ಕಾಡುತ್ತಿದೆ. ಇದರಿಂದ ಸರ್ಕಾರದ ಯೋಜನೆಗಳು ಅರ್ಹ ಫಲಾನುಭವಿಗಳಿಗೆ ಸಿಗುತ್ತಿಲ್ಲ. ಹಾಗಾಗಿ, ಜನಸಂಖ್ಯಾ ನಿಯಂತ್ರಣ ಕಾಯ್ದೆಯನ್ನು ತುರ್ತಾಗಿ ಜಾರಿಗೊಳಿಸಬೇಕು' ಎಂದು ಒತ್ತಾಯಿಸಿದರು.

कार्यालय प्रधान मुख्य वन संरक्षक (उत्पादन)
मध्य प्रदेश, सतपुड़ा भवन, भोपाल
दूरभाष एवं फैक्स नं. 0755–2674354
E-mail: pccfprod@mp.gov.in
मप्र वन विभाग

क्रमांक / उत्पा0 / निर्वतन / विज्ञापन / 124 / 2097
भोपाल, दिनांक 22 / 10 / 2021

वनोपज के घोष विक्रय की सूचना

मध्यप्रदेश शासन, वन विभाग के विभागीय काष्ठागारों / बॉसागारों में माह नवम्बर, 2021 में विभिन्न स्थलों पर विभिन्न तिथियों में ईमारती काष्ठ, जलाऊ चट्टे, बॉस एवं अन्य सामाग्री के नीलाम की तिथियॉ पूर्व से अधिसूचित है। **Covid-19** संक्रमण के दृष्टिगत भविष्य में शासन स्तर से जारी हाने वाले निर्देशों के अनुरुप नीलामों की कार्यवाही की जाऐगी। नीलाम की तदर्थ तिथियॉ, नीलाम का प्रकार तथा काष्ठागारों में विक्रय हेतु उपलब्ध वनोपज व अन्य सामग्री की जानकारी मध्यप्रदेश शासन, वन विभाग की वैब साईट mpforest.gov.in पर देखी जा सकती है।

अपर प्रधान मुख्य वन संरक्षक (उत्पादन)
म0प्र0 भोपाल

G-18504/21

दो गज की दूरी, मास्क है जरुरी।

ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿವಿಧ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ನಗರದ ವಿವಿಧೆಡೆ ಅ.26 ಮತ್ತು 27ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಅ.26: ಬಾಲಾಜಿ ಲೇಔಟ್, ಬಿಇಎಲ್ ಲೇಔಟ್, ಹರ್ಷ ಲೇಔಟ್, ಸನ್ ಸಿಟಿ, ಬಿ.ಡಿ. ಕಾಲೊನಿ, ದುಬಾಸಿಪಾಳ್ಯ, ಅನ್ನಪೂರ್ಣೇಶ್ವರಿ ಲೇಔಟ್, ಕೋಡಿಪಾಳ್ಯ, ಗಂಗೊಂಡನಹಳ್ಳಿ, ವಿಜಯನಗರ, ಹೊಸಹಳ್ಳಿ, ಹಂಪಿನಗರ, ಮಾರೇನಹಳ್ಳಿ, ಎಂ.ಸಿ. ಲೇಔಟ್, ಗೋವಿಂದರಾಜನಗರ, ಚಂದ್ರಾಲೇಔಟ್, ಕಮಲಾನಗರ, ಕಾಮಾಕ್ಷಿ ಪಾಳ್ಯ, ಪಶ್ಚಿಮ ಕಾರ್ಡ್ ರಸ್ತೆ, ಮಾಳಗಾಳ, ಆರ್‌ಎಚ್‌ಸಿಎಸ್ ಲೇಔಟ್, ಡಿ ಗ್ರೂಪ್ ಲೇಔಟ್, ಬೆಂಚಕಲ್ಲು ಪಾಳ್ಯ, ನರಸಾಪುರ ಸುತ್ತಮುತ್ತ ಪ್ರದೇಶಗಳು.

ಅ.27: ಕೆ.ಆರ್. ರಸ್ತೆ, ಟಾಟಾ ಸಿಲ್ಕ್ ಫಾರಂ, ಎನ್.ಆರ್. ಕಾಲೊನಿ, ಮೌಂಟ್ ಜಾಯ್ ಬಡಾವಣೆ, ನಾಗಸಂದ್ರ ಮತ್ತು ಸುತ್ತಮುತ್ತ ಪ್ರದೇಶಗಳು.

ಶಾಲೆಗೆ ಚಿಣ್ಣರು; ಅದ್ದೂರಿ ಸ್ವಾಗತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಕಾರಣ ಮುಚ್ಚಿದ್ದ ನಗರದ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ, ಪ್ರೌಢ ಶಾಲೆಗಳು ಸೋಮವಾರ ತೆರೆದಿದ್ದು, 1ರಿಂದ 5ನೇ ತರಗತಿವರೆಗಿನ ಮಕ್ಕಳು ಖುಷಿಯಿಂದಲೇ ಶಾಲೆಗೆ ಬಂದರು. ಚಿಣ್ಣರನ್ನು ಅದ್ದೂರಿಯಾಗಿ ಸ್ವಾಗತಿಸಲಾಯಿತು. ಕೆಲವು ಶಾಲೆಗಳಲ್ಲಿ ಮೊದಲ ದಿನವೇ ಉತ್ತಮ ಹಾಜರಾತಿ ಕಂಡುಬಂತು.

'ಶಾಲೆಗಳಲ್ಲಿ ಮಕ್ಕಳನ್ನು ಮರಳಿ ನೋಡಲು ನಾವೂ ಬಹಳ ಉತ್ಸುಕರಾಗಿದ್ದೇವೆ. 1ರಿಂದ 5ರವರೆಗಿನ ತರಗತಿಗಳನ್ನು ಆರಂಭಿಸಲು ಸರ್ಕಾರ ನಿರ್ಧರಿಸಿದ ಬೆನ್ನಲ್ಲೆ ನಾವು ಮಕ್ಕಳ ಪೋಷಕರಿಗೆ ಈ ಬಗ್ಗೆ ಸಂದೇಶ ಕಳುಹಿಸಿದ್ದೇವೆ. ಪೋಷಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ' ಎಂದು ಆರ್.ಆರ್. ನಗರದ ಪಟ್ಟಣಗೆರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಎನ್. ಸುಗುಣ ಹೇಳಿದರು.

'ಹಲವು ಪೋಷಕರು ಕರೆ ಮಾಡಿ ಶಾಲೆಯಲ್ಲಿ ತೆಗೆದುಕೊಂಡ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ತಿಳಿದುಕೊಳ್ಳಲು ವಿಚಾರಿಸಿದರು. ಮಾಸ್ಕ್ ಕಡ್ಡಾಯವಾಗಿ ಧರಿಸಬೇಕು ಎಂದು ಸೂಚನೆ ನೀಡಿದ್ದೆವು. ಆದರೂ ಶಾಲೆಯಲ್ಲೂ ಮಾಸ್ಕ್ ಸಂಗ್ರಹಿಸಿ ಇಟ್ಟಿದ್ದೆವು. ಅಗತ್ಯ ಇದ್ದವರಿಗೆ ವಿತರಿಸಿದ್ದೇವೆ' ಎಂದರು.

ಶಾಲಾ ಆವರಣದಲ್ಲಿ ಸಂಭ್ರಮದಿಂದ ಮಕ್ಕಳು ಓಡಾಡಿದರು. ಕೆಲವು ಮಕ್ಕಳು ಕೋವಿಡ್ ಮುನ್ನೆಚ್ಚರಿಕೆ ವಹಿಸಬೇಕಾದ ಅಗತ್ಯದ ಬಗ್ಗೆಯೂ ಹೇಳಿಕೊಂಡರು.

ನ್ಯಾಷನಲ್ ಇಂಗ್ಲಿಷ್ ಶಾಲೆಯ ಕೊಠಡಿಯಲ್ಲಿ ಮಕ್ಕಳು ಪ್ರಜಾವಾಣಿ ಚಿತ್ರ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

'ತರಗತಿಯಲ್ಲಿ ಸ್ನೇಹಿತರನ್ನು ನೋಡಿ ಖುಷಿಯಾಯಿತು. ಆದರೆ, ನಾನು ಅವರು ಯಾರನ್ನೂ ಸ್ಪರ್ಶಿಸುವುದಿಲ್ಲ ಮತ್ತು ನನ್ನಲ್ಲಿರುವ ವಸ್ತುಗಳನ್ನು ಹಂಚಿಕೊಳ್ಳುವುದಿಲ್ಲ' ಎಂದು ಬೆಂಗಳೂರು ದಕ್ಷಿಣ ತಾಲ್ಲೂಕಿನ ಸರ್ಕಾರಿ ಶಾಲೆಯ ಮೂರನೇ ತರಗತಿ ವಿದ್ಯಾರ್ಥಿ ಪಾಲಕ್ ಹೇಳಿದರೆ, ಅದೇ ತರಗತಿಯ ಅಮೃತಾ, 'ಶಾಲೆ ಮತ್ತೆ ಆರಂಭವಾಗಿದ್ದರಿಂದ ಖುಷಿ ಆಗಿದೆ' ಎಂದಳು. 'ನಾನು ಮಾಸ್ಕ್ ಹಾಕಿಕೊಂಡಿದ್ದೇನೆ. ಮನೆಯಿಂದಲೇ ಬಿಸಿ ನೀರು ತೆಗೆದುಕೊಂಡು ಬಂದಿದ್ದೇನೆ. ಹೀಗಾಗಿ ನನಗೆ ಕೊರೊನಾದ ಭಯ ಇಲ್ಲ' ಎಂದು ಎರಡನೇ ತರಗತಿಯ ತಬ್ಸಮ್ ಹೇಳಿದಳು.

ಕೆಲವು ಸರ್ಕಾರಿ ಶಾಲೆಗಳಲ್ಲಿ ಪೋಷಕರು ತಮ್ಮ ಮಕ್ಕಳನ್ನು ಪ್ರಾಥಮಿಕ ತರಗತಿಗಳಿಗೆ ದಾಖಲಾತಿ ಮಾಡಿಕೊಂಡರು. ದಾಖಲಾತಿ ಪ್ರಕ್ರಿಯೆ ಬಹಳ ದಿನಗಳಿಂದಲೇ ನಡೆಯುತ್ತಿದ್ದರೂ ಅನೇಕ ಪೋಷಕರು ಮಕ್ಕಳ ದಾಖಲಾತಿಗೆ ಶಾಲೆ ಆರಂಭವಾಗುವುದಕ್ಕೆ ಕಾಯುತ್ತಿದ್ದರು.

ಮಕ್ಕಳ ಸಂಖ್ಯೆ ಹೆಚ್ಚಿರುವುದರಿಂದ ಪಾಳಿಯಲ್ಲಿ ತರಗತಿಗಳನ್ನು ನಡೆಸಲು ಕೆಲವು ಸರ್ಕಾರಿ ಶಾಲೆಗಳು ನಿರ್ಧರಿಸಿವೆ. 'ಲಭ್ಯ ಇರುವ ಸಂಪನ್ಮೂಲ ಮತ್ತು ಮೂಲಸೌಲಭ್ಯಗಳಲ್ಲಿಯೇ ನಾವು ತರಗತಿಗಳನ್ನು ನಡೆಸಬೇಕಾಗಿದೆ. ಈ ಬಾರಿ ಹೆಚ್ಚು ಮಕ್ಕಳು ಶಾಲೆಗೆ ದಾಖಲು ಆಗಿದ್ದಾರೆ. ಹೀಗಾಗಿ, ಚಿಕ್ಕ ಮಕ್ಕಳಿಗೆ ಬೆಳಿಗ್ಗೆ ಮತ್ತು 6ರಿಂದ 7ರವರೆಗಿನ ತರಗತಿಗಳಿಗೆ ಮಧ್ಯಾಹ್ನದ ನಂತರ ತರಗತಿ ನಡೆಸಲು ನಿರ್ಧರಿಸಿದ್ದೇವೆ' ಎಂದು ನಗರದ ಶಾಲೆಯೊಂದರ ಮುಖ್ಯ ಶಿಕ್ಷಕರೊಬ್ಬರು ತಿಳಿಸಿದರು.

'ಸಿದ್ದರಾಮಯ್ಯ ಬಿಡದಿ ತೋಟಕ್ಕೆ ಬರಲಿ'

ಮೈಸೂರು: 'ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕುರಿಸಾಕಣೆ ಹಾಗೂ ಕೃಷಿಯನ್ನು ನನ್ನ ಬಿಡದಿ ತೋಟಕ್ಕೆ ಬಂದು ನೋಡಲಿ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಸವಾಲೆಸೆದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕುರಿ ಸಾಕಿದ್ದಾರಾ ಎಂದು ಕೇಳಿರುವ ಸಿದ್ದರಾಮಯ್ಯ ತಾವೊಬ್ಬರೇ ಕುರಿ ಸಾಕಿರೋದು ಎಂದುಕೊಂಡಿದ್ದಾರೆ' ಎಂದು ವ್ಯಂಗ್ಯವಾಡಿದರು.

'ಸಿದ್ದರಾಮಯ್ಯ ಸಿಂಧಗಿಯಲ್ಲಿ ಜಾತಿಗೊಂದು ಸಮಾವೇಶ ಮಾಡುತ್ತಿದ್ದಾರೆ. ಇದೇನಾ ಅವರ ಜಾತ್ಯಾತೀತತೆ? ರಾಜ್ಯದಲ್ಲಿ ಜಾತಿಗಳ ನಡುವೆ ಅವರು ಕಂದಕ ಸೃಷ್ಟಿಸುತ್ತಿದ್ದಾರೆ' ಎಂದು ದೂರಿದರು.

'ಜೆಡಿಎಸ್ ವೇಗ ನೋಡಿ ಅವರಿಗೆ ತಳಮಳ ಉಂಟಾಗಿರುವುದರಿಂದಲೇ ವೈಯಕ್ತಿಕ ಟೀಕೆಗಳನ್ನು ಮಾಡುತ್ತಿದ್ದಾರೆ. ಅವರೆಷ್ಟೇ ಟೀಕಿಸಿದರೂ ನಾವು ಗಟ್ಟಿಯಾಗುತ್ತೇವೆ' ಎಂದರು.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಬೆಂ.ಮ.ಪ್ರ.ಪ್ರಾ.
ಮಹಾನಗರ ಆಯುಕ್ತರ ಕಛೇರಿ, ಬಿ.ಎಂ.ಆರ್.ಡಿ.ಎ., ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ : STRRPA/TP/CLU/37/2021-22 **ಪ್ರಕಟಣೆ** ದಿನಾಂಕ: 25.10.2021.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಕೈಗಾರಿಕೆ ವಲಯದಿಂದ ವಸತಿ ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಅನುಮೋದಿತ ಮಹಾ ಯೋಜನೆ ಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
(1)	(2)	(3)	(4)	(5)	(6)	(7)	(8)	(9)
1)	ಶ್ರೀ ವೆಂಕಟಸ್ವಾಮಯ್ಯ.ಜಿ ಬಿನ್ ಲೇಟ್ ಗುಂಡಯ್ಯ	ನೆಲಮಂಗಲ	ಸೋಂಪುರ	ಕೆ.ಜಿ.ಶ್ರೀನಿವಾಸಪುರ	16/3	1–13	ಕೈಗಾರಿಕೆ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು/ಬರುತ್ತಿದ್ದು, ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ, ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ನಿವೇಶನಗಳನ್ನು ನೀಡುವ ಸಲುವಾಗಿ ಸದರಿ ಪ್ರದೇಶವನ್ನು ಕೈಗಾರಿಕೆ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ
ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ
ಪ್ರಾಧಿಕಾರ, ಬೆಂಗಳೂರು.

DIPR/DDU/1970/AKAR/2021-22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

'ಅಪಘಾತ ಪ್ರಕರಣ: ಅತ್ತೆಯೂ ಪರಿಹಾರ ಪಡೆಯಬಹುದು'

ನವದೆಹಲಿ: 'ಅತ್ತೆ ಕಾನೂನು ಪ್ರಕಾರ ಅಳಿಯನ ಉತ್ತರಾಧಿಕಾರಿ ಆಗದೇ ಇರಬಹುದು. ಆದರೆ, ಮೋಟಾರು ವಾಹನ ಕಾಯ್ದೆಯಡಿ ಪರಿಹಾರವನ್ನು ಪಡೆಯಲು ಅವರನ್ನು ಕಾನೂನು ಪ್ರತಿನಿಧಿಯಾಗಿ ಪರಿಗಣಿಸಬಹುದು' ಎಂದು ಸುಪ್ರೀಂಕೋರ್ಟ್ ಹೇಳಿದೆ.

'ಅತ್ತೆಯು ತನ್ನ ವೃದ್ಧಾಪ್ಯದಲ್ಲಿ ಅಳಿಯ ಮತ್ತು ಮಗಳೊಂದಿಗೆ ವಾಸಿಸುವುದು, ಅವರ ಮೇಲೆ ಅವಲಂಬನೆ ಆಗುವುದು ಸಾಮಾನ್ಯ ಸಂಗತಿ. ಅಳಿಯನ ಸಾವಿನಿಂದ ಆಕೆಗೂ ತೊಂದರೆಯಾಗಬಹುದು. ಹಾಗಾಗಿ ಮೋಟಾರು ವಾಹನ ಕಾಯ್ದೆಯ 166ನೇ ಸೆಕ್ಷನ್ ಅಡಿ ಪರಿಹಾರವನ್ನು ಪಡೆಯಲು ಅತ್ತೆಯನ್ನು ಕಾನೂನು ಪ್ರತಿನಿಧಿಯಾಗಿ ಪರಿಗಣಿಸಬಹುದು' ಎಂದು ನ್ಯಾಯಮೂರ್ತಿಗಳಾದ ಎಸ್ ಅಬ್ದುಲ್ ನಜೀರ್ ಮತ್ತು ಕೃಷ್ಣಾ ಮುರಾರಿ ಅವರ ಪೀಠವು ಹೇಳಿತು.

2011ರಲ್ಲಿ ಗಣಿತ ಪ್ರಾಧ್ಯಾಪಕ ವೇಣುಗೋಪಾಲನ್ ನಾಯರ್ ಅವರು ಅಪಘಾತದಲ್ಲಿ ಸಾವಿಗೀಡಾಗಿದ್ದರು. ಅವರು ತಮ್ಮ ಪತ್ನಿ, ಇಬ್ಬರು ಹೆಣ್ಣು ಮಕ್ಕಳು ಹಾಗೂ ಅತ್ತೆಯೊಂದಿಗೆ ವಾಸವಾಗಿದ್ದರು.

ಈ ಪ್ರಕರಣದಲ್ಲಿ ಅತ್ತೆಯನ್ನು ಪರಿಹಾರ ಪಡೆಯಲು ಕಾನೂನು ಪ್ರತಿನಿಧಿಯನ್ನಾಗಿ ಪರಿಗಣಿಸಲು ಸಾಧ್ಯವಿಲ್ಲ ಎಂದು ಹೇಳಿದ ಕೇರಳ ಹೈಕೋರ್ಟ್, ಪರಿಹಾರ ಮೊತ್ತವನ್ನು ಕಡಿಮೆಗೊಳಿಸುವಂತೆ ಸೂಚಿಸಿತ್ತು.

ಆದರೆ, ಈ ತೀರ್ಪಿಗೆ ತಡೆ ನೀಡಿರುವ ಸುಪ್ರೀಂಕೋರ್ಟ್, ಸಂತ್ರಸ್ತನ ಕುಟುಂಬಕ್ಕೆ ₹85.81 ಲಕ್ಷ ಪಾವತಿಸುವಂತೆ ವಿಮಾ ಕಂಪನಿಗೆ ಸೂಚಿಸಿದೆ.

ಹೂಡಿಕೆ, ಬೆಳವಣಿಗೆಗೆ ಬೆಂಗಳೂರು ಮುಖ್ಯ: ಸಂಜೀವ್ ಛಡ್ಡಾ

ಬೆಂಗಳೂರು: 'ಬೆಂಗಳೂರು, ದೇಶದಲ್ಲಿಯೇ ಅತ್ಯಂತ ಉತ್ಸಾಹದಿಂದ ಕೂಡಿರುವ ನಗರವಾಗಿದೆ. ತಂತ್ರಜ್ಞಾನ ಒಳಗೊಂಡು ಹಲವು ವಿಷಯಗಳಲ್ಲಿ ಭವಿಷ್ಯದಲ್ಲಿ ದೇಶವನ್ನು ಪ್ರತಿನಿಧಿಸಲಿದೆ. ಹೀಗಾಗಿ ಹೂಡಿಕೆ, ಬೆಳವಣಿಗೆ ಮತ್ತು ಗ್ರಾಹಕರೊಂದಿಗೆ ಸಂವಹನದ ದೃಷ್ಟಿಯಿಂದ ಬೆಂಗಳೂರು ನಗರವು ನಮಗೆ ಬಹಳ ಮುಖ್ಯವಾಗಿದೆ' ಎಂದು ಬ್ಯಾಂಕ್ ಆಫ್ ಬರೋಡಾ (ಬಿಒಬಿ) ಸಿಇಒ ಸಂಜೀವ್ ಛಡ್ಡಾ ಅವರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಗ್ರಾಹಕರೊಂದಿಗೆ ಸಂವಹನ ನಡೆಸಿ, ಅವರ ಅಗತ್ಯಗಳನ್ನು ಅರಿತುಕೊಳ್ಳುವುದು. ನಮ್ಮ ಉತ್ಪನ್ನಗಳು ಅವರಿಗೆ ತಲುಪುತ್ತಿರುವ ಬಗ್ಗೆ ಖಾತರಿಪಡಿಸಿಕೊಳ್ಳುವುದರತ್ತ ಹೆಚ್ಚಿನ ಗಮನ ಹರಿಸಲಾಗುತ್ತಿದೆ. ಡಿಜಿಟಲೀಕರಣದ ಭಾಗವಾಗಿ ಬಿಒಬಿ ವರ್ಲ್ಡ್ ಆ್ಯಪ್ ಹೆಚ್ಚು ಪರಿಣಾಮಕಾರಿ ಆಗಿದೆ. ಖಾತೆ ತೆರೆಯುವುದರಿಂದ ಹಿಡಿದು, ಹೂಡಿಕೆ, ವರ್ಗಾವಣೆ, ಪಾವತಿ ಸೇರಿದಂತೆ ಎಲ್ಲಾ ಅಗತ್ಯ ಕೆಲಸಗಳನ್ನೂ ನಿರ್ವಹಿಸಬಹುದು. ಇಂದಿನ ಅಗತ್ಯಗಳಿಗೆ ತಕ್ಕಂತೆ ಬ್ಯಾಂಕ್ ಶಾಖೆಗಳನ್ನೂ ಮರುವಿನ್ಯಾಸಗೊಳಿಸಲಾಗುತ್ತಿದೆ. ಗ್ರಾಹಕ ಕೇಂದ್ರಿತ ಹಲವು ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ' ಎಂದು ವಿವರಿಸಿದರು.

ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಜಾಯ್ದೀಪ್ ದತ್ ರಾಯ್, ಬೆಂಗಳೂರು ವಲಯದ ಮುಖ್ಯಸ್ಥ ಸುಧಾಕರ್ ಡಿ. ನಾಯಕ್ ಇದ್ದರು.

ಸಾಲ ಸಂಪರ್ಕ ಕಾರ್ಯಕ್ರಮ: ಬ್ಯಾಂಕ್ ಆಫ್ ಬರೋಡಾದ ಬೆಂಗಳೂರು ವಲಯದಲ್ಲಿ ಸೋಮವಾರ ಸಾಲ ಸಂಪರ್ಕ ಕಾರ್ಯಕ್ರಮಕ್ಕೆ ಬ್ಯಾಂಕ್‌ನ ಸಿಇಒ ಸಂಜೀವ್ ಛಡ್ಡಾ ಅವರು ಚಾಲನೆ ನೀಡಿದರು. ವೈಯಕ್ತಿಕ ಗ್ರಾಹಕರು, ರೈತರು, ಉದ್ಯಮಿಗಳು ಮತ್ತು ವ್ಯಾಪಾರ ಸಂಸ್ಥೆಗಳಿಗೆ ಸಾಲ ವಿತರಣೆ ಹಾಗೂ ದೇಶದ ಆರ್ಥಿಕ ಬೆಳವಣಿಗೆಗೆ ಡಿಜಿಟಲ್ ಉತ್ತೇಜನ ಕ್ರಮಗಳನ್ನು ಅನುಷ್ಠಾನಗೊಳಿಸುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶಗಳಾಗಿವೆ.

'ಜಾತಿ ವಿಷ ಬೀಜ ಬಿತ್ತಿದ್ದೇ ಸಿದ್ದರಾಮಯ್ಯ'

ಬೆಂಗಳೂರು: 'ರಾಜ್ಯದಲ್ಲಿ ಜಾತಿ ವಿಷ ಬೀಜ ಬಿತ್ತಿದ್ದೇ ಸಿದ್ದರಾಮಯ್ಯ. ಅದೇ ಸಿದ್ದರಾಮಯ್ಯ ಇಂದು ಮತಗಳಿಸಲು ಸುಳ್ಳಿನ ಸರಮಾಲೆ ಸೃಷ್ಟಿಸುತ್ತಿದ್ದಾರೆ' ಎಂದು ಬಿಜೆಪಿ ಟೀಕಿಸಿದೆ.

'ನಿಮ್ಮಿಂದ ಜಾತಿಯನ್ನು ಉಪಜಾತಿಯಾಗಿ ಒಡೆಯುವುದಕ್ಕೆ ಮಾತ್ರ ಸಾಧ್ಯ. ವೀರಶೈವ, ಲಿಂಗಾಯತ ಎಂದು ವಿಭಜನೆಯ ಬೆಂಕಿ ಹಚ್ಚಿದ ನೀವು ಯಾವ ಆಧಾರದಲ್ಲಿ ಜಾತಿ ಸಮುದಾಯಗಳನ್ನು ಒಟ್ಟಿಗೆ ಕರೆದುಕೊಂಡು ಹೋಗುತ್ತೇವೆ ಎಂದು ಹೇಳುತ್ತೀರಿ' ಎಂದು ಟ್ವೀಟ್ ಮೂಲಕ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದೆ.

'ಜಾತಿ ಎಂಬುದು ಈ ದೇಶದಲ್ಲಿ ವಾಸ್ತವ ಎನ್ನುವ ನೀವು ಜಾತಿ ರಾಜಕೀಯ ಬಿಟ್ಟು ಬೇರೇನೂ ಮಾಡಿಲ್ಲ. ನಿಜವಾಗಿಯೂ ಜಾತ್ಯತೀತರಾಗಿದ್ದರೆ ಉಪಚುನಾವಣೆಯ ಸಂದರ್ಭದಲ್ಲೂ ಜಾತಿವಾರು ಸಭೆ ನಡೆಸುವ ಅಗತ್ಯವಿತ್ತೇ? ಸಮಾಜವನ್ನು ಜಾತಿ ಆಧಾರದ ಮೇಲೆ ಒಡೆದು ರಾಜಕೀಯ ಲಾಭ ಪಡೆಯುವುದರಲ್ಲಿ ನಿಮಗಿಂತ ನಿಷ್ಣಾತರು ಬೇರೆ ಇಲ್ಲ' ಎಂದು ಹೇಳಿದೆ.

NOTICE INVITING APPLICATIONS FOR ALLOTMENT OF SHOPS AT TB- III, MEG & CENTRE, BANGALORE -560033

1. CO, Trg Bn- III, MEG & Centre, Bangalore-33 invites applications for allotment of various regimental shops on rental basis at this Bn. Shops would be allotted to the highest bidder based on undermentioned priority in descending order of applications:-
   (a) War widows/widows of def personnel killed while on duty (b) Disabled Soldiers
   (c) Ex-Servicemen (d) Spouse/widow of ex-servicemen (e) Civilians
2. Details of shops is given below :-

S No	Name of Shop	Sq ft	Shop No	Name of Shop	Sq ft
1	Gen Store, T21/1	500	15	Tailor Shop, T21/3	250
2	Gen Store, T103/1	250	16	Tailor Shop, T29/3	250
3	Gen Store, T21/3	190	17	Tailor Shop, T21/2	250
4	Gen Store, T28/2	250	18	Tailor Shop, T 28/4	250
5	Gen Store, T21/6	750	19	Tailor Shop, T21/4	250
6	Gen Store, T19/1	450	20	Tailor Shop, T29/5	250
7	Gen Store, T19/5	336	21	Tailor Shop, T31/2	190
			22	Tailor Shop, T31/1	190
8	Boot Repair, T28/1	250	23	Cafeteria, T29/2	250
9	Boot Repair, T103/2	250	24	Cafeteria, T21/5	250
10	Boot Repair, T29/1	250			
11	Fruit Juice Shop, T19/2	195	25	Cycle Repair Shop	250
12	Photo Studio, T19/3	300	26	Provision Store, RC Line	300
13	Fast Food Corner, P280	72	27	WET Canteen T26/1	600
14	Vegetable Shop(RCLine)	150			

3. The license fees & rebate will be intimated during collection of the application form.
4. Details of shops are available in the Application Form and the same may be obtained by drawing DD on all working days :-
   (a) Issue of Application form : **25 Oct 2021 to 08 Nov 2021 (from 0900 hrs to 1400 hrs)**
   (b) Dt of receipt of application form : **13 Nov 2021 (upto 1100h)**
   (c) DD in favour of Regt Fund Acct TB-III MEG & Centre payable at SBI TB III, MEG & Centre
   (d) DD Amount : 500/- (will be refunded to those not allotted shop & will be adjusted in security deposit of those allotted shops)
5. Allotment of shops for the period of **3 years**, not exceeding **5 years.**
6. Application Forms are available at (a) Reception of **MS Nagar Gate, Trg Bn-III** (b) **Railway Gate, TB-III** (c) **QM Branch, TB-III.**

(U S Roy)
Maj
QM
for CO

ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರ,
ಡಿ. ದೇವರಾಜ ಅರಸು ಬಡಾವಣೆ, ಟಮಕ, ಕೋಲಾರ-563103. ದೂ: 08152-243142, ಇ-ಮೇಲ್: kudakolar@gmail.com

ಸಂಖ್ಯೆ: ಕೋನಪ್ರಾಕೋ:ಭೂಉಬ:ಪ:ಪ್ರಕಟಣೆ:278:2021-22 ದಿನಾಂಕ: 12.10.2021

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ-1961ರ ಕಲಂ-69(2) ರನ್ವಯ ಈ ಕೆಳಕಂಡ ಭೂ ಮಾಲೀಕರು ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ (ಪ-1) (ಅಂತಿಮ) ಕಾಯ್ದಿರಿಸಿರುವ ಉದ್ಯಾನವನ ಮತ್ತು ಬಯಲುಜಾಗ ಉದ್ದೇಶದಿಂದ ವಸತಿ ಉದ್ದೇಶಕ್ಕೆ ಭೂಉಪಯೋಗದ ಬದಲಾವಣೆಗೆ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿದಾರರ ಮನವಿಯಲ್ಲಿ ಜಮೀನನ್ನು ವಸತಿ ಉದ್ದೇಶದ ಭೂಉಪಯೋಗ ಬದಲಾವಣೆ ಮಾಡಿ, ಸಾರ್ವಜನಿಕರಿಗೆ ಕಡಿಮೆ ಬೆಲೆಗೆ ಯೋಜಿತ ಬೆಳವಣಿಗೆಯ ಹಾಗೂ ಮೂಲಭೂತ ಸೌಕರ್ಯವುಳ್ಳ ನಿವೇಶನಗಳನ್ನು ದೊರಕಿಸಿಕೊಡುವ ಉದ್ದೇಶ ''ಸಾರ್ವಜನಿಕ ಹಿತದೃಷ್ಟಿ'' ಅಂಶ ಇರುವುದಾಗಿ ಅರ್ಜಿಯಲ್ಲಿ ತಿಳಿಸಿರುತ್ತಾರೆ. ಆದುದರಿಂದ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂಧ ಸಲಹೆ/ಆಕ್ಷೇಪಣೆಗಳಿದ್ದಲ್ಲಿ ಈ ಪತ್ರಿಕಾ ಪ್ರಕಟಣೆಯಾದ **15 (ಹದಿನೈದು) ದಿನದೊಳಗೆ** ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಕೋಲಾರ ಇವರಿಗೆ ''ಲಿಖಿತ ರೂಪದಲ್ಲಿ ಖುದ್ದಾಗಿ ಅಥವಾ ನೋಂದಾಯಿತ ಸ್ವೀಕೃತ ಅಂಚೆ'' ಮೂಲಕ ಸಲ್ಲಿಸಲು ಕೋರಲಾಗಿದೆ. ನಿಗದಿತ ದಿನಾಂಕದ ನಂತರ ಬಂದ ಆಕ್ಷೇಪಣಾ ಅರ್ಜಿಗಳನ್ನು ಈ ಕಛೇರಿಯಲ್ಲಿ ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ-ಗುಂಟೆ	ಚೆಕ್ಕುಬಂದಿ: ಉತ್ತರ	ದಕ್ಷಿಣ	ಪೂರ್ವ	ಪಶ್ಚಿಮ	ಮಹಾಯೋಜನೆ ಕಾಯ್ದಿರಿಸಿರುವ ಭೂ ಉಪಯೋಗ	ಭೂ ಉಪಯೋಗ ಬದಲಾವಣೆಗೆ ಕೋರಿರುವ ಉದ್ದೇಶ
1	ಹೆಚ್.ಆರ್. ಚಂದ್ರಪ್ಪ	ಕಸಬಾ	ಪೇಟೆಚಾಮನಹಳ್ಳಿ	38/46	0-01.12	ಸ.ನಂ.:36	ರಸ್ತೆ	ರಾಮದಾಸ್ ಮನೆ	ಸ.ನಂ.:35	ಉದ್ಯಾನವನ ಮತ್ತು ಬಯಲುಜಾಗ	ವಸತಿ

ಸಹಿ/-
ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ,
ಕೋಲಾರ

ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ238/ಎಂಸಿಎ/2021-22

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರದಲ್ಲಿ ಇಂದು

'ಮಹಿಳಾ ಅಭಿವ್ಯಕ್ತಿ–ವಚನಗಾರ್ತಿಯರು' ವಚನ ಕಾರ್ಯಾಗಾರ: ಉದ್ಘಾಟನೆ–ಕರ್ನಾಟಕ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ಆಶಯನುಡಿ–ಕೆ.ವಿ.ನಾಗರಾಜಮೂರ್ತಿ, ವಿಷಯ ಮಂಡನೆ–ಪ್ರೇಮಾ ಸಿದ್ಧರಾಜು, ಅಧ್ಯಕ್ಷತೆ–ಥಾಮಸ್ ತೆನಡಿಯಲ್, ಆಯೋಜನೆ–ಬೆಂಗಳೂರು ನಗರ ಜಿಲ್ಲೆ ಶರಣ ಸಾಹಿತ್ಯ ಪರಿಷತ್ತು, ಸ್ಥಳ–ಸೇಂಟ್ ಕ್ಲಾರೆಟ್ ಕಾಲೇಜು ಸಭಾಂಗಣ, ಜಾಲಹಳ್ಳಿ, ಬೆಳಿಗ್ಗೆ 11.30

'ಸೈಬರ್ ಅಪರಾಧಗಳ ತಡೆಗಟ್ಟುವಿಕೆ ಮತ್ತು ನಿರ್ವಹಣೆ' ಕುರಿತು ಕಾರ್ಯಾಗಾರ: ಆಯೋಜನೆ–ಅಂಚೆ ಇಲಾಖೆ, ಸ್ಥಳ–ಮೇಘದೂತ ಸಭಾಂಗಣ, ಜಿಪಿಒ, ಮಧ್ಯಾಹ್ನ 2.30

ತಿಂಗಳ ಮಾತುಕತೆ: ಟಿ.ಎಂ.ಕೃಷ್ಣ ಅವರ 'ಸೆಬಾಸ್ಟಿಯನ್ ಆ್ಯಂಡ್ ಸನ್ಸ್' ಮೃದಂಗ ಶಿಲ್ಪಿಗಳ ಕಿರು ಚರಿತೆ ಪುಸ್ತಕದ ಕುರಿತು ಚರ್ಚೆ: ಭಾಗವಹಿಸುವವರು–ಶೈಲಜಾ ವೇಣುಗೋಪಾಲ್, ಸುಮಂಗಲಾ, ಆಯೋಜನೆ–ಪುಸ್ತಕ ಪ್ರೀತಿ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ಕೀಲು ನೋವೆ? ಮೂಳೆ ನೋವೆ? ನರಗಳ ನೋವೆ?
ಉಳುಕಿದ ನೋವೆ? ಬೆನ್ನು ನೋವೆ? ಸ್ನಾಯು ಸೆಳೆತವೆ?
ಇಲ್ಲಿದೆ ಶಾಶ್ವತ ಪರಿಹಾರ. 'ಅಮೃತರತ್ನ' ನೋವು ನಿವಾರಕ ತೈಲ ಮತ್ತು ಮಾತ್ರೆ
ಗಂಟು ನೋವು, ಬೆನ್ನು ನೋವು, ಕತ್ತು ನೋವು, ಸ್ನಾಯು ಸೆಳೆತ, ಉಳುಕು ಕಾಯಿಲೆಗಳಿಗೆ ಒಂದು 'ಅಮೃತರತ್ನ' ಗುಳಿಗೆಯನ್ನು ಸೇವಿಸಿ, 'ಅಮೃತರತ್ನ' ನೋವು ನಿವಾರಕ ತೈಲವನ್ನು ನೋವಿರುವ ದೇಹದ ಭಾಗಕ್ಕೆ ಹಚ್ಚಿದಲ್ಲಿ, ಶೀಘ್ರ ಉಪಶಮನ ದೊರೆಯುವುದು.
ಎಲ್ಲಾ ಆಯುರ್ವೇದಿಕ್ ಮತ್ತು ಅಲೋಪಥಿಕ್ ಔಷಧಿ ಅಂಗಡಿಗಳಲ್ಲಿ ದೊರೆಯುತ್ತದೆ. Also available at: amazon.in

ಒನ್ ಅಂಡ್ ಓನ್ಲಿ ಶಕುಂತಲಾ... "ಶರವೇಗದಲ್ಲಿ ತಲೆಯ ಕೂದಲ ಸಮಸ್ಯೆ ನಿವಾರಣೆ"
ನಿಮ್ಮ ಕೂದಲಿಗೆ ಪರಿಶುದ್ಧ ಗಿಡಮೂಲಿಕೆ ತೈಲ ಅಥವಾ ಕೆಲವು ರಾಸಾಯನಿಕಗಳನ್ನು ಉಪಯೋಗಿಸುತ್ತಿದ್ದೀರಾ?

ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ: From the house of A & J Health Care, Bangalore For a Healthy Society Ph: 8762226000, 9243112373.

ಉಪವಾಸ ಸತ್ಯಾಗ್ರಹ: ಠೇವಣಿದಾರರ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಅವ್ಯವಹಾರದಿಂದ ಹಣ ಕಳೆದುಕೊಂಡಿರುವ ಠೇವಣಿದಾರರು ಉಪವಾಸ ಸತ್ಯಾಗ್ರಹ ನಡೆಸಲು ನಿರ್ಧರಿಸಿದ್ದಾರೆ.

ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್ ಷೇರುದಾರರು ಮತ್ತು ಠೇವಣಿದಾರರ ಹಿತರಕ್ಷಣಾ ವೇದಿಕೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಸೋಮವಾರ ಈ ನಿರ್ಣಯ ಕೈಗೊಳ್ಳಲಾಯಿತು. ತಮಗಾಗಿರುವ ಅನ್ಯಾಯವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಲೇಬೇಕು. ಇದಕ್ಕೆ ವಕೀಲರೊಬ್ಬರನ್ನು ನೇಮಿಸಬೇಕು ಎಂದೂ ಠೇವಣಿದಾರರ ಸಲಹೆ ನೀಡಿದರು.

ಎರಡು ವರ್ಷಗಳಿಂದಲೂ ಷೇರುದಾರರಿಗೆ ಪರಿಹಾರ ಸಿಕ್ಕಿಲ್ಲ. ಠೇವಣಿ ವಿಮೆ ಮತ್ತು ಸಾಲ ಖಾತರಿ ನಿಗಮವು (ಡಿಐಸಿಜಿಸಿ) ಬ್ಯಾಂಕ್‌ಗಳು ದಿವಾಳಿಯಾದ ಸಂದರ್ಭದಲ್ಲಿ ಗ್ರಾಹಕರ ಠೇವಣಿಗೆ ರಕ್ಷಣೆ ಒದಗಿಸುವ ಠೇವಣಿ ವಿಮೆ ಮೊತ್ತವನ್ನು ₹1 ಲಕ್ಷದಿಂದ ₹5 ಲಕ್ಷಕ್ಕೆ ಹೆಚ್ಚಿಸಿದೆ. 10 ಸಾವಿರ ಗ್ರಾಹಕರು ಮತ್ತು 120 ಸಹಕಾರಿ ನಿಯಮಿತಗಳ ಹಣವೂ ಬ್ಯಾಂಕ್‌ನಲ್ಲಿದೆ. ಇವರಿಗೆ ಯಾವ ಬಗೆಯ ಪರಿಹಾರ ನೀಡಲಾಗುತ್ತದೆ ಎಂಬುದನ್ನು ಸ್ಪಷ್ಟಪಡಿಸಿಲ್ಲ' ಎಂದು ಹಲವರು ಕಳವಳ ವ್ಯಕ್ತಪಡಿಸಿದರು.

ಹಿತರಕ್ಷಣಾ ವೇದಿಕೆಯ ಮುಖ್ಯ ಪೋಷಕ ಡಾ.ಶಂಕರ ಗುಹಾ ದ್ವಾರಕಾನಾಥ್ ಬೆಳ್ಳೂರು,'ಕಷ್ಟಪಟ್ಟು ದುಡಿದು ಕೂಡಿಟ್ಟ ಹಣ ಕಳೆದುಕೊಂಡ ಠೇವಣಿದಾರರು ಕಂಗಾಲಾಗಿದ್ದಾರೆ. ಅವರಿಗೆ ನ್ಯಾಯ ಒದಗಿಸಲು ಸರ್ಕಾರ ಮುಂದಾಗುತ್ತಿಲ್ಲ. ಪ್ರಕರಣದ ತನಿಖೆಯನ್ನು ಉದ್ದೇಶಪೂರ್ವಕವಾಗಿ ದಾರಿ ತಪ್ಪಿಸಲಾಗುತ್ತಿದೆ. ತಪ್ಪಿತಸ್ಥರನ್ನು ರಕ್ಷಿಸುವ ಹುನ್ನಾರವೂ ನಡೆಯುತ್ತಿದೆ. ಬಸವನಗುಡಿ ಶಾಸಕ ಎಲ್.ಎ. ರವಿಸುಬ್ರಹ್ಮಣ್ಯ ಅವರು ವಂಚಕರ ಪರ ನಿಲ್ಲದೆ, ಠೇವಣಿದಾರರ ಹಿತ ಕಾಯಬೇಕು' ಎಂದರು.

ಕಾಂಗ್ರೆಸ್ ಮುಖಂಡ ಪ್ರೊ.ಕೆ.ಇ. ರಾಧಾಕೃಷ್ಣ, 'ನನ್ನಂತೆ ಅನೇಕ ಮಂದಿ ಹಣ ಕಳೆದುಕೊಂಡಿದ್ದಾರೆ. ಕಷ್ಟಕಾಲದಲ್ಲಿ ನೆರವಾಗಬಹುದು ಎಂಬ ಉದ್ದೇಶದಿಂದ ಮಕ್ಕಳಿಗೆ ಗೊತ್ತಿಲ್ಲದಂತೆ ಲಕ್ಷಾಂತರ ರೂಪಾಯಿ ಠೇವಣಿ ಇಟ್ಟಿದ್ದವರೆಲ್ಲ ನೋವಿನಿಂದ ದಿನ ದೂಡುವಂತಾಗಿದೆ' ಎಂದು ತಿಳಿಸಿದರು.

ಬೆಂಗಳೂರಿನ ಶ್ರೀಮದ್ ಉತ್ತರಾದಿಮಠದ ಜಯತೀರ್ಥ ವಿದ್ಯಾಪೀಠದ ಪ್ರಾಂಶುಪಾಲ ಸತ್ಯಧ್ಯಾನಾಚಾರ್ಯ, 'ಕಳೆದುಕೊಂಡಿರುವ ಹಣ ಮತ್ತೆ ನಮ್ಮ ಕೈಸೇರಲೇಬೇಕು. ಇದಕ್ಕಾಗಿ ಲೌಕಿಕ ಮತ್ತು ಆಧ್ಯಾತ್ಮಿಕ ಸಹಕಾರ ನೀಡಲು ಸಿದ್ಧ' ಎಂದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ನಗರದಲ್ಲಿ ಸೋಮವಾರ ತಮಟೆ ಹಾಗೂ ಡೊಳ್ಳಿನ ಮೆರವಣಿಗೆ ನಡೆಸಿದರು – ಪ್ರಜಾವಾಣಿ ಚಿತ್ರ

ಎಸ್‌.ಸಿ, ಎಸ್‌.ಟಿ ನಿರ್ಲಕ್ಷ್ಯ; ತಮಟೆ ಮೆರವಣಿಗೆ

ಬೆಂಗಳೂರು: 'ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಾಮಾಜಿಕ ನ್ಯಾಯವೇ ಸಮಾಪ್ತಿಯಾಗಿದ್ದು, ಎಸ್‌.ಸಿ ಹಾಗೂ ಎಸ್‌.ಟಿ ಸಮುದಾಯದವರನ್ನು ರಾಜ್ಯ ಸರ್ಕಾರ ನಿರ್ಲಕ್ಷಿಸುತ್ತಿದೆ' ಎಂದು ಆರೋಪಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರು ನಗರದಲ್ಲಿ ಸೋಮವಾರ ತಮಟೆ ಮೆರವಣಿಗೆ ನಡೆಸಿದರು.

ರಾಜ್ಯ ಸಮಿತಿ ಅಧ್ಯಕ್ಷ ಎನ್. ಮೂರ್ತಿ ನೇತೃತ್ವದಲ್ಲಿ ಮೈಸೂರು ಬ್ಯಾಂಕ್ ವೃತ್ತದಿಂದ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕರ್ತರು, ತಮಟೆ ಹಾಗೂ ಡೊಳ್ಳುಗಳನ್ನು ಬಾರಿಸಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ನಿವಾಸದವರೆಗೆ ಮೆರವಣಿಗೆ ನಡೆಸಲು ಪ್ರತಿಭಟನಕಾರರು ತೀರ್ಮಾನಿಸಿದ್ದರು. ಪೊಲೀಸರು, ಅವರೆಲ್ಲರನ್ನೂ ಸ್ವಾತಂತ್ರ್ಯ ಉದ್ಯಾನ ಬಳಿಯೇ ತಡೆದರು. ಅಲ್ಲಿಯೇ ಕೆಲ ಹೊತ್ತು ಪ್ರತಿಭಟನೆ ಮುಂದುವರಿಯಿತು.

'ಪರಿಶಿಷ್ಟ ಜಾತಿ (ಎಸ್‌.ಸಿ) ಹಾಗೂ ಪರಿಶಿಷ್ಟ ಪಂಗಡದವರ (ಎಸ್‌.ಟಿ) ಮೇಲೆ ರಾಜ್ಯದಲ್ಲಿ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿವೆ. ಇದನ್ನು ತಡೆಗಟ್ಟಬೇಕಾದ ಸಮಾಜ ಕಲ್ಯಾಣ ಇಲಾಖೆ ಮೌನವಾಗಿದೆ. ದೌರ್ಜನ್ಯ ನಡೆದ ಸ್ಥಳಗಳಿಗೆ ಸಚಿವರೂ ಭೇಟಿ ನೀಡುತ್ತಿಲ್ಲ. ಸಾಮಾಜಿಕ ನ್ಯಾಯವೇ ಇಲ್ಲದಂತಾಗಿದೆ' ಎಂದೂ ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

'ರಾಜ್ಯದಲ್ಲಿ ಇತ್ತೀಚೆಗೆ ನಡೆದಿರುವ ಎಸ್‌.ಸಿ, ಎಸ್‌.ಟಿ ಸಮುದಾಯದವರ ಕೊಲೆ ಪ್ರಕರಣಗಳನ್ನು ಸಿಬಿಐ ತನಿಖೆಗೆ ವಹಿಸಬೇಕು. ಸಮುದಾಯದವರನ್ನು ಬಹಿಷ್ಕಾರ ಹಾಕುವವರಿಗೆ 2 ವರ್ಷ ಜೈಲು ಶಿಕ್ಷೆ ಹಾಗೂ ₹ 1 ಲಕ್ಷ ದಂಡ ವಿಧಿಸುವಂತೆ ಕಾನೂನು ತಿದ್ದುಪಡಿ ಮಾಡಬೇಕು. ಕೊಲೆ ನಡೆದರೆ, ಮೃತರ ಕುಟುಂಬಕ್ಕೆ ₹ 50 ಲಕ್ಷ ಪರಿಹಾರ ನೀಡಬೇಕು' ಎಂದೂ ಆಗ್ರಹಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾ ರೆಡ್ಡಿ ನೇತೃತ್ವದ ನಿಯೋಗ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್ ಅವರಿಗೆ ದೂರು ನೀಡಿತು. ರಾಜ್ಯಸಭಾ ಸದಸ್ಯ ನಾಸೀರ್ ಹುಸೇನ್, ವಿಧಾನ ಪರಿಷತ್ ಸದಸ್ಯ ನಜೀರ್ ಅಹ್ಮದ್, ಶಾಸಕ ಎನ್‌.ಎ. ಹ್ಯಾರಿಸ್ ನಿಯೋಗದಲ್ಲಿ ಇದ್ದರು

ಕೋಮು ಪ್ರಚೋದನೆ: 'ಕೈ' ನಾಯಕರಿಂದ ದೂರು

ಬೆಂಗಳೂರು: 'ತುಮಕೂರಿನಲ್ಲಿ ಬಂದ್ ಹೆಸರಿನಲ್ಲಿ ಕೋಮು ಪ್ರಚೋದಕ ಭಾಷಣ ಮಾಡಿರುವ ಮತ್ತು ಸ್ವಾತಂತ್ರ್ಯ ಹೋರಾಟಗಾರ ಟಿಪ್ಪು ಸುಲ್ತಾನ್ ಬಗ್ಗೆ ಅವಾಚ್ಯ ಶಬ್ದ ಬಳಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಆಗ್ರಹಿಸಿ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ನೇತೃತ್ವದ ನಿಯೋಗ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಪ್ರವೀಣ್ ಸೂದ್ ಅವರಿಗೆ ದೂರು ನೀಡಿದೆ.

ರಾಜ್ಯಸಭಾ ಸದಸ್ಯ ನಾಸೀರ್ ಹುಸೇನ್, ವಿಧಾನ ಪರಿಷತ್ ಸದಸ್ಯ ನಜೀರ್ ಅಹ್ಮದ್, ಶಾಸಕ ಎನ್‌.ಎ. ಹ್ಯಾರಿಸ್, ಕೆಪಿಸಿಸಿ ಮಾಧ್ಯಮ ಹಾಗೂ ಸಂವಹನ ವಿಭಾಗದ ಸಹ ಅಧ್ಯಕ್ಷ ವಿ.ಆರ್. ಸುದರ್ಶನ್, ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಅಬ್ದುಲ್ ಜಬ್ಬಾರ್ ನಿಯೋಗದಲ್ಲಿ ಇದ್ದರು.

ಬಳಿಕ ಮಾತನಾಡಿದ ರಾಮಲಿಂಗಾರೆಡ್ಡಿ, 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಭಟನೆ ಮಾಡಲು ಪ್ರತಿಯೊಬ್ಬರಿಗೂ ಅಧಿಕಾರ ಇದೆ. ಆದರೆ, ತುಮಕೂರಿನಲ್ಲಿ ಮಂಜು ಭಾರ್ಗವ ಎಂಬ ಯುವಕನ ಮೇಲೆ ಹಲ್ಲೆಯಾಗಿದೆ ಎಂಬ ವಿಚಾರಕ್ಕೆ ಬಜರಂಗ ದಳದವರು ಪ್ರತಿಭಟನೆ ಮಾಡಿದ್ದಾರೆ. ಹಲ್ಲೆ ಮಾಡಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಿ. ಆದರೆ, ಯಾರೋ ಮಾಡಿದ ತಪ್ಪಿಗೆ ಒಂದು ಸಮುದಾಯದ ವಿರುದ್ಧ ದೂರುವುದು ಸರಿಯಲ್ಲ' ಎಂದರು.

ಸೋಮಶೆಟ್ಟಿಹಳ್ಳಿಯಲ್ಲಿ ಮೂರು ಅಂತಸ್ತುಗಳ ಕಟ್ಟಡವನ್ನು ಸೋಮವಾರ ತೆರವುಗೊಳಿಸಲಾಯಿತು (ಎಡ ಚಿತ್ರ), ಕಟ್ಟಡ ತೆರವುಗೊಳಿಸುವುದನ್ನು ಖಂಡಿಸಿ ಶಾಸಕ ಆರ್.ಮಂಜುನಾಥ್ ನೇತೃತ್ವದಲ್ಲಿ ಸ್ಥಳೀಯರು ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರಗಳು

ಶಿವರಾಮ ಕಾರಂತ ಬಡಾವಣೆ: ಅನಧಿಕೃತ ಕಟ್ಟಡ ತೆರವು ● ಪ್ರತಿಭಟನೆ ನಡೆಸಿದ ಶಾಸಕ ಮಂಜುನಾಥ್ ಸಹಿತ 30 ಮಂದಿ ವಶಕ್ಕೆ

ಭಾರಿ ಗಾತ್ರದ 4 ಕಟ್ಟಡ, 3 ಶೆಡ್ ನೆಲಸಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಡಾ.ಕೆ.ಶಿವರಾಮ ಕಾರಂತ ಬಡಾವಣೆ ಅಭಿವೃದ್ಧಿಪಡಿಸಲು ಪ್ರಾಥಮಿಕ ಅಧಿಸೂಚನೆ ಹೊರಡಿಸಿರುವ ಸ್ಥಳದಲ್ಲಿ 2018ರ ಬಳಿಕ ನಿರ್ಮಿಸಿರುವ ಭಾರಿ ಗಾತ್ರದ ನಾಲ್ಕು ಕಟ್ಟಡಗಳನ್ನು ಹಾಗೂ ಮೂರು ಶೆಡ್‌ಗಳನ್ನು ಸೋಮವಾರ ನೆಲಸಮಗೊಳಿಸಿದೆ.

ತೆರವುಗೊಳಿಸುವ ಕಾರ್ಯಾಚರಣೆ ವಿರೋಧಿಸಿ ಪ್ರತಿಭಟನೆ ನಡೆಸಿದ ದಾಸರಹಳ್ಳಿ ಶಾಸಕ ಆರ್.ಮಂಜುನಾಥ್ ಸೇರಿದಂತೆ 30ಕ್ಕೂ ಅಧಿಕ ಹೋರಾಟಗಾರರನ್ನು ಪೊಲೀಸರು ಸೋಮಶೆಟ್ಟಿಹಳ್ಳಿಯಲ್ಲಿ ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದರು.

ಕಟ್ಟಡ ತೆರವುಗೊಳಿಸಲು ಬಿಡಿಎ ಅಧಿಕಾರಿಗಳು ಸೋಮವಾರ ಬೆಳಿಗ್ಗೆ 15ಕ್ಕೂ ಅಧಿಕ ಜೆಸಿಬಿ, 10 ಹಿಟಾಚಿ ಯಂತ್ರಗಳೊಂದಿಗೆ ಹಾಗೂ ಪೊಲೀಸ್ ಭದ್ರತೆಯೊಂದಿಗೆ ಸ್ಥಳಕ್ಕೆ ತೆರಳಿದ್ದರು. ಕಟ್ಟಡಗಳನ್ನು ಒಡೆಯುವುದಕ್ಕೆ ಸ್ಥಳೀಯರು ಅಡ್ಡಿಪಡಿಸಿದ್ದರಿಂದ ಸ್ಥಳದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಯಿತು. ಸ್ಥಳಕ್ಕೆ ಬಂದ ಆರ್.ಮಂಜುನಾಥ್ ಅವರು ಕಟ್ಟಡ ತೆರವು ಸ್ಥಗಿತಗೊಳಿಸದಂತೆ ಕೋರಿದರು. ಅಧಿಕಾರಿಗಳು, 'ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ತೆರವು ಕಾರ್ಯ ಕೈಗೊಂಡಿದ್ದೇವೆ. ಇದಕ್ಕೆ ಅಡ್ಡಿಪಡಿಸಬಾರದು' ಎಂದು ತಿಳಿಸಿದರು. ವಿರೋಧಕ್ಕೆ ಸೊಪ್ಪು ಹಾಕದೇ ಬಹುಮಹಡಿ ಕಟ್ಟಡಗಳನ್ನೂ ಜೆಸಿಬಿಯಿಂದ ಕೆಡವಿದರು. ಇದನ್ನು ಖಂಡಿಸಿ ಶಾಸಕರ ನೇತೃತ್ವದಲ್ಲಿ ಧರಣಿ ಆರಂಭಿಸಿದಾಗ ಪೊಲೀಸರು ಅವರನ್ನು ವಶಕ್ಕೆ ಪಡೆದರು.

'ಈ ಬಡಾವಣೆಗೆ ಗೊತ್ತುಪಡಿಸಿದ ಜಾಗದಲ್ಲಿ 2018ರ ಆಗಸ್ಟ್ ಬಳಿಕ ನಿರ್ಮಾಣವಾಗಿರುವ ಕಟ್ಟಡಗಳನ್ನು ಹಾಗೂ ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ತೆರವುಗೊಳಿಸಿದ್ದೇವೆ. ಇವುಗಳಲ್ಲಿ ಒಂದು ಕಟ್ಟಡ ನೆಲಮಹಡಿ, ಎರಡು ಅಂತಸ್ತುಗಳನ್ನು ಹಾಗೂ ಮೂರು ಕಟ್ಟಡಗಳು ನೆಲ ಮಹಡಿ ಮತ್ತು ಒಂದು ಅಂತಸ್ತು ಹೊಂದಿದ್ದವು. ಇವೆಲ್ಲವೂ ವರ್ಷದ ಈಚೆಗೆ ನಿರ್ಮಾಣವಾದವು. ನಿರ್ಮಾಣ ಹಂತದಲ್ಲೇ ನೋಟಿಸ್ ನೀಡಿದರೂ ಕೆಲಸ ಸ್ಥಗಿತಗೊಳಿಸಿರಲಿಲ್ಲ. ಹಾಗಾಗಿ ಅವುಗಳನ್ನು ತೆರವುಗೊಳಿಸುವುದು ಅನಿವಾರ್ಯವಾಯಿತು' ಎಂದು ಬಿಡಿಎ ಎಂಜಿನಿಯರಿಂಗ್ ಸದಸ್ಯ ಶಾಂತರಾಜಣ್ಣ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ನ್ಯಾ.ಚಂದ್ರಶೇಖರ್ ಸಮಿತಿಗೆ ದಾಖಲೆಗಳನ್ನು ಸಲ್ಲಿಸಿದವರ ಕಟ್ಟಡಗಳನ್ನು ತೆರವುಗೊಳಿಸಿಲ್ಲ. ಬಡವರ ಮನೆಗಳನ್ನು ಮಾತ್ರ ಕೆಡವಲಾಗಿದೆ ಎಂದು ಕೆಲವರು ಆರೋಪಿಸಿದ್ದರು. ಇಂದು ಕೆಡವಿರುವ ಕಟ್ಟಡಗಳನ್ನು ನೋಡಿದರೆ ನಾವು ತಾರತಮ್ಯ ಮಾಡದೆಯೇ ಕ್ರಮ ಜರುಗಿಸುತ್ತಿದ್ದೇವೆ ಎಂಬುದು ಮನವರಿಕೆ ಆಗುತ್ತದೆ. ಇದುವರೆಗೆ 45 ಕಟ್ಟಡಗಳನ್ನು ತೆರವುಗೊಳಿಸಲಾಗಿದೆ' ಎಂದು ಬಿಡಿಎ ಅಧಿಕಾರಿಯೊಬ್ಬರು ತಿಳಿಸಿದರು.

'ಬಡವರ ಮನೆಗಳನ್ನು ತೆರವುಗೊಳಿಸಿ ಎಂದು ಯಾವುದೇ ಕೋರ್ಟ್ ಹೇಳಿಲ್ಲ. ಕೋರ್ಟ್ ಆದೇಶ ನೆಪವಾಗಿಟ್ಟುಕೊಂಡು ಅಧಿಕಾರಿಗಳು ಜನರ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ. ರಿಯಲ್ ಎಸ್ಟೇಟ್ ಲಾಬಿಗೆ ಮಣಿದು ಬಿಡಿಎ ಅಧಿಕಾರಿಗಳು ಕಾರ್ಯಾಚರಣೆ ನಡೆಸುತ್ತಿದ್ದಾರೆ' ಎಂದು ಆರ್. ಮಂಜುನಾಥ್ ದೂರಿದರು.

ಕಟ್ಟಡಗಳ ತೆರವಿಗೆ ವಿರೋಧ ವ್ಯಕ್ತಪಡಿಸಿರುವ ಸ್ಥಳೀಯರು, 'ಕಟ್ಟಡಗಳನ್ನು ಕೆಡವಿ ಅಲ್ಲಿ ಬೇರೆಯವರಿಗೆ ನಿವೇಶನ ನೀಡುವುದು ಎಷ್ಟರಮಟ್ಟಿಗೆ ಸರಿ' ಎಂದು ಪ್ರಶ್ನಿಸಿದ್ದಾರೆ.

ಬಡಾವಣೆಗಾಗಿ ಸ್ವಾಧೀನಪಡಿಸಿಕೊಳ್ಳಬೇಕಿದ್ದ ಒಟ್ಟು 3,546 ಎಕರೆ ಭೂಮಿಯಲ್ಲಿ 257 ಎಕರೆಯನ್ನು 2009–10ರ ಅವಧಿಯಲ್ಲಿ ರಾಜ್ಯ ಸರ್ಕಾರ ಕೈಬಿಟ್ಟಿತ್ತು. ಈ ಕುರಿತು ಅರ್ಜಿ ವಿಲೇವಾರಿ ಮಾಡಿದ್ದ ಹೈಕೋರ್ಟ್ ಈ ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆಯನ್ನೇ ರದ್ದುಪಡಿಸಿತ್ತು. ಅನೇಕರು ಬಿಡಿಎಯಿಂದ ನಿರಾಕ್ಷೇಪಣಾ ಪತ್ರ ಪಡೆದು ಅಲ್ಲಿ ಕಟ್ಟಡ ನಿರ್ಮಿಸಿದ್ದರು. ಪ್ರಕರಣದ ಮೇಲ್ಮನವಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್ ಈ ಬಡಾವಣೆಯ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸುವಂತೆ 2018ರ ಆಗಸ್ಟ್ 3ರಂದು ಆದೇಶ ಮಾಡಿತ್ತು. ಆ ಬಳಿಕ ಕೆಲವರು ತರಾತುರಿಯಲ್ಲಿ ಈ ಪ್ರದೇಶದಲ್ಲಿ ಕಟ್ಟಡ ನಿರ್ಮಿಸಿದ್ದರು. ಇದು ಗಮನಕ್ಕೆ ಬರುತ್ತಿದ್ದಂತೆಯೇ, ಸುಪ್ರೀಂ ಕೋರ್ಟ್ 'ನಿಯಮಾನುಸಾರ ಅನುಮತಿ ಪಡೆದು ನಿರ್ಮಾಣವಾಗಿರುವ ಕಟ್ಟಡಗಳಿಗೆ ರಕ್ಷಣೆ ಒದಗಿಸಬೇಕು' ಎಂದು ಸೂಚಿಸಿತ್ತು. ಕಟ್ಟಡಗಳ ಕ್ರಮಬದ್ಧತೆ ಪರಿಶೀಲಿಸಲು ನಿವೃತ್ತ ನ್ಯಾ.ಚಂದ್ರಶೇಖರ್ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿತ್ತು.

'ಒಂದೆಡೆ ದುಡ್ಡು ಹೊಡೆಯುವುದು, ಇನ್ನೊಂದು ಕಡೆ ಕಟ್ಟಡ ಒಡೆಸುವುದು'

'ಈ ಬಡಾವಣೆಗೆ ಸಂತ್ರಸ್ತರ ಸಭೆ ಕರೆಯುವಂತೆ ಮುಖ್ಯಮಂತ್ರಿ ಅವರಲ್ಲಿ ಮನವಿ ಮಾಡಿದ್ದೆ. ಇದಕ್ಕೆ ಅವಕಾಶ ನೀಡದೇ ಈಗ ಏಕಾಏಕಿ ಮನೆಗಳನ್ನು ಒಡೆಸುತ್ತಿರುವುದು ಸರಿಯಲ್ಲ. ಮುಖ್ಯಮಂತ್ರಿಗೆ ಜವಾಬ್ದಾರಿ ಎನ್ನುವುದು ಇದ್ದಿದ್ದರೆ ಕುಳಿತು ಚರ್ಚೆ ಮಾಡಿ ಕಾನೂನು ರೀತಿಯಲ್ಲಿ ಆ ಜನರಿಗೆ ರಕ್ಷಣೆ ನೀಡಬೇಕಾಗಿತ್ತು. ಇವರೇ ಒಂದು ಕಡೆ ದುಡ್ಡು ಹೊಡೆಯೋದು. ಇನ್ನೊಂದು ಕಡೆ ಇವರೇ ಕಟ್ಟಡ ಒಡೆಸೋದು. ಜನರನ್ನು ಈಗ ಬೀದಿಗೆ ತಂದು ನಿಲ್ಲಿಸಿದ್ದಾರೆ' ಎಂದು ಜೆಡಿಎಸ್ ಶಾಸಕ ಎಚ್‌.ಡಿ.ಕುಮಾರಸ್ವಾಮಿ ತಿಳಿಸಿದರು.

'ಜನ ಸಾಲ ಮಾಡಿ ಮನೆಗಳನ್ನು ಕಟ್ಟಿದ್ದಾರೆ. ಡಿನೋಟಿಫಿಕೇಷನ್ ಮಾಡಿ, ನಿರಾಕ್ಷೇಪಣಾ ಪತ್ರಗಳನ್ನೂ ನೀಡುವ ಮೂಲಕ ಬಿಡಿಎ ಆಯುಕ್ತರು, ಅಧಿಕಾರಿಗಳು ಹಣ ಲೂಟಿ ಹೊಡೆದಿದ್ದಾರೆ. ಮುಖ್ಯಮಂತ್ರಿಗಳ ನಿರ್ದೇಶನದಂತೆ ಇದೆಲ್ಲವನ್ನೂ ಅಧಿಕಾರಿಗಳು ಮಾಡಿದ್ದಾರೆ. ನ್ಯಾಯಾಲಯದಲ್ಲಿ ಸರಿಯಾಗಿ ವಾದ ಮಂಡಿಸದೇ ಅಮಾಯಕರ ಜೀವನದ ಜತೆ ಚೆಲ್ಲಾಟ ಆಡಿದ್ದಾರೆ' ಎಂದು ಆರೋಪಿಸಿದರು.

'ಈ ಜನರ ಪರ ಹೋರಾಟ ಮಾಡಿದ್ದ ಬಿಡಿಎಯ ಈಗಿನ ಅಧ್ಯಕ್ಷ ಎಸ್‌.ಆರ್‌.ವಿಶ್ವನಾಥ್ ಅವರೇ ಈಗ ಮನೆಗಳನ್ನು ನೆಲಸಮ ಮಾಡಿಸುತ್ತಿದ್ದಾರೆ. ನಾನು ಅಧಿಕಾರದಲ್ಲಿದ್ದಾಗ ಮನೆಗಳನ್ನು ಒಡೆಯಲು ಬಿಟ್ಟಿರಲಿಲ್ಲ' ಎಂದು ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು. ಕಟ್ಟಡಗಳನ್ನು ನೆಲಸಮ ಮಾಡುವುದನ್ನು ತಡೆಯಲು ಹೋದ ಶಾಸಕ ಮಂಜುನಾಥ್ ಅವರನ್ನು ಪೊಲೀಸರು ವಶಕ್ಕೆ ಪಡೆದಿರುವುದನ್ನು ಜೆಡಿಎಸ್ ಮುಖಂಡ ಹೆಚ್. ಡಿ.ಕುಮಾರಸ್ವಾಮಿ ಖಂಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಎಸ್‌.ಆರ್‌.ವಿಶ್ವನಾಥ್,' 2017–18ರಲ್ಲಿ ನಾನು ಹೋರಾಟ ಮಾಡಿದ್ದು ನಿಜ. ಹಿಂದಿನ ಸರ್ಕಾರಗಳೇ ಸುಪ್ರೀಂ ಕೋರ್ಟ್‌ಗೆ ಬಿಡಿಎ ಕಡೆಯಿಂದ ಪ್ರಮಾಣಪತ್ರ ಸಲ್ಲಿಸಿವೆ. ನಾನು ಅಧ್ಯಕ್ಷನಾದ ಬಳಿಕ ಈ ಬೆಳವಣಿಗೆ ನಡೆದಿಲ್ಲ. ರೈತ ವಿರೋಧಿ ಕೆಲಸ ಮಾಡುವುದಿಲ್ಲ. ಆದರೆ, ನ್ಯಾಯಾಲಯದ ಆದೇಶ ಪರಿಪಾಲನೆ ನನ್ನ ಕರ್ತವ್ಯ' ಎಂದರು.

'ಅನಧಿಕೃತ ಕಟ್ಟಡ ಗುರುತಿಸಲು ಸುಪ್ರೀಂ ಕೋರ್ಟ್ ಆದೇಶದ ಮೇಲೆ ರಚಿಸಿರುವ ಸಮಿತಿ ಕಾಲಕಾಲಕ್ಕೆ ನೀಡುವ ಸೂಚನೆ ಮೇರೆಗೆ ಬಿಡಿಎ ಅಧಿಕಾರಿಗಳು ಕೆಲ ಮಾಡುತ್ತಿದ್ದಾರೆ. ಶಾಸಕರು ಇದಕ್ಕೆ ಸಹಕಾರ ನೀಡಬೇಕು. ಕಾನೂನಿಗೆ ವಿರುದ್ಧವಾಗಿ ಅಧಿಕಾರಿಗಳು ನಡೆದುಕೊಂಡಿದ್ದರೆ ಅವರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ' ಎಂದೂ ತಿಳಿಸಿದರು.

ಮಾಂಟ್‌ಗೊಮೆರಿ ಕಾಲೇಜಿನ ಜತೆ ಒಪ್ಪಂದ

ಬೆಂಗಳೂರು: ವೃತ್ತಿಪರ ಶಿಕ್ಷಣದಲ್ಲಿ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಕ್ಕಾಗಿ (ಟ್ವಿನ್ನಿಂಗ್) ನಗರದ ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಅಮೆರಿಕದ ಪೆನ್ಸಿಲ್ವೇನಿಯಾ ರಾಜ್ಯದ ಮಾಂಟ್‌ಗೊಮೆರಿ ಕೌಂಟಿ ಸಮುದಾಯ ಕಾಲೇಜಿನ ಜತೆ ಸೋಮವಾರ ಒಪ್ಪಂದಕ್ಕೆ ಸಹಿ ಹಾಕಿದೆ. ಈ ಯೋಜನೆಯಡಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಪಾಲಿಟೆಕ್ನಿಕ್‌ನಲ್ಲಿ ಎರಡು ಹೊಸ ಕೋರ್ಸ್‌ಗಳು ಆರಂಭವಾಗಲಿವೆ.

ಒಪ್ಪಂದಕ್ಕೆ ಸಹಿ ಹಾಕುವ ಪ್ರಕ್ರಿಯೆಯ ಬಳಿಕ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, 'ಮೂರು ವರ್ಷಗಳ ಅವಧಿಯ ಪ್ರವಾಸೋದ್ಯಮ–ಆತಿಥ್ಯೋದ್ಯಮ ಹಾಗೂ ಸೈಬರ್ ಭದ್ರತೆ ಡಿಪ್ಲೊಮಾ ಕೋರ್ಸ್‌ಗಳನ್ನು ಎಸ್‌ಜೆಪಿಯಲ್ಲಿ ಈ ಶೈಕ್ಷಣಿಕ ವರ್ಷದಿಂದ ಆರಂಭಿಸಲಾಗುತ್ತಿದೆ. ಎರಡೂ ಕೋರ್ಸ್‌ಗಳಲ್ಲಿ ತಲಾ 24 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುತ್ತದೆ. ವಿದ್ಯಾರ್ಥಿಗಳು ಮೊದಲ ವರ್ಷ ಸ್ಥಳೀಯವಾಗಿ ಕಲಿಯಲಿದ್ದಾರೆ. ಎರಡನೇ ವರ್ಷ ಮಾಂಟ್‌ಗೊಮೆರಿ ಕಾಲೇಜಿನ ಪ್ರಾಧ್ಯಾಪಕರು ಆನ್‌ಲೈನ್ ಮೂಲಕ ಬೋಧಿಸಲಿದ್ದಾರೆ. ಮೂರನೇ ವರ್ಷ ವಿದ್ಯಾರ್ಥಿಗಳು ಮಾಂಟ್‌ಗೊಮೆರಿ ಕಾಲೇಜಿಗೆ ತೆರಳಿ ವ್ಯಾಸಂಗ ಮಾಡುತ್ತಾರೆ' ಎಂದರು.

ಪ್ರತಿ ವಿದ್ಯಾರ್ಥಿಗೂ ತಲಾ ₹ 20 ಲಕ್ಷ ವೆಚ್ಚವಾಗಲಿದೆ. ಅದನ್ನು ರಾಜ್ಯ ಸರ್ಕಾರವೇ ಭರಿಸಲಿದೆ. ಅಮೆರಿಕಕ್ಕೆ ತೆರಳಿದ ಬಳಿಕ ವಿದ್ಯಾರ್ಥಿಗಳು 12 ಕೋರ್ಸ್‌ಗಳನ್ನು ಅಧ್ಯಯನ ಮಾಡುತ್ತಾರೆ. ಮೂರು ವರ್ಷಗಳ ಕೋರ್ಸ್ ಪೂರ್ಣಗೊಳಿಸಿದ ಬಳಿಕ ಎಲ್ಲ ವಿದ್ಯಾರ್ಥಿಗಳಿಗೂ ಅಮೆರಿಕದಲ್ಲೇ ಉದ್ಯೋಗ ದೊರೆಯಲಿದೆ. ವಾರ್ಷಿಕ ₹ 25 ಲಕ್ಷದಿಂದ ₹ 30 ಲಕ್ಷದವರೆಗೂ ವೇತನ ಸಿಗಲಿದೆ. ಉದ್ಯೋಗ ನೀಡುವುದಕ್ಕಾಗಿ 30 ಕಂಪನಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಎಂದರು.

ರಾಷ್ಟ್ರೀಯ ಶಿಕ್ಷಣ ನೀತಿಯ ಭಾಗವಾಗಿ ಈ ಕಾರ್ಯಕ್ರಮ ರೂಪಿಸಲಾಗಿದೆ. ದೇಶದಲ್ಲೇ ಮೊದಲ ಬಾರಿಗೆ ಎಸ್‌ಜೆಪಿಯಲ್ಲಿ ಈ ಯೋಜನೆ ಜಾರಿಗೊಳಿಸಲಾಗಿದೆ ಎಂದು ಹೇಳಿದರು.

48 ಮಂದಿ ಆಯ್ಕೆ

ರಾಜ್ಯದ ಪಾಲಿಟೆಕ್ನಿಕ್‌ಗಳಲ್ಲಿ ಪ್ರವೇಶ ಪಡೆದಿರುವ ಅತಿಹೆಚ್ಚು ಅಂಕಗಳನ್ನು ಪಡೆದಿರುವ 5,000 ವಿದ್ಯಾರ್ಥಿಗಳಲ್ಲಿ 48 ಮಂದಿಯನ್ನು ಪ್ರವಾಸೋದ್ಯಮ – ಆತಿಥ್ಯೋದ್ಯಮ ಹಾಗೂ ಸೈಬರ್ ಭದ್ರತೆ ಡಿಪ್ಲೊಮಾ ಕೋರ್ಸ್ ಪ್ರವೇಶಕ್ಕೆ ಆಯ್ಕೆ ಮಾಡಲಾಗಿದೆ. ಈ ಕೋರ್ಸ್‌ಗಳಿಗೆ ಆಯ್ಕೆಯಾಗಿರುವ ಹೊಸದುರ್ಗ ತಾಲ್ಲೂಕಿನ ಸಾಣೇಹಳ್ಳಿಯ ನವೀನ್, ಹೊಸದುರ್ಗದ ಟಿ.ಎ.ತರುಣ್ ಮತ್ತು ಮಂಡ್ಯದ ಎಸ್‌.ಎನ್‌.ಧನುಷ್ ಒಪ್ಪಂದಕ್ಕೆ ಸಹಿ ಹಾಕುವ ಸಮಾರಂಭದಲ್ಲಿ ಹಾಜರಿದ್ದರು.

ಹಾಳಾದ ರಸ್ತೆ ವೀಕ್ಷಿಸಿದ ನ್ಯಾಯಾಧೀಶರು

ರಸ್ತೆ ದುರಸ್ತಿಗೆ ಹಾರೆ ಹಿಡಿದ ಮಕ್ಕಳು

ಪ್ರಜಾವಾಣಿ ವಾರ್ತೆ

ಸುಳ್ಯ: ಸುಳ್ಯ ತಾಲ್ಲೂಕಿನ ಬೆಳ್ಳಾರೆಯ ಮಂಡೇಪು ಎಂಬಲ್ಲಿ ಶಾಲಾ ಮಕ್ಕಳಿಬ್ಬರು ಶಾಲೆಗೆ ತೆರಳುವ ಹಾದಿಯ ಹದಗೆಟ್ಟ ರಸ್ತೆಯನ್ನು ತಾವೇ ಹಾರೆ ಹಿಡಿದು ಸರಿಪಡಿಸುತ್ತಿರುವ ಚಿತ್ರ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

2ನೇ ತರಗತಿ ವಿದ್ಯಾರ್ಥಿಗಳಾದ ವಲ್ಲೀಶ ರಾಮ ಹಾಗೂ ತನ್ವಿ ರಸ್ತೆ ದುರಸ್ತಿಗೆ ಮುಂದಾದ ಮಕ್ಕಳು. ಸಾಮಾಜಿಕ ಮಾಧ್ಯಮಗಳಲ್ಲಿ ಈ ದೃಶ್ಯವನ್ನು ನೋಡಿದ ಸುಳ್ಯ ಹಿರಿಯ ಸಿವಿಲ್ ನ್ಯಾಯಾಲಯ ನ್ಯಾಯಾಧೀಶ ಸೋಮಶೇಖರ್ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ರಸ್ತೆ ಸಮಸ್ಯೆ ನಿವಾರಿಸುವಂತೆ ಎಂದು ತಾಕೀತು ಮಾಡಿದ್ದಾರೆ.

ವಿದ್ಯಾರ್ಥಿಗಳ ಕೈಯಲ್ಲಿ ಹಾರೆ ನೀಡಿದ್ದಕ್ಕಾಗಿ ನ್ಯಾಯಾಧೀಶರು ಪೋಷಕರನ್ನು ಪ್ರಶ್ನಿಸಿದರು. 'ಇದು ನಮ್ಮದೇ ರಸ್ತೆ. ಪಂಚಾಯತಿಗೆ ಮನವಿ ನೀಡಿದ್ದರೂ, ಅವರು ದುರಸ್ತಿ ಮಾಡದ ಕಾರಣ ನಾವು ಶ್ರಮದಾನ ಮಾಡಿದೆವು. ಮಕ್ಕಳು ಬಂದು ಶ್ರಮದಾನದಲ್ಲಿ ಭಾಗಿಯಾಗಿದ್ದಾರೆ' ಎಂದು ಪೋಷಕರು ತಿಳಿಸಿದರು ಎನ್ನಲಾಗಿದೆ.

ಬಳಿಕ ಗ್ರಾಮ ಪಂಚಾಯಿತಿಗೆ ಭೇಟಿ ನೀಡಿದ ನ್ಯಾಯಾಧೀಶರು, ಕೂಡಲೇ ರಸ್ತೆ ದುರಸ್ತಿ ಮಾಡಿಸಬೇಕು. ಇಲ್ಲದಿದ್ದಲ್ಲಿ ಮಕ್ಕಳಿಂದ ಕೆಲಸ ಮಾಡಿಸಿದ ಪೋಷಕರು, ರಸ್ತೆ ದುರಸ್ತಿ ಮಾಡಿಸದ ಪಂಚಾಯಿತಿ ಅಧ್ಯಕ್ಷ ಮತ್ತು ಪಿಡಿಒ ಮೇಲೆ ಹಾಗೂ ಮಕ್ಕಳ ಬಗ್ಗೆ ನಿಗಾ ವಹಿಸದ ಶಾಲಾ ಶಿಕ್ಷಕರ ಮೇಲೆ ಎಫ್‌ಐಆರ್ ದಾಖಲಿಸುವಂತೆ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಆಂಜನೇಯ ರೆಡ್ಡಿ ಅವರಿಗೆ ಸೂಚನೆ ನೀಡಿದರು. ತಕ್ಷಣ ದುರಸ್ತಿ ಮಾಡಿ, ಅದರ ಚಿತ್ರ ಮತ್ತು ವರದಿ ಸಲ್ಲಿಸುವಂತೆಯೂ ನಿರ್ದೇಶನ ನೀಡಿದರು.

ಸುಳ್ಯ ತಾಲ್ಲೂಕಿನ ಬೆಳ್ಳಾರೆಯ ಮಂಡೇಪು ಎಂಬಲ್ಲಿ ಶಾಲಾ ಮಕ್ಕಳಿಬ್ಬರು ಹಾರೆ ಹಿಡಿದು ಹದಗೆಟ್ಟ ರಸ್ತೆಯನ್ನು ದುರಸ್ತಿಗೊಳಿಸಿರುವ ಚಿತ್ರ ವೈರಲ್ ಆಗಿದೆ.

ಪಾಕ್‌ಗೆ ರಹಸ್ಯ ಮಾಹಿತಿ: ಬಂಧನ

ಭುಜ್: ಪಾಕಿಸ್ತಾನಕ್ಕೆ ವಾಟ್ಸ್‌ಆ್ಯಪ್ ಮೂಲಕ ರಹಸ್ಯ ಮತ್ತು ಸೂಕ್ಷ್ಮ ಮಾಹಿತಿಯನ್ನು ರವಾನಿಸಿದ ಆರೋಪದ ಮೇಲೆ ಗಡಿ ಭದ್ರತಾ ಪಡೆಯ (ಬಿಎಸ್‌ಎಫ್) ಕಾನ್‌ಸ್ಟೆಬಲ್ ಮೊಹಮ್ಮದ್ ಸಜ್ಜದ್ ಅವರನ್ನು ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಬಂಧಿಸಿದೆ. ಅವರು, ನೆರೆಯ ದೇಶಕ್ಕಾಗಿ ಬೇಹುಗಾರಿಕೆ ಮಾಡುತ್ತಿದ್ದರು ಎಂದು ಎಟಿಎಸ್ ಹೇಳಿದೆ.

ಸಜ್ಜದ್ ಅವರನ್ನು ಭುಜ್‌ನ ಬಿಎಸ್‌ಎಫ್ ಪ್ರಧಾನ ಕಚೇರಿಯಲ್ಲಿ ಬಂಧಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ಸರೋಲಾ ಗ್ರಾಮದವರಾದ ಸಜ್ಜದ್ 2012ರಲ್ಲಿ ಕಾನ್‌ಸ್ಟೆಬಲ್ ಆಗಿ ಸೇರಿಕೊಂಡಿದ್ದರು. ಆತ ನೀಡಿದ ಮಾಹಿತಿಗಾಗಿ ಆತನ ಸಹೋದರ ವಾಜೇದ್ ಮತ್ತು ಸಹೋದ್ಯೋಗಿ ಇಕ್ಬಾಲ್ ರಶೀದ್ ಖಾತೆಗಳಿಗೆ ಪಾಕಿಸ್ತಾನದಿಂದ ಹಣ ಬರುತ್ತಿತ್ತು ಎಂದು ಎಟಿಎಸ್ ತಿಳಿಸಿದೆ. ಸಜ್ಜದ್ ಅವರು ಡಿಸೆಂಬರ್ 1, 2011 ಮತ್ತು ಜನವರಿ 16, 2012ರ ನಡುವೆ ಪಾಕಿಸ್ತಾನಕ್ಕೆ ಪ್ರಯಾಣಿಸಿ ಅಲ್ಲಿ 46 ದಿನ ಕಳೆದಿದ್ದಾರೆ ಎಂದು ಎಟಿಎಸ್ ಹೇಳಿದೆ.

ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,
ನಂ.14, ರಜತ ಭವನ, 1ನೇ ಮುಖ್ಯರಸ್ತೆ, ಹಕ್ಕ ರಸ್ತೆ,ಹಂಪಿನಗರ, ವಿಜಯನಗರ 2ನೇ ಹಂತ, ಬೆಂಗಳೂರು–560104 ದೂರವಾಣಿ: 23300497–41159606 ಫ್ಯಾಕ್ಸ್: 23359600,
Email: jscbinfo@jscbl.com, ಶಾಖೆ: ವಿಜಯನಗರ

ಸ್ವಾಧೀನ ಸೂಚನೆ (ಸ್ಥಿರಾಸ್ತಿಗಳಿಗಾಗಿ) ನಿಯಮ 8(1)

ಕೆಳಸಹಿದಾರರು ಜನತಾ ಸೇವಾ ಸಹಕಾರ ಬ್ಯಾಂಕ್ ಲಿ. ನ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು, ಸದರಿ ನೋಟೀಸ್ ತಲುಪಿದ ದಿನಾಂಕದಿಂದ 60 ದಿನಗಳ ಒಳಗೆ ದಿನಾಂಕ 30–06–2021 ರಂದು ಇದ್ದಂತೆ ನೋಟೀಸ್‌ನಲ್ಲಿ ತಿಳಿಸಿರುವ ಮೊತ್ತ ರೂ. 4,17,17,856/– (ನಾಲ್ಕು ಕೋಟಿ ಹದಿನೇಳು ಲಕ್ಷ ಹದಿನೇಳು ಸಾವಿರದ ಎಂಟು ನೂರ ಐವತ್ತಾರು ರೂಪಾಯಿಗಳು ಮಾತ್ರ) ಅನ್ನು ಮರುಪಾವತಿ ಮಾಡುವಂತೆ ಸಾಲಗಾರರಾದ **ಮೆ॥ ವೈಭವ್ ಡೆವಲಪರ್ಸ್**, ಇದರ ವ್ಯವಸ್ಥಾಪಕ ನಿರ್ದೇಶಕರಾದ ಲೇಟ್ ಗೋಪಾಲ್ ಕೆ. ಇವರಿಂದ ಪ್ರತಿನಿಧಿಸಲ್ಪಡುತ್ತಿತ್ತು, ಇವರು ನಿಧನರಾಗಿರುವುದರಿಂದ ಇವರ ಕಾನೂನು ಉತ್ತರಾಧಿಕಾರಿಗಳಾದ **1. ಶ್ರೀಮತಿ ರಂಗನಾಯಕಿ,** ಲೇಟ್ ಗೋಪಾಲ್ ಕೆ. ಇವರ ಪತ್ನಿ (ಜಾಮೀನುದಾರರು), **2. ಶ್ರೀಮತಿ ಶುಭಾಷಿಣಿ ಜಿ.** ಲೇಟ್ ಗೋಪಾಲ್ ಕೆ. ಇವರ ಪುತ್ರಿ **3. ಶ್ರೀ ಬಾಲಾಜಿ** ಬಿನ್ ಲೇಟ್ ಗೋಪಾಲ್ ಕೆ. **4. ಶ್ರೀ ರಘು ಪ್ರಕಾಶ್ ಜಿ.** ಬಿನ್ ಲೇಟ್ ಗೋಪಾಲ್ ಕೆ. ನಂ. 62, ಜಿ–1, ಶ್ರೀ ಬಾಲಾಜಿ ರೆಸಿಡೆನ್ಸಿ, 2ನೇ ಮುಖ್ಯರಸ್ತೆ, ಪ್ರಶಾಂತನಗರ, ಬೆಂಗಳೂರು – 560 079 ಇವರೆಲ್ಲರೂ ನಂ. 46/35, 8ನೇ ಅಡ್ಡರಸ್ತೆ, 2ನೇ ಮುಖ್ಯರಸ್ತೆ, ಪ್ರಶಾಂತನಗರ, ಬೆಂಗಳೂರು – 560 079, ಇಲ್ಲಿನ ನಿವಾಸಿಗಳು ಇವರಿಗೆ ಕರೆ ನೀಡಿ, ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್‌ರಚನೆ ಮತ್ತು ಭದ್ರತಾ ಆಸಕ್ತಿ ಜಾರಿ ಕಾಯ್ದೆ, 2002 ರ ಅನ್ವಯ ಮತ್ತು ಭದ್ರತಾ ಆಸಕ್ತಿ (ಜಾರಿ) ನಿಯಮಗಳು 2002 ರ ನಿಯಮ 3 ಓದಿಕೊಂಡಂತೆ ಪ್ರಕರಣ 13 (12) ರ ಅನ್ವಯ ಪ್ರದತ್ತವಾದ ಅಧಿಕಾರ ಚಲಾಯಿಸಿ ದಿನಾಂಕ 30–06–2021 ರಂದು ಡಿಮ್ಯಾಂಡ್ ನೋಟೀಸ್ ನೀಡಿದ್ದರು.

ಶ್ರೀಮತಿ ರಂಗನಾಯಕಿ W/o. ಲೇಟ್ ಗೋಪಾಲ್ ಕೆ.

ಸಾಲಗಾರರು ಸಾಲದ ಬಾಕಿ ಮೊತ್ತವನ್ನು ಮರುಪಾವತಿ ಮಾಡಲು ವಿಫಲರಾಗಿರುವುದರಿಂದ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ನೋಟೀಸ್ ನೀಡುವುದೇನೆಂದರೆ ಭದ್ರತಾ ಆಸಕ್ತಿ (ಜಾರಿ) ನಿಯಮಗಳು 2002 ರ ನಿಯಮ 8 ಓದಿಕೊಂಡಂತೆ ಕಾಯ್ದೆಯ ಪ್ರಕರಣ 13ರ ಉಪಪ್ರಕರಣ (4) ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಈ ಕೆಳಗೆ ವಿವರಿಸಿರುವ ಸ್ವತ್ತನ್ನು ದಿನಾಂಕ 22ನೇ ಅಕ್ಟೋಬರ್ 2021 ರಂದು ಕೆಳಸಹಿದಾರರು ಸ್ವಾಧೀನಪಡಿಸಿಕೊಂಡಿದ್ದಾರೆ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಸಾಮಾನ್ಯವಾಗಿ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಸದರಿ ಸ್ವತ್ತಿನ ಬಗ್ಗೆ ಯಾರೂ ವ್ಯವಹರಿಸಬಾರದು. ಒಂದು ವೇಳೆ ಸದರಿ ಸ್ವತ್ತಿನ ಬಗ್ಗೆ ಯಾವುದೆ ವ್ಯವಹಾರ ನಡೆಸಿದ್ದೇ ಆದರೆ ದಿನಾಂಕ 22–10–2021 ರಂದು ಇದ್ದಂತೆ ಜನತಾ ಸೇವಾ ಕೋ–ಆಪರೇಟಿವ್ ಬ್ಯಾಂಕ್ ಲಿ., ವಿಜಯನಗರ ಶಾಖೆ, ಬೆಂಗಳೂರು ಇವರಿಗೆ ಪಾವತಿ ಮಾಡಬೇಕಾಗಿರುವ ಸಾಲದ ಸಂ. ಎಂಟಿಎಲ್–80 ರ ಸಂಬಂಧ ರೂ. 4,32,15,441/– (ನಾಲ್ಕು ಕೋಟಿ ಮೂವತ್ತೆರಡು ಲಕ್ಷದ ಹದಿನೈದು ಸಾವಿರದ ನಾಲ್ಕು ನೂರಾ ನಲವತ್ತೊಂದು ಮಾತ್ರ). ಮತ್ತು ಇದರ ಮೇಲಿನ ಬಡ್ಡಿ ಪಾವತಿ ಮಾಡುವುದಕ್ಕೆ ಒಳಪಟ್ಟಿರುತ್ತದೆ.

ಭದ್ರತೆಯಾಗಿ ನೀಡಿರುವ ಸ್ವತ್ತನ್ನು ಬಿಡಿಸಿಕೊಳ್ಳಲು ಲಭ್ಯವಿರುವ ಸಮಯಾವಕಾಶದ ಬಗ್ಗೆ ಕಾಯ್ದೆಯ ಪ್ರಕರಣ 13 (8) ರ ಉಪಬಂಧಗಳನ್ನು ಗಮನಿಸಬೇಕಾಗಿ ಸಾಲಗಾರರಿಗೆ ತಿಳಿಸಲಾಗಿದೆ.

ಸ್ಥಿರಾಸ್ತಿಯ ವಿವರ :

ಕೈಗಾರಿಕಾ ಸಬರ್ಬ್, ರಾಜಾಜಿನಗರ ಎಕ್ಸ್‌ಟೆನ್‌ಷನ್, ಯಶವಂತಪುರ, ಬಿ.ಬಿ.ಎಂ.ಪಿ. ವಾರ್ಡ್ ನಂ. 10 (ಮಹಾಲಕ್ಷ್ಮೀಪುರಂ), ಹೊಸ ವಾರ್ಡ್ ನಂ. 44, ಬೆಂಗಳೂರು ಇಲ್ಲಿರುವ ಪೂರ್ವದಿಂದ ಪಶ್ಚಿಮಕ್ಕೆ : 184.00 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ : 49.00 ಅಡಿ ಹೀಗೆ 9,016 ಚದರ ಅಡಿ ವಿಸ್ತೀರ್ಣವುಳ್ಳ, ಮೊದಲು ಮುನಿಸಿಪಲ್ ಸಂ. 24ರ ದಕ್ಷಿಣ ಭಾಗವಾಗಿದ್ದ, ಹೊಸ ಮುನಿಸಿಪಲ್ ನಂ. 24, ಪಿ.ಐ.ಡಿ. ನಂ. 10–01–24, ಹೊಸ ಪಿ.ಐ.ಡಿ. ನಂ. 044–ಡಬ್ಲ್ಯೂ0369–51 ಒಳಗೊಂಡಿರುವ ನಿವೇಶನ ನಂ. 94ರ ಸಂಪೂರ್ಣ ಸ್ವತ್ತು ಸದರಿ ಸ್ವತ್ತಿನ ಚೆಕ್ಕುಬಂದಿ ಕೆಳಕಂಡಂತಿರುವುದು: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ನಂ. 85ರ ಸ್ವತ್ತು, ಉತ್ತರಕ್ಕೆ : ನಂ. 93ರ ಸ್ವತ್ತು, ದಕ್ಷಿಣಕ್ಕೆ : ಶ್ರೀ ಬಿ.ಎಸ್. ಅವಿನಾಶ್ ಮತ್ತು ಶ್ರೀಮತಿ ಪ್ರಭಾಮೂರ್ತಿ ಇವರಿಗೆ ಸೇರಿದ ನಂ. 24/1ರ ಸ್ವತ್ತು.

ಈ ಹಿಂದಿನ ದಿನಾಂಕ 08–10–2021 ರಂದು ನೀಡಿದ ಸ್ವಾಧೀನ ನೋಟೀಸನ್ನು ಹಿಂಪಡಿಯಲಾಗಿದೆ.

ಸ್ಥಳ : ಬೆಂಗಳೂರು
ದಿನಾಂಕ : 22/10/2021

ಸಹಿ/– ಅಧಿಕೃತ ಅಧಿಕಾರಿ
ಜನತಾ ಸೇವಾ ಕೋ ಆಪರೇಟಿವ್ ಬ್ಯಾಂಕ್ ಲಿ.,

ಮೂಕಜೀವಿಗಳ ವೇದನೆಗೆ ಸ್ಪಂದಿಸೋಣ

ಪ್ರಜಾವಾಣಿ ವಾರ್ತೆ

ಬೀದಿ ಪ್ರಾಣಿಗಳ ಮೇಲೂ ಇರಲಿ ಅಂತಃಕರಣ

ಬೆಂಗಳೂರು: ವಾಸಕ್ಕೆ ಸುರಕ್ಷಿತ ನೆಲೆ ಇಲ್ಲ, ತಿನ್ನಲು ಆಹಾರ ಸಿಗುವ ಖಾತರಿ ಇಲ್ಲ, ಅನುಕ್ಷಣವೂ ಯಾವಾಗ ಯಾರಿಂದ ದಾಳಿ ನಡೆಯುತ್ತದೆಯೇನೋ ಎಂಬ ಭೀತಿ, ರಸ್ತೆಯಲ್ಲಿ ಶರವೇಗದಲ್ಲಿ ಸಾಗಿಬರುವ ವಾಹನಗಳ ಚಕ್ರಗಳಡಿ ಸಿಲುಕುವ ಕಳವಳ.... ಇಷ್ಟೆಲ್ಲ ಅಭದ್ರತೆ–ನೋವುಗಳನ್ನು ಬಚ್ಚಿಟ್ಟುಕೊಂಡಿರುವ ಬೀದಿ ಪ್ರಾಣಿಗಳು ನಮ್ಮ ದೈನಂದಿನ ಬದುಕಿನಲ್ಲೂ ಒಡನಾಡಿಗಳು. ನಾವು 'ಮನುಷ್ಯರು' ಕೊಂಚವೇ ಕೊಂಚ ದಯೆ ತೋರಿದರೂ ಅವುಗಳ ಬದುಕಿನ ಚಿತ್ರಣವೇ ಬದಲಾದೀತು.

ಜನರು ತೋರಿಸುವ ಪ್ರೀತಿಯು ಬೀದಿ ಪ್ರಾಣಿಗಳೂ ನೆಮ್ಮದಿಯ, ಆತಂಕರಹಿತ ಬದುಕನ್ನೂ ಕಟ್ಟಿಕೊಳ್ಳಲು ನೆರವಾಗುತ್ತದೆ. ತಮಗೆ ತೋರಿಸುವ ಪ್ರೀತಿಗಿಂತ ಹತ್ತಾರು ಪಟ್ಟು ಅಧಿಕ ಪ್ರೀತಿಯನ್ನು ಅವು ಮರಳಿಸಬಲ್ಲವು. ಮೂಕ ಜೀವಿಗಳನ್ನೂ ಆದರದಿಂದ ನಡೆಸಿಕೊಂಡಿದ್ದೇ ಆದರೆ, ಅವುಗಳು ಕೂಡಾ ಎಲ್ಲರ ಬದುಕಿನಲ್ಲೂ ಸಂತಸದ ಸೆಲೆ ತುಂಬಬಲ್ಲವು. ಬಾಲ ಅಲ್ಲಾಡಿಸುತ್ತಾ, ಕುಣಿಯುತ್ತಾ ಖುಷಿ ಹಂಚಿಕೊಳ್ಳುವ ಅವು ತಮ್ಮತ್ತ ಕರುಣೆ-ತೋರುವವರ ಮನಸ್ಸಿನಲ್ಲೂ ಉಲ್ಲಾಸ ಮೂಡಿಸಬಲ್ಲವು.

ಬೀದಿ ಪ್ರಾಣಿಗಳನ್ನು ದ್ವೇಷಿಸುವ ಜನರ ದೃಷ್ಟಿಕೋನ ಬದಲಾಯಿಸುವ ಉದ್ದೇಶದಿಂದ ಹಾಗೂ ಬೀದಿ ನಾಯಿಗಳ ಬಗ್ಗೆ ಕಾಳಜಿ ವಹಿಸುವ ಜನರು ಮತ್ತು ಸಂಸ್ಥೆಗಳ ಜೊತೆ ಕೈಜೋಡಿಸುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ 'ಪ್ರಜಾವಾಣಿ'ಯು ಕ್ಯೂಪಾ ಸಂಸ್ಥೆ ಜೊತೆ ಸೇರಿ ಅಭಿಯಾನ ಆರಂಭಿಸಿದೆ.

1991ರಲ್ಲಿ ಆರಂಭವಾದ ಕ್ಯೂಪಾ ಬೀದಿ ನಾಯಿಗಳ ಬಗ್ಗೆ ಕಾಳಜಿ ವಹಿಸಲು ಯಾವುದೇ ಸಂಸ್ಥೆಯೂ ಮುಂದೆ ಬಾರದ ದಿನಗಳಿಂದಲೇ ಅವುಗಳ ಹಕ್ಕುಗಳ ಬಗ್ಗೆ ಹಾಗೂ ಅವುಗಳಿಗೂ ನೆಮ್ಮದಿಯ ಬದುಕು ಕಲ್ಪಿಸುವ ಬಗ್ಗೆ ಹೋರಾಟ ನಡೆಸುತ್ತಾ ಬಂದಿದೆ. ಬೀದಿ ನಾಯಿಗಳ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ ವೈಜ್ಞಾನಿಕ ಸ್ಪರ್ಶ ನೀಡುವುದು, ಬೀದಿನಾಯಿಗಳ ದತ್ತು ಸ್ವೀಕಾರ ಮುಂತಾದ ಹತ್ತು ಹಲವು ಕಾರ್ಯಕ್ರಮಗಳು ನಗರದ ಮೂಕ ಜೀವಿಗಳ ಯಾತನೆಯನ್ನೂ ಒಂದಿಷ್ಟು ಕಡಿಮೆ ಮಾಡುವಲ್ಲಿ ಯಶಸ್ವಿಯೂ ಆಗಿದೆ. ಕ್ಯೂಪಾದಂತಹ ಅನೇಕ ಸಂಸ್ಥೆಗಳು ಈಗ ಇಂತಹ ಮಾನವೀಯ ಕಾರ್ಯದಲ್ಲಿ ತೊಡಗಿಸಿಕೊಂಡಿವೆ.

ಬೀದಿ ಪ್ರಾಣಿಗಳ ಬದುಕಿನಲ್ಲೂ ಭರವಸೆ ಮೂಡಿಸುವ ಕಾರ್ಯವನ್ನು ಇನ್ನಷ್ಟು ವಿಸ್ತರಿಸಲು 'ಪ್ರಜಾವಾಣಿ'ಯು ಕ್ಯೂಪಾ ಜೊತೆ ಸೇರಿ ಹಮ್ಮಿಕೊಂಡಿರುವ ಈ ಅಭಿಯಾನದಲ್ಲಿ ತಾವೂ ಕೈಜೋಡಿಸಬಹುದು. ಸ್ವಯಂಸೇವ-ಕರಾಗುವ ಮೂಲಕ ಬೀದಿ ಪ್ರಾಣಿಗಳ ರಕ್ಷಿಸಲು, ಆರೈಕೆ ಮಾಡಲು ಹಾಗೂ ಅವುಗಳ ಮೇಲಾಗುವ ದೌರ್ಜನ್ಯ ತಪ್ಪಿಸಲು ನೆರವಾಗಬಹುದು. ಬೀದಿಪಾಲಾದ ಪ್ರಾಣಿಗಳನ್ನು ದತ್ತು ಪಡೆದು ಸಾಕಬಹುದು. ಬೀದಿ ಪ್ರಾಣಿಗಳ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರುವ ನಿಟ್ಟಿನಲ್ಲಿ ಆರಂಭಿಸಲಾಗಿರುವ ಈ ಅಭಿಯಾನದಲ್ಲಿ ಪಾಲ್ಗೊಳ್ಳಲು ಬಯಸುವಿರಾದರೆ, ಇಲ್ಲಿರುವ ಕೊಂಡಿಯನ್ನು (bit.ly/PVCUPA) ಕ್ಲಿಕ್ಕಿಸಿ ನೋಂದಾಯಿಸಿ-ಕೊಳ್ಳಬಹುದು.

ಶಾಲೆ ಬಳಿ ತಂಬಾಕು: ಎಫ್‌ಐಆರ್ ದಾಖಲು

ಬೆಂಗಳೂರು: ನಗರದ ಪಶ್ಚಿಮ ವಿಭಾಗ ವ್ಯಾಪ್ತಿಯ ಶಾಲೆಗಳ ಆವರಣ ಬಳಿಯೇ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದ 17 ಅಂಗಡಿಗಳ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿ-ಕೊಂಡಿದ್ದಾರೆ.

ನಗರದಲ್ಲಿ ಸೋಮವಾರದಿಂದ ಶಾಲೆಗಳು ಆರಂಭವಾಗಿದ್ದು, ಇದರ ಬೆನ್ನಲ್ಲೇ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿದರು. ಶಾಲೆ ಸುತ್ತಲಿನ 100 ಮೀಟರ್ ಪ್ರದೇಶದಲ್ಲಿ-ದ್ದ ಅಂಗಡಿಗಳಲ್ಲಿ ತಪಾಸಣೆ ನಡೆಸಿದರು.

'ತಂಬಾಕು ಉತ್ಪನ್ನ ಮಾರುತ್ತಿದ್ದ 304 ಮಂದಿಗೆ ಸ್ಥಳದಲ್ಲೇ ನೋಟಿಸ್ ನೀಡಿ, ₹ 52,750 ದಂಡ ವಿಧಿಸಲಾಗಿದೆ' ಎಂದು ಡಿಸಿಪಿ ಸಂಜೀವ್ ಪಾಟೀಲ ಹೇಳಿದರು.

ಪ್ರತಿಭಟನೆ ಬಾಂಗ್ಲಾದೇಶದಲ್ಲಿ ಹಿಂದೂ ದೇವಾಲಯಗಳ ಮೇಲೆ ನಡೆದ ದಾಳಿ ಖಂಡಿಸಿ ಹಾಗೂ ಭಾರತೀಯರಿಗೆ ಸೂಕ್ತ ರಕ್ಷಣೆ ಒಗದಿಸುವಂತೆ ಆಗ್ರಹಿಸಿ ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸ್ ಭವನದ ಮುಂಭಾಗದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು. ಕಾಂಗ್ರೆಸ್ ಮುಖಂಡರಾದ ಎಸ್.ಮನೋಹರ್, ಜಿ.ಜನಾರ್ದನ್, ಎ.ಆನಂದ್ ಮತ್ತಿತರರು ಇದ್ದರು -ಪ್ರಜಾವಾಣಿ ಚಿತ್ರ

'ಬಾಲಕರ ಕಟ್ಟಿ ಹಾಕಿ, ಬೀಡಿ ಸೇದಿಸಿದರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈದಾನದಲ್ಲಿ ಆಟವಾ-ಡುತ್ತಿದ್ದ ಬಾಲಕರನ್ನು ಬಲವಂತವಾಗಿ ಮರಕ್ಕೆ ಕಟ್ಟಿಹಾಕಿ ಥಳಿಸಿ, ಅವರಿಂದ ಬೀಡಿ ಸೇದಿಸಿದ್ದ ಆರೋಪದಡಿ ಆರು ಮಂದಿಯನ್ನು ಮಹದೇವಪುರ ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ವಿವೇಕ್ (18) ಬಂಧಿತ. ಆತ ಸದ್ಯ ನ್ಯಾಯಾಂಗ ಬಂಧನ ದಲ್ಲಿದ್ದಾನೆ. ಉಳಿದ ಐವರು ಬಾಲಕರು. ಬಾಲನ್ಯಾಯ ಕಾಯ್ದೆಯಡಿ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾ-ಗಿದೆ' ಎಂದು ಪೊಲೀಸರು ಹೇಳಿದರು.

'ಬಿ. ನಾರಾಯಣಪುರದ ಶಾಲೆಯ ಮೈದಾನದಲ್ಲಿ ಶನಿವಾರ ಮಧ್ಯಾಹ್ನ ಈ ಘಟನೆ ನಡೆದಿದೆ. ಇದರ ವಿಡಿಯೊ ಚಿತ್ರೀಕರಿಸಿದ್ದ ಆರೋಪಿಗಳು, ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿ-ಟ್ಟಿದ್ದರು. ಆ ವಿಡಿಯೊ ಆಧರಿಸಿ ತನಿಖೆ ಮುಂದುವರಿಸಲಾಗಿದೆ' ಎಂದೂ ತಿಳಿಸಿದರು.

ಕಣ್ಣೀರು ಹಾಕಿದ್ದ ಮಕ್ಕಳು: 'ಆರು ಆರೋಪಿಗಳು ಮೈದಾನದಲ್ಲಿ ಆಟವಾ-ಡುತ್ತಿದ್ದರು. ಅದೇ ಸ್ಥಳಕ್ಕೆ ಇಬ್ಬರು ಮಕ್ಕಳು ಸಹ ಆಟವಾಡಲು ಬಂದಿದ್ದರು. ಅವರನ್ನು ತಡೆದಿದ್ದ ಆರೋಪಿಗಳು, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು' ಎಂದೂ ಮೂಲಗಳು ಹೇಳಿವೆ.

'ಮಕ್ಕಳನ್ನು ಹಿಡಿದುಕೊಂಡಿದ್ದ ಆರೋಪಿಗಳು, ಮೈದಾನದಲ್ಲಿ-ದ್ದ ಮರಕ್ಕೆ ಕಟ್ಟಿ ಹಾಕಿದ್ದರು. ಅವರ ಬಾಯಲ್ಲಿ ಬೀಡಿ ಇರಿಸಿ ಸೇದುವಂತೆ ಒತ್ತಾಯಿಸಿದ್ದರು. ಇದರಿಂದಾಗಿ ಮಕ್ಕಳು ಅಳಲಾರಂಭಿಸಿದ್ದರು. ಕಣ್ಣೀರು ಹಾಕಿದರೂ ಆರೋಪಿಗಳು ಬಿಟ್ಟಿರಲಿಲ್ಲ' ಎಂದೂ ತಿಳಿಸಿವೆ.

ಪೊಲೀಸರ ವಿರುದ್ಧ ಆಕ್ರೋಶ: 'ಮೈದಾನದಲ್ಲಿ ಕಿಡಿಗೇಡಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆಟವಾಡಲು ಹೋಗುವ ಮಕ್ಕಳನ್ನು ಬೆದರಿಸಿ ಹಲ್ಲೆ ಮಾಡಲಾಗುತ್ತಿದೆ. ಈ ಬಗ್ಗೆ ದೂರು ನೀಡಿದರೂ ಪೊಲೀಸರು ಕ್ರಮ ಕೈಗೊಂಡಿರಲಿಲ್ಲ' ಎಂದು ಸ್ಥಳೀಯರು ದೂರಿದರು.

'ಪೊಲೀಸರ ನಿರ್ಲಕ್ಷ್ಯದಿಂದ ಈ ಘಟನೆ ನಡೆದಿದೆ. ಇನ್ನಾದರೂ ಪೊಲೀಸರು, ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಂಥ ಘಟನೆ ಮರುಕಳಿಸದಂತೆ ನೋಡಿಕೊಳ್ಳಬೇಕು' ಎಂದೂ ಹೇಳಿದರು.

ಸುದ್ದಿ 2 ನಿಮಿಷ

ದಾಸರಹಳ್ಳಿ ರಸ್ತೆ ದುರಸ್ತಿಗೆ ಹೈಕೋರ್ಟ್ ಸೂಚನೆ

ಬೆಂಗಳೂರು: 'ದಾಸರಹಳ್ಳಿ ವಲಯದಲ್ಲಿ ರಸ್ತೆಗಳು ಅಸ್ತಿ-ತ್ವದಲ್ಲಿ ಇವೆಯೇ' ಎಂದು ಬಿಬಿಎಂಪಿಯನ್ನು ಹೈಕೋರ್ಟ್ ಪ್ರಶ್ನೆ ಮಾಡಿದೆ.

ವಕೀಲ ಅಶ್ವತ್ಥನಾರಾಯಣ ಚೌಧರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತುರಾಜ ಅವಸ್ತಿ ನೇತೃತ್ವದ ವಿಭಾಗೀಯ ಪೀಠ ಸೋಮವಾರ ವಿಚಾರಣೆ ನಡೆಸಿತು.



'ಮಳೆ ಮುಗಿದ ಬಳಿಕ ಅನುದಾನ ಲಭ್ಯವಾದರೆ ಕಾಮಗಾರಿ ನಡೆಸಲಾಗುವುದು' ಎಂದು ಬಿಬಿಎಂಪಿ ಪರ ವಕೀಲರು ಮಾಹಿತಿ ನೀಡಿದರು. 'ಅನುದಾನದ ಲಭ್ಯತೆ ಬಗ್ಗೆ ಸಬೂಬು ಹೇಳದೆ ರಸ್ತೆ ನಿರ್ಮಿಸುವುದು ಪಾಲಿಕೆ ಜವಾಬ್ದಾರಿ' ಎಂದು ಪೀಠ ಹೇಳಿತು. ಕಾಮಗಾರಿ ಪ್ರಗತಿ ಬಗ್ಗೆ ಜನವರಿ ವೇಳೆಗೆ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿತು.

ಕರ್ತವ್ಯನಿರತ ಯೋಧನಿಗೆ ಬಾಲಕನ ಸೆಲ್ಯೂಟ್

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕರ್ತವ್ಯನಿರತ ಯೋಧನಿಗೆ ಬಾಲಕನೊಬ್ಬ ಸೆಲ್ಯೂಟ್ ಮಾಡಿದ್ದು, ಇದರ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

ಕೇಂದ್ರ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಸಿಬ್ಬಂದಿ, ನಿಲ್ದಾಣದ ಹೊರಭಾಗದ ರಸ್ತೆಯಲ್ಲಿ ಶಸ್ತ್ರಸಜ್ಜಿತ ವಾಹನದಲ್ಲಿ ನಿಂತು ಕಾವಲು ಕಾಯುತ್ತಿದ್ದರು. ಅದೇ ಸ್ಥಳಕ್ಕೆ ಪೋಷಕರ ಜೊತೆ ಬಂದಿದ್ದ ಬಾಲಕ, ಯೋಧನನ್ನು ನೋಡಿ ನಿಂತುಕೊಂಡಿದ್ದ.

ಕೆಲ ಕ್ಷಣ ಯೋಧನನ್ನು ನೋಡಿ ಶಿಸ್ತಿನಿಂದ ವರ್ತಿಸಿದ್ದ ಬಾಲಕ, ನಂತರ ಎದೆ ಉಬ್ಬಿಸಿ ಸೆಲ್ಯೂಟ್ ಮಾಡಿದ್ದ. ಇದಕ್ಕೆ ಪ್ರತಿಯಾಗಿ ಯೋಧ ಸಹ ಸೆಲ್ಯೂಟ್ ಹೊಡೆದರು. ಇದೇ ವಿಡಿಯೊವನ್ನು ಹಲವರು, ಸಾಮಾಜಿಕ ಮಾಧ್ಯಮಗಳನ್ನು ಹಂಚಿಕೊಂಡಿದ್ದಾರೆ.

CONNECT
ಕ್ಲಾಸಿಫೈಡ್ಸ್

BIRTHDAY WISHES



Wishing Swami Rakumjee a very happy 61st Birthday
Rakumjee Institution, Bangalore

ಬೆಂಗಳೂರು ಉತ್ಸವ
Bengaluru Utsava
Grand Flea Market
Karnataka Chitrakala Parishath
Kumara Krupa Road, Bengaluru
(Deepavali Shopping Carnival)
Date: 22nd Oct to 2nd Nov 2021
Timing: 11:00 AM - 7:00 PM
(Art, Craft, Handlooms & Lifestyle Exhibition)
Art & Craft | Handicraft | Clothing
Fashion Accessories | Home Decor & More
FOOD MUSIC
(12 Days Exhibition) 80+ Stalls
Entry Free..!
Your safety is our priority, we have taken precautions & safety measures to prevent the transmission of Covid19
Visit & Shop For 80+ Stalls | Live Performance | Much More..!

Kangilu Kunitha Live
Date: 30th Oct 2021 | Timing: 5 PM - 6:30 PM

Yakshagana Live
Date: 31st Oct 2021 | Timing: 5 PM - 6:30 PM

Home Decors | Handmade Paintings | Lampshades | Ceramic Pots | Handlooms & Handicrafts | Curtains | Carpets | Mats | Bags | Khadi Kurtas | Silks Saree | Sarees | Designer Kurtis | Bandhani Bedsheets | Designer Jewelry | Handmade Jewelry | Toys | Pots & Much more...
For Details Contact : 9611835597 / 6364685716 Entry Free..!
80+ Shopping Stalls | Live Performance | Much More!

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

REAL ESTATE SELLING

Commercial Land

Palaceguttahalli

50X70 NORTH Facing with Old building, Main road. Rs.20,000/- sft. Negotiable. Sharif: 9886335522, 080-25558477.

Farm House/ Land/ Resorts

Nelamangala

FARM HOUSE 2 BHK (proposed) 5000 sft Land fruits trees club house Dobespet 9945080017 9663904949

BUSINESS

Business Offers

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411275189

JOB OPPORTUNITIES

Marketing & Sales

REQUIRED FIELD executives & Telecaller (M&F) For Banking Loan Collections. NOTE: Not a consultancy, direct company appointment: 8951450742, 7019700755, 080-42123018.

Walk-in

WANTED ELECTRICAL/ Mechanical Freshers also ITI/ Diploma/ Engineer Contact P. Muthu 9113007837

PERSONAL

Change of Name

CHANGE OF NAME
I, LOHIT SINGH, Residng at No. 412, E Block, DS Max Sprinkles, Hadosiddapuram, Bangalore North, Bengaluru- 560035, have changed my son's name from KAVISH SINGH to KAVISH ARORA SINGH vide affidavit dated 25.10.2021, before notary S. SAMUEL SOLOMON, Bangalore. Henceforth, he shall be called KAVISH ARORA SINGH only.

I, SHAZEEYA SULTANA W/o. Mohammed Abdul Kareem R/o. #311, 2nd Cross, 2nd Block, Chikkabanavara, Bangalore-90, have changed my name to SHAZIYA SULTANA vide affidavit dated 08.10.2021, before notary H.S. Sakalesh Aradhya, Bangalore. Henceforth I shall be called SHAZIYA SULTANA only.

I,ARJUN NAIR, S/o Girisan Nair N.V. aged about 23 years. R/at No. 56, 1st Cross,Near Lakeshore Garden, Hanuman Layout, Thindlu, Bangalore North,Vidyaranayapura, Bangalore-560097. Have Changed my Name from ARIEF G.S to ARJUN NAIR vide affidavit date:25/10/2021 before Notary K. RAMEGOWDA, Advocate, Bangalore

I, POOJA Holla residing at No 215 Royal Residency, Nyanappanahalli, Bangalore changed my name from Pooja Vasudevaiah vide affidavit dated 24-03-09 sworn before Notary K.N Mylar Prasad, Bangalore

ADMISSION CORNER

MONTFORT COLLEGE
SAMPURNA
A unit of Montfort Brothers of St. Gabriel
(AFFILIATED TO BENGALURU NORTH UNIVERSITY)
184, Old Madras Road, Indiranagar, Bengaluru-560038
(Opposite Swami Vivekananda Metro)
ADMISSIONS OPEN FOR 2021-22
New Degree Courses Offered In Compliance With New Education Policy (NEP), 2020
B.B.A. Bachelor of Business Administation | B.Com. Bachelor of Commerce | B.Voc. Bachelor of Commerce - Vocational | BA Journalism, Psychology Communicative English
BA Journalism, Psychology Optional English | B.Sc. Statistics, Mathematics, Computer Science | B.Sc. Computer Science, Journalism, Psychology
M.Sc. Psychology | M.Sc. Counselling Psychology | M.Sc. Clinical Psychology | PG Diploma in Counselling Psychology
APPLICATIONS ARE INVITED FROM STUDENTS WHO HAVE FINANCIAL DIFFICULTY TO JOIN UG PROGRAM.
Fee concession will be provided to eligible candidates. Instalment options to pay fees available. Offer valid till 31.10.2021.
CONTACT FOR ADMISSION
Call: 7411624688 / 080-25283320 25284050, 25201864
Email: montfortcollege.edu.in
mail@montfortcollege.edu.in
ROUNAQH

I, CHANDRASEKARA Krishnappa, R/at Ward No. 9, TG Tank Road, Chickballapur Taluk 562101 have changed my name to CHANDRASHEKAR KRISHNAPPA, vide affidavit dated 22-10-2021 sworn to before notary K.H. Venkatappa, Chickballapur.

14838791K, HAV/MT Gandla Bhoomanna 3 RR 1 SECT daughter name service record GANDLLA VAISHNAVI instead of GANDLA VAISHNAVI notary KV Mani, Bangalore.

I, CHAITRA Chandrashekar, R/at Ward No. 9, TG Tank Road, Chickballapur Taluk 562101 have changed my name to CHAITRA GOVINDARAJU, vide affidavit dated 22-10-2021 sworn to before notary K.H. Venkatappa, Chickballapur.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE | NAME CHANGE | EDUCATION | HEALTH | MATRI | ASTRO | JOB | AUTO
condition apply*
WWW.DHCLASSIFIEDS.COM
DH DECCAN HERALD
FOR MORE INFORMATION
CONTACT 9880856233 | 9886213331
Email: santhoshkumar@deccanherald.co.in
ಪ್ರಜಾವಾಣಿ ಕ್ಲಾಸಿಫೈಡ್ಸ್

ನಿರಾಕ್ಷೇಪಣಾ ಪತ್ರ ನೀಡಲು ₹ 2 ಲಕ್ಷ ಲಂಚ

ಬಿಡಿಎ ಎಂಜಿನಿಯರ್, ಭೂಮಾಪಕನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಆರ್‌ಬಿಆರ್ ಬಡಾವಣೆಯಲ್ಲಿ ಹಳೆಯ ಮನೆ ಕೆಡವಿ, ಹೊಸ ಮನೆ ನಿರ್ಮಿಸಲು ನಿರಾಕ್ಷೇಪಣಾ ಪತ್ರ ನೀಡಲು ₹ 2 ಲಕ್ಷ ಲಂಚ ಪಡೆದ ಆರೋಪದ ಮೇಲೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಉತ್ತರ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಮಂಜುನಾಥ್ ಮತ್ತು ಭೂಮಾಪಕ ಜಯರಾಂ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಸೋಮವಾರ ಬಂಧಿಸಿದೆ.

ಕಲ್ಯಾಣನಗರದ ಕಾಚರಕನಹಳ್ಳಿ ಗ್ರಾಮದ ಸರ್ವೆ ನಂಬರ್ 21/2ರಲ್ಲಿ ಮರಿಯಪ್ಪ ಎಂಬುವವರು ನಿವೇಶನ (ಆಸ್ತಿ ಸಂಖ್ಯೆ 1861) ಹೊಂದಿದ್ದರು. ಅಲ್ಲಿದ್ದ ಹಳೆಯ ಮನೆ ಕೆಡವಿದ್ದು, ಹೊಸ ಮನೆ ನಿರ್ಮಾಣಕ್ಕೆ ಕಾಮಗಾರಿ ಆರಂಭಿಸಲು ಸಿದ್ಧತೆ ನಡೆಸಿದ್ದರು. ಬಿಬಿಎಂಪಿಯಿಂದ ನಕ್ಷೆ ಅನುಮೋದನೆ ಹಾಗೂ ನಿರಾಕ್ಷೇಪಣಾ ಪತ್ರವನ್ನೂ ಪಡೆದಿದ್ದರು. ಬಿಡಿಎ ನಿರಾಕ್ಷೇಪಣಾ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ್ದರು.

ಸ್ಥಳಕ್ಕೆ ಭೇಟಿನೀಡಿದ್ದ ಎಇಇ ಮತ್ತು ಭೂಮಾಪಕ, ಈ ಆಸ್ತಿ ಬಿಡಿಎ ಭೂಸ್ವಾಧೀನ ಪ್ರಕ್ರಿಯೆಯ ವ್ಯಾಪ್ತಿಯಲ್ಲಿ-ದೆ ಎಂಬ ಕಾರಣ ನೀಡಿ ಕಾಮಗಾರಿ ಸ್ಥಗಿ-ತಗೊಳಿಸುವಂತೆ ತಾಕೀತು ಮಾಡಿದ್ದರು. ಬಳಿಕ ಜಯರಾಂ ಅವರನ್ನು ಸಂಪರ್ಕಿಸುವಂತೆ ಮಂಜುನಾಥ್ ಅರ್ಜಿದಾರರಿಗೆ ಸೂಚಿಸಿದ್ದರು. ಮರಿಯಪ್ಪ ಅವರ ಅಳಿಯ ರಘು ಲಕ್ಷ್ಮೀನಾರಾಯಣ್ ಭೂಮಾಪಕನನ್ನು ಭೇಟಿಯಾದಾಗ, ನಿರಾಕ್ಷೇಪಣಾ ಪತ್ರ ನೀಡಲು ₹ 5 ಲಕ್ಷ ಲಂಚ ಕೊಡುವಂತೆ ಬೇಡಿಕೆ ಇಟ್ಟಿದ್ದರು.

ಮನೆಯಲ್ಲೂ ಶೋಧ

ನಾಗರಭಾವಿಯಲ್ಲಿರುವ ಮಂಜುನಾಥ್ ಮನೆ ಮೇಲೆ ದಾಳಿ ಮಾಡಿರುವ ಎಸಿಬಿ ಅಧಿಕಾರಿಗಳು, ಶೋಧ ನಡೆಸಿದ್ದಾರೆ. ಮರಿಯಪ್ಪ ಹೆಸರಿನಲ್ಲಿರುವ ನಿವೇಶನವೂ ಸೇರಿದಂತೆ ಆ ಪ್ರದೇಶದಲ್ಲಿನ ಹಲವು ಸ್ವತ್ತುಗಳನ್ನು ಬಿಡಿಎ ಸ್ವಾಧೀನಕ್ಕೆ ಪಡೆದಿರಲಿಲ್ಲ. ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ಬಳಿಕ ಯಾವುದೇ ಪ್ರಕ್ರಿಯೆಯೂ ನಡೆದಿಲ್ಲ. ಹಲವು ವರ್ಷಗಳಿಂದಲೂ ಅಲ್ಲಿ ಕಟ್ಟಡಗಳ ನಿರ್ಮಾಣಕ್ಕೆ ಅನುಮತಿ ನೀಡಲಾಗುತ್ತಿತ್ತು ಎಂಬುದು ಪರಿಶೀಲನೆ ವೇಳೆ ಕಂಡುಬಂದಿದೆ.

ಚೌಕಾಸಿ ಮಾಡಿದಾಗ, ₹ 4 ಲಕ್ಷ ಕೊಟ್ಟರೆ ಎನ್‌ಒಸಿ ನೀಡುವುದಾಗಿ ಒಪ್ಪಿ-ಕೊಂಡಿದ್ದರು. ಸೋಮವಾರ ಮತ್ತು ಮುಂದಿನ ಸೋಮವಾರ ತಲಾ ₹ 2 ಲಕ್ಷ ತಲುಪಿಸುವಂತೆ ಅರ್ಜಿದಾರರಿಗೆ ಸೂಚಿಸಿದ್ದರು. ಸೋಮವಾರ ಮಧ್ಯಾಹ್ನ ಎಚ್‌ಆರ್‌ಬಿಆರ್ ಬಿಡಿಎ ಸಂಕೀರ್ಣಕ್ಕೆ ಹೋದ ರಘು, ಜಯರಾಂ ಅವರಿಗೆ ₹ 2 ಲಕ್ಷ ನೀಡಿದರು. ತಕ್ಷಣ ದಾಳಿ ನಡೆಸಿದ ಎಸಿಬಿ ಅಧಿಕಾರಿಗಳ ತಂಡ ಆರೋಪಿಯನ್ನು ಬಂಧಿಸಿತು.

ತೆರವು ಕಾರ್ಯಾಚರಣೆಯಲ್ಲಿದ್ದ ಎಇಇ: ಮಂಜುನಾಥ್ ಅವರು ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಭೂಸ್ವಾಧೀನಕ್ಕೆ ಗುರುತಿಸಿರುವ ಸೋಮಶೆಟ್ಟಿಹಳ್ಳಿಯಲ್ಲಿ ಕಟ್ಟಡಗಳ ತೆರವು ಕಾರ್ಯಾಚರಣೆಯಲ್ಲಿದ್ದರು. ಲಂಚದ ಹಣ ಪಡೆದ ಜಯರಾಂ, ಎಇಇಗೆ ಕರೆಮಾಡಿ 'ನಗದು ತಲುಪಿದೆ, ಪಡೆದುಕೊಂಡಿದ್ದೇನೆ' ಎಂದು ಮಾಹಿತಿ ನೀಡಿದ್ದರು.

ಸೋಮಶೆಟ್ಟಿಹಳ್ಳಿಗೆ ತೆರಳಿದ ಎಸಿಬಿ ಅಧಿಕಾರಿಗಳ ಮತ್ತೊಂದು ತಂಡ ಮಂಜುನಾಥ್ ಅವರನ್ನು ಬಂಧಿಸಿತು. ಬಳಿಕ ಕರೆತಂದು ಅವರ ಕಚೇರಿಯ ಪರಿಶೀಲನೆ ನಡೆಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿದ ಕಡತಗಳು ಎಇಇ ಕಚೇರಿಯಲ್ಲಿ ಪತ್ತೆಯಾಗಿವೆ ಎಂದು ಎಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಚಾಲಕನ ಕೊಂದಿದ್ದವರ ಬಂಧನ

ಬೆಂಗಳೂರು: ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯಲ್ಲಿ ಚಾಲಕ ಚಂದ್ರಶೇಖರ್ ಎಂಬುವರನ್ನು ಕೊಲೆ ಮಾಡಿದ್ದ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ತರಕಾರಿ ವ್ಯಾಪಾರಿ ಭಾಸ್ಕರ್ (46), ಶ್ರೀನಿವಾಸ್ (33), ಗಿರೀಶ್ (30), ಪರಮೇಶ್ (36) ಹಾಗೂ ಮಂಜುನಾಥ್ (36) ಬಂಧಿತರು. ಗೂಡ್ಸ್ ವಾಹನ ಚಾಲಕ ಚಂದ್ರಶೇಖರ್ ಅವರನ್ನು ಆರೋಪಿಗಳು ಅ. 22ರಂದು ರಾತ್ರಿ ಕೊಲೆ ಮಾಡಿ ಪರಾರಿಯಾಗಿದ್ದರು. ಪುರಾವೆಗಳನ್ನು ಸಂಗ್ರಹಿಸಿ ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಚಂದ್ರಶೇಖರ್ ಹಾಗೂ ಆರೋಪಿ ಭಾಸ್ಕರ್, 25 ವರ್ಷಗಳ ಸ್ನೇಹಿತರು. ಅವರಿಬ್ಬರ ನಡುವೆ ಹಣಕಾಸು ವ್ಯವಹಾರವಿತ್ತು. ಭಾಸ್ಕರ್ ಮನೆಗೆ ಆಗಾಗ ಹೋಗಿ ಬರುತ್ತಿದ್ದ ಚಂದ್ರಶೇಖರ್, ಆತನ ಪತ್ನಿ ಜೊತೆ ಸ್ನೇಹವಿಟ್ಟು-ಕೊಂಡಿದ್ದರು. ಸಲುಗೆಯೂ ಬೆಳೆದಿತ್ತು ಎನ್ನಲಾಗಿದೆ.'

'ತನ್ನ ಪತ್ನಿ ತಂಟೆಗೆ ಬರದಂತೆ ಮಾಡಲು ಮುಂದಾಗಿದ್ದ ಭಾಸ್ಕರ್, ಚಂದ್ರಶೇಖರ್ ಅವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದರು. ಇತರ ಆರೋಪಿಗಳ ಸಹಾಯ ಪಡೆದು ಮದ್ಯದ ಪಾರ್ಟಿ ಸೋಗಿನಲ್ಲಿ ಚಂದ್ರಶೇಖರ್ ಅವರನ್ನು ರಾತ್ರಿ ಕರೆಸಿದ್ದರು. ಎಲ್ಲರೂ ಒಟ್ಟಿಗೆ ಮದ್ಯ ಕುಡಿದಿದ್ದರು. ನಂತರ ಜಗಳ ತೆಗೆದು ಕೊಲೆ ಮಾಡಿದ್ದರು' ಎಂದೂ ತಿಳಿಸಿದರು.

ಮನೆ ಕೆಲಸದ ಮಹಿಳೆ ಮೇಲೆ ಹಲ್ಲೆ: ಬಂಧನ ಭೀತಿ

ನಿರ್ಮಾಪಕನ ಪತ್ನಿ, ಪುತ್ರ ಪರಾರಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಎದುರು ಮನೆಯ ಕೆಲಸದ ಮಹಿಳೆ ಹಾಗೂ ಅವರ ತಾಯಿ ಮೇಲೆ ಹಲ್ಲೆ ಮಾಡಿದ್ದ ಪ್ರಕರಣದ ಆರೋಪಿಗಳಾಗಿರುವ ನಿರ್ಮಾಪಕ ಸೌಂದರ್ಯ ಜಗದೀಶ್ ಪತ್ನಿ ರೇಖಾ, ಮಗ ಸ್ನೇಹಿತ್ (19) ಹಾಗೂ ಇತರರು, ಬಂಧನದ ಭೀತಿಯಲ್ಲಿ ಪರಾರಿಯಾಗಿದ್ದಾರೆ.

ಅ. 23ರಂದು ನಡೆದಿದ್ದ ಘಟನೆ ಬಗ್ಗೆ ಎಫ್‌ಐಆರ್ ದಾಖಲಿಸಿಕೊಂಡಿರುವ ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರು, ತನಿಖೆ ಚುರುಕು-ಗೊಳಿಸಿದ್ದಾರೆ.

'ಮನೆ ಕೆಲಸ ಮಾಡುವ ಅನುರಾಧಾ ಎಂಬುವರು ದೂರು ನೀಡಿದ್ದಾರೆ. ಅಪರಾಧ ಸಂಚು, ಹಲ್ಲೆ (ಐಪಿಸಿ 323), ಲೈಂಗಿಕ ದೌರ್ಜನ್ಯ (ಐಪಿಸಿ 354), ಅತಿಕ್ರಮ ಪ್ರವೇಶ (ಐಪಿಸಿ 448), ಉದ್ದೇಶ ಪೂರ್ವಕವಾಗಿ ಶಾಂತಿ ಕದಡಿದ (ಐಪಿಸಿ 504) ಹಾಗೂ ಜೀವ ಬೆದರಿಕೆ (ಐಪಿಸಿ 506) ಆರೋಪದಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ರೇಖಾ ಜಗದೀಶ್, ಅವರ ಮಗ ಸ್ನೇಹಿತ್, ಚಾಲಕ ರಕ್ಷಿತ್, ಭುವನಾ, ಲತಾ ಹಾಗೂ ಬೌನ್ಸರ್‌ಗಳಾದ ನಿಖಿಲ್, ಕುಮಾರ್, ರೋಹಿತ್, ಅಶೋಕ ಅವರನ್ನು ಆರೋಪಿಗಳನ್ನಾಗಿ ಮಾಡಲಾಗಿದೆ. ಅವರೆಲ್ಲ ತಲೆಮರೆ-ಸಿಕೊಂಡಿದ್ದು, ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದೂ ತಿಳಿಸಿದರು.

ಕಸದ ವಿಚಾರಕ್ಕೆ ಜಗಳ: 'ಅನುರಾಧಾ ಅವರು ಪುರುಷೋತ್ತಮ ಎಂಬುವರ ಮನೆಯಲ್ಲಿ ಕೆಲಸ ಮಾಡುತ್ತಾರೆ. ಅದೇ ಮನೆಯ ಔಟ್ ಹೌಸ್‌ನಲ್ಲಿ ತಾಯಿ ಜೊತೆ ವಾಸವಿದ್ದರು. ಅ. 23ರಂದು ಅವರು ಮನೆಯ ಮುಂದೆ ಕಸಗೂಡಿಸುತ್ತಿದ್ದರು. ಎದುರು ಮನೆಯಲ್ಲಿ ವಾಸವಿರುವ ಸ್ನೇಹಿತ್ ಹಾಗೂ ಚಾಲಕ ರಕ್ಷಿತ್, ಮಹಿಳೆಯನ್ನು ದುರುಗುಟ್ಟಿ ನೋಡಿದ್ದರು.'

'ಕಸಗೂಡಿಸುವ ವೇಳೆ ದೂಳು ಬರುವುದಾಗಿ ಹೇಳಿದ್ದ ಅನುರಾಧಾ, ಪಕ್ಕಕ್ಕೆ ಹೋಗುವಂತೆ ಇಬ್ಬರನ್ನೂ ಕೋರಿದ್ದರು. ಅಷ್ಟಕ್ಕೆ ಕೋಪಗೊಂಡ ಇಬ್ಬರು, ಮಹಿಳೆಯನ್ನು ನಿಂದಿಸಿದ್ದರು. ನೊಂದ ಮಹಿಳೆ, ಮನೆಯೊಳಗೆ ಹೋಗಿ ತಾಯಿಗೆ ವಿಷಯ ತಿಳಿಸಿದ್ದರು. ತಾಯಿ ಸಹ ಆರೋಪಿಗಳ ಬಳಿ ಹೋಗಿ ವರ್ತನೆಯನ್ನು ಪ್ರಶ್ನಿಸಿದ್ದರು. ಅವರನ್ನೂ ಆರೋಪಿಗಳು ನಿಂದಿಸಿದ್ದರು' ಎಂದೂ ವಿವರಿಸಿದರು.

'ಬೌನ್ಸರ್‌ಗಳಾದ ನಿಖಿಲ್, ರೋಹಿತ್, ಅಶೋಕ, ಕುಮಾರ್ ಜೊತೆಯಲ್ಲಿ ಅನುರಾಧಾ ಅವರ ಮನೆಗೆ ನುಗ್ಗಿದ್ದ ಆರೋಪಿಗಳು, ಪುನಃ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ರೇಖಾ ಜಗದೀಶ್, ಅವರ ಅಕ್ಕ ಲತಾ ಹಾಗೂ ಇತರ ಆರೋಪಿಗಳೂ ಇದ್ದರು' ಎಂದೂ ತಿಳಿಸಿದರು.

'ಎಲ್ಲ ಆರೋಪಿಗಳು ಸೇರಿ, ಅನುರಾಧಾ ಹಾಗೂ ಅವರ ತಾಯಿ ಮೇಲೆ ಹಲ್ಲೆ ಮಾಡಿದರು. ಬಟ್ಟೆ ಹರಿದು ದೌರ್ಜನ್ಯ ಎಸಗಿದ್ದರು. ಬಿಡಿಸಲು ಹೋದವರ ಮೇಲೂ ಹಲ್ಲೆಗೆ ಯತ್ನಿಸಿದ್ದರು. ಈ ಸಂಗತಿ ಮಹಿಳೆ ನೀಡಿರುವ ದೂರಿನಲ್ಲಿದೆ' ಎಂದೂ ಹೇಳಿದರು.

ಮನೆಗೆ ಹೋಗಿ ವಿಚಾರಣೆ: 'ಪ್ರಕರಣ ದಾಖಲಾಗುತ್ತಿದ್ದಂತೆ ಆರೋಪಿಗಳು, ನಾಪತ್ತೆಯಾಗಿದ್ದಾರೆ. ನೋಟಿಸ್ ನೀಡಿದರೂ ವಿಚಾರಣೆಗೆ ಬಂದಿರಲಿಲ್ಲ. ಹೀಗಾಗಿ, ಆರೋಪಿಗಳ ಮನೆಗೆ ಸೋಮವಾರ ಹೋಗಿ ಮಾಹಿತಿ ಕಲೆಹಾಕಲಾಯಿತು' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಕೃತ್ಯವು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಅದನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸಲಾಗುತ್ತಿದೆ' ಎಂದೂ ತಿಳಿಸಿದರು.

1. ನಗರದ ಮಾಗಡಿ ರಸ್ತೆಯ ಕಸ್ತೂರಿನಗರ ರಸ್ತೆಯಲ್ಲಿ ಕೈಗೊಂಡಿರುವ ಕಾಮಗಾರಿ. 2. ನಗರದ ಸುಜಾತ ವೃತ್ತದ ಲುಲು ಮಾಲ್ ಮುಂಭಾಗ ಅಂಡರ್ ಪಾಸ್ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಸೋಮವಾರ ಸಂಚಾರ ದಟ್ಟಣೆ ಉಂಟಾಗಿತ್ತು –ಪ್ರಜಾವಾಣಿ ಚಿತ್ರಗಳು/ ರಂಜು ಪಿ.

ಸುಜಾತಾ ವೃತ್ತದ ಬಳಿ ಹೆಚ್ಚಿದ ದಟ್ಟಣೆ • ಮೆಜೆಸ್ಟಿಕ್‌ನಿಂದ ರಾಜಾಜಿನಗರದತ್ತ ಸಾಗುವ ರಸ್ತೆಯಲ್ಲಿ ಸಂಚರಿಸುವುದು ಕಷ್ಟ

ಸಂಚಾರ ದುಸ್ತರ: ವಾಹನ ಸವಾರರಿಗೆ ಸಂಕಟ

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ರಸ್ತೆ ಕಾಮಗಾರಿಗಳಿಂದ ಕಿರಿದಾಗಿರುವ ರಸ್ತೆಗಳು, ಗ್ಲೋಬಲ್ ಮಾಲ್‌ನಿಂದ ಹೆಚ್ಚಿದ ದಟ್ಟಣೆ, ಆಮೆಗತಿಯಲ್ಲಿ ಸಾಗುವ ವಾಹನಗಳು, ವಾರಾಂತ್ಯದಲ್ಲಿ ಇಲ್ಲಿ ಸಂಚರಿಸುವುದೇ ಹರಸಾಹಸ, ಗಂಟೆಗಳ ಕಾಲ ರಸ್ತೆಯಲ್ಲೇ ಕಾಯಬೇಕಾದ ಸಂಕಟ, ಜತೆಗೆ ದೂಳು...

–ಇದು ಓಕಳಿಪುರದಿಂದ ರಾಜಾಜಿನಗರ ಹಾಗೂ ಮಾಗಡಿ ರಸ್ತೆಯಲ್ಲಿ ತೆರಳುವ ವಾಹನ ಸವಾರರ ಸಂಕಟ. ನಗರದ ಹೃದಯ ಭಾಗದಲ್ಲಿರುವ ಸುಜಾತಾ ವೃತ್ತದ ಬಳಿಯ ಈ ಪ್ರದೇಶದ ರಸ್ತೆಗಳಲ್ಲಿ ಸಂಚರಿಸುವುದು ದಿನೇ ದಿನೇ ದುಸ್ತರವಾಗುತ್ತಿದೆ.

ಮೆಜೆಸ್ಟಿಕ್ ಬಳಿಯ ರೈಲ್ವೆ ಸೇತುವೆಯಿಂದ ರಾಜಾಜಿನಗರದತ್ತ ಸಂಚರಿಸುವ ವಾಹನ ಸವಾರರು ನರಕಯಾತನೆ ಅನುಭವಿಸಬೇಕಾಗಿದೆ. ರಸ್ತೆಗಳು ಕಿರಿದಾಗುತ್ತಿರುವುದರಿಂದ ಬೆಳಿಗ್ಗೆ ಮತ್ತು ಸಂಜೆ ವಾಹನಗಳು ತೆವಳುತ್ತ ಸಾಗುತ್ತವೆ. ವಾರಾಂತ್ಯದ ದಿನಗಳಲ್ಲಿ ವಾಹನಗಳ ಸಂಚಾರ 8–10 ಪಟ್ಟು ಹೆಚ್ಚುತ್ತದೆ. ಆಗ ಕನಿಷ್ಠ ಒಂದು ಗಂಟೆ ರಸ್ತೆಯಲ್ಲೇ ನಿಲ್ಲಬೇಕಾದ ಪರಿಸ್ಥಿತಿ ಇದೆ. ತುಮಕೂರಿನತ್ತ ತೆರಳುವ ಪ್ರಮುಖ ರಸ್ತೆಯೂ ಇದಾಗಿರುವುದರಿಂದ ಸಹಜವಾಗಿಯೇ ವಾಹನಗಳ ಸಂಖ್ಯೆ ಹೆಚ್ಚಾಗುತ್ತಿದೆ.

ಇತ್ತೀಚೆಗೆ ಗ್ಲೋಬಲ್ ಮಾಲ್‌ನ ಲುಲು ಹೈಪರ್ ಮಾರ್ಕೆಟ್ ಸಹ ಆರಂಭವಾಗಿರುವುದರಿಂದ ಸಂಚಾರ ಹೆಚ್ಚಾಗಲು ಪ್ರಮುಖ ಕಾರಣವಾಗಿದೆ. ವಾರಾಂತ್ಯದ ದಿನಗಳಲ್ಲಿ ಸಾವಿರಾರು ಮಂದಿ ಇಲ್ಲಿ ಬರುತ್ತಿದ್ದು, ಜಾತ್ರೆ ಸ್ವರೂಪ ಪಡೆಯುತ್ತಿದೆ. ಇದರಿಂದ, ಮೊದಲೇ ವಿಪರೀತ ವಾಹನಗಳು ಸಂಚರಿಸುವ ಈ ರಸ್ತೆಯಲ್ಲಿ ಈಗ ಮಾಲ್‌ಗೆ ಹೋಗುವ ಮತ್ತು ಹೊರಗೆ ಬರುವ ವಾಹನಗಳಿಂದ ಸಂಚಾರ ದಟ್ಟಣೆ ಹೆಚ್ಚಾಗಿದೆ ಎಂದು ವಾಹನ ಸವಾರರು ದೂರಿದ್ದಾರೆ.

‘ತುಮಕೂರು ರಸ್ತೆಯತ್ತ ತೆರಳುವ ಎಲ್ಲ ವಾಹನಗಳು ಮತ್ತು ವಿಜಯನಗರ, ರಾಜಾಜಿನಗರ, ಬಸವೇಶ್ವರನಗರ ಮುಂತಾದ ಕಡೆಯ ಜನರು ಬಳಸುವ ಅತಿ ವಾಹನ ದಟ್ಟಣೆಯ ರಸ್ತೆ ಇದಾಗಿದೆ. ವಾಣಿಜ್ಯ ಉದ್ದೇಶದ ಮಾಲ್ ನಿರ್ಮಿಸುವಾಗ ವಾಹನಗಳ ಸಂಚಾರದ ಬಗ್ಗೆಯೂ ಯೋಚಿಸಬೇಕಾಗಿತ್ತು. ಸರ್ಕಾರಿ ಇಲಾಖೆಗಳು ನಿರ್ಮಾಣಕ್ಕೆ ಅನುಮತಿ ನೀಡುವ ಮುನ್ನವೇ ಎಚ್ಚರವಹಿಸಿದ್ದರೆ ಈಗಿನ ಪರಿಸ್ಥಿತಿ ಸೃಷ್ಟಿಯಾಗುತ್ತಿರಲಿಲ್ಲ. ಅಧಿಕಾರಿಗಳಿಗೆ ಅರ್ಥವಾಗುವುದಿಲ್ಲವೇ?’ ಎಂದು ಸ್ಥಳೀಯ ನಿವಾಸಿ ಶಂಕರ್ ಅಸಮಾಧಾನ ವ್ಯಕ್ತಪಡಿಸಿದರು.

‘ಈ ಮಾರ್ಗದಲ್ಲಿ ಮುಖ್ಯವಾಗಿ ವ್ಯವಸ್ಥಿತವಾದ ಪಾದಚಾರಿ ಮಾರ್ಗ ಇಲ್ಲ. ಸಮೀಪದಲ್ಲಿರುವ ಬಸ್ ತಂಗುದಾಣಕ್ಕೆ ತೆರಳಲು ಒಬ್ಬರೇ ದಾಟುವಷ್ಟು ಇರುವ ಹಾದಿಯಲ್ಲಿ ಸಾಗಬೇಕು. ಮೊದಲು ಪಾದಚಾರಿ ಮಾರ್ಗ ವಿಸ್ತರಣೆಯಾಗಬೇಕು. ಈಗ ವಾಹನಗಳ ಸಂಚಾರ ದಿನನಿತ್ಯ ಹೆಚ್ಚುತ್ತಿರುವುದರಿಂದ ವ್ಯವಸ್ಥಿತವಾದ ಯೋಜನೆಯನ್ನು ಈಗಲೇ ರೂಪಿಸಬೇಕು’ ಎಂದು ಸಂಚಾರಿ ಪೊಲೀಸರೊಬ್ಬರು ಹೇಳುತ್ತಾರೆ.

‘ವಾಹನ ದಟ್ಟಣೆ ಸ್ವಲ್ಪಮಟ್ಟಿಗೆ ಕಡಿಮೆ ಮಾಡುವ ಪ್ರಯತ್ನ ಮಾಡಲಾಗಿದೆ. ಮಾಲ್‌ಗೆ ತೆರಳುವ ಸಲುವಾಗಿ ನಿರ್ಮಿಸುತ್ತಿರುವ ಅಂಡರ್‌ಪಾಸ್ 8–10 ದಿನಗಳಲ್ಲಿ ಮುಗಿಯುವ ಸಾಧ್ಯತೆ ಇದೆ. ಆಗ ಸಮಸ್ಯೆಗೆ ಸ್ವಲ್ಪಮಟ್ಟಿಗೆ ಪರಿಹಾರ ದೊರೆಯಬಹುದು. ಮಾಲ್‌ಗೆ ಬರುವವರು ಈ ಪ್ರದೇಶದಲ್ಲಿನ ಮನೆಗಳ ಮುಂದೆ ವಾಹನಗಳನ್ನು ನಿಲ್ಲಿಸುತ್ತಾರೆ ಎಂದು ಸ್ಥಳೀಯರು ದೂರಿದ್ದರು. ಆ ಸಮಸ್ಯೆಯೂ ಸ್ವಲ್ಪಮಟ್ಟಿಗೆ ಕಡಿಮೆಯಾಗಿದೆ. ಯಾರಾದರೂ ವಾಹನ ನಿಲ್ಲಿಸಿದರೆ ಕಾನೂನು ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚಿಸಲಾಗಿದೆ’ ಎಂದು ಶಾಸಕ ಎಸ್. ಸುರೇಶ್ ಕುಮಾರ್ ತಿಳಿಸಿದರು.

ನಿಧಾನಗತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳು ಸಂಚಾರ ದಟ್ಟಣೆಯನ್ನು ಮತ್ತಷ್ಟು ಹೆಚ್ಚಿಸಿವೆ. ರಾಜಾಜಿನಗರ ರಸ್ತೆಯಲ್ಲಿ ಕೆಳಸೇತುವೆ ನಿರ್ಮಾಣ ಮತ್ತು ಕಸ್ತೂರಿ ನಗರದ ಮಾರ್ಗದಲ್ಲಿ ರಸ್ತೆ ದುರಸ್ತಿ ಮತ್ತು ಒಳಚರಂಡಿ ಮಾರ್ಗದ ರಸ್ತೆ ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ.

ಓಕಳಿಪುರ ಕಡೆಯಿಂದ ಕುಷ್ಠರೋಗ ಆಸ್ಪತ್ರೆಗೆ ತೆರಳುವ ಮಾರ್ಗದಲ್ಲಿ ಹಲವು ತಿಂಗಳಿಂದ ಕೈಗೊಂಡಿರುವ ಕಾಮಗಾರಿಯಿಂದಾಗಿ ಇನ್ನೊಂದು ಪಥದಲ್ಲಿ ಮಾತ್ರ ವಾಹನಗಳು ಸಂಚರಿಸಬೇಕಾಗಿದೆ. ಶನಿವಾರ ಮತ್ತು ಭಾನುವಾರದಂದು ಇಲ್ಲಿ ಕನಿಷ್ಠ ಒಂದು ಕಿಲೋ ಮೀಟರ್ ಉದ್ದ ವಾಹನಗಳು ನಿಲ್ಲುತ್ತವೆ. ವಿಳಂಬ ಕಾಮಗಾರಿಯಿಂದ ಅಪಘಾತಗಳು ಸಂಭವಿಸುತ್ತಿವೆ. ತ್ವರಿತಗತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಕ್ರಮಕೈಗೊಳ್ಳಬೇಕು ಎನ್ನುವುದು ಸ್ಥಳೀಯರ ಆಗ್ರಹ.

ವಿವಿಧ ಇಲಾಖೆಗಳ ಸಮನ್ವಯ ಕೊರತೆಯಿಂದ ಸಂಚಾರ ದಟ್ಟಣೆಯಾಗಿದೆ. ನೂರಾರು ವಾಹನಗಳು ಏಕಕಾಲಕ್ಕೆ ಸಂಚರಿಸಿದರೆ ನಿರ್ವಹಣೆ ಮಾಡುವುದು ಕಷ್ಟ

ಎಸ್. ಸುರೇಶ್ ಕುಮಾರ್, ಶಾಸಕ

ಮಾಲ್ ಆರಂಭವಾದ ನಂತರ ಜನದಟ್ಟಣೆ ಹೆಚ್ಚಾಯಿತು. ಮಾಲ್‌ನಿಂದ ಹೊರಗೆ ಬರುವ ವಾಹನಗಳು ಸುತ್ತು ಹಾಕಿ ಬರುವುದರಿಂದ ದಟ್ಟಣೆ ಹೆಚ್ಚಾಗುತ್ತಿದೆ.

ರವಿ, ಆಟೊ ರಿಕ್ಷಾ ಚಾಲಕ

ಶನಿವಾರ ಮತ್ತು ಭಾನುವಾರ ರೈಲ್ವೆ ಸೇತುವೆಯವರೆಗೆ ವಾಹನಗಳು ನಿಲ್ಲುತ್ತವೆ. ಟ್ರಾಫಿಕ್‌ನಲ್ಲೇ ಸಮಯ ಕಳೆದರೆ ದುಡಿಯುವುದು ಹೇಗೆ. ಮೊದಲೇ ಜೀವನ ಕಷ್ಟವಾಗಿದೆ.

ಹನುಮಂತಪ್ಪ, ಆಟೊ ರಿಕ್ಷಾ ಚಾಲಕ

ಪ್ರಜಾವಾಣಿ ವಿಶೇಷ

ನಗರದ ಲುಲು ಹೈಪರ್ ಮಾರ್ಕೆಟ್ ಮುಂಭಾಗದ ರಸ್ತೆಯಲ್ಲಿನ ಕಿರಿದಾದ ಪಾದಚಾರಿ ಮಾರ್ಗ

ಹೊಸ ಪ್ರಕರಣ 290ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಇಳಿಮುಖವಾಗಿವೆ. ಸೋಮವಾರ 290 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. 10 ಜನ ಮೃತರಾಗಿದ್ದಾರೆ.

ಈವರೆಗೆ ಸೋಂಕಿಗೊಳಪಟ್ಟವರ ಸಂಖ್ಯೆ 29.86 ಲಕ್ಷಕ್ಕೆ ಹೆಚ್ಚಿದ್ದು, ಕೋವಿಡ್ ದೃಢ ಪ್ರಮಾಣವು ಶೇ 0.32ರಷ್ಟಿದೆ. ಕೋವಿಡ್‌ನಿಂದ ಸಾವಿಗೀಡಾದವರ ಸಂಖ್ಯೆ 38,017ಕ್ಕೆ ಏರಿದೆ. ಮರಣ ಪ್ರಮಾಣ ದರವು ಶೇ 3.44ರಷ್ಟು ವರದಿಯಾಗಿದೆ.

ಹಿಂದಿನ 24 ಗಂಟೆಗಳಲ್ಲಿ 408 ಜನರಿಗೆ ಕಾಯಿಲೆ ವಾಸಿಯಾಗಿದೆ. ಹೀಗಾಗಿ ಗುಣಮುಖರ ಸಂಖ್ಯೆ 29.39 ಲಕ್ಷಕ್ಕೆ ಏರಿದೆ. ಸಕ್ರಿಯ ಪ್ರಕರಣಗಳು ಮತ್ತಷ್ಟು ಇಳಿಕೆಯಾಗಿವೆ. ಸದ್ಯ 8,583 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಂಗಳೂರಿನಲ್ಲಿ ಕೋವಿಡ್ ಹೊಸ ಪ್ರಕರಣಗಳು 137ಕ್ಕೆ ಇಳಿದಿವೆ. ದಕ್ಷಿಣ ಕನ್ನಡ (30), ಹಾಸನ (20), ಮೈಸೂರು (18), ತುಮಕೂರು (26) ಮತ್ತು ಉತ್ತರ ಕನ್ನಡದಲ್ಲಿ (15) ಎರಡಂಕಿಯಷ್ಟಿದೆ. 14 ಜಿಲ್ಲೆಗಳಲ್ಲಿ ಇದು ಒಂದಂಕಿಗೆ ತಗ್ಗಿದೆ. ಬಾಗಲಕೋಟೆ, ಬಳ್ಳಾರಿ, ಬೀದರ್, ಚಿಕ್ಕಬಳ್ಳಾಪುರ, ದಾವಣಗೆರೆ, ಗದಗ, ಹಾವೇರಿ, ರಾಯಚೂರು, ರಾಮನಗರ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ದಾಖಲಾಗಿಲ್ಲ.

ಬೆಂಗಳೂರಿನಲ್ಲಿ ಒಂದು ದಿನದಲ್ಲಿ ಆರು ಮಂದಿ ಅಸುನೀಗಿದ್ದಾರೆ. ಬೆಳಗಾವಿ, ಬೆಂಗಳೂರು ಗ್ರಾಮಾಂತರ, ಧಾರವಾಡ ಹಾಗೂ ರಾಮನಗರ ಜಿಲ್ಲೆಗಳಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮೃತರೆಲ್ಲಾ 48 ವರ್ಷ ಮೇಲ್ಪಟ್ಟವರು.

ಕೋವಿಡ್ ಪರೀಕ್ಷೆಗಳ ಸಂಖ್ಯೆ ಮತ್ತೆ ಇಳಿಕೆಯಾಗಿದೆ. ಸೋಮವಾರ 89,964 ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,50,844 ▲ ಒಟ್ಟು ಸೋಂಕಿತರು (12,50,707 ನಿನ್ನೆಯ ವಿವರ)

6,421 ▼	12,28,172 ▲	16,250 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	137	▼
ಗುಣಮುಖ	206	▼
ಸಾವು	06	▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	24.46 ಕೋಟಿ ▲	3.42 ಕೋಟಿ ▲
ಸಕ್ರಿಯ ಪ್ರಕರಣ	1.80 ಕೋಟಿ	1.57 ಲಕ್ಷ ▼
ಗುಣಮುಖ	22.16 ಕೋಟಿ ▲	3.35 ಕೋಟಿ
ಸಾವು	49.66ಲಕ್ಷ ▲	4.55 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	3.20 ಲಕ್ಷ ▼	11,816 ▼
ಗುಣಮುಖ	2.69 ಲಕ್ಷ ▼	16,034 ▼
ಸಾವು	4,772 ▼	357 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಅಮೆರಿಕ	ರಷ್ಯಾ	ಬ್ರಿಟನ್
29,365 ▲	35,664 ▼	38,806 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ರಷ್ಯಾ	ಬ್ರಿಟನ್
95.03 ▼	8.45 ▲	14.91 ▲

(* ರಾತ್ರಿ 12 ಗಂಟೆಯವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

ಮಹಾರಾಷ್ಟ್ರ	1.40 ಲಕ್ಷ
ತಮಿಳುನಾಡು	36,033 ▲
ಕೇರಳ	28,873 ▲

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

ಮಹಾರಾಷ್ಟ್ರ	66.03 ▲
ಕೇರಳ	49.21 ▲
ತಮಿಳುನಾಡು	26.96 ▲

ಪ್ರಜಾವಾಣಿ ಗ್ರಾಫಿಕ್ಸ್

ಎಕ್ಸ್‌ಪ್ರೆಸ್ ರೈಲುಗಳ ತಾತ್ಕಾಲಿಕ ನಿಲುಗಡೆ

ಬೆಂಗಳೂರು: ಬೆಂಗಳೂರು–ಹಿಂದೂಪುರ ನಡುವೆ ಮೆಮು ರೈಲುಗಳ ಸಂಚಾರವನ್ನು 46 ದಿನಗಳ ಕಾಲ ರದ್ದುಪಡಿಸಿರುವುದರಿಂದ ಆ ಮಾರ್ಗದಲ್ಲಿ ಸಂಚರಿಸುವ ನಾಲ್ಕು ಎಕ್ಸ್‌ಪ್ರೆಸ್ ರೈಲುಗಳ ತಾತ್ಕಾಲಿಕ ನಿಲುಗಡೆಗೆ ನೈರುತ್ಯ ರೈಲ್ವೆ ಅವಕಾಶ ಕಲ್ಪಿಸಿದೆ.

ಮೈಸೂರು–ಬಾಗಲಕೋಟೆ, ಧಾರವಾಡ–ಮೈಸೂರು, ಕಾಚಿಗೂಡು–ಯಲಹಂಕ, ಬೆಂಗಳೂರು– ಮುಂಬೈ ರೈಲುಗಳನ್ನು ರಾಜಾನುಕುಂಟೆ, ವಡ್ಡರಹಳ್ಳಿ, ಮಾಕಳಿದುರ್ಗ, ತೊಂಡೆಬಾವಿ, ಸೋಮೇಶ್ವರ, ವಿದುರಾಶ್ವತ್ಥ, ದೇವರಪಲ್ಲಿಯಲ್ಲಿ ತಾತ್ಕಾಲಿಕವಾಗಿ ಒಂದು ನಿಮಿಷ ನಿಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

‘ಮೈಸೂರು–ಬಾಗಲಕೋಟೆ ಮತ್ತು ಧಾರವಾಡ– ಮೈಸೂರು ರೈಲುಗಳಿಗೆ ಹೆಚ್ಚುವರಿ ಎರಡು ಸಾಮಾನ್ಯ ಬೋಗಿಗಳನ್ನುಅಳವಡಿಸಿಕಾಯ್ದಿರಿಸದಪ್ರಯಾಣಿಕರು ಟಿಕೆಟ್ ಪಡೆದು ಪ್ರಯಾಣಿಸಲು ಅವಕಾಶ ನೀಡಲಾಗಿದೆ. ಉಳಿದ ರೈಲುಗಳಲ್ಲಿ ಕಾಯ್ದಿರಿಸಿದ ಬೋಗಿಗಳಲ್ಲೇ ಖಾಲಿ ಸೀಟುಗಳಲ್ಲಿ ಕುಳಿತು ಪ್ರಯಾಣಿಸಲು ಅನುಮತಿ ನೀಡಲಾಗಿದೆ’ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಜೋಡಿ ಮಾರ್ಗ ನಿರ್ಮಾಣಕ್ಕೆ ಹಿಂದೂಪುರ ಮತ್ತು ದೇವರಪಲ್ಲಿ ನಿಲ್ದಾಣಗಳಲ್ಲಿ ಕಾಮಗಾರಿ ಕೈಗೆತ್ತಿಕೊಂಡಿದ್ದರಿಂದ ಈ ಮಾರ್ಗದಲ್ಲಿ ಎರಡು ಮೆಮು ರೈಲುಗಳ ಸಂಚಾರವನ್ನು 46 ದಿನಗಳ ಕಾಲ ರದ್ದುಗೊಳಿಸಿದೆ. ಈ ಬಗ್ಗೆ ರೈಲು ಪ್ರಯಾಣಿಕರು ಧ್ವನಿ ಎತ್ತಿದ್ದರು.

‘ತಾತ್ಕಾಲಿಕವಾಗಿ ಎಕ್ಸ್‌ಪ್ರೆಸ್ ರೈಲುಗಳ ನಿಲುಗಡೆ ಅವಕಾಶ ಮತ್ತು ಪಾಸ್ ಪಡೆದಿರುವ ಪ್ರಯಾಣಿಕರ ಸಂಚಾರಕ್ಕೂ ಅವಕಾಶ ಕಲ್ಪಿಸಿರುವುದು ಒಳ್ಳೆಯದು’ ಎಂದು ರೈಲ್ವೆ ಹೋರಾಟಗಾರ ಕೃಷ್ಣ ಪ್ರಸಾದ್ ತಿಳಿಸಿದರು.

ಬೆಂಗಳೂರು ಧರ್ಮ ಪ್ರಾಂತ್ಯದ ಆರ್ಚ್ ಬಿಷಪ್ ಪೀಟರ್ ಮಚಾಡೊ

‘ಮತಾಂತರ ಮಾಡಿದ್ದನ್ನು ಸಾಬೀತುಪಡಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ರೈಸ್ತ ಸಮುದಾಯದವರ ಶಾಲಾ ಕಾಲೇಜುಗಳಲ್ಲಿ ಓದಿದ ಅಥವಾ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದ ಇತರ ಧರ್ಮೀಯರ ಪೈಕಿ ಯಾರಾದರೂ ಒಬ್ಬರು ತನ್ನನ್ನು ಮತಾಂತರಗೊಳಿಸಲಾಗಿದೆ ಎಂಬುದನ್ನು ಸಾಬೀತುಪಡಿಸಲಿ’ ಎಂದು ಕರ್ನಾಟಕ ಪ್ರಾಂತೀಯ ಕೆಥೋಲಿಕ್ ಧರ್ಮಾಧ್ಯಕ್ಷರ ಮಂಡಳಿಯ ಅಧ್ಯಕ್ಷರೂ ಆಗಿರುವ ಬೆಂಗಳೂರು ಧರ್ಮ ಪ್ರಾಂತ್ಯದ ಆರ್ಚ್ ಬಿಷಪ್ ಪೀಟರ್ ಮಚಾಡೊ ಸವಾಲು ಹಾಕಿದರು.

ಪೀಟರ್ ಮಚಾಡೊ

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಮತಾಂತರ ನಿಷೇಧ ಕಾಯ್ದೆ ಜಾರಿಯಾದರೆ ಅದರಿಂದ ಒಳಿತಾಗದು. ಅದರ ಬದಲು ಈ ಕಾಯ್ದೆ ಕೋಮುವಾದಿಗಳ ಕೈಗೆ ಸಿಕ್ಕಿ, ಅವರು ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ಎಸಗಲು ದಾರಿ ಮಾಡಿಕೊಡಬಹುದು’ ಎಂದು ಅವರು ಆತಂಕ ವ್ಯಕ್ತಪಡಿಸಿದರು.

‘ರಾಜ್ಯ ಸರ್ಕಾರ ಮತಾಂತರ ನಿಷೇಧ ಕಾಯ್ದೆ ಜಾರಿ ಚಿಂತನೆಯನ್ನು ಕೈಬಿಡಬೇಕು’ ಎಂದು ಆಗ್ರಹಿಸಿದರು.

‘ಯಾವುದೇ ಧರ್ಮ ಆಚರಿಸಲು ಸಂವಿಧಾನ ಹಕ್ಕು ನೀಡಿದೆ. ಹೀಗಿರುವಾಗ ಮತಾಂತರ ನಿಷೇಧ ಕಾಯ್ದೆಯ ಅಗತ್ಯವಾದರೂ ಏನು. ಇದನ್ನು ಕ್ರೈಸ್ತ ಸಮುದಾಯ ಒಕ್ಕೊರಲಿನಿಂದ ವಿರೋಧಿಸುತ್ತದೆ. ಯಾವುದೋ ಒಂದೆರಡು ಘಟನೆಗಳನ್ನು ಆಧಾರವಾಗಿ ಇಟ್ಟುಕೊಂಡು ಇಡೀ ಕ್ರೈಸ್ತ ಸಮುದಾಯವನ್ನು ದೂರುವುದು ಸರಿಯಲ್ಲ’ ಎಂದರು.

ಕ್ರೈಸ್ತ ಸಮುದಾಯದ ಚರ್ಚ್ ಮತ್ತು ಧಾರ್ಮಿಕ ಸಂಘ-ಸಂಸ್ಥೆಗಳ ಗಣತಿ ನಡೆಸಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೂಲಕ ಹೊರಡಿಸಿರುವ ಆದೇಶವನ್ನು ಹಿಂಪಡೆಯಬೇಕು’ ಎಂದು ಒತ್ತಾಯಿಸಿದರು.

‘ಚರ್ಚ್‌ಗಳ ಗಣತಿಗೆ ನಮ್ಮ ಆಕ್ಷೇಪ ಇಲ್ಲ. ಆದರೆ, ನಮ್ಮ ಸಮುದಾಯವನ್ನು ಮಾತ್ರ ಗುರಿಯಾಗಿಸಿ ಗಣತಿ ನಡೆಸಲು ಆದೇಶಿಸಿರುವುದೇಕೆ? ಚರ್ಚ್‌ಗಳ ವಿವರಗಳೆಲ್ಲವೂ ಸರ್ಕಾರದ ಬಳಿ ಇರುವಾಗ ಮತ್ತೊಮ್ಮೆ ಗಣತಿಯ ಅಗತ್ಯವಾದರೂ ಏನು? ಮತಾಂತರ ನಿಜವೇ ಆಗಿದ್ದರೆ ನಮ್ಮ ಸಮುದಾಯದ ಸಂಖ್ಯೆ ಹೆಚ್ಚಳ ಆಗಬೇಕಿತ್ತು. ದೇಶದ ಸ್ವಾತಂತ್ರ್ಯದ ನಂತರವೂ ಕ್ರೈಸ್ತ ಸಮುದಾಯದ ಜನಸಂಖ್ಯೆ ಕೇವಲ ಶೇ 1.8ರಷ್ಟು ಮಾತ್ರವಿದೆ’ ಎಂದರು.

ಕಾನೂನುಬಾಹಿರ: ‘ಚರ್ಚ್‌ಗಳ ಗಣತಿಗೆ ಗುಪ್ತಚರ ಇಲಾಖೆಯನ್ನು ಬಳಸುತ್ತಿರುವುದು ಕಾನೂನುಬಾಹಿರ’ ಎಂದು ಸುದ್ದಿಗೋಷ್ಠಿಯಲ್ಲಿದ್ದ ಕಾಂಗ್ರೆಸ್ ಶಾಸಕ ಕೆ.ಜೆ. ಜಾರ್ಜ್ ಹೇಳಿದರು.

‘ಉಗ್ರವಾದಿ ಮತ್ತು ದೇಶ ವಿರೋಧಿ ಚಟುವಟಿಕೆ ತಡೆಯಲು ಮಾಹಿತಿ ಸಂಗ್ರಹಿಸುವುದು ಮತ್ತು ಮುಖ್ಯಮಂತ್ರಿಗೆ ವರದಿ ನೀಡುವುದು ಗುಪ್ತಚರ ಇಲಾಖೆ ಕೆಲಸ. ಈ ರೀತಿ ಸಮೀಕ್ಷೆಗೆ ಕಾನೂನಿನ ಬೆಂಬಲ ಇಲ್ಲ’ ಎಂದ ಅವರು, ‘ಬಿಜೆಪಿ ಶಾಸಕ ಗೂಳಿಹಟ್ಟಿ ಶೇಖರ್ ಮಾಡಿದ ಮತಾಂತರ ಆರೋಪದ ಕಾರಣಕ್ಕೆ ಮತಾಂತರ ತಡೆ ಕಾಯ್ದೆ ತರಲು ರಾಜ್ಯ ಸರ್ಕಾರ ಮುಂದಾಗಿದೆ’ ಎಂದೂ ದೂರಿದರು.

ಕಾಂಗ್ರೆಸ್ ನಾಯಕಿ ಮಾರ್ಗರೆಟ್ ಆಳ್ವಾ ಮಾತನಾಡಿ, ‘ಮತಾಂತರಗಳಿಂದ ಕ್ರೈಸ್ತ ಸಮುದಾಯದ ಜನಸಂಖ್ಯೆ ಹೆಚ್ಚುತ್ತಿದೆ ಎಂಬ ತಪ್ಪು ಅಭಿಪ್ರಾಯವಿದೆ. ಆದರೆ, 200 ವರ್ಷ ಈ ದೇಶದಲ್ಲಿ ಬ್ರಿಟಿಷರು ಆಡಳಿತ ನಡೆಸಿದ್ದರೂ ಕ್ರೈಸ್ತರ ಜನಸಂಖ್ಯೆ ಶೇ 3 ದಾಟಿಲ್ಲ’ ಎಂದರು.

‘ಕಾಯ್ದೆಯಿಂದ ಗೂಂಡಾಗಿರಿ ಹೆಚ್ಚಳ’

‘ಯಾವುದೇ ಒಂದು ಘಟನೆಗೆ ಪ್ರತಿಕ್ರಿಯೆ ಇರುತ್ತದೆ ಎಂದು ಮುಖ್ಯಮಂತ್ರಿ ಹೇಳಿದ ನಂತರ ರಾಜ್ಯದಲ್ಲಿ ಮತೀಯ ಗೂಂಡಾಗಿರಿ ಪ್ರಕರಣಗಳು ಹೆಚ್ಚುತ್ತಿವೆ. ಅಲ್ಲದೆ, ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ದಾಳಿ, ಹಲ್ಲೆಗಳೂ ಹೆಚ್ಚುತ್ತಿವೆ. ಮತಾಂತರ ನಿಷೇಧ ಕಾಯ್ದೆ ಬಂದರೆ ಇಂಥ ದಾಳಿಗಳು ಮತ್ತಷ್ಟು ಹೆಚ್ಚಾಗಬಹುದು‘ ಎಂದು ಆರ್ಚ್ ಬಿಷಪ್ ಹೇಳಿದರು .

ಚರ್ಚ್ ಮಾಹಿತಿ ಸಂಗ್ರಹ: ಧಾರ್ಮಿಕ ಸ್ವಾತಂತ್ರ್ಯದ ಹರಣ

ಬೆಂಗಳೂರು: ‘ಚರ್ಚ್‌ಗಳ ಮಾಹಿತಿ ಸಂಗ್ರಹಿಸಲು ರಾಜ್ಯ ಸರ್ಕಾರ ಮುಂದಾಗಿದ್ದು, ಇದು ಅಲ್ಪಸಂಖ್ಯಾತರ ಧಾರ್ಮಿಕ ಸ್ವಾತಂತ್ರ್ಯದ ಹರಣ’ ಎಂದು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಯಾಸಿರ್ ಹಸನ್ ಖಂಡಿಸಿದ್ದಾರೆ.

‘ಬಿಜೆಪಿ ಸರ್ಕಾರವು ಸಂವಿಧಾನ ವಿರೋಧಿಯಾಗಿರುವ ಮತಾಂತರ ನಿಷೇಧ ಕಾಯ್ದೆ ಜಾರಿಗೆ ತರಲು ತುದಿಗಾಲಲ್ಲಿ ನಿಂತಿದೆ. ಚರ್ಚ್‌ಗಳ ಸಮೀಕ್ಷೆ ಈ ದುಷ್ಟ ಯೋಜನೆಯ ಒಂದು ಭಾಗ. ಇದು, ಸಮಾನತೆ ಮತ್ತು ಖಾಸಗಿ ಹಕ್ಕಿನ ಉಲ್ಲಂಘನೆ’ ಎಂದು ದೂರಿದ್ದಾರೆ.

‘ಅಲ್ಪಸಂಖ್ಯಾತ ಕ್ರೈಸ್ತ ಸಮುದಾಯದ ಮೇಲೆ ಬಿಜೆಪಿ ಸರ್ಕಾರ ದ್ವೇಷ ಸಾಧಿಸುತ್ತಿರುವುದು ಇದೇ ಮೊದಲಲ್ಲ. 2008ರಲ್ಲಿ ಸರಣಿ ಚರ್ಚ್ ದಾಳಿಯ ಮೂಲಕ ಕ್ರೈಸ್ತರಲ್ಲಿ ಅಭದ್ರತೆಯ ಭಾವನೆ ಸೃಷ್ಟಿಸಲಾಗಿತ್ತು. ಈ ದುಷ್ಕೃತ್ಯಕ್ಕೆ ಬಜರಂಗ ದಳ ನೇರ ಹೊಣೆಯಾಗಿದ್ದರೂ, ಆರೋಪಿಗಳಿಗೆ ಶಿಕ್ಷೆ ನೀಡದೆ ಸಂತ್ರಸ್ತರಿಗೆ ಅನ್ಯಾಯ ಮಾಡಲಾಗಿತ್ತು’ ಎಂದು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮಗುವಿನ ಜೊತೆ ಶ್ರೀದೇವಿ

ಲಾರಿ ಹರಿದು ತಾಯಿ–ಮಗು ಸಾವು

ಬೆಂಗಳೂರು: ಎಚ್‌ಎಎಲ್ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಟಿಪ್ಪರ್ ಲಾರಿ–ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಲಾರಿಯ ಚಕ್ರ ಮೈ ಮೇಲೆ ಹರಿದು ತಾಯಿ ಹಾಗೂ ಮಗು ಮೃತಪಟ್ಟಿದ್ದಾರೆ.

‘ತಮಿಳುನಾಡಿನ ಶ್ರೀದೇವಿ (21) ಹಾಗೂ ಒಂದು ವರ್ಷದ ಮಗು ದಕ್ಷಿತ್ ಮೃತರು. ಶ್ರೀದೇವಿ ಅವರ ಪತಿ ಶಿವಕುಮಾರ್ ಬೈಕ್ ಚಲಾಯಿಸುತ್ತಿದ್ದರು. ಅಪಘಾತದಲ್ಲಿ ಅವರಿಗೂ ತೀವ್ರ ಗಾಯವಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಪಶ್ಚಿಮ ವಿಭಾಗದ (ಸಂಚಾರ) ಡಿಸಿಪಿ ಕೆ.ಎಂ. ಶಾಂತರಾಜು ತಿಳಿಸಿದರು.

‘ಟಿಪ್ಪರ್ ಲಾರಿ ಚಾಲಕನ ನಿರ್ಲಕ್ಷ್ಯದ ಚಾಲನೆಯೇ ಅಪಘಾತಕ್ಕೆ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ.’ ಎಂದೂ ಹೇಳಿದರು.

‘ಹೊರವರ್ತುಲ ರಸ್ತೆಯ ಮಾರತ್ತಹಳ್ಳಿ ಉಡುಪಿ ಪಾರ್ಕ್ ಹೋಟೆಲ್ ಮುಂಭಾಗದಲ್ಲಿ ಹೊರಟಿದ್ದ ಬೈಕ್‌ಗೆ ಟಿಪ್ಪರ್ ಲಾರಿ ಡಿಕ್ಕಿ ಹೊಡೆದಿತ್ತು. ರಸ್ತೆಯಲ್ಲೇ ಬಿದ್ದಿದ್ದ ಶ್ರೀದೇವಿ ಹಾಗೂ ಮಗುವಿನ ಮೇಲೆ ಲಾರಿಯ ಚಕ್ರ ಹರಿದು ಹೋಗಿತ್ತು.’ ಎಂದೂ ಪೊಲೀಸರು ಹೇಳಿದರು.

‘ಮೂವರನ್ನೂ ಆಸ್ಪತ್ರೆಗೆ ಕರೆದೊಯ್ದಿದ್ದರು. ಶ್ರೀದೇವಿ ಹಾಗೂ ಮಗು, ಮಾರ್ಗಮಧ್ಯೆ ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು.’ ಎಂದರು.

‘ಹೆಚ್ಚು ಹಣ: ಆಸ್ಪತ್ರೆ ವಿರುದ್ಧ ಕೈಗೊಂಡ ಕ್ರಮ ಏನು?’

ಬೆಂಗಳೂರು: ಕೋವಿಡ್ ಸೋಂಕಿತರಿಂದ ಹೆಚ್ಚು ಹಣ ಪಡೆಯುತ್ತಿರುವ ಖಾಸಗಿ ಆಸ್ಪತ್ರೆಗಳ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ ಎಂದು ರಾಜ್ಯ ಸರ್ಕಾರವನ್ನು ಹೈಕೋರ್ಟ್ ಪ್ರಶ್ನೆ ಮಾಡಿದೆ.

‘ರಾಜ್ಯ ಸರ್ಕಾರದ ಇತ್ತೀಚಿನ ಪ್ರಮಾಣ ಪತ್ರದ ಪ್ರಕಾರ ಕೆಲ ಆಸ್ಪತ್ರೆಗಳು ಹೆಚ್ಚುವರಿ ಹಣವನ್ನು ಸೋಂಕಿತರಿಂದ ಪಡೆದಿವೆ. ಆದರೆ, ಆಸ್ಪತ್ರೆಗಳ ವಿರುದ್ಧ ಕೈಗೊಂಡ ಕ್ರಮ ಮತ್ತು ರೋಗಿಗಳಿಗೆ ಹಣ ಮರಳಿಸಿದ ಬಗ್ಗೆ ವಿವರ ಸಲ್ಲಿಸಿಲ್ಲ’ ಎಂದು ವಕೀಲ ಶ್ರೀಧರ್ ಪ್ರಭು ಹೇಳಿದರು.

‘ಮರು ಪಾವತಿಗೆ ಸಂಬಂಧಿಸಿದ ಮಾಹಿತಿಯನ್ನು ದಿನ ಪತ್ರಿಕೆಗಳಲ್ಲಿ ಜಾಹೀರಾತು ರೂಪದಲ್ಲಿ ಪ್ರಕಟಿಸಬೇಕು’ ಎಂದು ಮುಖ್ಯ ನ್ಯಾಯಮೂರ್ತಿ ಋತು ರಾಜ್ ಅವಸ್ತಿ ನೇತೃತ್ವದ ವಿಭಾಗೀಯ ಪೀಠ ಬಿಬಿಎಂಪಿಗೆ ತಿಳಿಸಿತು. ‘ಆಸ್ಪತ್ರೆಗಳ ವಿರುದ್ಧ ಕೈಗೊಂಡ ಕ್ರಮದ ಬಗ್ಗೆ ಮತ್ತು ಹಣ ವಾಪಸ್ ಕೊಡಿಸಿದ ಬಗ್ಗೆ ವಿವರವನ್ನು ಪೀಠಕ್ಕೆ ಸಲ್ಲಿಸಬೇಕು’ ಎಂದು ನಿರ್ದೇಶನ ನೀಡಿತು.

9 ರಾಷ್ಟ್ರಗಳ ಪ್ರಯಾಣಿಕರಿಗೆ ಪರೀಕ್ಷೆ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿರುವ ಜಗತ್ತಿನ ಒಂಬತ್ತು ರಾಷ್ಟ್ರಗಳ ಪ್ರಯಾಣಿಕರು ವಿದೇಶದಿಂದ ರಾಜ್ಯಕ್ಕೆ ಬಂದಿಳಿದಾಗ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ.

ಈ ಸಂಬಂಧ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸೋಮವಾರ ಹೊಸ ಮಾರ್ಗಸೂಚಿ ಪ್ರಕಟಿಸಿದೆ. ಬ್ರಿಟನ್, ದಕ್ಷಿಣ ಆಫ್ರಿಕಾ, ಬ್ರೆಜಿಲ್, ಬಾಂಗ್ಲಾದೇಶ, ಬೋಟ್ಸ್ವಾನಾ, ಚೀನಾ, ಮಾರಿಷಸ್, ನ್ಯೂಜಿಲೆಂಡ್ ಮತ್ತು ಜಿಂಬಾಬ್ವೆಯಿಂದ ವಿಮಾನ, ಹಡಗುಗಳ ಮೂಲಕ ರಾಜ್ಯಕ್ಕೆ ಬರುವವರು ತಕ್ಷಣವೇ ಕೋವಿಡ್ ಪರೀಕ್ಷೆಗೆ ಮಾದರಿ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ.

ಕೋವಿಡ್ ಲಸಿಕೆಯ ವಿಷಯದಲ್ಲಿ ಭಾರತದ ನೀತಿಯೊಂದಿಗೆ ಸಹಮತ ಹೊಂದಿರುವ ಬ್ರಿಟನ್, ಫ್ರಾನ್ಸ್, ಜರ್ಮನಿ, ನೇಪಾಳ, ಬೆಲಾರಸ್, ಲೆಬನಾನ್, ಅರ್ಮೇನಿಯಾ, ಉಕ್ರೇನ್, ಬೆಲ್ಜಿಯಂ, ಹಂಗೇರಿ ಮತ್ತು ಸರ್ಬಿಯಾ ರಾಷ್ಟ್ರಗಳಿಂದ ಬರುವವರು ಎರಡು ಡೋಸ್ ಲಸಿಕೆ ಪಡೆದಿದ್ದರೆ ಪರೀಕ್ಷೆ ಇಲ್ಲದೆ ತೆರಳಬಹುದು. 14 ದಿನಗಳ ಕಾಲ ನಿಗಾದಲ್ಲಿ ಇರಬೇಕು ಎಂದು ಸೂಚಿಸಲಾಗಿದೆ.

ಕೋವಿಡ್ ಲಸಿಕೆ ನೀತಿಯ ಜತೆ ಸಹಮತ ಹೊಂದಿರುವ ರಾಷ್ಟ್ರಗಳಿಂದ ಬಂದಿದ್ದರೂ, ಒಂದು ಡೋಸ್ ಪಡೆದಿದ್ದರೆ ಪರೀಕ್ಷೆಗೆ ಮಾದರಿ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ.

ಗುತ್ತಿಗೆದಾರರ ವಿರುದ್ಧ ಪೌರಕಾರ್ಮಿಕರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ಗುತ್ತಿಗೆದಾರರು ಪೌರಕಾರ್ಮಿಕರಿಗೆ ಸಕಾಲದಲ್ಲಿ ವೇತನ ನೀಡದೆ ವಂಚಿಸುತ್ತಿದ್ದಾರೆ ಎಂದು ಆರೋಪಿಸಿ ಯಶವಂತಪುರ ಮತ್ತು ರಾಜರಾಜೇಶ್ವರಿನಗರ ವ್ಯಾಪ್ತಿಯ ಪೌರಕಾರ್ಮಿಕರು ಬಿಬಿಎಂಪಿ ಪೌರಕಾರ್ಮಿಕರ ಸಂಘದ ನೇತೃತ್ವದಲ್ಲಿ ಇಲ್ಲಿನ ಪಾಲಿಕೆ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

‘ಪೌರಕಾರ್ಮಿಕರು ತುರ್ತು ರಜೆ ಹಾಕಿದರೆ ದಿನಕ್ಕೆ ₹500 ಕಡಿತಗೊಳಿಸುತ್ತಾರೆ. ಕೋವಿಡ್‌ನಿಂದಾಗಿ ಶಿಕ್ಷಣದಿಂದ ವಂಚಿತರಾಗಿರುವ ಮಕ್ಕಳ ಭವಿಷ್ಯಕ್ಕೆ ಸರ್ಕಾರ ಎಲ್ಲ ರೀತಿಯ ನೆರವು ನೀಡಬೇಕು. ಗುತ್ತಿಗೆ ಪೌರಕಾರ್ಮಿಕರಾಗಿಯೇ ಕೆಲಸ ಮಾಡಿ ನಿವೃತ್ತರಾಗುವವರಿಗೆ ಮಾಸಾಶನ ನೀಡಬೇಕು’ ಎಂದು ಆಗ್ರಹಿಸಿದರು.

‘ಬಯೋಮೆಟ್ರಿಕ್ ಹಾಜರಾತಿ ಬಗ್ಗೆ ಸರಿಯಾದ ಮಾಹಿತಿ ನೀಡದೆ, ವೇತನ ಪಾವತಿಸಲು ಅಧಿಕಾರಿಗಳು ವಿಳಂಬ ಧೋರಣೆ ಅನುಸರಿಸುತ್ತಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಪೌರ ಕಾರ್ಮಿಕರು ಊಟ ಮಾಡಲು ಸೂಕ್ತ ಜಾಗ ಇಲ್ಲದ ಕಾರಣ ಬೀದಿಯಲ್ಲೇ ಊಟ ಮಾಡಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ. ಮಹಿಳಾ ಕಾರ್ಮಿಕರಿಗೆ ಶೌಚಾಲಯಗಳಿಲ್ಲ’ ಎಂದು ಮಹಿಳಾ ಪೌರಕಾರ್ಮಿಕರು ಅಳಲು ತೋಡಿಕೊಂಡರು.

ಎಐಸಿಸಿಟಿಯು ಸಂಘಟನೆಯ ನಿರ್ಮಲಾ,‘ಗುತ್ತಿಗೆದಾರರು ಪೌರಕಾರ್ಮಿಕರಿಗೆ ನಾಲ್ಕು ವರ್ಷಗಳಿಂದ ಪಿಎಫ್ ನೀಡಿಲ್ಲ. ಈ ಬಗ್ಗೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಮನವಿ ಮಾಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಗುತ್ತಿಗೆದಾರರೊಂದಿಗೆ ಅಧಿಕಾರಿಗಳು ಶಾಮೀಲಾಗಿರುವ ಅನುಮಾನವಿದೆ’ ಎಂದು ದೂರಿದರು.

‘ಪೌರ ಕಾರ್ಮಿಕರಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುವುದು. ಗುತ್ತಿಗೆ ಪೌರಕಾರ್ಮಿಕರನ್ನು ಕಾಯಂಗೊಳಿಸುವುದೂ ಸೇರಿದಂತೆ ಇನ್ನಿತರ ಬೇಡಿಕೆಗಳನ್ನು ಸರ್ಕಾರಕ್ಕೆ ತಲುಪಿಸಲಾಗುವುದು’ ಎಂದು ರಾಜರಾಜೇಶ್ವರಿ ನಗರ ವಲಯದ ಜಂಟಿ ಆಯುಕ್ತ ನಾಗರಾಜು ಭರವಸೆ ನೀಡಿದರು.

ಉಪ ಹಣಕಾಸು ಅಧಿಕಾರಿ ಸತ್ಯಮೂರ್ತಿ,‘ಗುತ್ತಿಗೆದಾರರನ್ನು ಕರೆಸಿ, ಒಂದು ವಾರದೊಳಗೆ ಪೌರಕಾರ್ಮಿಕರ ಸಮಸ್ಯೆ ಬಗೆಹರಿಸಲಾಗುವುದು’ ಎಂದರು.

ರಾಜರಾಜೇಶ್ವರಿನಗರ ವಲಯದ ಪಾಲಿಕೆ ಕಚೇರಿ ಎದುರು ಪೌರಕಾರ್ಮಿಕರು ಪ್ರತಿಭಟನೆ ನಡೆಸಿದರು.

‘ಜೈ ಮಹಾರಾಷ್ಟ್ರ’ ಘೋಷಣೆ ಕೂಗಿದ ಮಹಾರಾಷ್ಟ್ರ ಏಕೀಕರಣ ಸಮಿತಿ

‘ಕರ್ನಾಟಕ ಸರ್ಕಾರ ನಾಲಾಯಕ್’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಸರ್ಕಾರಿ ದಾಖಲೆಗಳನ್ನು ಮರಾಠಿ ಭಾಷೆಯಲ್ಲಿ ನೀಡಬೇಕು’ ಎನ್ನುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮಹಾರಾಷ್ಟ್ರ ಏಕೀಕರಣ ಸಮಿತಿ(ಎಂಇಎಸ್) ಕಾರ್ಯಕರ್ತರು ನಗರದಲ್ಲಿ ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಿದರು. ಕರ್ನಾಟಕ ಸರ್ಕಾರಕ್ಕೆ ‘ನಾಲಾಯಕ್ ಸರ್ಕಾರ’ ಎಂದು ಧಿಕ್ಕಾರ ಕೂಗಿದರು. ‘ಜೈ ಮಹಾರಾಷ್ಟ್ರ’ ಘೋಷಣೆ ಮೊಳಗಿಸಿದರು.

ಧರ್ಮವೀರ ಸಂಭಾಜಿ ವೃತ್ತದಲ್ಲಿ ಸೇರಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ‘ಭಾಷಾ ಅಲ್ಪಸಂಖ್ಯಾತರಾದಮರಾಠಿಭಾಷಿಗರಮೇಲೆನಿರಂತರವಾಗಿ ಅನ್ಯಾಯವಾಗುತ್ತಿದೆ’ ಎಂದರು.

ಸರ್ಕಾರಿ ದಾಖಲೆಗಳನ್ನು ಮರಾಠಿಯಲ್ಲಿ ನೀಡುವಂತೆ ಆಗ್ರಹಿಸಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್)ಯವರು ಬೆಳಗಾವಿಯ ಕಾಲೇಜು ರಸ್ತೆಯಲ್ಲಿ ಸೋಮವಾರ ಮೆರವಣಿಗೆ ನಡೆಸಿದರು ಪ್ರಜಾವಾಣಿ ಚಿತ್ರ

ಅನುಮತಿ ಪಡೆಯದೇ ಮೆರವಣಿಗೆಗೆ ಮುಂದಾದ ಅವರನ್ನು ಪೊಲೀಸರು ತಡೆದರು. ಅವರ ವಿರುದ್ಧ ಪ್ರತಿಭಟನಾಕಾರರು ವಾಗ್ವಾದ ನಡೆಸಿದರು. ಹೆಚ್ಚುವರಿ ಜಿಲ್ಲಾಧಿಕಾರಿ ಸ್ಥಳಕ್ಕೆ ಬಂದರೂ ಮನವಿ ನೀಡದ ಮುಖಂಡರು, ಜಿಲ್ಲಾಧಿಕಾರಿ ಕಚೇರಿವರೆಗೂ ಹೋಗಿ ಮನವಿ ಸಲ್ಲಿಸಿದರು.

‘ಬೆಳಗಾವಿ, ಖಾನಾಪುರ, ಕಾರವಾರ, ನಿಪ್ಪಾಣಿ, ಬೀದರ್, ಭಾಲ್ಕಿ ಸೇರಿದಂತೆ ಗಡಿ ಭಾಗದ ಎಲ್ಲ ಪ್ರದೇಶಗಳು ಮಹಾರಾಷ್ಟ್ರಕ್ಕೆ ಸೇರಲೇಬೇಕು. ಮಹಾನಗರ ಪಾಲಿಕೆ ಎದುರಿನ ಕನ್ನಡ ಧ್ವಜ ತೆರವುಗೊಳಿಸಿ, ಇಲ್ಲವೇ ಭಗವಾ ಧ್ವಜ ಹಾರಿಸಲು ಅವಕಾಶ ಕೊಡಬೇಕು. ಸ್ಮಾರ್ಟ್ ಸಿಟಿ ಯೋಜನೆಯ ಕಾಮಗಾರಿಗಳ ವಿವರದ ಫಲಕದಲ್ಲಿ ಮರಾಠಿ ಭಾಷೆಯಲ್ಲೂ ಮಾಹಿತಿ ಹಾಕಬೇಕು. ನಗರದ ಎಲ್ಲ ಫಲಕಗಳಲ್ಲೂ ಮರಾಠಿ ಬಳಸಬೇಕು’ ಎಂದು ಒತ್ತಾಯಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಕೂಡ ಹೆಚ್ಚುವರಿ ಜಿಲ್ಲಾಧಿಕಾರಿ ‘ಮರಾಠಿಯಲ್ಲೇ ಪ್ರತಿಕ್ರಿಯಿಸಬೇಕು’ ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದರು. ಎಂಇಎಸ್ ಅಧ್ಯಕ್ಷ ದೀಪಕ ದಳವಿ ಹಾಗೂ ಇತರ ಮುಖಂಡರು ಪಾಲ್ಗೊಂಡಿದ್ದರು.

ಅಲ್ಪಸಂಖ್ಯಾತರೇ ಜೆಡಿಎಸ್‌ಗೆ ಆಧಾರ; ಕಾಂಗ್ರೆಸ್‌ಗೆ ವರವಾಗುವುದೇ ಅನುಕಂಪ, ಬೆಲೆ ಏರಿಕೆ

ಜಾತಿ ಸಮೀಕರಣದಲ್ಲಿ ಸಿಂದಗಿ ಕಣ

• ಬಸವರಾಜ್ ಸಂಪಳ್ಳಿ

ರಮೇಶ ಭೂಸನೂರ (ಬಿಜೆಪಿ)

ಅಶೋಕ ಮನಗೂಳಿ (ಕಾಂಗ್ರೆಸ್)

ನಾಜಿಯಾ ಅಂಗಡಿ (ಜೆಡಿಎಸ್)

ವಿಜಯಪುರ: ಸಿಂದಗಿ ವಿಧಾನಸಭೆ ಉಪ ಚುನಾವಣೆ ಅಖಾಡದಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ.

ಕ್ಷೇತ್ರದಲ್ಲಿ ಪ್ರಬಲವಾಗಿರುವ ಅಲ್ಪಸಂಖ್ಯಾತರ ಮತ ವಿಭಜನೆ ಲೆಕ್ಕಾಚಾರ ಕಾಂಗ್ರೆಸ್‌ನ ನಿದ್ದೆಗೆಡಿಸಿದೆ. 'ತೆನೆ ಹೊತ್ತ ಮಹಿಳೆ' ಮತ ಸೆಳೆದಷ್ಟು ಕಾಂಗ್ರೆಸ್ 'ಹಿನ್ನಡೆ'ಗೆ, ಬಿಜೆಪಿಯ 'ಮುನ್ನಡೆ'ಗೆ ಕಾರಣವಾಗಲಿದೆ.

ಕಳೆದ ನಾಲ್ಕೈದು ಚುನಾವಣೆಗಳಲ್ಲಿಯೂ ಅಭ್ಯರ್ಥಿಗಳ ಗೆಲುವಿನ ಅಂತರ ಕೇವಲ 5 ಸಾವಿರದಿಂದ 8 ಸಾವಿರದ ಒಳಗೆ ಇದೆ. ಈ ಬಾರಿ ಸೋಲು–ಗೆಲುವಿನ ನಿರ್ಣಾಯಕ ಸ್ಥಾನದಲ್ಲಿ ಜೆಡಿಎಸ್ ಮುಖ್ಯ ಪಾತ್ರ ವಹಿಸಲಿದೆ.

ಜೆಡಿಎಸ್‌ಗೆ ತನ್ನದೇ ಆದ 'ವೋಟ್' ಬ್ಯಾಂಕ್ ಎಂಬುದಿಲ್ಲ. ಇದುವರೆಗೆ ಈ ಕ್ಷೇತ್ರದಲ್ಲಿ ಎರಡು ಬಾರಿ ಜಯಗಳಿಸಿದ್ದರೂ ಅದು ಮಾಜಿ ಸಚಿವ ದಿವಂಗತ ಎಂ.ಸಿ. ಮನಗೂಳಿ ವರ್ಚಸ್ಸಿನಿಂದಾಗಿಯೇ ಹೊರತು, ಜೆಡಿಎಸ್‌ನ ಮತ ಬ್ಯಾಂಕ್‌ನಿಂದಲ್ಲ.

ಅಖಾಡದಲ್ಲೊಂದು ಸುತ್ತು

ಜೆಡಿಎಸ್ ಅಭ್ಯರ್ಥಿ ನಾಜಿಯಾ ಅಂಗಡಿ ಪದವೀಧರೆ. ಆದರೆ, ರಾಜಕೀಯಕ್ಕೆ ಹೊಸಬರು. ಮಾವ, ದಿ.ಐ.ಬಿ.ಅಂಗಡಿ ಜೆಡಿಎಸ್‌ನ ನಿಷ್ಠಾವಂತ ಮುಖಂಡ. ಕೇವಲ ಅಲ್ಪ ಸಂಖ್ಯಾತರ ಮತಗಳನ್ನು ನಂಬಿ ಇವರಿಗೆ ಟಿಕೆಟ್ ನೀಡಲಾಗಿದೆ.

ಮೊದಲಿನಿಂದಲೂ ಕಾಂಗ್ರೆಸ್‌ನ ಭದ್ರ ಕೋಟೆಯಾಗಿದ್ದ ಸಿಂದಗಿ ಕ್ಷೇತ್ರದಲ್ಲಿ ನಾಲ್ಕೈದು ಚುನಾವಣೆಗಳಲ್ಲಿ ಜೆಡಿಎಸ್ ಮತ್ತು ಬಿಜೆಪಿ ನಡುವೆ ನೇರ ಸ್ಪರ್ಧೆ ನಡೆದಿದೆ. ಕಾಂಗ್ರೆಸ್ ಮೂರನೇ ಸ್ಥಾನಕ್ಕೆ ಇಳಿದಿತ್ತು.

ಕ್ಷೇತ್ರದಲ್ಲಿ ಹಿಂದುಳಿದ ಸಮುದಾಯದ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಕಾಂಗ್ರೆಸ್ ಇದುವರೆಗೂ ಹಿಂದುಳಿದ ವರ್ಗಕ್ಕೆ ಸೇರಿದವರನ್ನೇ ಕಣಕ್ಕಿಳಿಸುತ್ತ ಬಂದಿತ್ತು. ಆದರೆ, ಫಲನೀಡಲಿಲ್ಲ.

ಈ ಬಾರಿ ತನ್ನ 'ವ್ಯೂಹ' ಬದಲಿಸಿರುವ ಕಾಂಗ್ರೆಸ್, ಪ್ರಬಲ ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಸೇರಿದ, ದಿ.ಎಂ.ಸಿ.ಮನಗೂಳಿ ಅವರ ಪುತ್ರ ಅಶೋಕ ಮನಗೂಳಿ ಅವರನ್ನು ಜೆಡಿಎಸ್‌ನಿಂದ ಕರೆತಂದು ಆರೇಳು ತಿಂಗಳ ಮೊದಲೇ ಅಭ್ಯರ್ಥಿ ಎಂದು ಘೋಷಿಸಿದೆ.

ಕಣದಲ್ಲಿ ಎಂ.ಸಿ.ಮನಗೂಳಿ ಅವರ ಸಾವಿನ ಅನುಕಂಪ ಕಾಣುತ್ತಿಲ್ಲ. ಆದರೂ ಅವರ ಪುತ್ರ ಕಾಂಗ್ರೆಸ್ ಅಭ್ಯರ್ಥಿ ಅಶೋಕ ಮನಗೂಳಿ ಕ್ಷೇತ್ರಕ್ಕೆ ತಂದೆ ನೀಡಿರುವ ಕೊಡುಗೆಗಳನ್ನು ಮತದಾರರಿಗೆ ತಿಳಿಸಿ ಸಹಾನುಭೂತಿ ಗಳಿಸಲು ಯತ್ನಿಸಿದ್ದಾರೆ.

ಲಿಂಗಾಯತ ಗಾಣಿಗ ಸಮಾಜಕ್ಕೆ ಸೇರಿದ ಬಿಜೆಪಿ ಅಭ್ಯರ್ಥಿ ರಮೇಶ ಭೂಸನೂರ ಅವರು ಎರಡು ಬಾರಿ ಶಾಸಕರಾಗಿದ್ದು, ಗ್ರಾಮೀಣ ಭಾಗದಲ್ಲಿ ಉತ್ತಮ ಕೆಲಸ ಮಾಡಿದ್ದಾರೆ. ಸೋತರೂ, ಗೆದ್ದರೂ ಜನರೊಟ್ಟಿಗೆ ಇದ್ದಾರೆ ಎಂಬುದು ಕ್ಷೇತ್ರದ ಮತದಾರರ ಅಭಿಪ್ರಾಯ.

ರಾಜ್ಯ ಮತ್ತು ಕೇಂದ್ರದಲ್ಲಿ ಬಿಜೆಪಿಯೇ ಅಧಿಕಾರದಲ್ಲಿದೆ. ಬಿಜೆಪಿಗೆ ವೋಟ್ ಹಾಕಿದರೆ ಕ್ಷೇತ್ರ ಅಭಿವೃದ್ಧಿಯಾಗಲಿದೆ, ಕ್ಷೇತ್ರಕ್ಕೆ ಹೆಚ್ಚು ಅನುದಾನ ಬರಲಿದೆ ಎಂದು ಬಿಜೆಪಿ ಮುಖಂಡರು ಪ್ರಚಾರ ನಡೆಸಿದ್ದಾರೆ. ಉಳಿದಿರುವ 18 ತಿಂಗಳಿಗೆ ಕಾಂಗ್ರೆಸ್, ಜೆಡಿಎಸ್‌ಗೆ ಮತ ಹಾಕಿದರೆ ಪ್ರಯೋಜನವಿಲ್ಲ. ಬಿಜೆಪಿ ಬೆಂಬಲಿಸಿದರೆ ಕ್ಷೇತ್ರಕ್ಕೆ ಅನುಕೂಲವಾಗಲಿದೆ ಎಂದು ಬಿಜೆಪಿ ಬಿಂಬಿಸತೊಡಗಿದೆ.

ಜಾತಿ ಸಮೀಕರಣ: ಸಿಂದಗಿ ಕ್ಷೇತ್ರದಲ್ಲಿ ಲಿಂಗಾಯತ ಗಾಣಿಗ, ಲಿಂಗಾಯತ ಪಂಚಮಸಾಲಿ, ಕುರುಬ, ಮುಸ್ಲಿಂ, ತಳವಾರ, ರೆಡ್ಡಿ, ಬಣಜಿಗ, ಸವಿತಾ ಸಮಾಜ ಸೇರಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ.

ಜಾತಿ ಸಮೀಕರಣಕ್ಕೆ ಬಿಜೆಪಿ ಮೊದಲ ಆದ್ಯತೆ ನೀಡಿದೆ. ಆಯಾ ಜಾತಿಗಳು ಪ್ರಬಲವಾಗಿರುವ ಪ್ರದೇಶಕ್ಕೆ ಆಯಾ ಜಾತಿಗೆ ಸೇರಿದ ಸಚಿವರು, ಶಾಸಕರನ್ನು ಕರೆಯಿಸಿ ತಳಮಟ್ಟದಲ್ಲಿ ಪ್ರಚಾರ ನಡೆಸಿ, ಮತ ಬೇಟೆಯಲ್ಲಿ ತೊಡಗಿದೆ.

ಈ ವಿಷಯದಲ್ಲಿ ಕಾಂಗ್ರೆಸ್ ಕೂಡ ಹಿಂದೆ ಬಿದ್ದಿಲ್ಲ. ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಆಗಬಹುದಾದ ಡ್ಯಾಮೇಜ್ ತಪ್ಪಿಸಲು ಅಲ್ಪಸಂಖ್ಯಾತ ಮುಖಂಡರಾದ ಯು.ಟಿ.ಖಾದರ್, ಜಮೀರ್ ಅಹ್ಮದ್ ಕಣಕ್ಕಿಳಿದು ಮುಸ್ಲಿಂ ಮತಗಳು ಇಬ್ಭಾಗವಾಗದಂತೆ ತಡೆಯಲು ಯತ್ನಿಸಿದ್ದಾರೆ.

ಜೊತೆಗೆ ಹಿಂದುಳಿದ ವರ್ಗಗಳ ಮುಖಂಡರು, ತಳವಾರ ಸಮುದಾಯ, ಬಂಜಾರ, ಮಾದಿಗ/ದಂಡೋರಾ ಸಮುದಾಯದ ಮುಖಂಡರ ಸಮಾವೇಶ, ಸಭೆ ನಡೆಸಿ ಮತ ಚದುರದಂತೆ ಎಚ್ಚರ ವಹಿಸಿದೆ.

ಕ್ಷೇತ್ರದಲ್ಲೇ ಬೀಡುಬಿಟ್ಟಿರುವ ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ ಅವರು ಜಾತಿ ಸಮೀಕರಣದ ಬದಲು ಕ್ಷೇತ್ರಕ್ಕೆ ಜೆಡಿಎಸ್ ನೀಡಿರುವ ಕೊಡುಗೆಯನ್ನು ಮತದಾರರಿಗೆ ಮನವರಿಕೆ ಮಾಡುತ್ತಿದ್ದಾರೆ.

ಚುನಾವಣೆಗೆ ವಸ್ತುವಾಗದ ಸಮಸ್ಯೆಗಳು: ಸಿಂದಗಿ ಪಟ್ಟಣ, ಗ್ರಾಮೀಣ ಭಾಗದಲ್ಲಿ ಹದಗೆಟ್ಟಿರುವ ರಸ್ತೆಗಳು, ಮಾಯವಾದ ಸ್ವಚ್ಛತೆ, ಒಳಚರಂಡಿ ಮತ್ತು ಕುಡಿಯುವ ನೀರಿನ ಸಮಸ್ಯೆ, ದೂಳುಮಯ ವಾತಾವರಣ ಉಪಚುನಾವಣೆಯಲ್ಲಿ ಮುನ್ನೆಲೆಗೆ ಬಂದಿಲ್ಲ.

ಬೆಲೆ ಏರಿಕೆ, ಭ್ರಷ್ಟಾಚಾರ, ಪೊಲೀಸ್ ಕೇಸರೀಕರಣ, ಕೋವಿಡ್ ನಿರ್ವಹಣೆ ವೈಫಲ್ಯ, ರಾಜಕಾರಣಿಗಳ ಭ್ರಷ್ಟಾಚಾರ, ಹಗರಣಗಳ ಕುರಿತು ಚರ್ಚೆ, ವಾಗ್ವಾದ, ವಾಕ್ಸಮರ ತಾರಕಕ್ಕೇರಿದೆ. ಮತದಾರರು ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಅ.30ರಂದು ಯಾರ ಪರವಾಗಿ ತಮ್ಮ ಹಕ್ಕು ಚಲಾಯಿಸುತ್ತಾರೆ ಎಂಬುದನ್ನು ಕಾದುನೋಡಬೇಕಿದೆ.

ಸಿಂದಗಿ ಮತದಾರರ ವಿವರ

ಪುರುಷರು	ಮಹಿಳೆಯರು	ಇತರೆ	ಒಟ್ಟು
1,20,949	1,13,327	33	2,34,309

2018ರ ಚುನಾವಣಾ ಫಲಿತಾಂಶ

ಅಭ್ಯರ್ಥಿ	ಪಕ್ಷ	ಪಡೆದ ಮತ
ಎಂ.ಸಿ.ಮನಗೂಳಿ	ಜೆಡಿಎಸ್	70,865
ರಮೇಶ್ ಭೂಸನೂರು	ಬಿಜೆಪಿ	61,560
ಮಲ್ಲಣ್ಣ ಸಾಲಿ	ಕಾಂಗ್ರೆಸ್	22,818

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಮನಗೂಳಿ ಕೊಡುಗೆ; ಲಾಭ ಯಾರಿಗೆ?

ದಿ.ಎಂ.ಸಿ.ಮನಗೂಳಿ ಅವರು ಎಚ್.ಡಿ.ದೇವೇಗೌಡರ ಸಹಕಾರದಿಂದ 'ಗುತ್ತಿಬಸವಣ್ಣ' ಏತನೀರಾವರಿ ಯೋಜನೆಯನ್ನು ಅನುಷ್ಠಾನಕ್ಕೆ ತರುವ ಮೂಲಕ ಬರಡಾಗಿದ್ದ ಸಿಂದಗಿ ಕ್ಷೇತ್ರವನ್ನು ಹಸಿರಾಗಿಸಿರುವುದು ಜನಮಾನಸದಲ್ಲಿ ಇಂದಿಗೂ ಅಚ್ಚಳಿಯದೇ ನೆಲೆಯೂರಿದೆ.

ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ₹1,200 ಕೋಟಿ ಅನುದಾನವನ್ನು ಕ್ಷೇತ್ರಕ್ಕೆ ತಂದು ಹತ್ತು ಹಲವು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದಾರೆ. ಇಷ್ಟೇ ಅಲ್ಲದೇ, ಆಲಮೇಲ ಪ್ರತ್ಯೇಕ ತಾಲ್ಲೂಕು ಹಾಗೂ ಆಲಮೇಲಕ್ಕೆ ತೋಟಗಾರಿಕಾ ಮಹಾವಿದ್ಯಾಲಯ ಮಂಜೂರು ಮಾಡಿರುವುದು ಹಾಗೂ ಸಿಂದಗಿ ಪಟ್ಟಣಕ್ಕೆ ಒಳಚರಂಡಿ, 24X7 ಕುಡಿಯುವ ನೀರಿನ ವ್ಯವಸ್ಥೆ ಮಾಡಿರುವುದನ್ನು ಇದೀಗ ಚುನಾವಣಾ ಕಣದಲ್ಲಿ ಜೆಡಿಎಸ್ ಮುಖಂಡರು ನಮ್ಮದೆಂದು, ಕಾಂಗ್ರೆಸ್ ಅಭ್ಯರ್ಥಿ ಅಶೋಕ ಅವರು ತಮ್ಮದೆಂದು 'ಕ್ರೆಡಿಟ್' ತೆಗೆದುಕೊಳ್ಳಲು ಹೋರಾಟ ನಡೆಸಿದ್ದಾರೆ.

ಮತದಾರರು 'ಮನಗೂಳಿ ಮುತ್ಯಾ' ಅವರ ಅಭಿವೃದ್ಧಿ ಯೋಜನೆಗಳನ್ನು ಸ್ಮರಿಸುತ್ತಾರೆ. ಆದರೆ, ಕ್ರೆಡಿಟ್ ಅವರ ಪುತ್ರನಿಗೆ ನೀಡುತ್ತಾರೋ ಅಥವಾ ಜೆಡಿಎಸ್‌ಗೆ ನೀಡುತ್ತಾರೋ ಎಂಬುದು ತೀರ್ಮಾನವಾಗಬೇಕಿದೆ.

ಬಸವರಾಜ ಬೊಮ್ಮಾಯಿಗೆ ಆಶೀರ್ವದಿಸಿದ್ದೇನೆ: ಎಚ್‌ಡಿಡಿ

• ಬಸವರಾಜ್ ಸಂಪಳ್ಳಿ

ಪ್ರಜಾವಾಣಿ ಸಂದರ್ಶನ


ಎಚ್.ಡಿ. ದೇವೇಗೌಡ
ಜೆಡಿಎಸ್ ವರಿಷ್ಠ

ವಿಜಯಪುರ: ಜೆಡಿಎಸ್ ವರಿಷ್ಠ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ತಮ್ಮ ಇಳಿವಯಸ್ಸನ್ನು ಲೆಕ್ಕಿಸದೇ ಎರಡು ವಾರಗಳಿಂದ ಸಿಂದಗಿ ಉಪ ಚುನಾವಣಾ ಅಖಾಡದಲ್ಲೇ ಬೀಡುಬಿಟ್ಟು, ಪಕ್ಷದ ಅಭ್ಯರ್ಥಿ ಪರ ಹಳ್ಳಿ, ಹಳ್ಳಿ ತಿರುಗಿ ಮತಯಾಚಿಸುತ್ತಿದ್ದಾರೆ.

'ನಾನು ಯಾವ ಚುನಾವಣೆಯನ್ನೂ ಸಿಂದಗಿ ಉಪ ಚುನಾವಣೆಯಷ್ಟು ಗಂಭೀರವಾಗಿ ಪರಿಗಣಿಸಿಲ್ಲ' ಎನ್ನುತ್ತಲೇ ಮಾತಿಗಿಳಿದರು ದೇವೇಗೌಡರು.

ಬಿಡುವಿಲ್ಲದ ಚುನಾವಣಾ ಪ್ರಚಾರದ ವೇಳೆ 'ಪ್ರಜಾವಾಣಿ' ಅವರೊಂದಿಗೆ ನಡೆಸಿದ ಸಂದರ್ಶನದ ಪೂರ್ಣಪಾಠ ಇಂತಿದೆ.

• ಬಿಜೆಪಿ ಬಗ್ಗೆ ಮೃದು ಧೋರಣೆ ಏಕೆ?

–ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾದ ಬಳಿಕ ನಮ್ಮ ಮನೆಗೆ ಬಂದಿದ್ದರು. ತಂದೆ, ತಾಯಿ ಯಾರೂ ಇಲ್ಲ. ನೀವೇ ನನಗೆ ತಂದೆ, ತಾಯಿ ಆಶೀರ್ವದಿಸಿ ಎಂದು ನನ್ನ ಹಾಗೂ ನನ್ನ ಹೆಂಡತಿ ಕಾಲಿಗೆ ನಮಸ್ಕರಿಸಿದರು. ನಿನ್ನನ್ನು ಮುಖ್ಯಮಂತ್ರಿ ಮಾಡಿದ್ದು ಯಡಿಯೂರಪ್ಪ, ಅವರನ್ನು ಜೊತೆಗೆ ಇಟ್ಟುಕೊಂಡು, ಹೈಕಮಾಂಡ್‌ಗೆ ವಿಧೇಯನಾಗಿ ನಡೆ, ಎರಡು ವರ್ಷ ಪೂರ್ಣಗೊಳಿಸು. ನನ್ನಿಂದ ಏನೂ ತೊಂದರೆ ಇಲ್ಲ ಎಂದು ಹೇಳಿ ಆಶೀರ್ವದಿಸಿದ್ದೇನೆ. ನನಗೆ ಪಕ್ಷ ಕಟ್ಟಲು ಸಮಯ ಬೇಕು, 2023ರವರೆಗೆ ಬಿಜೆಪಿ ಟಚ್ ಮಾಡಲ್ಲ. ಒಳಗೊಂದು, ಹೊರಗೊಂದು ಮಾತನಾಡಲ್ಲ.

• ಸಿಂದಗಿ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ನಿಮ್ಮ ಟಾರ್ಗೆಟ್ ಆಗಿದೆಯಲ್ಲ ಏಕೆ?

–ಕಾಂಗ್ರೆಸ್‌ನವರು ನನ್ನನ್ನು ಬಿಜೆಪಿ ಏಜೆಂಟ್ ಎಂದು ಕರೆದಿದ್ದಾರೆ. ಜೆಡಿಎಸ್ ಪಕ್ಷವನ್ನು ಬಿಜೆಪಿ 'ಬಿ' ಟೀಂ, ಅಲ್ಪಸಂಖ್ಯಾತ ಅಭ್ಯರ್ಥಿ ನಿಲ್ಲಿಸಿದ್ದು ಬಿಜೆಪಿ ಗೆಲ್ಲಿಸಲು ಎಂದು ಆರೋಪಿಸುತ್ತಿದ್ದಾರೆ. ಇದೆಲ್ಲ ಮನಸ್ಸಿಗೆ ತುಂಬಾ ಬೇಸರ ಉಂಟು ಮಾಡಿದೆ. ಎಂ.ಸಿ. ಮನಗೂಳಿ ಯನ್ನು ರಾಜಕೀಯಕ್ಕೆ ತಂದು, ಎರಡು ಬಾರಿ ಶಾಸಕ, ಸಚಿವನನ್ನಾಗಿ ಮಾಡಿದ್ದು ನಾನೇ. ಇಡೀ ಕ್ಷೇತ್ರವನ್ನು ನೀರಾವರಿ ಮಾಡಿದ್ದೇನೆ. ಕ್ಷೇತ್ರಕ್ಕೆ ಇಷ್ಟೆಲ್ಲ ಉಪಕಾರ ಮಾಡಿದರೂ ಮನಗೂಳಿ ಮಗ ಮೋಸ ಮಾಡಿದರಲ್ಲ ಎಂಬ ನೋವು ಕಾಡುತ್ತಿದೆ. ಹೀಗಾಗಿ ಈ ಕ್ಷೇತ್ರದ ಉಪ ಚುನಾವಣೆ ಜವಾಬ್ದಾರಿ ನಾನೇ ವಹಿಸಿಕೊಂಡಿದ್ದೇನೆ.

• ಸಿಂದಗಿ ಕ್ಷೇತ್ರದಲ್ಲಿ ಮತದಾರರ ಪ್ರತಿಕ್ರಿಯೆ ಹೇಗಿದೆ?

–ಕೆಲವೆಡೆ 15–20 ಜನ ಬಂದು ಬರೀ ಹಾರ ಹಾಕಿ ಕಳುಹಿಸಿದ್ದಾರೆ. ಇನ್ನೂ ಕೆಲವೆಡೆ ಉತ್ಸಾಹದಿಂದ ಊರೊಳಗೆ ಕರೆದುಕೊಂಡು ಹೋಗಿ ನೂರಾರು ಜನ ಸೇರಿ ತೋರಿಸುವ ಗೌರವ ನನಗೆ ಸಮಾಧಾನ ನೀಡಿದೆ. ಪಕ್ಷ ನಿಶ್ಚಿತ ಉತ್ತಮ ಸಾಧನೆ ಮಾಡಲಿದೆ ಎಂಬ ವಿಶ್ವಾಸವಿದೆ.

• ಚುನಾವಣೆ ಮೇಲೆ ಬೆಲೆ ಏರಿಕೆ ಪರಿಣಾಮ ಬೀರಲಿದೆಯೇ?

–ಬೆಲೆ ಏರಿಕೆ ಹೊಸದೇನಲ್ಲ. ಕಾಂಗ್ರೆಸ್ ಕಾಲದಲ್ಲೂ ಬೆಲೆ ಏರಿಕೆ ಆಗಿದೆ. ನಾಗಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೆಲೆ ಏರಿಕೆ ಬಗ್ಗೆ ಮಾತನಾಡುತ್ತಾ ಇಂದಿರಾಗಾಂಧಿ ಅವರು 'ಒಂದು ಹೊತ್ತು ಊಟ ಬಿಡಿ' ಎಂದು ಹೇಳಿದ್ದರು. ಜನ ವೇದಿಕೆ ಮೇಲೆ ನುಗ್ಗಿ 'ನಾವು ಇದಕ್ಕಾ ವೋಟ್ ಕೊಟ್ಟಿದ್ದು?' ಎಂದು ದೊಡ್ಡ ಗಲಾಟೆ ಮಾಡಿದ್ದರು. ಸದ್ಯ ಬೆಲೆ ಏರಿಕೆಯಿಂದ ಜನರ ಮೇಲೆ ದೊಡ್ಡ ಭಾರ ಬಿದ್ದಿದೆ .

• ಜೆಡಿಎಸ್ 'ಜಾತ್ಯತೀತ' ಪಕ್ಷವಲ್ಲ ಎಂಬ ಆರೋಪಕ್ಕೇನು ಹೇಳಬಯಸುತ್ತೀರಿ?

ಸಿದ್ದರಾಮಯ್ಯ ಇರುವ ಇದೇ ಕಾಂಗ್ರೆಸ್ ತಮಿಳುನಾಡಿನಲ್ಲಿ ಈ ಹಿಂದೆ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡ ಪಕ್ಷದ ಜೊತೆ ಸೇರಿ ಆಡಳಿತ ನಡೆಸಲಿಲ್ಲವೇ? ಮಹಾರಾಷ್ಟ್ರದಲ್ಲಿ ಶಿವಸೇನೆ ಜೊತೆ ಸಂಬಂಧ ಮಾಡಿದ್ದಾರಲ್ಲ. ಬಿಹಾರದಲ್ಲಿ ನಿತೀಶ್ ಕುಮಾರ್ ಸರ್ಕಾರದ ಜೊತೆ ಭಾಗಿಯಾಗಿಲ್ಲವೇ? ಸಿದ್ದರಾಮಯ್ಯ ಇದಕ್ಕೆ ಏನು ಉತ್ತರ ಹೇಳುತ್ತಾರೆ? ಕಾಂಗ್ರೆಸ್ ಮತ್ತು ಬಿಜೆಪಿಯಿಂದ ಪಾಠ ಕೇಳುವ ಅಗತ್ಯ ನನಗಿಲ್ಲ. ಸದ್ಯ ದೇಶದಲ್ಲಿ ಏನು ನಡೆಯುತ್ತಿದೆ? ಪಶ್ಚಿಮ ಬಂಗಾಳ, ಕೇರಳ, ಗೋವಾ, ಗುಜರಾತ್, ಛತ್ತೀಸಗಡದಲ್ಲಿ ಕಾಂಗ್ರೆಸ್ ಪರಿಸ್ಥಿತಿ ಏನಾಗಿದೆ? ಕಾಂಗ್ರೆಸ್ 2024ರವರೆಗೆ ಏನೇನಾಗುತ್ತದೆ ಕಾದು ನೋಡೋಣ. ಪ್ರಾದೇಶಿಕ ಪಕ್ಷಗಳನ್ನು ಬಿಟ್ಟು ಕಾಂಗ್ರೆಸ್‌ಗೆ ಏನೂ ಮಾಡಲು ಸಾಧ್ಯವಿಲ್ಲ.

• ಮತದಾರರಲ್ಲಿ ನಿಮ್ಮ ಮನವಿ ಏನು?

–ಬದುಕಿನ ಕೊನೇ ಘಟ್ಟದಲ್ಲಿ ಕೈಮುಗಿದು ಪ್ರಾರ್ಥನೆ ಮಾಡುತ್ತೇನೆ. ಪ್ರಾದೇಶಿಕ ಪಕ್ಷವನ್ನು ಉಳಿಸಿ, ಕಡೆಗಣಿಸಬೇಡಿ ಎಂದು ಕೇಳಿಕೊಳ್ಳುತ್ತೇನೆ.

• ಜೆಡಿಎಸ್‌ನ ಪ್ರಮುಖ ನಾಯಕರು ಪಕ್ಷ ತೊರೆದು ಹೋಗುತ್ತಿದ್ದಾರಲ್ಲ ಏಕೆ?

–ಅಧಿಕಾರದ ಆಸೆಯಿಂದ ಪಕ್ಷ ಬಿಟ್ಟು ಹೋಗುತ್ತಾರೆ. ಸಿದ್ದರಾಮಯ್ಯ ಹೋಗಿದ್ದೂ ಇದೇ ಕಾರಣಕ್ಕೆ ತಾನೆ?

ಬಿಜೆಪಿ ನಾಯಕ ಬಿ.ಎಲ್.ಸಂತೋಷ್ ಟೀಕೆ

ಯೋಚನಾಶಕ್ತಿ ಹಾಳು ಮಾಡಿದ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭ್ರಷ್ಟಾಚಾರ, ಕುಟುಂಬ ರಾಜಕಾರಣ ಮತ್ತು ಪಕ್ಷಪಾತದ ಕಾರಣಕ್ಕಾಗಿ ಚುನಾಯಿತ ಪ್ರತಿನಿಧಿಗಳ ಯೋಚನಾ ಶಕ್ತಿಯನ್ನೇ ಕಾಂಗ್ರೆಸ್ ಹಾಳು ಮಾಡಿದೆ. ಅವರ ದಿಕ್ಸೂಚಿಯನ್ನೇ ಬದಲಾಯಿಸಿರುವುದು ದುರಂತ' ಎಂದು ಬಿಜೆಪಿಯ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹೇಳಿದ್ದಾರೆ.

ಯಲಹಂಕದ ಸಿಂಗನಾಯಕನಹಳ್ಳಿಯಲ್ಲಿ ಸೋಮವಾರ ನಡೆದ ಗ್ರಾಮ ಪಂಚಾಯತ್ ಜನಪ್ರತಿನಿಧಿಗಳ ಪ್ರಶಿಕ್ಷಣ ವರ್ಗದಲ್ಲಿ ಅವರು ಮಾತನಾಡಿದರು.

'ಗ್ರಾಮಪಂಚಾಯಿತಿ ಸದಸ್ಯರಿಗಿರುವ ಅಧಿಕಾರ ದೆಹಲಿಯ ನಾಯಕರಿಗೂ ಇಲ್ಲ. ಅಧಿಕಾರ ಇರುವುದೇ ಸೇವೆ ಮಾಡಲಿಕ್ಕೆ, ಒಂದು ಮೈಕ್ ಮೂಲಕ ನೀರು ಬರುವುದನ್ನು ಜನರಿಗೆ ತಿಳಿಸಬಹುದು. ಜನಸಾಮಾನ್ಯರ ಸಮಸ್ಯೆಗಳನ್ನು ಹತ್ತಿರದಿಂದ ನೋಡಬಹುದು. ಅದನ್ನು ಸದುಪಯೋಗಪಡಿಸಿಕೊಂಡು, ಅವರಿಗೆ ಸವಲತ್ತುಗಳನ್ನು ಕಲ್ಪಿಸಿಕೊಡಬಹುದು' ಎಂದರು.

'ಗ್ರಾಮ ಪಂಚಾಯಿತಿಯು ವಿಧಾನ ಪರಿಷತ್, ವಿಧಾನಸಭೆಗೆ ಹೆಬ್ಬಾಗಿಲು ಇದ್ದಂತೆ. ವಿಧಾನಪರಿಷತ್ ಪ್ರವೇಶಿಸಲು ಇಚ್ಛೆ ಇರುವವರೇ ಹೆಚ್ಚಾಗಿ ಗ್ರಾಮಪಂಚಾಯಿತಿಗಳನ್ನು ಪ್ರವೇಶಿಸುತ್ತಿದ್ದಾರೆ. ಎಲ್ಲ ಪಕ್ಷಗಳಲ್ಲೂ ಇಂಥವರಿದ್ದಾರೆ' ಎಂದು ಅವರು ಹೇಳಿದರು.

'ದೇಶದಲ್ಲಿ ಚೆಕ್‌ಗೆ ಸಹಿ ಮಾಡುವ ಅಧಿಕಾರವನ್ನು ಕೇವಲ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಜಿಲ್ಲಾಧಿಕಾರಿಗಳಿಗೆ ಮಾತ್ರ ನೀಡಲಾಗಿದೆ. ಬೇರೆ ಯಾವುದೇ ಜನಪ್ರತಿನಿಧಿಗಳಿಗೆ ಆ ಅಧಿಕಾರ ಇಲ್ಲ' ಎಂದು ಸಂತೋಷ್ ವಿವರಿಸಿದರು.

'ಗ್ರಾಮ ಪಂಚಾಯಿತಿಗಳು ಮೊದಲಿನಿಂದಲೂ ಇವೆ. ಸ್ವಾತಂತ್ರ್ಯ ಬಂದಾಗಿನಿಂದ ಕಾಮಗಾರಿಗಳು ನಡೆದಿವೆ. ಇಷ್ಟಾದರೂ ಕೊಳೆಗೇರಿಗಳಿವೆ, ಹಿಂದುಳಿದ ಗ್ರಾಮಗಳಿವೆ. ನಮ್ಮ ಕೆಲಸಗಳಿಂದ ನಮ್ಮನ್ನು ಗುರುತಿಸುವಂತೆ ಆಗಬೇಕಿತ್ತು. 30 ವರ್ಷಗಳು ಕಳೆದರೂ ನೀರ್ ಸಾಬ್ ಎಂದೇ ಕರೆಯಲ್ಪಡುವ ಅಬ್ದುಲ್ ನಜೀರ್ ಸಾಬ್ ಯಾರಿಗೆ ಗೊತ್ತಿಲ್ಲ ಹೇಳಿ, ಅವರ ರೀತಿಯಲ್ಲಿ ನಾವು ಮಾಡುವ ಕೆಲಸದಿಂದ ಜನರು ನಮ್ಮ ಗುರುತು ಹಿಡಿಯುವಂತಾಗಬೇಕು' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್, ಬಿಜೆಪಿ ರಾಜ್ಯ ಸಂಘಟನಾ ಕಾರ್ಯದರ್ಶಿ ಅರುಣ್ ಕುಮಾರ್, ಇದ್ದರು.

'ಬಿಜೆಪಿ ಪರ ಸಾಮಾಜಿಕ ಸಮೀಕರಣ': ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಮೊಸರಲ್ಲಿ ಕಲ್ಲು ಹುಡುಕುತ್ತಿರುವ ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಹಾವೇರಿ: 'ಹಾನಗಲ್ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಎಲ್ಲ ವರ್ಗಗಳ ಜನರು ಬಿಜೆಪಿಯನ್ನು ಬೆಂಬಲಿಸುತ್ತಿದ್ದಾರೆ. ಬಿಜೆಪಿ ಪರ 'ಸಾಮಾಜಿಕ ಸಮೀಕರಣ' ಕಂಡು ಬರುತ್ತಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಹಾನಗಲ್ ಪಟ್ಟಣದಲ್ಲಿ ಸೋಮವಾರ ಮಾಧ್ಯಮಗೋಷ್ಠಿಯಲ್ಲಿ ಅವರು ಮಾತನಾಡಿ, ಸಿಂದಗಿ ಮತ್ತು ಹಾನಗಲ್ ಎರಡೂ ಕ್ಷೇತ್ರಗಳಲ್ಲಿ ಬಿಜೆಪಿ ದೊಡ್ಡ ಅಂತರದಿಂದ ಜಯ ಸಾಧಿಸುತ್ತದೆ. ಜನರು ಬಿಜೆಪಿ ಪರ ಒಲವು ತೋರುತ್ತಿದ್ದಾರೆ. ಕಾಂಗ್ರೆಸ್ ಬೇರೆಯವರ 'ದೌರ್ಬಲ್ಯಗಳ' ಮೇಲೆ ಮತಗಳನ್ನು ಪಡೆಯಲು ಯತ್ನಿಸುತ್ತದೆ. ನಾವು ನಮ್ಮ 'ಶಕ್ತಿ'ಯ ಮೇಲೆ ಮತಗಳನ್ನು ಪಡೆಯುತ್ತೇವೆ ಎಂದರು.

ವಿಧಾನಸೌಧಕ್ಕೆ ಬೀಗ ಹಾಕಿಲ್ಲ: ಡಿ.ಕೆ.ಶಿವಕುಮಾರ್ ಆರೋಪಕ್ಕೆ ಪ್ರತಿಕ್ರಿಯಿಸಿ, 'ವಿಧಾನಸೌಧಕ್ಕೆ ಬೀಗ ಹಾಕಿಲ್ಲ. ನಮ್ಮ ಸಚಿವ ಸಂಪುಟದಲ್ಲಿ ಒಗ್ಗಟ್ಟಿದೆ. ಎರಡು–ಮೂರು ದಿನ ಸಚಿವರು ಹಾನಗಲ್ ಕ್ಷೇತ್ರಕ್ಕೆ ಬಂದು ಹೋಗುತ್ತಿದ್ದಾರೆ. ನಮ್ಮ ಪಕ್ಷದ ಅಭ್ಯರ್ಥಿ ಪರ ಚುನಾವಣಾ ಪ್ರಚಾರ ಮಾಡಿದರೆ ಕಾಂಗ್ರೆಸ್‌ನವರಿಗೆ ಏಕೆ ಆತಂಕ? ಸೋಲಿನ ಭಯದಿಂದ ಈ ರೀತಿ ಮಾತನಾಡುತ್ತಿದ್ದಾರೆ' ಎಂದು ಟೀಕಿಸಿದರು.

ಪ್ರಣಾಳಿಕೆ ಜನರ ಪುರುಷಾರ್ಥಕ್ಕೆ: 'ಇಲ್ಲಿ ಬಿಜೆಪಿ ಪ್ರಣಾಳಿಕೆ ಬಿಡುಗಡೆ ಮಾಡಿರುವುದು ಡಿ.ಕೆ. ಶಿವಕುಮಾರ್ ಅವರ ಪುರುಷಾರ್ಥಕ್ಕಲ್ಲ, ಜನರ ಪುರುಷಾರ್ಥಕ್ಕೆ. ಅಭಿವೃದ್ಧಿ ನಿರಂತರವಾಗಿ ನಡೆಯುವ ಪ್ರಕ್ರಿಯೆ. ಒಂದು ಕೆಲಸ ಮಾಡಿ ಮತ್ತೊಂದು ನಿಲ್ಲಿಸುವುದು ಕಾಂಗ್ರೆಸ್ ಸಂಸ್ಕೃತಿ. ಹಾನಗಲ್ ಪಟ್ಟಣವನ್ನು ಯೋಜನಾಬದ್ಧವಾಗಿ ಬೆಳೆಸುವ ಗುರಿ ಇದೆ' ಎಂದರು.

ನನ್ನನ್ನು ಟೀಕಿಸಿದರೆ ಮತ ಸಿಗಲ್ಲ: 'ನನ್ನನ್ನು ಟೀಕಿಸಿದರೆ ನಾಲ್ಕು ಮತಗಳು ಜಾಸ್ತಿ ಬರುತ್ತವೆ ಎಂದು ಸಿದ್ದರಾಮಯ್ಯ ಅಂದುಕೊಂಡಿದ್ದಾರೆ. ಇದರಿಂದ ಮತಗಳು ಸಿಗುವುದಿಲ್ಲ. ಮತಗಳನ್ನು ಕಳೆದುಕೊಳ್ಳುವ ಸಾಧ್ಯತೆಯೇ ಹೆಚ್ಚು. ಬಿ.ಎಸ್. ಯಡಿಯೂರಪ್ಪ ಅವರದ್ದು ಕರ್ಮಕಾಂಡವಿಲ್ಲ ಎಂದ ಮೇಲೆ ಅದರಲ್ಲಿ ನನ್ನ ಪಾಲಿದೆ ಎಂಬ ಪ್ರಶ್ನೆಯೇ ಬರುವುದಿಲ್ಲ. ಕಾಂಗ್ರೆಸ್ ಒಂದು ಸುಳ್ಳಿನ ಸಂತೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ಡಿ.ಕೆ.ಶಿವಕುಮಾರ್ ಅಸಹಾಯಕ ಅಧ್ಯಕ್ಷ'

ಜಗದೀಶ ಶೆಟ್ಟರ್

ಹಾವೇರಿ: 'ಡಿ.ಕೆ.ಶಿವಕುಮಾರ್ ಅವರು ಕೆಪಿಸಿಸಿಯ ಅಸಹಾಯಕ ಅಧ್ಯಕ್ಷರಾಗಿದ್ದಾರೆ. ತಮ್ಮ ಬಗ್ಗೆ ಕೀಳಾಗಿ ಮಾತನಾಡಿರುವ ವಿ.ಎಸ್. ಉಗ್ರಪ್ಪ ವಿರುದ್ಧ ಕ್ರಮ ಕೈಗೊಳ್ಳಲು ಅವರಿಗೆ ದಮ್ ಇಲ್ಲ' ಎಂದು ಶಾಸಕ ಜಗದೀಶ ಶೆಟ್ಟರ್ ಲೇವಡಿ ಮಾಡಿದರು.

ಹಾನಗಲ್ ಪಟ್ಟಣದಲ್ಲಿ ಸೋಮವಾರ ಮಾಧ್ಯಮಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಪಿಸುಮಾತು ಪ್ರಕರಣದಲ್ಲಿ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಸಲೀಂ ಅಹಮದ್ ಅವರನ್ನು 6 ವರ್ಷಗಳ ಕಾಲ ಪಕ್ಷದಿಂದ ಉಚ್ಚಾಟಿಸುತ್ತಾರೆ. ಸಿದ್ದರಾಮಯ್ಯ ಅವರ ಪಟ್ಟದ ಶಿಷ್ಯ ಉಗ್ರಪ್ಪ ಅವರಿಗೆ ನೋಟಿಸ್ ಕೊಟ್ಟು ಸುಮ್ಮನಾಗುತ್ತಾರೆ. ಕಾನೂನು ಪಂಡಿತ ಉಗ್ರಪ್ಪ ವಿರುದ್ಧ ಕ್ರಮ ಕೈಗೊಂಡರೆ ಸಂವಿಧಾನದ ಆರ್ಟಿಕಲ್ ಶುರುವಾಗುತ್ತವೆ' ಎಂದು ಲೇವಡಿ ಮಾಡಿದರು.

'ಗೂಂಡಾಗಿರಿ ಕಾಂಗ್ರೆಸ್ ಸಂಸ್ಕೃತಿ': 'ಚುನಾವಣೆಯಲ್ಲಿ ಹಣ, ಹೆಂಡ ಹಂಚುವುದು ಮತ್ತು ಗೂಂಡಾಗಿರಿ ಕಾಂಗ್ರೆಸ್ ಸಂಸ್ಕೃತಿ. ನಮ್ಮಲ್ಲಿರುವ ಲಕ್ಷಾಂತರ ಕಾರ್ಯಕರ್ತರು ಪಕ್ಷ ಸಂಘಟನೆಗೆ ಶ್ರಮಿಸಿ, ಚುನಾವಣೆಯಲ್ಲಿ ಗೆಲುವು ತರುತ್ತಾರೆ' ಎಂದು ಹೇಳಿದರು.

'ಸಿದ್ದರಾಮಯ್ಯ ಮತ್ತು ಎಚ್.ಡಿ.ಕುಮಾರಸ್ವಾಮಿ ಅಲ್ಪಸಂಖ್ಯಾತರನ್ನು ಓಲೈಕೆ ಮಾಡುತ್ತಿದ್ದಾರೆ. ಕೇಂದ್ರದಲ್ಲಿ ಯುಪಿಎ ಸರ್ಕಾರವಿದ್ದಾಗ ಲೂಟಿ ಮಾಡುವುದನ್ನು ಬಿಟ್ಟರೆ ಬೇರೆ ಏನು ಮಾಡಿದೆ? 2023ಕ್ಕೆ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಭ್ರಮೆ' ಎಂದು ಶೆಟ್ಟರ್ ಹೇಳಿದರು.

ಪಠ್ಯ ಕಡಿತ ಡಿಸೆಂಬರ್‌ನಲ್ಲಿ ನಿರ್ಧಾರ: ನಾಗೇಶ್

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಒಂದೂವರೆ ವರ್ಷದ ನಂತರ ಶಾಲೆಗಳು ಆರಂಭವಾಗಿವೆ. ಸದ್ಯಕ್ಕೆ ಪಠ್ಯ ಕಡಿತಗೊಳಿಸುವ ಚಿಂತನೆ ಇಲ್ಲ. ಈ ಕುರಿತು ಡಿಸೆಂಬರ್‌ನಲ್ಲಿ ನಿರ್ಧರಿಸಲಾಗುವುದು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ನಗರದ ಮಲವಗೊಪ್ಪ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸೋಮವಾರ 1ರಿಂದ 5ನೇ ತರಗತಿ ಪ್ರಾರಂಭೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಪದವಿಪೂರ್ವ ಕಾಲೇಜುಗಳನ್ನು ಬೇಗನೆ ಆರಂಭಿಸಿದ ಕಾರಣ ಪಠ್ಯ ಕಡಿತಗೊಳಿಸುವುದಿಲ್ಲ. ಒಂದು ತಿಂಗಳ ವಿಳಂಬವಾಗಿದೆ ಅಷ್ಟೆ. ಈಗಾಗಲೇ ದಸರೆ ರಜೆ ಹೊಂದಾಣಿಕೆ ಮಾಡಲಾಗಿದೆ. ಮುಂದೆ ಇನ್ನಷ್ಟು ರಜೆ ಹೊಂದಾಣಿಕೆ ಮೂಲಕ ಪಠ್ಯ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಸೋಮವಾರ ಶಿವಮೊಗ್ಗದ ಮಲವಗೊಪ್ಪ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳ ಜತೆ ಮಾತನಾಡಿದರು.

ಪ್ರಾಥಮಿಕ ಶಿಕ್ಷಕರ ಬೇಡಿಕೆ ಈಡೇರಿಸಲು ಈಗಾಗಲೇ ಮೂರು ಸುತ್ತಿನ ಮಾತುಕತೆ ನಡೆದಿದೆ. ಬಡ್ತಿ ವಿಷಯದಲ್ಲಿ ಸರ್ಕಾರ, ಸಂಘದ ಮಧ್ಯೆ ಸಹಮತ ಸಾಧ್ಯವಾಗಿಲ್ಲ. ಪರೀಕ್ಷೆ ನಡೆಸಿ ಪ್ರೌಢಶಾಲೆಗೆ ಬಡ್ತಿ ನೀಡಲು ಸರ್ಕಾರ ಸಿದ್ಧವಿದೆ ಎಂದು ಹೇಳಿದರು.

ರಾಜ್ಯದಲ್ಲಿ 48 ಸಾವಿರ ಶಾಲೆಗಳಿವೆ. 28,900 ಶಾಲೆಗಳು ಸುಸ್ಥಿತಿಯಲ್ಲಿವೆ. 7 ಸಾವಿರ ಶಾಲೆಗಳ ದುರಸ್ತಿ ಮಾಡಬೇಕಿದೆ. ಇಂತಹ ಶಾಲೆಗಳಲ್ಲಿ ಎರಡು ಪಾಳಿಯಲ್ಲಿ ತರಗತಿಗೆ ಸೂಚಿಸಲಾಗಿದೆ. ಮಕ್ಕಳ ಸಂಖ್ಯೆ ತೀರ ಕ್ಷೀಣಿಸಿರುವ ಶಾಲೆಗಳನ್ನು ದುರಸ್ತಿ ಮಾಡುವ ಕುರಿತು ಸ್ಪಷ್ಟ ನಿರ್ಧಾರ ತೆಗೆದುಕೊಂಡಿಲ್ಲ. ಶಾಲೆಗಳ ಅಭಿವೃದ್ಧಿಗೆ ದತ್ತು ಯೋಜನೆ ಜಾರಿ ಮಾಡಲಾಗುತ್ತಿದೆ. ಅದಕ್ಕಾಗಿ 'ನನ್ನ ಶಾಲೆ ನನ್ನ ಕೊಡುಗೆ' ಆ್ಯಪ್ ರೂಪಿಸಲಾಗಿದೆ ಎಂದು ವಿವರ ನೀಡಿದರು.

ಜೆಡಿಎಸ್‌ನಿಂದ ಶಾಸಕ ಶ್ರೀನಿವಾಸ್ ದೂರ

ಪ್ರಜಾವಾಣಿ ವಾರ್ತೆ

ತುಮಕೂರು: ಗುಬ್ಬಿ ಕ್ಷೇತ್ರದ ಜೆಡಿಎಸ್ ಶಾಸಕ ಎಸ್.ಆರ್. ಶ್ರೀನಿವಾಸ್ ಪಕ್ಷದಿಂದ ನಡೆದ ಕಾರ್ಯಕ್ರಮದಿಂದ ದೂರು ಉಳಿಯುವ ಮೂಲಕ ಬಂಡಾಯ ತೋರ್ಪಡಿಸಿದ್ದು, ತಮ್ಮ ನಾಯಕರ ವಿರುದ್ಧ ತೊಡೆ ತಟ್ಟಿದ್ದಾರೆ.

ಗುಬ್ಬಿಯಲ್ಲಿ ಸೋಮವಾರ ಬಿಜೆಪಿ ಮುಖಂಡ ಬಿ.ಎಸ್. ನಾಗರಾಜ್ ಅವರ ಪಕ್ಷ ಸೇರ್ಪಡೆ ಹಾಗೂ ಪಕ್ಷದ ಕಾರ್ಯಕರ್ತರ ಸಮಾವೇಶ ಆಯೋಜಿಸಲಾಗಿತ್ತು. ಈಗಾಗಲೇ, ಜೆಡಿಎಸ್ ಮುಖಂಡ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಸಿಟ್ಟು ಪ್ರದರ್ಶಿಸಿ, ಟೀಕಾಪ್ರಹಾರ ನಡೆಸುತ್ತಿರುವ ಶ್ರೀನಿವಾಸ್ ಸಭೆಗೆ ಬರಲಿಲ್ಲ. ಅವರ ಬೆಂಬಲಿಗರೂ ಸಭೆಯಿಂದ ದೂರ ಉಳಿದರು.

ಸಭೆಯಲ್ಲಿ ಮಾತನಾಡಿದ ಎಚ್.ಡಿ. ಕುಮಾರಸ್ವಾಮಿ ಅವರು, ಶ್ರೀನಿವಾಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಕ್ಷೇತ್ರದ ಶಾಸಕರಾಗಿದ್ದರೂ ಕೇವಲ ಕಾಟಾಚಾರಕ್ಕೆ ಮಾತ್ರ ನನ್ನನ್ನು ಸಮಾರಂಭಕ್ಕೆ ಕರೆದಿದ್ದಾರೆ. ಉದ್ದೇಶಪೂರ್ವಕವಾಗಿ ನನ್ನನ್ನು ಅಪಮಾನಿಸಲಾಗಿದೆ. ಆದ್ದರಿಂದ ನಾನು ಸಮಾವೇಶದಲ್ಲಿ ಭಾಗವಹಿಸಿಲ್ಲ.

ಎಸ್.ಆರ್. ಶ್ರೀನಿವಾಸ್, ಶಾಸಕ, ಗುಬ್ಬಿ

'ಕಳೆದ ಲೋಕಸಭೆ ಚುನಾವಣೆಯಲ್ಲಿ ಎಚ್.ಡಿ. ದೇವೇಗೌಡ ಅವರನ್ನು ಸೋಲಿಸಲು ಕಾಂಗ್ರೆಸ್ ನಾಯಕರ ಜತೆ ಸೇರಿಕೊಂಡು ಚಿತಾವಣೆ ಮಾಡಿದರು. ಕಾಂಗ್ರೆಸ್– ಜೆಡಿಎಸ್ ಹೊಂದಾಣಿಕೆಯಿಂದ ಗೌಡರು ಸ್ಪರ್ಧಿಸಿದ್ದರೆ, ಆ ಪಕ್ಷದ ಕೆಲವರು ಸೋಲಿಸಲು ಪಿತೂರಿ ನಡೆಸಿದ್ದರು. ಅಂತಹವರ ಜತೆ ಸೇರಿಕೊಂಡು ಸೋಲಿಸಿದರು. ಕಾಂಗ್ರೆಸ್ ಮುಖಂಡರ ಮನೆಯಲ್ಲಿ ಮಧ್ಯರಾತ್ರಿ ಕುಳಿತು ಏನೆಲ್ಲ ಮಸಲತ್ತು ಮಾಡಿದರು ಎಂಬುದು ಗೊತ್ತಿದೆ' ಎಂದು ಆರೋಪಿಸಿದರು.

ತಮ್ಮ ಆರೋಗ್ಯ ಸ್ಥಿತಿ, ಶಾಸಕರ ನಡವಳಿಕೆ, ಪಕ್ಷ ಮುಗಿಸಲು ಕಾಂಗ್ರೆಸಿಗರು ನಡೆಸಿದ ಸಂಚಿನ ಬಗ್ಗೆ ಪ್ರಸ್ತಾಪಿಸುತ್ತಲೇ ಕಣ್ಣೀರಾದರು. ವಿಧಾನ ಪರಿಷತ್ ಸದಸ್ಯ ಬೆಮಲ್ ಕಾಂತರಾಜು ವಿರುದ್ಧವೂ ಗುಡುಗಿದರು.

ದೂರ ಉಳಿದ ಗೌಡರು: ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ತುಮಕೂರಿಗೆ ಬಂದರೂ ಗುಬ್ಬಿಯಲ್ಲಿ ನಡೆದ ಸಮಾವೇಶದಲ್ಲಿ ಭಾಗವಹಿಸಲಿಲ್ಲ. ಚುನಾವಣೆ ಪ್ರಚಾರಕ್ಕೆ ತೆರಳುವ ಸಲುವಾಗಿ ಹೆಲಿಕಾಪ್ಟರ್‌ನಲ್ಲಿ ನಗರಕ್ಕೆ ಆಗಮಿಸಿ, ಇಲ್ಲಿಂದ ಎಚ್.ಡಿ. ಕುಮಾರಸ್ವಾಮಿ ಅವರನ್ನು ಜತೆಯಲ್ಲಿ ಕರೆದುಕೊಂಡು ಹೋದರು.

ನಗರದ ವಿಶ್ವವಿದ್ಯಾನಿಲಯ ಅತಿಥಿ ಗೃಹದಲ್ಲಿ ಕೆಲ ಸಮಯ ವಿಶ್ರಾಂತಿ ಪಡೆದರು. ಗುಬ್ಬಿ ಸಮಾವೇಶ ಮುಗಿಸಿಕೊಂಡು ಕುಮಾರಸ್ವಾಮಿ ಬರುತ್ತಿದ್ದಂತೆ ಹೆಲಿಕಾಪ್ಟರ್‌ನಲ್ಲಿ ತೆರಳಿದರು.

ನಮ್ಮ ಸರ್ಕಾರ ಬಂದಾಗ 10 ಕೆ.ಜಿ ಅಕ್ಕಿ ಕೊಡ್ತೀವಿ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಸಿಂದಗಿ: 'ಬಡವರ ಹೊಟ್ಟೆ ತುಂಬಿಸಲು ಕಾಂಗ್ರೆಸ್ ಸರ್ಕಾರ ತಲಾ 7 ಕೆ.ಜಿ ಅಕ್ಕಿ ನೀಡುತ್ತಿರುವುದನ್ನು ಈಗಿನ ಬಿಜೆಪಿ ಸರ್ಕಾರ 5 ಕೆ.ಜಿ ಗೆ ಇಳಿಸಿದೆ. ಭವಿಷ್ಯದಲ್ಲಿ ನಮ್ಮ ಸರ್ಕಾರ ಬಂದಾಗ 10 ಕೆ.ಜಿ ಅಕ್ಕಿ ನೀಡಲಾಗುವುದು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಭರವಸೆ ನೀಡಿದರು.

ಇಲ್ಲಿಯ ಆಶೀರ್ವಾದ ಕಲ್ಯಾಣ ಮಂಟಪದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಬಂಜಾರ ಸಮುದಾಯದ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

'ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಿ ಉಳುವವನೇ ಭೂ ಒಡೆಯ ಎಂಬ ಕಾಯ್ದೆ ಅನುಷ್ಠಾನಕ್ಕೆ ತಂದು ಸಾಮಾಜಿಕ ನ್ಯಾಯ ಒದಗಿಸಿಕೊಟ್ಟಿರುವುದು ಕಾಂಗ್ರೆಸ್, ಬಂಜಾರ ಸಮುದಾಯವನ್ನು ಪ.ಜಾ. ಸೇರ್ಪಡೆ ಮಾಡಿದ್ದು ಕಾಂಗ್ರೆಸ್' ಎಂದರು.

'ಬಿಜೆಪಿಯಿಂದ ಹಣ ಹಂಚಿಕೆ'

ಪ್ರಜಾವಾಣಿ ವಾರ್ತೆ

ಸುರ್ಜೇವಾಲ

ಬೆಂಗಳೂರು: 'ಉಪ ಚುನಾವಣೆ ನಡೆಯುತ್ತಿರುವ ಹಾನಗಲ್ ಮತ್ತು ಸಿಂದಗಿ ಎರಡೂ ಕ್ಷೇತ್ರಗಳಲ್ಲಿ ಹಣ ಹಂಚುತ್ತಿರುವ ಬಿಜೆಪಿಗೆ ಮತದಾರರು ತಕ್ಕ ಉತ್ತರ ಕೊಡಲಿದ್ದಾರೆ' ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಎರಡೂ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಇತಿಹಾಸ ಸೃಷ್ಟಿಸಲಿದೆ. ಭ್ರಷ್ಟ ಸರ್ಕಾರವನ್ನು ದೂರ ಸರಿಸಲು ಕಾಂಗ್ರೆಸ್‌ಗೆ ಮತ ಹಾಕಲಿದ್ದಾರೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಕಾಂಗ್ರೆಸ್ - ಜೆಡಿಎಸ್ ಒಳ ಒಪ್ಪಂದ ಮಾಡಿಕೊಂಡಿವೆ' ಎಂಬ ಮುಖ್ಯಮಂತ್ರಿ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, 'ತೆರೆಮರೆಯಲ್ಲಿ ಯಾರು ಯಾರ ಜತೆ ಒಪ್ಪಂದ ಮಾಡಿಕೊಂಡಿದ್ದಾರೆಂದು ಎಲ್ಲರಿಗೂ ಗೊತ್ತಿದೆ. ಬಿಜೆಪಿ ಬೆಂಬಲಕ್ಕೆ ಯಾವ ಪಕ್ಷ ಇದೆ ಎಂದೂ ಗೊತ್ತಿದೆ' ಎಂದರು.

ಅಧಿಕಾರ ದುರುಪಯೋಗ: 'ಹಾನಗಲ್ ಮತ್ತು ಸಿಂದಗಿ ಉಪ ಚುನಾವಣೆಯಲ್ಲಿ ಅಧಿಕಾರ ದುರುಪಯೋಗವಾಗುತ್ತಿದೆ. ಜನ ಪ್ರಜ್ಞಾವಂತರಿದ್ದು, ಇದನ್ನು ಗಮನಿಸುತ್ತಿದ್ದಾರೆ. ಎರಡೂ ಕ್ಷೇತ್ರಗಳಲ್ಲಿ ನಮ್ಮ ಅಭ್ಯರ್ಥಿಗಳು ಗೆಲ್ಲಲಿದ್ದಾರೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

'ಈಗಾಗಲೇ ವಿಧಾನಸೌಧಕ್ಕೆ ಬೀಗ ಹಾಕಲಾಗಿದೆ. ವಿಧಾನಸೌಧದಲ್ಲಿ ಒಬ್ಬ ಮಂತ್ರಿಯೂ ಇಲ್ಲ. ರಾಜ್ಯದ ಜನರ ಕಷ್ಟದ ಬಗ್ಗೆ ಚರ್ಚೆ ಇಲ್ಲ. ಅವರ ಬಗ್ಗೆ ಕಾಳಜಿಯೂ ಇಲ್ಲ. ಅಷ್ಟರಮಟ್ಟಿಗೆ ಬಿಜೆಪಿ ಸರ್ಕಾರಕ್ಕೆ ಉಪಚುನಾವಣೆ ಮುಖ್ಯವಾಗಿದೆ' ಎಂದು ಟೀಕಿಸಿದರು.

'ಬೊಮ್ಮಾಯಿ ಕ್ಷೇತ್ರದಲ್ಲೇ ಕುಳಿತಿದ್ದಾರೆ ಎಂದರೆ ಎಷ್ಟರ ಮಟ್ಟಿಗೆ ಅವರಿಗೆ ಭಯವಿದೆ ಎಂಬುದು ಸ್ಪಷ್ಟವಾಗುತ್ತಿದೆ' ಎಂದೂ ಹೇಳಿದರು.

ಕಾಂಗ್ರೆಸ್‌ನ ದುಡ್ಡಿನ ಗೋಣಿಚೀಲ ಮತದಾರರು ವಾಪಸ್ ಕಳಿಸ್ತಾರೆ

ನಾನೂ ಕುರಿ ಕಾಯ್ದವನು: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಹಾನಗಲ್: 'ಬಂಕಾಪುರದಲ್ಲಿ ಮಹಾರಾಷ್ಟ್ರದ ಬಾಳುಮಾಮಾ ಕುರಿಗಳನ್ನು ಕಾಯ್ದವನು ನಾನು. ಕುರಿಯ ಉಣ್ಣೆಯಿಂದ ತಯಾರಿಸುವ ಕಂಬಳಿ ಬಗ್ಗೆ ಗೌರವ ಹೊಂದಿದ್ದೇನೆ. ಕಂಬಳಿ ನೇಯ್ಗೆಯ ಶ್ರಮ ಅರಿತಿದ್ದೇನೆ. ಕಂಬಳಿಯನ್ನು ಮೈಮೇಲೆ ಹಾಕಿಕೊಳ್ಳಲು ಯೋಗ್ಯತೆ ಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿರುಗೇಟು ನೀಡಿದರು.

ತಾಲ್ಲೂಕಿನ ಯಳವಟ್ಟಿ, ಹುಲ್ಲತ್ತಿ, ಕರಗುದರಿ, ಬೈಚವಳ್ಳಿ ಗ್ರಾಮಗಳಲ್ಲಿ ಸೋಮವಾರ ತೆರೆದ ವಾಹನದಲ್ಲಿ ಅವರು ಬಿಜೆಪಿ ಅಭ್ಯರ್ಥಿ ಪರವಾಗಿ ಚುನಾವಣಾ ಪ್ರಚಾರ ಕೈಗೊಂಡು ಮಾತನಾಡಿದರು.

ಹಾನಗಲ್ ತಾಲ್ಲೂಕಿನ ಯಳವಟ್ಟಿ ಗ್ರಾಮದಲ್ಲಿ ಸೋಮವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದರು. ಶಾಸಕ ಅಮೃತ ದೇಸಾಯಿ, ಕಾರ್ಮಿಕ ಇಲಾಖೆ ಸಚಿವ ಶಿವರಾಮ ಹೆಬ್ಬಾರ, ಸಂಸದ ಶಿವಕುಮಾರ ಉದಾಸಿ ಇದ್ದಾರೆ

'ಎಲ್ಲ ಸಮಾಜದ ಜೊತೆಯಲ್ಲಿ ಸಾಮರಸ್ಯದಿಂದ ಬಾಳುವವರು ನಾವು. ಜಾತಿಗಳ ಮಧ್ಯೆ ವಿಷಬೀಜ ಬಿತ್ತಿ ರಾಜಕೀಯ ಲಾಭ ಮಾಡಿಕೊಳ್ಳುವುದು ಕಾಂಗ್ರೆಸ್ ಸಿದ್ಧಾಂತ' ಎಂದು ಅವರು ಟೀಕಿಸಿದರು.

'ಇಲ್ಲಿನ ಉಪ ಚುನಾವಣೆಯಲ್ಲಿ ಕಾಂಗ್ರೆಸ್ಸಿಗರ 'ಖತಲ್ ರಾತ್ರಿ' ಆಟ ನಡೆಯಬಾರದು. ಡಿ.ಕೆ.ಶಿವಕುಮಾರ ತಂದಿರುವ ದುಡ್ಡಿನ ಗೋಣಿಚೀಲವನ್ನು ಬೆಂಗಳೂರಿಗೇ ವಾಪಸ್ ಕಳಿಸಬೇಕು' ಎಂದು ಹೇಳಿದರು.

'ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ ಚುನಾವಣೆ ಸಮಯದಲ್ಲಿ ಬಂದು ಹೇಳಿ ಹೋಗುತ್ತಾರೆ. ಬಳಿಕ ನಿಮ್ಮ ಕೈಗೆ ಸಿಗಲ್ಲ. ಆದರೆ ನಾನು ಇಲ್ಲಿಯವನು. ಚುನಾವಣೆ ಬಳಿಕವೂ ನಿಮಗೆ ಸಿಗುತ್ತೇನೆ. ಹೀಗಾಗಿ ಬಿಜೆಪಿ ಬೆಂಬಲಿಸಬೇಕು' ಎಂದು ಮನವಿ ಮಾಡಿದರು.

ಕಾರ್ಮಿಕ ಇಲಾಖೆ ಸಚಿವ ಶಿವರಾಮ ಹೆಬ್ಬಾರ, ಸಂಸದ ಶಿವಕುಮಾರ ಉದಾಸಿ, ಶಾಸಕ ಅಮೃತ ದೇಸಾಯಿ, ಎಸ್.ವಿ.ಸಂಕನೂರ ಇದ್ದರು.

'ಸಿದ್ದರಾಮಯ್ಯ, ಕುಮಾರಸ್ವಾಮಿ ಯಾವ ಸೀಮೆ ನಾಯಕರು?'

ಪ್ರಜಾವಾಣಿ ವಾರ್ತೆ

ವಿ.ಶ್ರೀನಿವಾಸ ಪ್ರಸಾದ್

ಮೈಸೂರು: 'ಹೀನಾಯವಾಗಿ ತನ್ನನ್ನು ಸೋಲಿಸಿದವನನ್ನೇ (ಜಿ.ಟಿ.ದೇವೇಗೌಡ) ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಕರೆತಂದು ನಾಯಕನನ್ನಾಗಿ ಮಾಡಲು ಮುಂದಾಗಿದ್ದಾನೆ ಸಿದ್ದರಾಮಯ್ಯ; ಸಿಂದಗಿ, ಹಾನಗಲ್‌ನಲ್ಲಿ ಪ್ರಚಾರ ನಡೆಸೋದು ಬಿಟ್ಟು, ಮೈಸೂರಿನ ರಮ್ಮನಹಳ್ಳಿಯಲ್ಲಿ ರೋಡ್ ಶೋ ನಡೆಸುತ್ತಿದ್ದಾನೆ ಕುಮಾರಸ್ವಾಮಿ, ಇವರ‍್ಯಾವ ಸೀಮೆಯ ನಾಯಕರು' ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ವಾಗ್ದಾಳಿ ನಡೆಸಿದರು.

'ಉಪ ಚುನಾವಣೆ ಕಣದಲ್ಲಿ ಸಿದ್ದರಾಮಯ್ಯ ಆಡುತ್ತಿರುವ ಮಾತುಗಳನ್ನು ಕೇಳಿದರೆ ಅಸಹ್ಯವಾಗುತ್ತೆ. ಆತ ಮುಖ್ಯಮಂತ್ರಿಯಿದ್ದಾಗ, ನಂಜನಗೂಡು, ಗುಂಡ್ಲುಪೇಟೆಯ ಉಪ ಚುನಾವಣೆಯಲ್ಲಿ ಬೂತ್ ಬಳಿಯೇ ಪೊಲೀಸರ ಮುಂದೆಯೇ ದುಡ್ಡು ಹಂಚಿದ್ದನ್ನು ನಾನಿನ್ನೂ ಮರೆತಿಲ್ಲ' ಎಂದು ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಕಿಡಿಕಾರಿದರು.

'ನಂಜನಗೂಡಿನಲ್ಲಿ ಕಾಂಗ್ರೆಸ್‌ಗೆ ಅಭ್ಯರ್ಥಿಯೇ ಇರಲಿಲ್ಲ. ಜೆಡಿಎಸ್‌ನವರ ಜೊತೆಗೂಡಿ ಆ ಪಕ್ಷದವರನ್ನೇ ಕಣಕ್ಕಿಳಿಸಿದರು. ಜೆಡಿಎಸ್‌ನವರು ಕಾಂಗ್ರೆಸ್‌ಗೆ ಸಹಕರಿಸಲು ಅಭ್ಯರ್ಥಿಯನ್ನೇ ಕಣಕ್ಕಿಳಿಸಲಿಲ್ಲ. ಆ ಚುನಾವಣೆ ನನ್ನ ಬದುಕಿನುದ್ದಕ್ಕೂ ಚುಚ್ಚುತ್ತಿದೆ' ಎಂದು ಅವರು ಹರಿಹಾಯ್ದರು.

'ಹತಾಶೆಯಿಂದ ಸಿದ್ದರಾಮಯ್ಯ ಏನೇನೋ ಮಾತನಾಡುತ್ತಿದ್ದಾನೆ. ಉಪಕಾರ ಸ್ಮರಣೆಯಿಲ್ಲದವ. ನನ್ನ ಮನೆ ಬಾಗಿಲಿಗೆ ಬಂದಿದ್ದನ್ನು ಎಲ್ಲೂ ಹೇಳಿಕೊಳ್ಳದವ' ಎಂದುಕಿಡಿಕಾರಿದರು.

'ಜೆಡಿಎಸ್ ಪಕ್ಷವಲ್ಲ, ಕಂಪನಿ'

'ಜೆಡಿಎಸ್ ಪಕ್ಷವಲ್ಲ, ಕಂಪನಿ. ನಿಖಿಲ್, ಪ್ರಜ್ವಲ್, ಅನಿತಾ, ಭವಾನಿ ಸಾಕಲ್ವಾ. ಎಂದಾದರೂ ಎರಡನೇ ಸ್ಥಾನಕ್ಕೆ ಬಂದು ಮುಖ್ಯಮಂತ್ರಿಯಾಗಿದ್ದೀರಾ?' ಎಂದು ಕುಮಾರಸ್ವಾಮಿ ವಿರುದ್ಧವೂ ಶ್ರೀನಿವಾಸಪ್ರಸಾದ್ ವಾಗ್ದಾಳಿ ನಡೆಸಿದರು.

ತಿಪಟೂರು: ಆರ್‌ಎಸ್‌ಎಸ್ ಪಥ ಸಂಚಲನದಲ್ಲಿ ಪೌರಾಯುಕ್ತ

ಪ್ರಜಾವಾಣಿ ವಾರ್ತೆ

ತಿಪಟೂರು: ನಗರದಲ್ಲಿ ನಡೆದ ಆರ್‌ಎಸ್‌ಎಸ್ ಪಥ ಸಂಚಲನದಲ್ಲಿ ನಗರಸಭೆ ಪೌರಾಯುಕ್ತ ಉಮಾಕಾಂತ್ ಭಾಗವಹಿಸಿದ್ದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ನಗರದ ಗುರುಕುಲ ಕಾಲೇಜು ಆವರಣದಲ್ಲಿ ಆರ್‌ಎಸ್‌ಎಸ್ ಪ್ರಾಥಮಿಕ ಶಿಕ್ಷಾ ವರ್ಗ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಂಗವಾಗಿ ಶನಿವಾರ ಸಂಜೆ ನಡೆದ ಪಥ ಸಂಚಲನದಲ್ಲಿ ಆರ್‌ಎಸ್‌ಎಸ್ ಗಣವೇಷಧಾರಿಯಾಗಿ ಭಾಗವಹಿಸಿದ್ದಾರೆ. ಮೆರವಣಿಗೆಯಲ್ಲಿ ಕಾರ್ಯಕರ್ತರ ಜತೆ ಹೆಜ್ಜೆ ಹಾಕಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಹಲವರು ಈ ಚಿತ್ರವನ್ನು ಹಂಚಿಕೊಂಡಿದ್ದು, ಪರ- ವಿರೋಧ ಚರ್ಚೆಗಳು ನಡೆಯುತ್ತಿವೆ. ಸರ್ಕಾರಿ ಅಧಿಕಾರಿಯಾಗಿ ಇದ್ದುಕೊಂಡು ಒಂದು ಸಂಘಟನೆ ನಡೆಸುವ ಕಾರ್ಯಕ್ರಮದಲ್ಲಿ ಸಾರ್ವಜನಿಕವಾಗಿ ಪಾಲ್ಗೊಂಡಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಆರ್‌ಎಸ್‌ಎಸ್ ಪಥ ಸಂಚಲನದಲ್ಲಿ ಭಾಗವಹಿಸಿದ್ದ ನಗರಸಭೆ ಪೌರಾಯುಕ್ತ ಉಮಾಕಾಂತ್ (ಎಡಗಡೆ ಇರುವವರು)

ಈ ಹಿಂದೆ ತಾಲ್ಲೂಕಿನ ಶಾಸಕರು, ಮಂತ್ರಿ ಆದ ವೇಳೆ ನಗರದ ಕೆಂಪಮ್ಮದೇವಿ ದೇಗುಲದಲ್ಲಿ ಮಡೆಸ್ನಾನ ಮಾಡಿ ಪೂಜಾ ಕೈಂಕರ್ಯದಲ್ಲಿ ತೊಡಗಿದ್ದರು. ಆ ವೇಳೆಯೂ ನಾಗರಿಕರಿಂದ ಭಾರಿ ಆಕ್ಷೇಪ ವ್ಯಕ್ತವಾಗಿತ್ತು.

'ಸರ್ಕಾರಿ ನೌಕರರು ದೇಶದ್ರೋಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರದ ಸಂಘಟನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸಬಹುದು. 30 ವರ್ಷಗಳಿಂದ ಆರ್‌ಎಸ್‌ಎಸ್ ಕಾರ್ಯಕರ್ತನಾಗಿದ್ದು, ಪಥ ಸಂಚಲನದಲ್ಲಿ ಭಾಗವಹಿಸಿದ್ದೇನೆ' ಎಂದು ಉಮಾಕಾಂತ್ ಸ್ಪಷ್ಟಪಡಿಸಿದರು.

ಪೌರಾಯುಕ್ತರ ಧೋರಣೆ ಖಂಡಿಸಿ ಕಾಂಗ್ರೆಸ್ ತಾಲ್ಲೂಕು ಘಟಕದಿಂದ ಪ್ರತಿಭಟನೆ ನಡೆಸಿ ಶಿಸ್ತುಕ್ರಮಕ್ಕೆ ಆಗ್ರಹಿಸಿ ಉಪ ವಿಭಾಗಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

'ಅರ್ಚಕ ವೃತ್ತಿ ಬ್ರಾಹ್ಮಣರಿಗೆ ಮಾತ್ರ ಸೀಮಿತ ಎಂದಿಲ್ಲ'

ಬೆಂಗಳೂರು: 'ಅರ್ಚಕ ವೃತ್ತಿಯನ್ನು ಬ್ರಾಹ್ಮಣರಿಗೆ ಮಾತ್ರ ಸೀಮಿತಗೊಳಿಸಿ ಕಾನೂನು ರೂಪಿಸಬೇಕು ಎಂಬ ಯೋಚನೆಯೂ ನಮಗೆ ಬರಲು ಸಾಧ್ಯವಿಲ್ಲ' ಎಂದು ಉಡುಪಿಯ ಪೇಜಾವರ ಅಧೋಕ್ಷಜ ಮಠದ ವಿಶ್ವ ಪ್ರಸನ್ನತೀರ್ಥ ಸ್ವಾಮೀಜಿ ತಿಳಿಸಿದ್ದಾರೆ.

'ಅಂತಹದ್ದೊಂದು ಕಾನೂನು ರೂಪಿಸಬೇಕೆಂದು ಸರ್ಕಾರಕ್ಕೆ ನಾನು ಆಗ್ರಹಿಸಿರುವುದಾಗಿ ವರದಿಯಾಗಿದೆ ಎಂದು 'ಪ್ರಜಾವಾಣಿ' ಸಂಪಾದಕೀಯದಲ್ಲಿ ಉಲ್ಲೇಖಿಸಲಾಗಿದೆ. ಆ ರೀತಿಯ ವರದಿ ಪತ್ರಿಕೆಗಳಲ್ಲಿ ವರದಿಯಾಗಿದ್ದರೆ ಅದಕ್ಕೆ ನಾವು ಹೊಣೆಗಾರರಲ್ಲ' ಎಂದೂ ಅವರು ಹೇಳಿದ್ದಾರೆ.

ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ

'ಹಿಂದೂ ಸಮಾಜದ ಅಖಂಡತೆಗಾಗಿ ಶ್ರಮಿಸುತ್ತಿರುವ ನಮ್ಮ ಮನೋಬಲ ಕುಗ್ಗಿಸುವ ಉದ್ದೇಶದಿಂದ, ಬ್ರಾಹ್ಮಣೇತರರೊಳಗೆ ಒಡಕು ಸೃಷ್ಟಿಸಲು, ಬ್ರಾಹ್ಮಣೇತರರನ್ನು ನಮ್ಮ ವಿರುದ್ಧ ಎತ್ತಿ ಕಟ್ಟಿ ಛೂ ಬಿಡುವ ಪ್ರಯತ್ನ ಈ ವರದಿಗಳ ಮೂಲಕ ನಡೆದಿದೆ. ಇದರಿಂದ ನೊಂದಿದ್ದೇವೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

₹ 6 ಲಕ್ಷಕ್ಕೆ ಒಪ್ಪಂದ: 9 ಜನರ ಬಂಧನ

ಕಲಬುರಗಿ: ಭಾನುವಾರ ಇಲ್ಲಿ ನಡೆದ ಪೊಲೀಸ್ ಕಾನ್‌ಸ್ಟೆಬಲ್ ಲಿಖಿತ ಪರೀಕ್ಷೆಯಲ್ಲಿ ಪಾಸ್ ಮಾಡಿಸುವುದಾಗಿ ನಂಬಿಸಿ ಅಕ್ರಮ ನಡೆಸಲು ಮುಂದಾದ ಕೋಚಿಂಗ್ ಸಂಸ್ಥೆಯ ಮುಖ್ಯಸ್ಥ ಹಾಗೂ ಆತನ ಸಹಚರರು ಮತ್ತು ಅಭ್ಯರ್ಥಿಗಳು ಸೇರಿದಂತೆ 9 ಜನರನ್ನು ಇಲ್ಲಿನ ಸೈಬರ್, ಆರ್ಥಿಕ ಅಪರಾಧ ಹಾಗೂ ಮಾದಕವಸ್ತು ತಡೆ (ಸಿಇಎನ್) ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೋಚಿಂಗ್ ಸೆಂಟರ್ ಮಾಲೀಕ ದೇವಿಂದ್ರಪ್ಪ ಆತನ ಏಜೆಂಟರು ತಲಾ ₹6 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು. 'ಇದಕ್ಕೆ ಅಭ್ಯರ್ಥಿಗಳು ಒಪ್ಪಿದ್ದರು' ಎಂದು ಪೊಲೀಸ್ ಕಮಿಷನರ್ ಡಾ. ವೈ.ಎಸ್. ರವಿಕುಮಾರ್ ತಿಳಿಸಿದ್ದಾರೆ.

ಬೇರೆ ರನ್‌ವೇಯಲ್ಲಿ ಲ್ಯಾಂಡ್: ತಪ್ಪಿದ ದುರಂತ

ಬೆಳಗಾವಿ: ಹೈದರಾಬಾದ್‌ನಿಂದ ಇಲ್ಲಿನ ಸಾಂಬ್ರಾ ವಿಮಾನನಿಲ್ದಾಣಕ್ಕೆ ಬಂದ ವಿಮಾನವು ನಿರ್ದೇಶನ ನೀಡಿದ್ದಕ್ಕಿಂತ ಬೇರೆ ರನ್‌ವೇಯಲ್ಲಿ ಲ್ಯಾಂಡ್ ಆಗಿ ಭಾನುವಾರ ಬೆಳಿಗ್ಗೆ ಆತಂಕ ಸೃಷ್ಟಿಸಿತು.

ಸ್ಪೈಸ್ ಜೆಟ್ ಕಂಪನಿಯ ವಿಮಾನವು ರನ್‌ವೇಯಲ್ಲಿನ ನಿಗದಿತ ಸ್ಥಳದಲ್ಲಿ ಲ್ಯಾಂಡ್ ಆಗ ಎಡವಟ್ಟಾಗಿದೆ. ಬೆಳಿಗ್ಗೆ 11.21ಕ್ಕೆ ಇಳಿದ ವಿಮಾನ (ಡಿಎಎಸ್‌ಜಿ8 ಕ್ಯೂ400) ಮಧ್ಯಾಹ್ನ 12.06ಕ್ಕೆ ಸುರಕ್ಷಿತವಾಗಿ ನಿರ್ಗಮಿಸಿದೆ.

'ನಿಲ್ದಾಣದ ಎಟಿಸಿ (ಏರ್ ಟ್ರಾಫಿಕ್ ಕಂಟ್ರೋಲ್) ವಿಭಾಗವು ಪೈಲಟ್‌ಗಳಿಗೆ ರನ್‌ವೇ 26ರ ರನ್‌ವೇಯಲ್ಲಿ ಇಳಿಸುವಂತೆ ನಿರ್ದೇಶನ ನೀಡಿತ್ತು. ಆದರೆ, ಪೈಲಟ್‌ಗಳು ರನ್‌ವೇ 08ರಲ್ಲಿ ಇಳಿಸಿದ್ದಾರೆ. ಇದರಿಂದ ಗೊಂದಲ ಉಂಟಾಗಿದೆ. ಈ ಬಗ್ಗೆ ವಿಮಾನ ಅಪಘಾತ ತನಿಖಾ ಸಂಸ್ಥೆಯು ತನಿಖೆ ಆರಂಭಿಸಿದೆ. ಪೈಲಟ್‌ಗಳನ್ನು ಅಮಾನತಿನಲ್ಲಿಡಲಾಗಿದೆ. ಯಾವುದೇ ದುರಂತ ಸಂಭವಿಸಿಲ್ಲ' ಎಂದು ಮೂಲಗಳು ಮಾಹಿತಿ ನೀಡಿವೆ.

SHRI SHIDDESHWAR CO-OP. BANK LTD.,

ADMINISTRATIVE OFFICE, S.S. ROAD VIJAYAPUR-586101 (KARNATAKA)
PHONE NO.: 08352-251272,250069, Email: shiddeshwarbank@gmail.com
web:www.shiddeshwarbank.com

APPOINTMENT

NOTIFICATION

APPLICATIONS ARE INVITED FROM INDIAN CITIZENS FOR THE POST OF MANAGING DIRECTOR ON A CONTRACT BASIS

1. Age: Above 35 years, and below 55 Years.
2. Post Required: 1 (One) Post
3. Qualification: As per fit and proper Criteria Prescribed by Reserve Bank of India No.RBI/2021-22/60DOR.GOV.REC.25/12.10.000/2021-22, Dated: 25-06-2021
4. Eligibility: The person shall be a graduate, preferably, with
   1) Qualification in banking/Co-operative banking such as CAIIB/Diploma in Banking and Finance/Diploma in Co-Operative Business Management or equivalent qualification or
   2) Chartered/Cost Accountant/MBA(Finance); or
   3) Post graduation in any discipline.
   4) The person should have a combined experience of at least eight years at the middle/senior management level in the banking sector (including the experience gained in the concerned UCB) or non – banking finance companies engaged in lending (loan companies) and asset financing.
   5) Knowledge of Kannada Language speaking & writing
   6) The tenure of MD shall not be for a period more than five years at a time subject to a minimum period of three years at the time of first appointment.
5. Salary: Shall be commensurate with experience and qualification. However the candidate may indicate expected salary.
6. Submission of Application : Application should be submitted on white paper along with recent passport size photo and necessary documents of Qualification and experience in duplicate(self attested) to Chairman Of NRC Shri. Shiddeshwar Co-Operative Bank Ltd.,Administrative Office, Shri. Shiddeshwar Road,Vijayapur-586101 Karnataka.
7. Last Date of Received application: Application should reach by us on or before 10.11.2021

General Instructions :

1) Before applying, the candidate should ensure that he/she fulfills the eligibility criteria of RBI and other norms mentioned in this advertisement, Bank reserves the right to accept or reject the application at any stage of the recruitment process without assigning any reason thereof. 2) Candidates shall attend the interview at their own cost. 3) Bank reserves the right to alter, revise, add or delete any of the conditions mentioned above. 4) Decision of the Bank in all matters regarding eligibility of the candidate, the stages at which such scrutiny of eligibility is to be the undertaken, the documents to be produced for the purpose of interview, selection and any other matters relating to recruitment will be final and binding on the candidate. The decision of Reserve Bank of India will be final, for the final Selection of candidate for the appointment of MD, among the short listed candidates by the NRC and BOD. No correspondence or personal enquires would be entertained by the bank in this regard. 5) For any clarification please contact on Mobile No.9379996660

Date:25.10.2021 Sd/- Chairman

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು, ಈ ಮೊದಲು ಮೆ. ಸ್ಟೆರ್ಲಿಂಗ್ ಅರ್ಬನ್ ಇನ್ಫ್ರಾಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿದ್ದ ಈಗಿನ ಮೆ. ಪ್ರೆಸ್ಟೀಜ್ ಸ್ಟೆರ್ಲಿಂಗ್ ಇನ್ಫ್ರಾಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ("ಮಾಲಿಕರು") ಇವರಿಂದ, ಅಮಾನಿ ಬೆಳ್ಳಂದೂರು ಖಾನೆ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು ವಿಳಾಸದಲ್ಲಿ ಸ್ಥಿತಗೊಂಡಿರುವ, ಇಲ್ಲಿನ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಐಟಂ ನಂ. 1 ರಿಂದ 78 ರವರೆಗಿನ ("ಷೆಡ್ಯೂಲ್ ಪ್ರಾಪರ್ಟಿ") ಮಿಶ್ರ ಪರಿವರ್ತಿತ ಜಮೀನುಗಳು ಮತ್ತು ಅವುಗಳ ಎಲ್ಲಾ ಭೂಭಾಗಗಳನ್ನು ಪರಿಶೋಧಿಸಲು/ಖರೀದಿಸಲು ಉತ್ಸುಕರಾಗಿದ್ದಾರೆ.

ಸದರಿ ಸ್ವತ್ತಿಗೆ ಅಥವಾ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಾಗಲಿ ಯಾವುದೇ ಸ್ವರೂಪದ ಯಾವುದೇ ಹಕ್ಕು, ಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮುಗಳಿದ್ದಲ್ಲಿ ಅಥವಾ ಷೆಡ್ಯೂಲ್ ಸ್ವತ್ತಿಗೆ ಪ್ರತಿಯಾಗಿ ಅಥವಾ ಸ್ವತ್ತಿನ ದಾಖಲಾತಿಗಳಿಗೆ ಸಂಬಂಧಿಸಿದಂತೆ ಅಥವಾ ಮಾಲೀಕರ ವಿರುದ್ಧ ಯಾವುದೇ ರೀತಿಯ ಕ್ಲೇಮ್ ಅಥವಾ ನಮ್ಮ ಕಕ್ಷಿದಾರರೊಂದಿಗಿನ ಈ ವ್ಯವಹಾರದ ಬಗ್ಗೆ ಯಾವುದೇ ಆಕ್ಷೇಪಣೆಗಳನ್ನು ಹೊಂದಿದ್ದರೆ, ಅಂತಹವರು ಈ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ **ಹದಿನೈದು ದಿನಗಳೊಳಗೆ,** ಈ ಕೆಳಗೆ ಸಹಿ ಹಾಕಿರುವವರಿಗೆ ತಮ್ಮ ವಿರೋಧದ ಹಿನ್ನಲೆಯ ಜೊತೆಗೆ ಅಗತ್ಯ ದಾಖಲಾತಿಗಳ ಸಮೇತ ಷೆಡ್ಯೂಲ್ ಸ್ವತ್ತಿಗೆ ಅಥವಾ ಷೆಡ್ಯೂಲ್ ಸ್ವತ್ತಿನ ಭಾಗಕ್ಕೆ ಸಂಬಂಧಿಸಿದಂತೆ ತಮ್ಮ ಹಕ್ಕುಗಳ ಆಕ್ಷೇಪಣೆಗಳನ್ನು ಕಡ್ಡಾಯವಾಗಿ ಸಲ್ಲಿಸುವುದು, ಇಲ್ಲವಾದಲ್ಲಿ ನಿಗದಿತ ಅವಧಿಯ ನಂತರ ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಸ್ವರೂಪದ ಕ್ಲೇಮ್‌ಗಳಿಲ್ಲ ಎಂದು ಪರಿಭಾವಿಸಿ ವ್ಯವಹಾರ ಮುಂದುವರಿಸುತ್ತಾರೆ.

ಷೆಡ್ಯೂಲ್

ಅಮಾನಿ ಬೆಳ್ಳಂದೂರು ಖಾನೆ ಗ್ರಾಮ, ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು ವಿಳಾಸದಲ್ಲಿ ಸ್ಥಿತಗೊಂಡಿರುವ ಮಿಶ್ರ ಪರಿವರ್ತಿತ ಜಮೀನುಗಳ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಪ್ರತಿ ಸರ್ವೆ ನಂಬರ್ ಹಾಗೂ ಕ್ಷೇತ್ರಫಲದ ವಿವರಗಳನ್ನು ಈ ಕೆಳಗೆ ನೀಡಲಾಗಿದೆ:–

ಕ್ರಮ ಸಂಖ್ಯೆ	ಸರ್ವೆ ನಂ.	ಒಟ್ಟು ವಿಸ್ತೀರ್ಣ		ಖರಾಬ್		ವಾಸ್ತವಿಕ ವಿಸ್ತೀರ್ಣ		ಚಕ್ಕುಬಂದಿ			
		ಎಕರೆ	ಗುಂಟೆ	ಎಕರೆ	ಗುಂಟೆ	ಎಕರೆ	ಗುಂಟೆ	ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
1.	15	2	15	0	3	2	12	ಸರ್ವೆ ನಂ.14 ಮತ್ತು ನಾಲೆ;	ಸರ್ವೆ ನಂ. 16 ಮತ್ತು ನಾಲೆ;	ಸರ್ವೆ ನಂ.16;	ಸರ್ವೆ ನಂ.18;
2.	19	1	25	0	0	1	25	ಸರ್ವೆ ನಂ.20;	ಸರ್ವೆ ನಂ.17ಮತ್ತು 24;	ಸರ್ವೆ ನಂ.17 ಮತ್ತು 18;	ಸರ್ವೆ ನಂ.20 ಮತ್ತು 24;
3.	20/1	0	18	0	0	0	18	ರಾಜಕಾಲುವೆ ಮತ್ತು ಸರ್ವೆ ನಂ.46;	ಸರ್ವೆ ನಂ.19;	ಸರ್ವೆ ನಂ.18;	ಸರ್ವೆ ನಂ.20/2;
4.	20/2	0	12	0	0	0	12	ಸರ್ವೆ ನಂ.20/14 ಮತ್ತು 42;	ಸರ್ವೆ ನಂ.20/18;	ಸರ್ವೆ ನಂ.20/1;	ಸರ್ವೆ ನಂ.20/3;
5.	20/3	0	9	0	0	0	9	ರಾಜಕಾಲುವೆ ಮತ್ತು ಸರ್ವೆ ನಂ.42;	ಸರ್ವೆ ನಂ.19;	ಸರ್ವೆ ನಂ.20/2;	ಸರ್ವೆ ನಂ.20/4;
6.	20/4	0	15	0	0	0	15	ರಾಜಕಾಲುವೆ ಮತ್ತು ಸರ್ವೆ ನಂ.42;	ಸರ್ವೆ ನಂ.19;	ಸರ್ವೆ ನಂ.20/3;	ಸರ್ವೆ ನಂ.20/7;
7.	20/7	0	19	0	0	0	19	ರಾಜಕಾಲುವೆ ಮತ್ತು ಸರ್ವೆ ನಂ.42;	ಸರ್ವೆ ನಂ.19;	ಸರ್ವೆ ನಂ.20/4;	ಸರ್ವೆ ನಂ.20/8;
8.	20/8	2	7	0	2	2	5	ರಾಜಕಾಲುವೆ ಮತ್ತು ಸರ್ವೆ ನಂ.42;	ಸರ್ವೆ ನಂ.20/5, 20/6, 24 & 21;	ಸರ್ವೆ ನಂ.20/7;	ಸರ್ವೆ ನಂ.20/9;
9.	20/10	0	9	0	0	0	9	ರಾಜಕಾಲುವೆ ಮತ್ತು ಸರ್ವೆ ನಂ.42;	ಸರ್ವೆ ನಂ.22;	ಸರ್ವೆ ನಂ.20/9;	ಸರ್ವೆ ನಂ.20/11;
10.	20/11	0	9	0	0	0	9	ರಾಜಕಾಲುವೆ ಮತ್ತು ಸರ್ವೆ ನಂ.42;	ಸರ್ವೆ ನಂ.22 ಮತ್ತು 23;	ಸರ್ವೆ ನಂ.20/10;	ಸರ್ವೆ ನಂ.20/13;
11.	20/12	0	3 1/2	0	0	0	3 1/2				
12.	20/16	0	9	0	0	0	9				
13.	20/17	0	3 1/2	0	0	0	3 1/2				
14.	20/13	0	7	0	0	0	7	ರಾಜಕಾಲುವೆ ಮತ್ತು ಸರ್ವೆ ನಂ.42;	ಸರ್ವೆ ನಂ. 23;	ಸರ್ವೆ ನಂ.20/12;	ಸರ್ವೆ ನಂ.28 ಮತ್ತು 29;
15.	20/14	0	6	0	0	0	6	ಸರ್ವೆ ನಂ.46;	ಸರ್ವೆ ನಂ. 20/2;	ಸರ್ವೆ ನಂ.20/1;	ಸರ್ವೆ ನಂ.42;
16.	20/15	0	5	0	0	0	5	ರಾಜಕಾಲುವೆ ಮತ್ತು ಸರ್ವೆ ನಂ.42;	ಸರ್ವೆ ನಂ. 20/9;	ಸರ್ವೆ ನಂ.20/8;	ಸರ್ವೆ ನಂ.20/10;
17.	20/18	0	6	0	0	0	6	ಸರ್ವೆ ನಂ.20/2;	ಸರ್ವೆ ನಂ. 20/19;	ಸರ್ವೆ ನಂ.20/1;	ಸರ್ವೆ ನಂ.20/3;
18.	20/19	0	7	0	0	0	7	ಸರ್ವೆ ನಂ.20/18;	ಸರ್ವೆ ನಂ. 19;	ಸರ್ವೆ ನಂ.20/1;	ಸರ್ವೆ ನಂ.20/3;
19.	21	1	35	0	0	1	35	ಸರ್ವೆ ನಂ.20;	ಸರ್ವೆ ನಂ. 24;	ಸರ್ವೆ ನಂ.24ಮತ್ತು 20;	ಸರ್ವೆ ನಂ.22;
20.	48/1	0	35	0	0	0	35	ಸರ್ವೆ ನಂ.50 ಮತ್ತು 51;	ಸರ್ವೆ ನಂ. 47 ಮತ್ತು 9/1;	ಸರ್ವೆ ನಂ.9/1;	ಸರ್ವೆ ನಂ.48/2 3,4,5,6,7,8;
21.	48/2	0	7	0	0	0	7	ಸರ್ವೆ ನಂ.48/3;	ಸರ್ವೆ ನಂ. 46;	ಸರ್ವೆ ನಂ.47 ಮತ್ತು 48/1;	ಸರ್ವೆ ನಂ.45;
22.	48/3	0	7	0	0	0	7	ಸರ್ವೆ ನಂ.48/4;	ಸರ್ವೆ ನಂ. 48/2;	ಸರ್ವೆ ನಂ.48/1;	ಸರ್ವೆ ನಂ.45;
23.	48/4	0	8	0	0	0	8	ಸರ್ವೆ ನಂ.48/5;	ಸರ್ವೆ ನಂ. 48/3;	ಸರ್ವೆ ನಂ.48/1;	ಸರ್ವೆ ನಂ.45;
24.	42/1	00	03	00	00	00	03	ಸರ್ವೆ ನಂ.42/20;	ಸರ್ವೆ ನಂ.20/2 ಮತ್ತು 20/3;	ಸರ್ವೆ ನಂ.20/2;	ಸರ್ವೆ ನಂ.42/2;
25.	42/2	00	03	00	01	00	02	ಸರ್ವೆ ನಂ.42/21;	ಸರ್ವೆ ನಂ. 20	ಸರ್ವೆ ನಂ.42/1;	ಸರ್ವೆ ನಂ.42/3;
26.	42/4	00	06	00	03	00	03	ಸರ್ವೆ ನಂ.43;	ಸರ್ವೆ ನಂ. 20	ಸರ್ವೆ ನಂ.42/3;	ಸರ್ವೆ ನಂ.42/5;
27.	42/6	00	10	00	02	00	08	ಸರ್ವೆ ನಂ.42/5 ಮತ್ತು 42/7;	ಸರ್ವೆ ನಂ. 20	ಸರ್ವೆ ನಂ.42/5;	ಸರ್ವೆ ನಂ.20 ಮತ್ತು 42/7;
28.	42/7	00	13	00	05	00	08	ಸರ್ವೆ ನಂ.43	ಸರ್ವೆ ನಂ. 20	ಸರ್ವೆ ನಂ.42/6 ಮತ್ತು 43;	ಸರ್ವೆ ನಂ.42/8 ಮತ್ತು 42/22;
29.	42/9	00	03	00	02	00	01	ಸರ್ವೆ ನಂ.42/22 ಮತ್ತು 42/23	ಸರ್ವೆ ನಂ. 20	ಸರ್ವೆ ನಂ.42/8;	ಸರ್ವೆ ನಂ.42/10;
30.	42/10 (P)	00	02 1/2	00	00	00	2 1/2	ಸರ್ವೆ ನಂ.41	ಉಳಿದ ಭಾಗ ಸರ್ವೆ ನಂ. 42/10	ಸರ್ವೆ ನಂ.44;	ರಸ್ತೆ
31.	42/31	00	02 1/2	00	00	00	2 1/2	ಸರ್ವೆ ನಂ.41	ಸರ್ವೆ ನಂ. 42/10	ಸರ್ವೆ ನಂ.44;	ಸರ್ವೆ ನಂ. 42/13
32.	46/1	00	21	00	02	00	19	ಸರ್ವೆ ನಂ.46/4	ಸರ್ವೆ ನಂ. 20	ಸರ್ವೆ ನಂ.47/2 47/6, 47/5, 47/4	ಸರ್ವೆ ನಂ.46/2
33.	46/5	00	18	00	00	00	18	ಸರ್ವೆ ನಂ.46/6	ಸರ್ವೆ ನಂ. 46/4	ಸರ್ವೆ ನಂ.47	ಸರ್ವೆ ನಂ.45
34.	46/6	00	09	00	00	00	09	ಸರ್ವೆ ನಂ.46/7	ಸರ್ವೆ ನಂ. 46/5	ಸರ್ವೆ ನಂ.47	ಸರ್ವೆ ನಂ.45
35.	46/7	00	10	00	00	00	10	ಸರ್ವೆ ನಂ.46/8	ಸರ್ವೆ ನಂ. 46/6	ಸರ್ವೆ ನಂ.47	ಸರ್ವೆ ನಂ.45
36.	46/8	00	10	00	00	00	10	ಸರ್ವೆ ನಂ.48	ಸರ್ವೆ ನಂ. 46/7	ಸರ್ವೆ ನಂ.47	ಸರ್ವೆ ನಂ.45
37.	47/1	00	08	00	00	00	08	ಸರ್ವೆ ನಂ.48	ಸರ್ವೆ ನಂ. 47/3 ಮತ್ತು 13	ಸರ್ವೆ ನಂ.47/7 ಮತ್ತು 13	ಸರ್ವೆ ನಂ.46 ಮತ್ತು 48
38.	47/2	00	08	00	00	00	08	ಸರ್ವೆ ನಂ.47/6	ಸರ್ವೆ ನಂ. 18	ಸರ್ವೆ ನಂ.14	ಸರ್ವೆ ನಂ.46
39.	47/3	00	05	00	00	00	05	ಸರ್ವೆ ನಂ.47/1	ಸರ್ವೆ ನಂ. 47/4	ಸರ್ವೆ ನಂ.13	ಸರ್ವೆ ನಂ.46
40.	47/4	00	03	00	00	00	03	ಸರ್ವೆ ನಂ.47/3	ಸರ್ವೆ ನಂ. 47/5	ಸರ್ವೆ ನಂ.14 ಮತ್ತು 13	ಸರ್ವೆ ನಂ.46
41.	47/5	00	03	00	00	00	03	ಸರ್ವೆ ನಂ.47/4	ಸರ್ವೆ ನಂ. 47/6	ಸರ್ವೆ ನಂ.14	ಸರ್ವೆ ನಂ.46
42.	47/6	00	03	00	00	00	03	ಸರ್ವೆ ನಂ.47/5	ಸರ್ವೆ ನಂ. 47/2	ಸರ್ವೆ ನಂ.14	ಸರ್ವೆ ನಂ.46
43.	47/7	00	04 1/2	00	00	00	04 1/2	ಸರ್ವೆ ನಂ.48	ಸರ್ವೆ ನಂ. 13	ಸರ್ವೆ ನಂ.47/8	ಸರ್ವೆ ನಂ.47/1
44.	47/8	00	03 1/2	00	00	00	03 1/2	ಸರ್ವೆ ನಂ.48	ಸರ್ವೆ ನಂ. 13	ಸರ್ವೆ ನಂ.47/9	ಸರ್ವೆ ನಂ.47/7
45.	47/9	00	03	00	00	00	03	ಸರ್ವೆ ನಂ.48	ಸರ್ವೆ ನಂ. 13	ಸರ್ವೆ ನಂ.9	ಸರ್ವೆ ನಂ.47/8
46.	9/1(P)	00	32 1/2	00	00	00	32 1/2	ಸರ್ವೆ ನಂ.54/1	ಸರ್ವೆ ನಂ.11 ಮತ್ತು ಉಳಿದ ಭಾಗ ಸರ್ವೆ ನಂ.9/1	ಸರ್ವೆ ನಂ.11 ಮತ್ತು 10	ಸರ್ವೆ ನಂ. 48 ಮತ್ತು 51
47.	10(P)	00	09	00	00	00	09	ಸರ್ವೆ ನಂ. 10 ರ ಉಳಿದ ಭಾಗ	ಸರ್ವೆ ನಂ.11	ಸರ್ವೆ ನಂ. 10 ರ ಉಳಿದ ಭಾಗ	ಸರ್ವೆ ನಂ. 9
48.	16/1	2	08	00	01	2	07	ಸರ್ವೆ ನಂ. 12	ಸರ್ವೆ ನಂ. 17	ಸರ್ವೆ ನಂ. 16/1 ರ ಉಳಿದ ಭಾಗ	ಸರ್ವೆ ನಂ. 16/2 ಮತ್ತು15
49.	16/2	00	10	00	00	00	10	ಸರ್ವೆ ನಂ. 15	ಸರ್ವೆ ನಂ. 17	ಸರ್ವೆ ನಂ. 16/1	ಸರ್ವೆ ನಂ. 18
50.	17/ 1A1	00	18 1/2	00	021/2	00	16	ಸರ್ವೆ ನಂ. 17/1B1	ಸರ್ವೆ ನಂ.1ರಲ್ಲಿ ಕೆರೆ	ಸರ್ವೆ ನಂ. 3	ಸರ್ವೆ ನಂ. 17/5
51.	17/5	00	06	00	01	00	05	ಸರ್ವೆ ನಂ. 17/1B1	ಸರ್ವೆ ನಂ.1ರಲ್ಲಿ ಕೆರೆ	ಸರ್ವೆ ನಂ. 17/1A1	ಸರ್ವೆ ನಂ. 17/6
52.	17/6	00	11 1/2	00	011/2	00	10	ಸರ್ವೆ ನಂ. 17/1B1	ಸರ್ವೆ ನಂ.1ರಲ್ಲಿ ಕೆರೆ	ಸರ್ವೆ ನಂ. 17/5	ಸರ್ವೆ ನಂ. 17/1A2
53.	17/ 1A2	00	05	00	00	00	05	ಸರ್ವೆ ನಂ. 17/1B2	ಸರ್ವೆ ನಂ.1ರಲ್ಲಿ ಕೆರೆ	ಸರ್ವೆ ನಂ.17/6	ಸರ್ವೆ ನಂ. 17/2
54.	17/ 1B1	00	36	00	05	00	31	ಸರ್ವೆ ನಂ. 16	ಸರ್ವೆ ನಂ. 17/1A1, 17/5 & 17/6	ಸರ್ವೆ ನಂ. 3	ಸರ್ವೆ ನಂ. 17/1B2
55.	17/ 1B2	00	05	00	00	00	05	ಸರ್ವೆ ನಂ. 16	ಸರ್ವೆ ನಂ. 17/1A2	ಸರ್ವೆ ನಂ. 17/1B1	ಸರ್ವೆ ನಂ. 17/2
56.	22/2	00	10	00	00	00	10	ಸರ್ವೆ ನಂ. 22/3	ಸರ್ವೆ ನಂ. 22/1	ಸರ್ವೆ ನಂ. 21	ಸರ್ವೆ ನಂ. 23
57.	22/3	00	10	00	00	00	10	ಸರ್ವೆ ನಂ.22/4	ಸರ್ವೆ ನಂ. 22/2	ಸರ್ವೆ ನಂ. 21	ಸರ್ವೆ ನಂ. 23
58.	22/4	00	1 1/2	00	00	00	1 1/2	ಸರ್ವೆ ನಂ. 22/5	ಸರ್ವೆ ನಂ. 22/3	ಸರ್ವೆ ನಂ. 22/10	ಸರ್ವೆ ನಂ. 23
59.	22/5	00	09	00	00	00	09	ಸರ್ವೆ ನಂ. 22/8	ಸರ್ವೆ ನಂ. 22/4	ಸರ್ವೆ ನಂ. 21	ಸರ್ವೆ ನಂ. 23
60.	22/6	00	18	00	00	00	18	ಸರ್ವೆ ನಂ.22/7	ಸರ್ವೆ ನಂ. 22/9	ಸರ್ವೆ ನಂ. 21	ಸರ್ವೆ ನಂ. 23
61.	22/7	00	20	00	00	00	20	ಸರ್ವೆ ನಂ.20	ಸರ್ವೆ ನಂ. 22/6	ಸರ್ವೆ ನಂ. 21	ಸರ್ವೆ ನಂ. 23
62.	22/8	00	05	00	00	00	05	ಸರ್ವೆ ನಂ.22/9	ಸರ್ವೆ ನಂ. 22/5	ಸರ್ವೆ ನಂ. 21	ಸರ್ವೆ ನಂ. 23
63.	22/9	00	04	00	00	00	04	ಸರ್ವೆ ನಂ. 22/6	ಸರ್ವೆ ನಂ. 22/8	ಸರ್ವೆ ನಂ. 21	ಸರ್ವೆ ನಂ. 23
64.	22/10	00	6 1/2	00	00	00	6 1/2	ಸರ್ವೆ ನಂ. 22/5	ಸರ್ವೆ ನಂ. 22/3	ಸರ್ವೆ ನಂ. 22/4	ಸರ್ವೆ ನಂ. 21
65.	23/1	00	15	00	00	00	15	ಸರ್ವೆ ನಂ. 23/2	ಸರ್ವೆ ನಂ. 24	ಸರ್ವೆ ನಂ. 22	ಸರ್ವೆ ನಂ. 25
66.	23/2	00	05	00	00	00	05	ಸರ್ವೆ ನಂ.23/3	ಸರ್ವೆ ನಂ. 23/1	ಸರ್ವೆ ನಂ. 22	ಸರ್ವೆ ನಂ. 25
67.	23/3	00	09	00	00	00	09	ಸರ್ವೆ ನಂ. 23/4	ಸರ್ವೆ ನಂ. 23/2	ಸರ್ವೆ ನಂ. 22	ಸರ್ವೆ ನಂ. 25
68.	23/4	00	18	00	00	00	18	ಸರ್ವೆ ನಂ. 23/5	ಸರ್ವೆ ನಂ. 23/3	ಸರ್ವೆ ನಂ. 22	ಸರ್ವೆ ನಂ. 25
69.	23/5	00	30	00	00	00	30	ಸರ್ವೆ ನಂ. 23/6	ಸರ್ವೆ ನಂ.23/4	ಸರ್ವೆ ನಂ. 22	ಸರ್ವೆ ನಂ. 25 ಮತ್ತು 28
70.	23/6	00	11	00	00	00	11	ಸರ್ವೆ ನಂ. 20	ಸರ್ವೆ ನಂ. 23/5	ಸರ್ವೆ ನ0.22 ಮತ್ತು 20	ಸರ್ವೆ ನಂ. 28
71.	24/2B	00	21	00	00	00	21	ಸರ್ವೆ ನಂ. 21 ಮತ್ತು 22	ರಸ್ತೆ ಮತ್ತು ನಂತರ ಕೆರೆ ಸರ್ವೆ ನಂ.1	ಸರ್ವೆ ನಂ. 24/1	ಸರ್ವೆ ನಂ. 24/2A
72.	11/1 (P)	00	28 1/2	00	00	00	28 1/2	ಸರ್ವೆ ನಂ. 10	ಉಳಿದ ಭಾಗ ಸರ್ವೆ ನಂ. 11 ಮತ್ತು 13	ಉಳಿದ ಭಾಗ ಸರ್ವೆ ನಂ. 11	ಸರ್ವೆ ನಂ. 9
73.	12/1	00	30	00	02	00	28	ಸರ್ವೆ ನಂ. 12/2	ಸರ್ವೆ ನಂ. 3 ಮತ್ತು 16	ಸರ್ವೆ ನಂ. 3	ಸರ್ವೆ ನಂ. 14
74.	12/2	00	25	00	02	00	25	ಸರ್ವೆ ನಂ.12/3	ಸರ್ವೆ ನಂ. 12/1	ಸರ್ವೆ ನ0. 3 ಮತ್ತು 4	ಸರ್ವೆ ನಂ. 14
75.	13	01	20	00	02	01	18	ಸರ್ವೆ ನಂ. 11,9,47 ಮತ್ತು ನಾಲೆ	ಸರ್ವೆ ನಂ. 14 ಮತ್ತು ನಾಲೆ	ಸರ್ವೆ ನಂ. 11	ಸರ್ವೆ ನಂ. 47
76.	14/1	01	39	00	02	00	37	ಸರ್ವೆ ನಂ. 13	ಸರ್ವೆ ನಂ. 15 ಮತ್ತು ರಾಜಾಕಾಲುವೆ	ಸರ್ವೆ ನಂ. 14/2	ಸರ್ವೆ ನಂ. 47
77.	14/2	00	10	00	00	00	10	ಸರ್ವೆ ನಂ. 13	ಸರ್ವೆ ನಂ. 15 ಮತ್ತು ರಾಜಾಕಾಲುವೆ	ಸರ್ವೆ ನಂ. 12 ಮತ್ತು ರಾಜಾಕಾಲುವೆ	ಸರ್ವೆ ನಂ. 14/1
78.	18/1	01	21	00	01	1	20	ಸರ್ವೆ ನ0. 47 ಮತ್ತು 20	ಸರ್ವೆ ನಂ. 18/2	ಸರ್ವೆ ನಂ. 15 ಮತ್ತು16	ಸರ್ವೆ ನ0. 20 ಮತ್ತು 19

ಸ್ಥಳ: ಬೆಂಗಳೂರು
ದಿನಾ0ಕ: 26-10-2021

ಆರ್ ಸುನಿತಾ
ವಕೀಲರು
ಅನೂಪ್ ಎಸ್ ಶಾ ಲಾ ಫರ್ಮ್
ವಸಂತನಗರ, ಕನ್ನಿಂಗ್‌ಹ್ಯಾಮ್ ರೋಡ್,
ಬೆಂಗಳೂರು–560 052
ಫೋನ್:91-80-42423000
ಫ್ಯಾಕ್ಸ್: 91-80-42423030

ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್.

ವ್ಯವಸ್ಥಾಪಕ ನಿರ್ದೇಶಕರ ಕಾರ್ಯಾಲಯ, ವಿಳಾಸ: ಪ್ಲಾಟ್ ನಂ.77, ಜಿಲ್ಲಾಡಳಿತ ಭವನ ಆವರಣ, ಕರೂರು ಇಂಡಸ್ಟ್ರೀಯಲ್ ಏರಿಯಾ, ಹಳೇ ಪಿ.ಬಿ. ರಸ್ತೆ, ದಾವಣಗೆರೆ–577006 ದೂಸಂ.08192–222383
ಸಿಐಎನ್: U74999KA2016PLC093411 E-mail: smartcitydavanagere@gmail.com

No: DSCL/E-Tender/CR-254/ 2021-22/ 1471 Date: 13.10.2021

ಟೆಂಡರ್ ಪ್ರಕಟಣೆ (Call -3) (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ಗಳ ಅನ್ವಯ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಎರಡು ಕವರ್ ಪದ್ಧತಿಯಲ್ಲಿ ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ವೆಬ್ ಸೈಟ್ www.eproc.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಕಛೇರಿ ದೂರವಾಣಿ ಸಂಖ್ಯೆ: 08192–222383 ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಸಹಾಯಕ ದೂರವಾಣಿ ಸಂಖ್ಯೆ: 080–23010900, 080–23010901, 080–38013000 ರಿಂದ ಮಾಹಿತಿ ಪಡೆಯಬಹುದು.
(1) ಇ–ಪ್ರಕ್ಯೂರ್ ಮೆಂಟ್ ಉಲ್ಲೇಖ:– UDD/ 2021-22/ IND 278. (2) ಕಾಮಗಾರಿಯ ವಿವರ:– IMPLEMENTATION OF ICT PROJECT PHASE-II IN DAVANAGERE. (Call-3) (3) ಮುಂಗಡ ಠೇವಣಿ:– ಸರ್ಕಾರದ ಆದೇಶ ಸಂಖ್ಯೆ: ಆಇ 675 ವೆಚ್ಚ–12/2020, ಬೆಂಗಳೂರು, ದಿನಾಂಕ: 22.12.2020 ರ ಕ್ರಮ ಸಂಖ್ಯೆ 01 ರಂತೆ EMD ವಿನಾಯಿತಿ ಪಡೆಯಲು ಗುತ್ತಿಗೆದಾರರು RFP vol - 1, Annexure - 12 ಪ್ರಕಾರ EMD declaration certificate ಸಲ್ಲಿಸತಕ್ಕದ್ದು. (4) ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ:–06 ತಿಂಗಳು ಸೂಚನೆ : ಈ ಪ್ರಕಟಣೆಯಲ್ಲಿ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ. (1) ಪ್ರಿ ಬಿಡ್ ಮೀಟಿಂಗ್ ದಿನಾಂಕ: 09.11.2021 ಸಮಯ : 15.30. (2) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ: 11.11.2021 ಸಮಯ : 16.00. (3) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 23.11.2021 ಸಮಯ : 16.00. (4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 24.11.2021 ಸಮಯ : 16:30. (5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ವೇಳೆ : 29.11.2021 ಸಮಯ : 16.30

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು – ಐಟಿ, ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್, ದಾವಣಗೆರೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್, ದಾವಣಗೆರೆ.
ವಾಸಾಇ/ದಾವಣಗೆರೆ/454/ಎಂಸಿಎ/2021–22

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
#49, 2ನೇ ಮಹಡಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001.
ದೂರವಾಣಿ: 080–22352525/22352424, ಫ್ಯಾಕ್ಸ್: 080–22352626.

No. KTIL/MD/EE/AE-2/BID/Tender/2020-21/01 Date: 25.10.2021

ಪ್ರಸ್ತಾವನೆಯ ವಿನಂತಿ (ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಮಾತ್ರ)

ಬೀದರ್ ಜಿಲ್ಲೆಯ ಶಿವನಗರದಲ್ಲಿರುವ ರಾಮಕೃಷ್ಣ – ವಿವೇಕಾನಂದ ಆಶ್ರಮದ ಕುಡಿಯುವ ನೀರು ಸ್ನಾನಗೃಹ, ಶೌಚಾಲಯಗಳು ಪಾತ್ ವೇ ಮುಂತಾದ ಮೂಲಭೂತ ಸೌಕರ್ಯ ಕಾಮಗಾರಿಯನ್ನು ಕೈಗೊಳ್ಳಲು ಪ್ರಕಟಿಸಿರುವ ಟೆಂಡರ್ ಬಗ್ಗೆ.

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮವು (ಕೆ.ಟಿ.ಐ.ಎಲ್) ಬೀದರ್ ಜಿಲ್ಲೆಯ ಶಿವನಗರದಲ್ಲಿರುವ ರಾಮಕೃಷ್ಣ – ವಿವೇಕಾನಂದ ಆಶ್ರಮದ ಬಳಿ ಕುಡಿಯುವ ನೀರು ಸ್ನಾನಗೃಹ, ಶೌಚಾಲಯಗಳು ಪಾತ್ ವೇ ಮುಂತಾದ ಮೂಲಭೂತ ಸೌಕರ್ಯ ಕಾಮಗಾರಿಯನ್ನು ಕೈಗೊಳ್ಳುವ ಸಂಬಂಧ ಬಿಡ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಸಂಗ್ರಹಣೆ ವೆಬ್‌ಸೈಟ್ ವಿಳಾಸ http://www.eproc.karnataka.gov.in ದಿಂದ ದಿನಾಂಕ: 22.10.2021ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇದೇ ವೇದಿಕೆಯ ಮೂಲಕ ತಮ್ಮ ಪ್ರಸ್ತಾವನೆಗಳನ್ನು ಸಲ್ಲಿಸಬಹುದಾಗಿದೆ.

ಆಸಕ್ತ ಬಿಡ್ಡುದಾರರು ಇ–ಸಂಗ್ರಹಣೆ ವೇದಿಕೆ ಮೂಲಕ ದಿನಾಂಕ 13.11.2021ರ ಮಧ್ಯಾಹ್ನ 2.00 ಗಂಟೆವರೆಗೆ ಬಿಡ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇ–ಸಂಗ್ರಹಣೆ ವೆಬ್‌ಸೈಟ್ ವಿಳಾಸ http://www.eproc.karnataka.gov.in ಕ್ಕೆ ಬೇಟಿ ನೀಡಿ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಬಿಡ್‌ಗೆ ಸಂಬಂಧಿಸಿದ ಎಲ್ಲಾ ಹೆಚ್ಚುವರಿ ಅಧಿಸೂಚನೆಗಳನ್ನು, ಬದಲಾವಣೆಗಳು ಟೆಂಡರ್ ದಾಖಲೆ ತಿದ್ದುಪಡಿಗಳನ್ನು http://www.eproc.karnataka.gov.in ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ಆಹ್ವಾನ ಪ್ರಾಧಿಕಾರವು ಈ ಟೆಂಡರ್‌ಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಯಾವುದೇ ಒಂದು ಅಥವಾ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣಗಳನ್ನು ನೀಡದ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕು ಹೊಂದಿರುತ್ತದೆ. ಈ ಟೆಂಡರ್ ದಾಖಲೆ ಸಂಬಂಧ ಯಾವುದೇ ವಿಚಾರಣೆ/ಸ್ಪಷ್ಟೀಕರಣ ಕುರಿತು ಕಾರ್ಯಪಾಲಕ ಅಭಿಯಂತರರು ಕೆ.ಟಿ.ಐ.ಎಲ್ ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
DIPR/DDU/ZEN/RO-1967/2021-22 ಕಾರ್ಯಪಾಲಕ ಅಭಿಯಂತರರು ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ, ಕೆ.ಟಿ.ಐ.ಎಲ್

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ

ಮುಖ್ಯ ಅಭಿಯಂತರರವರ ಕಾರ್ಯಾಲಯ,
ಜಲಮಂಡಲಿ ಆವರಣ, ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ–580001.
ದೂರವಾಣಿ :0836–2447090 ಫ್ಯಾಕ್ಸ್ : 0836–2446890

ಅಲ್ಪಾವಧಿ ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನ ಮುಖಾಂತರ ಮಾತ್ರ)

ತಾಂತ್ರಿಕ ಮತ್ತು ಹಣಕಾಸು ಅರ್ಹತಾ ಮಾನದಂಡಗಳನ್ನು ಪೂರೈಸುವ ಅರ್ಹ ಏಜೆನ್ಸಿ/ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://eproc.karnataka.gov.in) ಮೂಲಕ ಈ ಕೆಳಗಿನ ಕೆಲಸಗಳಿಗೆ ಲಂಪ್ಸಮ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ (ವಿವರಗಳಿಗಾಗಿ ದಯವಿಟ್ಟು) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನೋಡಿ).

ಸಂ.ಕಜಮ/ಮುಅ(ಧಾ)/ಆಶ್ರೇಕಾಪಾಅ(ಬೆ)/ಉಮುಅ–1/ತಾಸ–1/ಸಅ–1/ಟೆಂಡರ್:2021–22/1072 ದಿನಾಂಕ: 22–10–2021
ಕಾಮಗಾರಿಯ ಹೆಸರು: ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಕಾರ್ಯಕ್ರಮದಡಿಯಲ್ಲಿ ಸವದತ್ತಿ ಪಟ್ಟಣಕ್ಕೆ ಅಲ್ಪಾವಧಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಹಾಗೂ ಒಂದು ವರ್ಷದ ದೋಷ ಮತ್ತು ಹೊಣೆಗಾರಿಕೆ ಸೇರಿ 5 ವರ್ಷಗಳಿಗೆ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ, ಇಂಡೆಂಟ್ **ಸಂಖ್ಯೆ. ಕನನೀಸಒಚಮ/2021–22/ನೀಸ/ವರ್ಕ್–ಇಂಡೆಂಟ್/3057, ಬಿಡ್‌ಗೆ ಇಟ್ಟ ಬಂಡವಾಳ ಮೊತ್ತ ರೂ.** 1011.27 ಲಕ್ಷಗಳು; ನಿರ್ವಹಣೆ ಮತ್ತು ದುರಸ್ತಿ ಮೊತ್ತ ರೂ.203.33 **ಲಕ್ಷಗಳು.**

ಸಂ.ಕಜಮ/ಮುಅ(ಧಾ)/ಆಶ್ರೇಕಾಪಾಅ(ಬೆ)/ಉಮುಅ–1/ತಾಸ–1/ಸಅ–1/ಟೆಂಡರ್:2021–22/1073 ದಿನಾಂಕ: 22–10–2021
ಕಾಮಗಾರಿಯ ಹೆಸರು: ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಕಾರ್ಯಕ್ರಮದಡಿಯಲ್ಲಿ ಎಂ.ಕೆ ಹುಬ್ಬಳ್ಳಿ ಪಟ್ಟಣಕ್ಕೆ ಅಲ್ಪಾವಧಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಹಾಗೂ ಒಂದು ವರ್ಷದ ದೋಷ ಮತ್ತು ಹೊಣೆಗಾರಿಕೆ ಸೇರಿ 5 ವರ್ಷಗಳಿಗೆ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ, ಇಂಡೆಂಟ್ **ಸಂಖ್ಯೆ. ಕನನೀಸಒಚಮ/2021–22/ನೀಸ/ವರ್ಕ್–ಇಂಡೆಂಟ್/3058, ಬಿಡ್‌ಗೆ ಇಟ್ಟ ಬಂಡವಾಳ ಮೊತ್ತ ರೂ.** 265.17 ಲಕ್ಷಗಳು; ನಿರ್ವಹಣೆ ಮತ್ತು ದುರಸ್ತಿ ಮೊತ್ತ ರೂ.111.02 **ಲಕ್ಷಗಳು.**

ಸಂ.ಕಜಮ/ಮುಅ(ಧಾ)/ಆಶ್ರೇಕಾಪಾಅ(ಬೆ)/ಉಮುಅ–1/ತಾಸ–1/ಸಅ–1/ಟೆಂಡರ್:2021–22/1074 ದಿನಾಂಕ: 22–10–2021.
ಕಾಮಗಾರಿಯ ಹೆಸರು: ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಕಾರ್ಯಕ್ರಮದಡಿಯಲ್ಲಿ ಮುನವಳ್ಳಿ ಪಟ್ಟಣಕ್ಕೆ ಅಲ್ಪಾವಧಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಹಾಗೂ ಒಂದು ವರ್ಷದ ದೋಷ ಮತ್ತು ಹೊಣೆಗಾರಿಕೆ ಸೇರಿ 5 ವರ್ಷಗಳಿಗೆ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ, ಇಂಡೆಂಟ್ **ಸಂಖ್ಯೆ. ಕನನೀಸಒಚಮ/2021–22/ನೀಸ/ವರ್ಕ್–ಇಂಡೆಂಟ್/3059, ಬಿಡ್‌ಗೆ ಇಟ್ಟ ಬಂಡವಾಳ ಮೊತ್ತ ರೂ.** 438.46 ಲಕ್ಷಗಳು; ನಿರ್ವಹಣೆ ಮತ್ತು ದುರಸ್ತಿ ಮೊತ್ತ ರೂ.168.96 **ಲಕ್ಷಗಳು.**

ಸಂ.ಕಜಮ/ಮುಅ(ಧಾ)/ಆಶ್ರೇಕಾಪಾಅ(ಬೆ)/ಉಮುಅ–1/ತಾಸ–1/ಸಅ–1/ಟೆಂಡರ್:2021–22/1075 ದಿನಾಂಕ: 22–10–2021.
ಕಾಮಗಾರಿಯ ಹೆಸರು: ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಕಾರ್ಯಕ್ರಮದಡಿಯಲ್ಲಿ ಖಾನಾಪುರ ಪಟ್ಟಣಕ್ಕೆ ಅಲ್ಪಾವಧಿ ಒಳಚರಂಡಿ ವ್ಯವಸ್ಥೆ ಕಲ್ಪಿಸುವುದು ಹಾಗೂ ಒಂದು ವರ್ಷದ ದೋಷ ಮತ್ತು ಹೊಣೆಗಾರಿಕೆ ಸೇರಿ 5 ವರ್ಷಗಳಿಗೆ ನಿರ್ವಹಣೆ ಮತ್ತು ದುರಸ್ತಿ ಕಾಮಗಾರಿ, ಇಂಡೆಂಟ್ **ಸಂಖ್ಯೆ. ಕನನೀಸಒಚಮ/2021–22/ನೀಸ/ವರ್ಕ್–ಇಂಡೆಂಟ್/3060, ಬಿಡ್‌ಗೆ ಇಟ್ಟ ಬಂಡವಾಳ ಮೊತ್ತ ರೂ.** 463.08 ಲಕ್ಷಗಳು; ನಿರ್ವಹಣೆ ಮತ್ತು ದುರಸ್ತಿ ಮೊತ್ತ ರೂ.142.43 **ಲಕ್ಷಗಳು.**

ಬಿಡ್ ಭದ್ರತಾ ಠೇವಣಿ: ಸರ್ಕಾರದ ಆದೇಶ ಸಂಖ್ಯೆ ಆಇ:675:ವೆಚ್ಚ–12:2020 ಬೆಂಗಳೂರು, ದಿನಾಂಕ 22–12–2020ರಲ್ಲಿ ತಿಳಿಸಿರುವಂತೆ ಬಿಡ್ ಭದ್ರತೆ ಡಿಕ್ಲರೇಷನ್ ಅಪ್‌ಲೋಡ್ ಮಾಡುವುದು. **ಬಿಡ್‌ದಾಖಲೆಯ ಬೆಲೆ:** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ. (ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು) **ಪ್ರತ್ಯೇಕ ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ: 12 ತಿಂಗಳುಗಳು ಮಳೆಗಾಲ ಸೇರಿದಂತೆ ಹಾಗೂ** ಒಂದು ವರ್ಷದ ದೋಷ ಮತ್ತು ಹೊಣೆಗಾರಿಕೆ ಅವಧಿ ಸೇರಿ, **5 ವರ್ಷಗಳಿಗೆ ನಿರ್ವಹಣೆ ಮತ್ತು ದುರಸ್ತಿ ನಿರ್ವಹಿಸುವುದು.**

ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಭಾಗವಹಿಸುವಿಕೆ ಕುರಿತಾದ ವಿವರಗಳನ್ನು ಇ–ಆಡಳಿತ ಇಲಾಖೆ ಕೊಠಡಿ ಸಂಖ್ಯೆ: 141, ಗೇಟ್ ನಂ. 2, ಎಂ.ಎಸ್. ಬಿಲ್ಡಿಂಗ್, ಬೆಂಗಳೂರು – 560 001 ಇಲ್ಲಿರುವ ಇ–ಪ್ರೋಕ್ಯೂರ್‌ಮೆಂಟ್ ಸಲಹಾ ಕೇಂದ್ರದಿಂದ ಪಡೆಯಬಹುದಾಗಿದೆ. ದೂರವಾಣಿ ಸಮಖ್ಯೆ: 080–25501216 / 25501227, ಇ–ಮೇಲ್ ಸಪೋರ್ಟ್: hphelpdesk.blr@intarvo.com (1) ಮೇಲೆ ತಿಳಿಸಿರುವ ಕಾಮಗಾರಿಗಳ ಟೆಂಡರಿನಲ್ಲಿ ಭಾಗವಹಿಸಲು ಮಂಡಳಿಯಲ್ಲಿ ನೋಂದಣಿ ಕಡ್ಡಾಯವಾಗಿರುವುದಿಲ್ಲ. (2) ಬಿಡ್ ದಾಖಲೆಯಲ್ಲಿ ತಿಳಿಸಿರುವ ನಿರ್ದಿಷ್ಟ ನಮೂನೆಯಲ್ಲಿ ಬಿಡ್ ಭದ್ರತೆ / ಭದ್ರತಾ ಠೇವಣಿ ಡಿಕ್ಲರೇಷನ್ ಫಾರ್ಮನ್ನು ಅಪ್‌ಲೋಡ್ ಮಾಡುವುದು. (3) ಯಾವುದೇ ಟೆಂಡರ್ ಅನ್ನು ಸ್ವೀಕರಿಸುವ ಮತ್ತು ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಹಕ್ಕನ್ನು ಮುಖ್ಯ ಅಭಿಯಂತರರರು ಕ.ನ.ನೀ.ಸ ಮತ್ತು ಒ.ಚ. ಮಂಡಳಿ, ಧಾರವಾಡ ಇವರು ಹೊಂದಿರುತ್ತಾರೆ. (4) ಟೆಂಡರ್‌ನ ಮೊತ್ತಕ್ಕೆ ಜಿಎಸ್‌ಟಿ ಅನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು.

ಟೆಂಡರ್ ದಿನಾಂಕಗಳು:1) ಬಿಡ್ ದಾಖಲೆಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನಲೋಡ ಮಾಡಿಕೊಳ್ಳುವ ದಿನಾಂಕ ಮತ್ತು ಸಮಯ:26.10.2021 11.00 ಗಂಟೆಯ ನಂತರ **2)** ಟೆಂಡರ್ ಆಕ್ಷೇಪಣೆ / ಸ್ಪಷ್ಟೀಕರಣಗಳಿಗಾಗಿ ನಿಗದಿಪಡಿಸಿದ ದಿನಾಂಕ ಮತ್ತು ಸಮಯ:29.10.2021 11.00 ಗಂಟೆ **3)** ಟೆಂಡರ್ ಪೂರ್ವ ಸಭೆ ದಿನಾಂಕ:29.10.2021 11.00 ಗಂಟೆಯ ನಂತರ **4)** ಬಿಡ್ ಸಲ್ಲಿಸಲು / ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ:09.11.2021 17.30 ಗಂಟೆಯವರೆಗೆ **5)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ:11.11.2021 11.00 ಗಂಟೆಯ ನಂತರ

ಹೆಚ್ಚಿನ ವಿವರಗಳಿಗಾಗಿ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ದಯವಿಟ್ಟು ಸಂಪರ್ಕಿಸಬಹುದು.

ಸಹಿ/–(ಕೆ. ವಿ. ಶ್ರೀಕೇಶವ)
ಮುಖ್ಯ ಅಭಿಯಂತರು
ಕ.ನ.ನೀ.ಸ. ಮತ್ತು ಒ.ಚ. ಮಂಡಳಿ, ಧಾರವಾಡ
ವಾ.ಸಾ.ಇ./ಧಾರವಾಡ/626/2021–22ದೇಶಪಾಂಡೆಪಬ್ಲಿಸಿಟಿ

ಅಟಲ್ ಭೂಜಲ್ ಯೋಜನೆ (ಅಟಲ್–ಜಲ್)

(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)
ಯೋಜನಾ ನಿರ್ದೇಶಕರ ಕಛೇರಿ, ಅಟಲ್ ಭೂಜಲ್ ಯೋಜನೆ, 2ನೇ ಮಹಡಿ, ಕೆಎಸ್‌ಎಫ್‌ಸಿ ಭವನ, ನಂ.1/1, ತಿಮ್ಮಯ್ಯ ರಸ್ತೆ, ಬೆಂಗಳೂರು – 560052.
ಇ–ಮೇಲ್: karnatakabhy@gmail.com

No. ABHY/PROC/14/2021-22 Date: 26-10-2021

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಅಟಲ್ ಭೂಜಲ್ ಯೋಜನೆ ಕಛೇರಿಗೆ ಬೇಕಾಗಿರುವ **IT Equipments (Desktop Computers, Laptops, Copier, Multifunctional Printers & MS Office)** ಸರಬರಾಜು ಮಾಡಲು ತಯಾರಕರು / ಅಧಿಕೃತ ವಿತರಕರುಗಳನ್ನು ಅಗತ್ಯ ದಾಖಲೆಯೊಂದಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್: **www.eproc.karnataka.gov.in** ನಲ್ಲಿ ಪಡೆಯಬಹುದು ಹಾಗೂ ಟೆಂಡರ್ ಡಾಕ್ಯೂಮೆಂಟ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ: **26–10–2021ರಂದು 11.30** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಡಾಕ್ಯೂಮೆಂಟ್‌ನ್ನು ಸಲ್ಲಿಸಲು ಕೊನೆಯ ದಿನಾಂಕ: **08–11–2021ರಂದು 17.30 ಗಂಟೆಗೆ ಅಥವಾ ಮುಂಚಿತವಾಗಿ.** ಹೆಚ್ಚಿನ ಮಾಹಿತಿಗಾಗಿ ಕೆಳಸಹಿದಾರರ ಕಛೇರಿ ಸಮಯ **10.00** ರಿಂದ **17.30 ಗಂಟೆಯೊಳಗೆ** ಪಡೆಯಬಹುದಾಗಿರುತ್ತದೆ.

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ವಾಸಾಸಂಇ/ಬೆಂ.ನ/ಅಡ್ವರ್ಟೋರ್/1961/2021–22

ಕೋವಿಡ್‌-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪುರಸಭೆ ಕಾರ್ಯಾಲಯ, ನರಗುಂದ ಜಿ. ಗದಗ,

ದೂರವಾಣಿ/ಫ್ಯಾಕ್ಸ್: 08377-244227
Email: itstaff_ulb_naragund@yahoo.co.in
web:www. naragundatown.mrc.gov.in
ನಂ/ಪುಸನ/SFC/SCSP-TSP/24.10/ಸುರಕ್ಷಾಧಿರಿಸು/ವಹಿ/2021–22 ದಿ : 22–10–2021

ಅಲ್ಪಾವಧಿ ಟೆಂಡರ ಪ್ರಕಟಣೆ

ನರಗುಂದ ಪುರಸಭೆಯ ಸನ್ 2021–22 ನೇ ಸಾಲಿನ ಎಸ್.ಎಫ್.ಸಿ ಮತ್ತು ಪುರಸಭೆ ನಿಧಿಯಡಿ ಎಸ್.ಸಿ.ಎಸ್.ಪಿ ಹಾಗೂ ಟಿ.ಎಸ್.ಪಿ ಯೋಜನೆಯ ಶೇ.24.10 ರಡಿ ಪೌರಕಾರ್ಮಿಕರಿಗೆ ಸುರಕ್ಷಾ ಧಿರಿಸುಗಳನ್ನು ಖರೀಧಿಸಲು ತೀರ್ಮಾನಿಸಿ ಟೆಂಡರ್ ಪ್ರಕಟಣೆ ಹೊರಡಿಸಿದ್ದು, ದಿನಾಂಕ : **04–11–2021** ರ ಕಚೇರಿ ಅವಧಿಯೊಳಗಾಗಿ ಅಧೀಕೃತ ಮಾರಾಟಗಾರರು ನಿಗಧಿತ ಟೆಂಡರ್ ಫಾರಂ ಫೀ ರೂ: **1000/–** ಗಳನ್ನು ಪಾವತಿಸಿ ಟೆಂಡರ ಬುಕಲೆಟ್ ಪಡೆದುಕೊಂಡು ದಿನಾಂಕ : **07–11–2021** ರ ಸಂಜೆ 4:30 ರ ಒಳಗಾಗಿ ಕಚೇರಿಯಲ್ಲಿನ ಟೆಂಡರ ಪೆಟ್ಟಿಗೆಯಲ್ಲಿ ಹಾಕಬೇಕು. ಷರತ್ತು ಹಾಗೂ ನಿಬಂಧನೆಗಳಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಪುರಸಭೆಯ ಆರೋಗ್ಯ ವಿಭಾಗದಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಮಂಜೂರು–ವ–ನಾಮಂಜೂರು ಮಾಡುವ ಅಧಿಕಾರವನ್ನು ಪುರಸಭೆಯು ಕಾಯ್ದಿರಿಸಿಕೊಂಡಿದೆ.

ಸಹಿ/– ಅಧ್ಯಕ್ಷರು, ಪುರಸಭೆ, ನರಗುಂದ
ಸಹಿ/– ಮುಖ್ಯಾಧಿಕಾರಿ, ಪುರಸಭೆ, ನರಗುಂದ
ವಾಸಾಸಂಇ/ಗದಗ/ಎಂ.ಸಿ.ಎ/339/2021–22

ಕರ್ನಾಟಕ ಸರಕಾರ

ಪುರಸಭೆ ಕಾರ್ಯಾಲಯ, ಲಕ್ಷ್ಮೇಶ್ವರ, ತಾ : ಲಕ್ಷ್ಮೇಶ್ವರ, ಜಿ : ಗದಗ

ಕ್ರಸಂ:ಪುಸಲ/ಆಶ್ರಯ ವಸತಿ ಯೋಜನೆ/ಇ–ಟೆಂಡರ/ವಹಿ/2021–22.
ದಿನಾಂಕ : 22–10–2021.

ತಿದ್ದುಪಡಿ ಟೆಂಡರ್ ಪ್ರಕಟಣೆ

ಈ ಮೂಲಕ ಯಾವತ್ತು ಗುತ್ತಿಗೆದಾರರಿಗೆ ತಿಳಿಯಪಡಿಸುವದೆನಂದರೆ, ಈ ಕಾರ್ಯಾಲಯದಿಂದ ದಿನಾಂಕ : 12–10–2021 ರಂದು ಲಕ್ಷ್ಮೇಶ್ವರ ಪುರಸಭೆ ವ್ಯಾಪ್ತಿಯಲ್ಲಿ ಸರ್ವೇ ನಂ–128/2 ಹಾಗೂ 170/7 ನೇದ್ದರ ಒಟ್ಟು ಕ್ಷೇತ್ರ 9ಎ–38ಗು ಜಮೀನಿನಲ್ಲಿ ನಿವೇಶನಗಳ ರಚನೆ ಮತ್ತು ಅಭಿವೃದ್ಧಿ ಪಡಿಸುವುದು ಹಾಗೂ ಸರ್ವೇ ನಂ–129/1, 129/2, 129/3, 154/7, 154/8 & 154/9 ನೇದ್ದರ ಒಟ್ಟು ಕ್ಷೇತ್ರ 16ಎ–16ಗುಂ ಜಮೀನಿನಲ್ಲಿ ನಿವೇಶನಗಳ ರಚನೆ ಮತ್ತು ಅಭಿವೃದ್ಧಿ ಪಡಿಸುವ 2 ಕಾಮಗಾರಿಗಳ ಅಂದಾಜು ರೂ 20.92 ಲಕ್ಷಗಳಿಗೆ ಇ–ಪ್ರೋಕ್ಯುರಮೆಂಟ್ ಮೂಲಕ ಅಲ್ಪಾವಧಿ ಟೆಂಡರ ಪ್ರಕಟಣೆಯನ್ನು ಈ ಕಾರ್ಯಾಲಯದ ಪತ್ರ ಕ್ರಸಂ:ಪುಸಲ/ಆಶ್ರಯ ವಸತಿ ಯೋಜನೆ/ಇ–ಟೆಂಡರ/ ವಹಿ /2021–22. ದಿನಾಂಕ: 12–10–2021. ರಂದು ನೀಡಲಾಗಿತ್ತು ಸದರ ಟೆಂಡರ ಪ್ರಕಟಣೆಯಲ್ಲಿ ಟೆಂಡರ ಷರತ್ತಿನಲ್ಲ ಅ,ನಂ–6 ನೇದ್ದರ ಪುರಸಭೆಯಿಂದ ನೊಂದಣಿ ಹೊಂದಿದ ಲೈಸನ್ಸ ಹಾಕಲು ಇ–ಪ್ರೋಟಲ್‌ನಲ್ಲಿ ಹಾಕಿದ್ದುನ್ನು ಹಿಂಪಡೆಯಲಾಗಿದ್ದು ಹಾಗೂ ಲೋಕೋಪಯೋಗಿ ಇಲಾಖೆಯಿಂದ ನೋಂದಣಿ ಹೊಂದಿದ ಅರ್ಹ ಗುತ್ತಿಗೆದಾರರಿಗೆ ಟೆಂಡರ ಹಾಕಲು ಹಾಗೂ ಭರ್ತಿ ಮಾಡಿದ ಟೆಂಡರ ಹಾಕುವುದು ದಿನಾಂಕ : **26–10–2021** ರಂದು ಸಾಯಂಕಾಲ 4.00 ಘಂಟೆಯೊಳಾಗಿ ಇದ್ದಿದ್ದನ್ನು ತಾಂತ್ರಿಕ ಕಾರಣದಿಂದ ಮುಂದುಡಿ ಸದರ ಟೆಂಡರ ಭರ್ತಿ ಮಾಡಿದ ಟೆಂಡರ ಹಾಕುವುದನ್ನು ದಿನಾಂಕ : **29–10–2021** ರಂದು ಸಾಯಂಕಾಲ 4.00 ಘಂಟೆಯೊಳಗಾಗಿ ಮುಂದುಡಿದೆ ಅಂತಾ ಈ ಮೂಲಕ ತಿದ್ದಿ ಓದಿಕೊಳ್ಳಲು ತಿಳಿಯಪಡಿಸಲಾಗಿದೆ. ಉಳಿದ ಟೆಂಡರ ಷರತ್ತುಗಳು ಯಥಾವತ್ತು ಇರುತ್ತದೆ.

ಸಹಿ/– (ಶ್ರೀ ಎಸ್.ಎಫ್ ಹುಲ್ಲಮ್ಮನವರ)
ಮುಖ್ಯಾಧಿಕಾರಿ, ಪುರಸಭೆ, ಲಕ್ಷ್ಮೇಶ್ವರ
ವಾಸಾಸಂಇ/ಗದಗ/ಎಂ.ಸಿ.ಎ/343/2021–22

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ

ಐ.ಎಫ್.ಟಿ.ಸಂಖ್ಯೆ: 09/2021–22 ದಿನಾಂಕ: 22–10–2021

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ 1,2,3 & 4 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಇಪ್ರಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ನಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಾಮಗಾರಿಗಳಿಗೆ ಒಂದು & ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.193.60 ಲಕ್ಷಗಳು, ಕನಿಷ್ಠ ಮೊತ್ತ ರೂ.2.41 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 12–11–2021 ಸಮಯ 17.00 ಗಂಟೆಯವರೆಗೆ, ಹೆಚ್ಚಿನ ವಿವರಗಳಿಗಾಗಿ ಇ–ಪ್ರಾಕ್ ಪೋರ್ಟಲ್ ಹಾಗೂ ಕಛೇರಿ, (ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/472/2021–22

ಶ್ರೀರಂಗಪಟ್ಟಣ ತಾಲ್ಲೂಕಿನ ಚಂದಗಿರಿಕೊಪ್ಪಲು ಬಳಿ ಭತ್ತ ಬೆಳೆ ನೀರಿನಿಂದ ಜಲಾವೃತವಾಗಿರುವುದು (ಎಡಚಿತ್ರ) ಮೈಸೂರಿನ ಎನ್‌ಆರ್‌ಮೊಹಲ್ಲಾದಲ್ಲಿ ಭಾನುವಾರ ರಾತ್ರಿ ಸುರಿದ ಮಳೆಗೆ ಮನೆಯೊಂದು ಕುಸಿದಿದೆ

122.85 ಅಡಿ ತಲುಪಿದ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ • ಹಾವೇರಿ: ಮನೆಗಳಿಗೆ ಹಾನಿ

ಮಳೆ ಆರ್ಭಟ: ಕೃಷಿ ಭೂಮಿ ಜಲಾವೃತ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ: ಭಾನುವಾರ ರಾತ್ರಿ ಸುರಿದ ಜೋರು ಮಳೆಗೆ ತಾಲ್ಲೂಕಿನ ಚಂದಗಿರಿಕೊಪ್ಪಲು, ನೆಲಮನೆ, ಬಲ್ಲೇನಹಳ್ಳಿ ಗ್ರಾಮಗಳಲ್ಲಿ ಬೆಳೆಗಳು ಜಲಾವೃತವಾಗಿವೆ.

ಚಂದಗಿರಿಕೊಪ್ಪಲು ಸರಹದ್ದಿನಲ್ಲಿ ಹರಿಯುವ ಹಳ್ಳ ಉಕ್ಕಿ ಹರಿದು 50 ಎಕರೆಗೂ ಹೆಚ್ಚು ಬೆಳೆ ನೀರಿನಲ್ಲಿ ಮುಳುಗಿದೆ. ಭತ್ತ, ಕಬ್ಬು, ಬಾಳೆ, ತರಕಾರಿ ಬೆಳೆಗಳ ಮೇಲೆ ನೀರು ಕಾಲುವೆಯಂತೆ ಹರಿದಿದೆ.

ಸೋಮವಾರ ಮಧ್ಯಾಹ್ನದವರೆಗೂ ಹಳ್ಳ ನದಿಯಂತೆ ತುಂಬಿ ಹರಿಯುತ್ತಿತ್ತು. ಕೃಷಿ ಭೂಮಿಗೆ ಇದ್ದ ಸಂಪರ್ಕ ರಸ್ತೆಗಳಲ್ಲಿ ಕೊರಕಲು ಬಿದ್ದಿವೆ. ಗ್ರಾಮದ ಪಕ್ಕದಲ್ಲಿರುವ ಕಿರು ಜಲ ವಿದ್ಯುತ್ ಉತ್ಪಾದನಾ ಘಟಕಕ್ಕೂ ನೀರು ನುಗ್ಗಿದೆ. ಪಟ್ಟಣದ ಶಿಕ್ಷಕರ ಭವನದ ಪಕ್ಕದಲ್ಲಿರುವ ಶತಮಾನೋತ್ಸವದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಟ್ಟಡದ ಹಿಂದಿನ ಭಾಗ ಕುಸಿದು ಬಿದ್ದಿದೆ.

ಕೆಆರ್‌ಎಸ್ ಜಲಾಶಯದ ಒಳಹರಿವು ಹೆಚ್ಚಿದ್ದು, ನೀರಿನ ಮಟ್ಟ 122.85 ಅಡಿ ತಲುಪಿದೆ.

ಕೊಡಗು ಜಿಲ್ಲೆಯ ಸಿದ್ದಾಪುರ ವ್ಯಾಪ್ತಿಯಲ್ಲಿ ಸೋಮವಾರ ಉತ್ತಮ ಮಳೆಯಾಗಿದ್ದು, ಕಾವೇರಿ ನದಿ ನೀರಿನ ಮಟ್ಟ ಏರಿಕೆಯಾಗಿದೆ. ಹಣ್ಣಾಗಿರುವ ಅರೆಬಿಕಾ ಕಾಫಿ ಉದುರಲು ಆರಂಭಿಸಿದೆ.

ಹಾಸನ ಜಿಲ್ಲೆಯ ವಿವಿಧೆಡೆ ಧಾರಾಕಾರ ಮಳೆಯಾಗಿದೆ. ಆಲೂರು ತಾಲ್ಲೂಕು ಪಾಳ್ಯ ಹೋಬಳಿಯ ಬೆಳ್ಳಾವರ ಗ್ರಾಮದ ಕೂಲಿ ಕಾರ್ಮಿಕ ಕೃಷ್ಣಯ್ಯ ಅವರ ಮನೆ ಗೋಡೆ ಕುಸಿದಿದೆ. ಹಳೇಬೀಡಿನ ಪಶು ಆಸ್ಪತ್ರೆ ಪಕ್ಕದ ಮೋಹನ್ ರಾವ್ ಅವರ ಮನೆ ಭಾನುವಾರ ರಾತ್ರಿ ಭಾಗಶಃ ಬಿದ್ದಿದೆ. ಅರಸೀಕೆರೆ ತಾಲ್ಲೂಕಿನ ಕಣಕಟ್ಟೆ ಹೋಬಳಿಯ ಕಲ್ಗುಂಡಿ ಗ್ರಾಮದ ಕೆರೆ ತುಂಬಿ ಕೋಡಿ ಹರಿಯುತ್ತಿದ್ದು, ರಸ್ತೆ ಹಾಳಾಗಿದೆ.

ಮನೆಗಳಿಗೆ ಹಾನಿ: ಹುಬ್ಬಳ್ಳಿ ನಗರ ಸೇರಿದಂತೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸೋಮವಾರ ಸಾಯಂಕಾಲ ಮಳೆ ಸುರಿಯಿತು. ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕಿನಲ್ಲಿ ಕಳೆದ ಮೂರು ದಿನಗಳಿಂದ ಸುರಿಯುತ್ತಿರುವ ಸತತ ಮಳೆಯಿಂದ 18ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. ಶಿಥಿಲಗೊಂಡ ಗೋಡೆಗಳು ಕುಸಿಯುತ್ತಿವೆ.

ಕಾಗಿನೆಲೆಯಲ್ಲಿ 5ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ. ಹಿರೇನಂದಿಹಳ್ಳಿ-4, ಮಾಸಣಗಿ-3, ಶಿಡೇನೂರ, ಕೆರವಡಿ ಗ್ರಾಮದಲ್ಲಿ ತಲಾ 2, ಅಳಲಗೇರಿ ಮತ್ತು ಗುಂಡೇನಹಳ್ಳಿ ಗ್ರಾಮದಲ್ಲಿ ತಲಾ ಒಂದು ಮನೆಗಳಿಗೆ ಹಾನಿಯಾಗಿದೆ. ಅಂದಾಜು ₹ 20 ಲಕ್ಷ ಹಾನಿಯಾಗಿದೆ ಎಂದು ಕಂದಾಯ ಇಲಾಖೆಯ ಮೂಲಗಳು ತಿಳಿಸಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	122.85	17,627	3,474
ಹಾರಂಗಿ	2,859	2,858.30	1,232	1,250
ಕಬಿನಿ	2,284	2,283.45	4,200	5,000
ಹೇಮಾವತಿ	2,922	2,910.73	4,483	3,806
ಲಿಂಗನಮಕ್ಕಿ	1,819	1,815.20	5,677	4,288
ಸೂಪಾ (ಮೀ)	564	556.32	1,186	1,186
ಮಾಣಿ	594.36	587.08	1,164	-
ತುಂಗಭದ್ರಾ	1,633	1,632.98	27,507	23,645
ಮಲಪ್ರಭಾ	2,079.50	2,079.00	-	969
ಘಟಪ್ರಭಾ	2,175	2,174.00	175	2,911
ಭದ್ರಾ	186	186	7,414	7,414
ಆಲಮಟ್ಟಿ (ಮೀ)	519.60	519.52	-	12,187
ನಾರಾಯಣಪುರ (ಮೀ)	492.25	491.69	10,460	10,300

* ನೆಲಮಟ್ಟದಿಂದ

ಮಳೆಗೆ ಕೊಚ್ಚಿ ಹೋದ ವ್ಯಕ್ತಿ

ಮೈಸೂರು: ಜಿಲ್ಲೆಯಲ್ಲಿ ಭಾನುವಾರ ತಡರಾತ್ರಿ ಸುರಿದ ಭಾರಿ ಮಳೆಗೆ ಸಿದ್ಧಾರ್ಥನಗರದ ನಿವಾಸಿ ಎಂ.ಜೆ. ಚಂದ್ರೇಗೌಡ (61) ತಮ್ಮ ಮನೆ ಮುಂದಿನ ದೊಡ್ಡ ಮೋರಿಯಲ್ಲಿ ಕೊಚ್ಚಿಕೊಂಡು ಹೋದರು. ಅವರ ಮೃತದೇಹ ಕಾರಂಜಿಕೆರೆಯಲ್ಲಿ ಸೋಮವಾರ ಪತ್ತೆಯಾಯಿತು. ಕಾಂಪೌಂಡ್‌ಗೆ ನುಗ್ಗಿದ ನೀರನ್ನು ಹೊರಹಾಕುವ ಯತ್ನದಲ್ಲಿ ಅವರು ಕಾಲು ಜಾರಿ ಬಿದ್ದಿದ್ದು ದುರಂತಕ್ಕೆ ಕಾರಣವಾಯಿತು. ನಗರ ಹೊರವಲಯದ ಕೊಲಂಬಿಯಾ ಏಷಿಯಾ ಆಸ್ಪತ್ರೆ ರಸ್ತೆಯಿಂದ ದೇವೇಗೌಡ ವೃತ್ತದವರೆಗೆ ವರ್ತುಲ ರಸ್ತೆಯಲ್ಲಿ ಕಾರುಗಳು, ಬೈಕ್‌ಗಳು ಆಟಿಕೆಗಳಂತೆ ತೇಲಿಕೊಂಡು ಹೋದವು. ಮೈಸೂರು ತಾಲ್ಲೂಕಿನಲ್ಲಿ ಸುಮಾರು 70ಕ್ಕೂ ಹೆಚ್ಚು ಕಡೆ ಮನೆಗಳು ಕುಸಿದಿದ್ದರೆ, 7 ಸೇತುವೆಗಳು ಕೊಚ್ಚಿಕೊಂಡು ಹೋದವು. 8 ರಸ್ತೆಗಳು ಹಾನಿಗೀಡಾದವು.

ನಗರದ ಬಹುತೇಕ ರಸ್ತೆಗಳಲ್ಲಿ ಕಾಲುವೆಯಂತೆ ನೀರು ಹರಿದು, ಸಾರ್ವಜನಿಕರಲ್ಲಿ ಭೀತಿಯನ್ನು ಸೃಷ್ಟಿಸಿತ್ತು. ಚಾಮುಂಡಿಬೆಟ್ಟದ ತಪ್ಪಲಿನ ಪಂಚಗವಿ ಮಠದ ಒಂದು ಭಾಗವೂ ಕುಸಿಯಿತು. ಸಾತಗಳ್ಳಿ ಸಮೀಪದ ವರ್ತುಲ ರಸ್ತೆಯಲ್ಲಿ ಎಂಜಿನ್‌ಗೆ ನೀರು ನುಗ್ಗಿ, ಕೊಚ್ಚಿಕೊಂಡು ಹೋಗುತ್ತಿದ್ದ ಕಾರನ್ನು ಅಗ್ನಿಶಾಮಕ ಸಿಬ್ಬಂದಿ ತಡೆದು ಒಳಗಿದ್ದವರನ್ನು ರಕ್ಷಿಸಿದರು.

ಪೊಲೀಸ್ ಬಡಾವಣೆ, ಐಪಿಎಸ್ ನಗರ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳು ಕೆರೆಗಳಂತಾಗಿದ್ದವು. ಸಾತಗಳ್ಳಿ, ಅಜೀಜ್‌ಸೇಠ್ ನಗರ, ಮಧುವನ, ಜನತಾ ನಗರ, ದಟ್ಟಗಳ್ಳಿ, ಗುಂಡೂರಾವ್ ನಗರ, ಬನ್ನಿಮಂಟಪದ ಹುಡ್ಕೊ ಬಡಾವಣೆ, ಆಲನಹಳ್ಳಿ ಸೇರಿದಂತೆ ಹಲವು ತಗ್ಗುಪ್ರದೇಶಗಳ ಮನೆಗಳಿಗೆ, ಅಂಗಡಿಗಳಿಗೆ ನೀರು ನುಗ್ಗಿ ಅಪಾರ ನಷ್ಟ ಸಂಭವಿಸಿತು. ನಗರದ ತಿಪ್ಪಯ್ಯನಕೆರೆ ಹಾಗೂ ಬೋಗಾದಿ ಕೆರೆಗಳು ಕೋಡಿ ಬಿದ್ದು ಕೆರೆಯಂಚಿನ ಬಡಾವಣೆಗಳಿಗೆ ನೀರು ನುಗ್ಗಿತ್ತು. ನಗರದ ಸರಸ್ವತಿಪುರಂ, ಮೈಮುಲ್ ಸಮೀಪ, ವಿಜಯನಗರ ಬಡಾವಣೆಯಲ್ಲಿ ಹಲವು ಮರಗಳು ಉರುಳಿವೆ. ನಗರದಲ್ಲಿ 9 ಸೆಂ.ಮೀ ಮಳೆ ದಾಖಲಾಗಿದೆ. ಅ. 20ರಂದು 10 ಸೆಂ.ಮೀ ಮಳೆಯಾಗಿತ್ತು.

ಹುಣಸೂರು ತಾಲ್ಲೂಕಿನ ನಿಲುವಾಗಿಲು ಗ್ರಾಮದಲ್ಲಿ ತಡರಾತ್ರಿ ಮನೆಯೊಂದಕ್ಕೆ ನೀರು ನುಗ್ಗಿ ಅಪಾಯದಲ್ಲಿದ್ದ ನಾಲ್ವರನ್ನು ಅಗ್ನಿಶಾಮಕ ಪಡೆ ರಕ್ಷಿಸಿತು.

ಹಿಂಗಾರು ಪ್ರವೇಶ: 8 ಜಿಲ್ಲೆಗಳಲ್ಲಿ ಮಳೆ ಸಾಧ್ಯತೆ

ಬೆಂಗಳೂರು: ದಕ್ಷಿಣ ಭಾರತಕ್ಕೆ ಹಿಂಗಾರು ಸೋಮವಾರ ಪ್ರವೇಶಿಸಿದ್ದು, ರಾಜ್ಯದ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಅ.26 ಮತ್ತು 27ರಂದು ಗುಡುಗು, ಸಿಡಿಲು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಚಾಮರಾಜನಗರ, ಚಿಕ್ಕಮಗಳೂರು, ಹಾಸನ, ಕೊಡಗು, ಮಂಡ್ಯ, ಮೈಸೂರು, ರಾಮನಗರ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

'ಮುಂಗಾರು ಸಂಪೂರ್ಣವಾಗಿ ನಿರ್ಗಮಿಸಿದ್ದು, ನಿರೀಕ್ಷೆಯಂತೆ ಹಿಂಗಾರಿನ ಆಗಮನವೂ ಆಗಿದೆ. ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದ ಪರಿಣಾಮ ದಕ್ಷಿಣ ಒಳನಾಡಿನ ಕೆಲವು ಜಿಲ್ಲೆಗಳಲ್ಲಿ ಮಾತ್ರ ಎರಡು ದಿನ ಮಳೆಯಾಗುವ ಲಕ್ಷಣಗಳಿವೆ. ಉತ್ತರ ಒಳನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಮಳೆ ದಿಢೀರ್ ತಗ್ಗಿದ್ದು, ಇದೇ 30ರವರೆಗೆ ಮಳೆ ಪ್ರಮಾಣ ಕಡಿಮೆ ಇರಲಿದೆ' ಎಂದು ಇಲಾಖೆ ತಿಳಿಸಿದೆ. **ಮಳೆ–ಎಲ್ಲಿ, ಎಷ್ಟು?:** ಮೈಸೂರು ಜಿಲ್ಲೆಯ ಬಿಳಿಕೆರೆಯಲ್ಲಿ ಸೋಮವಾರ 10 ಸೆಂ.ಮೀ ಗರಿಷ್ಠ ಮಳೆಯಾಗಿದೆ. ಶ್ರೀರಂಗಪಟ್ಟಣ 7, ಹಾವೇರಿ, ರಾಮನಗರ 5, ಬೆಳ್ತಂಗಡಿ, ಸಂಡೂರು 4, ಧಾರವಾಡ, ಬಂಡೀಪುರ, ಹಾಸನ 3, ಕೊಪ್ಪಳ, ಹರಪನಹಳ್ಳಿ, ಚಿತ್ರದುರ್ಗ 2, ಸುಳ್ಯ, ಪುತ್ತೂರು, ಹಾನಗಲ್, ಟಿ.ನರಸೀಪುರ, ಕೋಲಾರ ಹಾಗೂ ಸಕಲೇಶಪುರದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ. ಕಲಬುರಗಿಯಲ್ಲಿ 34 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ಹಾಗೂ ಬೀದರ್‌ನಲ್ಲಿ 13 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಸುದ್ದಿ 2 ನಿಮಿಷ

ಚರ್ಚ್‌ಗಳ ಸಮೀಕ್ಷೆ: ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

ಬೆಂಗಳೂರು: ರಾಜ್ಯದಲ್ಲಿರುವ ಚರ್ಚ್‌ಗಳ ಸಮೀಕ್ಷೆ ನಡೆಸಲು ಹೊರಡಿಸಿರುವ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಪರಿಶೀಲಿಸಿದ ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನೋಟಿಸ್ ನೀಡಿದೆ.

ಕರ್ನಾಟಕದ ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ (ಪಿಯುಸಿಎಲ್) ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಋತು ರಾಜ್ ಅವಸ್ಥಿ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

'ಚರ್ಚ್‌ಗಳು ಇರುವ ವಿಳಾಸ, ಪ್ರಾರ್ಥನಾ ಮಂದಿರ ಇರುವ ಸರ್ವೆ ನಂಬರ್, ಖಾತೆ ಸಂಖ್ಯೆ, ಅಲ್ಲಿರುವ ಪಾದ್ರಿ ಸೇರಿ ಎಲ್ಲಾ ಮಾಹಿತಿ ಕಲೆ ಹಾಕಲು 2021ರ ಜುಲೈ 7 ಮತ್ತು 9ರಂದು ಆದೇಶಿಸಲಾಗಿದೆ. ಇದು ಅಲ್ಪಸಂಖ್ಯಾತ ಸಮುದಾಯದ ವಿರುದ್ಧದ ತಾರತಮ್ಯ ಮತ್ತು ಕಿರುಕುಳದ ಕ್ರಮ' ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.



'ಈ ಸಮೀಕ್ಷೆ ಮೂಲಕ ಚರ್ಚ್‌ಗಳ ಒಳಕ್ಕೆ ನುಸುಳುವಿಕೆಯಷ್ಟೇ ಅಲ್ಲ. ಧಾರ್ಮಿಕ ಅಲ್ಪಸಂಖ್ಯಾತರ ಖಾಸಗಿತನದ ಮೂಲಭೂತ ಹಕ್ಕಿನ ವಿರುದ್ಧದ ಗಂಭೀರ ಹಸ್ತಕ್ಷೇಪ. ಸರ್ವೆಗೆ ಹೊರಡಿಸಿರುವ ಆದೇಶವು ಕಾನೂನು ಬಾಹಿರ ಮತ್ತು ಸಂವಿಧಾನದ 41 ಮತ್ತು 21ನೇ ವಿಧಿಯ ಅಡಿಯಲ್ಲಿ ಖಾತರಿಪಡಿಸಿರುವ ಮೂಲಭೂತ ಹಕ್ಕಿನ ಉಲ್ಲಂಘನೆ' ಎಂದು ದೂರಲಾಗಿದೆ.

'ಸಮೀಕ್ಷೆ ಕಾರಣ ಏನು ಎಂಬುದನ್ನು ವಿವರಿಸಿಲ್ಲ. ಇದನ್ನು ಗಮನಿಸಿದರೆ ಸರ್ವೆ ನೆಪದಲ್ಲಿ ಅಲ್ಪಸಂಖ್ಯಾತ ಸಮುದಾಯವನ್ನು ಗುರಿಯಾಗಿಸಿಕೊಂಡು ಕಿರುಕುಳ ನೀಡುವ ಉದ್ದೇಶ ಇದೆ.

ಚರ್ಚ್‌ಗಳನ್ನು ಮಾತ್ರ ಸರ್ವೆಗೆ ಆಯ್ದುಕೊಳ್ಳುವ ಅಧಿಕಾರ ರಾಜ್ಯ ಸರ್ಕಾರಕ್ಕೆ ಇಲ್ಲ' ಎಂದು ಅರ್ಜಿದಾರರ ಪರ ವಕೀಲ ರವಿವರ್ಮಕುಮಾರ್ ವಾದಿಸಿದರು.

ಲಸಿಕೆ ಉತ್ಪಾದನೆ: ಡಿಎಫ್‌ಸಿ ನೆರವು

ಹೈದರಾಬಾದ್: ಇಲ್ಲಿನ ಬಯಾಲಜಿಕಲ್ ಇ. ಲಿಮಿಟೆಡ್ ಕಂಪನಿ ಅಭಿವೃದ್ಧಿಪಡಿಸಿರುವ ಕೋವಿಡ್–19 ಲಸಿಕೆಯ ತಯಾರಿಕೆಯನ್ನು ವಿಸ್ತರಿಸಲಾಗುತ್ತಿದೆ. ಇದಕ್ಕಾಗಿ ಅಮೆರಿಕದಿಂದ ಅಂದಾಜು ₹ 375 ಕೋಟಿ ಹಣಕಾಸು ನೆರವು ಸಿಗಲಿದೆ ಎಂಬುದನ್ನು ಅಮೆರಿಕದ ಅಂತರರಾಷ್ಟ್ರೀಯ ಅಭಿವೃದ್ಧಿ ಹಣಕಾಸು ಮಂಡಳಿ (ಡಿಎಫ್‌ಸಿ) ಮುಖ್ಯ ಸಂಚಾಲನಾ ಅಧಿಕಾರಿ (ಸಿಒಒ) ಡೇವಿಡ್ ಮಾರ್ಚಿಕ್ ಹಾಗೂ ಬಯಾಲಜಿಕಲ್ ಇ. ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕಿ ಮಹಿಮಾ ದಾತ್ಲಾ ಸೋಮವಾರ ತಿಳಿಸಿದ್ದಾರೆ.

ಲಸಿಕೆ ಉತ್ಪಾದನೆಯಲ್ಲಿನ ಈ ಸಹಯೋಗಕ್ಕೆ ಹರ್ಷ ವ್ಯಕ್ತಪಡಿಸಿರುವ ಎರಡೂ ಸಂಸ್ಥೆಗಳು, ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹಾಗೂ ಕ್ವಾಡ್‌ನ ಇತರ ಸದಸ್ಯ ರಾಷ್ಟ್ರಗಳಾದ ಭಾರತ, ಆಸ್ಟ್ರೇಲಿಯಾ, ಜಪಾನ್ ದೇಶಗಳ ಪ್ರಧಾನಿಗಳ ಬೆಂಬಲದಿಂದ ಇದು ಸಾಧ್ಯವಾಗಿದೆ ಎಂದು ಹೇಳಿವೆ.

'ಅಮೆರಿಕ ಸರ್ಕಾರದ ಹಣಕಾಸು ಬೆಂಬಲದಿಂದ ಅದರಲ್ಲೂ ಡಿಎಫ್‌ಸಿ ಬೆಂಬಲದಿಂದ ನಮಗೆ ಸಂತಸವಾಗಿದೆ. ಈ ಸಹಯೋಗವು ನಮಗೆ ಲಸಿಕೆ ತಯಾರಿಯನ್ನು ಹೆಚ್ಚಿಸುವುದಕ್ಕಷ್ಟೇ ಅಲ್ಲದೇ ಕೋವಿಡ್–19 ವಿರುದ್ಧದ ಹೋರಾಟದಲ್ಲಿ ಜಾಗತಿಕ ಸಮುದಾಯಕ್ಕೂ ನೆರವಾಗಲಿದೆ' ಎಂದು ಮಹಿಮಾ ದಾತ್ಲಾ ತಿಳಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ರಾಜಕೀಯದಲ್ಲಿ ಕೀಳು ಭಾಷೆಯ ಬಳಕೆ
ಭಾಗವಹಿಸುವವರು:
ಡಿ.ಎಚ್.ಶಂಕರಮೂರ್ತಿ, ಹಿರಿಯ ಮುಖಂಡ, ಬಿಜೆಪಿ.
ಲೀಲಾದೇವಿ ಆರ್ ಪ್ರಸಾದ್, ಹಿರಿಯ ನಾಯಕಿ, ಜೆಡಿಎಸ್.
ವಿ.ಆರ್.ಸುದರ್ಶನ್, ಸಹಾಧ್ಯಕ್ಷ, ಕೆಪಿಸಿಸಿ ಮಾಧ್ಯಮ ವಿಭಾಗ
ಸಂವಾದ ಬೆಳಿಗ್ಗೆ 11ರಿಂದ 12
ಪಾಡ್‌ಕಾಸ್ಟ್: ಪ್ರತೀ ದಿನ: ಬೆಳಿಗ್ಗೆ 7 ವಚನವಾಣಿ, ಬೆ. 7.30 ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್, ಬೆಳಿಗ್ಗೆ 9 ಪ್ರಚಲಿತ, ಬೆಳಿಗ್ಗೆ 9.30 ಸಂಪಾದಕೀಯ
ಪ್ರಜಾವಾಣಿ ಕನ್ನಡ ಧ್ವನಿ

ನ್ಯಾಯಾಲಯದ ಆದೇಶ ಪಾಲನೆ; ಯಥಾಸ್ಥಿತಿ ಮುಂದುವರಿಕೆ

ಈಗಲ್‌ಟನ್: ಗಾಲ್ಫ್ ಚಟುವಟಿಕೆ ಬಂದ್

• ಆರ್.ಜಿತೇಂದ್ರ

ರಾಮನಗರ: ಬಿಡದಿಯ ಈಗಲ್‌ಟನ್ ಗಾಲ್ಫ್ ರೆಸಾರ್ಟ್‌ನಿಂದ ಭೂ ಒತ್ತುವರಿ ಪ್ರಕರಣವು ಮತ್ತೆ ನ್ಯಾಯಾಲಯದ ಅಂಗಳ ತಲುಪಿದ್ದು, ಸದ್ಯ ನಿಷೇಧಿತ ಪ್ರದೇಶದಲ್ಲಿ ಗಾಲ್ಫ್ ಸೇರಿದಂತೆ ಎಲ್ಲ ಚಟುವಟಿಕೆಗಳು ಬಂದ್ ಆಗಿವೆ.

ಒತ್ತುವರಿ ಮಾಡಿಕೊಂಡಿರುವ 77 ಎಕರೆ 19 ಗುಂಟೆ ಜಮೀನಿಗೆ ಪ್ರತಿಯಾಗಿ ಈಗಿನ ಮಾರುಕಟ್ಟೆ ಮೌಲ್ಯದಂತೆ ₹982 ಕೋಟಿ ದಂಡ ಪಾವತಿಸಬೇಕು ಎನ್ನುವ ಆದೇಶವನ್ನು ಹೈಕೋರ್ಟ್ ಈಚೆಗೆ ಎತ್ತಿ ಹಿಡಿದಿತ್ತು. ಈ ಆದೇಶದ ಬೆನ್ನಲ್ಲೇ ಜಿಲ್ಲಾಡಳಿತವು ಜಾಗ ವಶಕ್ಕೆ ಪಡೆದು ಬೇಲಿ ನಿರ್ಮಿಸುವ ಕಾರ್ಯ ಆರಂಭಿಸಿತ್ತು.

ಆದರೆ ಮಾರುಕಟ್ಟೆ ದರ ತುಂಬಾ ದುಬಾರಿಯಾಗಿದ್ದು, ಪುನರ್ ಪರಿಶೀಲಿಸಬೇಕು ಎಂದು ಕೋರಿ ರೆಸಾರ್ಟ್ ಮಾಲೀಕರು ಹೈಕೋರ್ಟ್ ದ್ವಿಸದಸ್ಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದಾರೆ. ಇದನ್ನು ಪರಿಗಣಿಸಿರುವ ನ್ಯಾಯಾಲಯವು ಈ ಪ್ರದೇಶದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಸೂಚಿಸಿದ್ದು, ಇದೇ 28ರಂದು ಮತ್ತೆ ವಿಚಾರಣೆ ನಡೆಯಲಿದೆ. ಸದ್ಯ ರೆಸಾರ್ಟ್ ಮಾಲೀಕರು ಹಾಗೂ ಜಿಲ್ಲಾಡಳಿತ ಸಹ ಈ ಜಾಗದತ್ತ ಸುಳಿದಿಲ್ಲ. ಕಾಂಪೌಂಡ್ ನಿರ್ಮಾಣ ಕಾಮಗಾರಿ ಸಹ ಅರ್ಧಕ್ಕೆ ನಿಂತಿದೆ.

ಏನಿದು ವಿವಾದ?: ಈಗಲ್‌ಟನ್ ರೆಸಾರ್ಟ್ ಭೂವಿವಾದ ಎರಡು ದಶಕದಷ್ಟು ಹಳೆಯದು. ಚಾಮುಂಡೇಶ್ವರಿ ಬಿಲ್ಡ್‌ಟೆಕ್ ಪ್ರೈ. ಲಿ. ಕಂಪನಿಯು 1994ರಲ್ಲಿ ಬಿಡದಿಯ ಸಮೀಪ ಸುಮಾರು 400 ಎಕರೆ ಪ್ರದೇಶದಲ್ಲಿ ಈಗಲ್‌ಟನ್ ರೆಸಾರ್ಟ್, ಗಾಲ್ಫ್ ಅಂಗಳ ಹಾಗೂ ವಿಲ್ಲಾಗಳನ್ನು ನಿರ್ಮಿಸಿತ್ತು.

ಆದರೆ ಹೀಗೆ ನಿರ್ಮಿಸಲಾದ ಜಾಗದಲ್ಲಿ ಸರ್ಕಾರಿ ಗೋಮಾಳ, ರಸ್ತೆ ಮೊದಲಾದ ಸಾರ್ವಜನಿಕ ಉದ್ದೇಶಗಳಿಗೆ ಮೀಸಲಿಟ್ಟ ಜಾಗವೂ ಸೇರಿದೆ ಎಂದು ದೂರುಗಳು ದಾಖಲಾಗಿದ್ದವು. ಇಂತಹ ಪ್ರದೇಶವನ್ನು ತೆರವುಗೊಳಿಸುವಂತೆ 2008ರಲ್ಲಿ ರಾಮನಗರ ತಹಶೀಲ್ದಾರ್ ಕಂಪನಿಗೆ ನೋಟಿಸ್ ನೀಡಿದ್ದರು. ನೋಟಿಸ್ ಪ್ರಶ್ನಿಸಿ ಚಾಮುಂಡೇಶ್ವರಿ ಕಂಪನಿಯು ಭೂ ನ್ಯಾಯಾಧೀಕರಣ ಹಾಗೂ ಹೈಕೋರ್ಟ್ ಮೆಟ್ಟಿಲೇರಿತ್ತು. ಎರಡೂ ಕಡೆ ಅರ್ಜಿದಾರರಿಗೆ ಸೋಲುಂಟಾಗಿತ್ತು. ನಂತರದಲ್ಲಿ ಪ್ರಕರಣವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಈಗಲ್‌ಟನ್ ಅತಿಕ್ರಮಿಸಿರುವ ಒಟ್ಟು ಭೂಮಿಯನ್ನು ಪತ್ತೆ ಮಾಡುವಂತೆ ನ್ಯಾಯಾಲಯವು ಸೂಚನೆ ನೀಡಿತ್ತು. ಅದರ ಅನ್ವಯ ಜಿಲ್ಲಾಧಿಕಾರಿ ನೇತೃತ್ವದಲ್ಲಿ ತನಿಖೆ ನಡೆದು, ಸುಮಾರು 106.12 ಎಕರೆ ಅಕ್ರಮ ಪರಭಾರೆ ಮತ್ತು ಒತ್ತುವರಿ ಆಗಿರುವ ಬಗ್ಗೆ ಅಧಿಕಾರಿಗಳು ಸರ್ಕಾರಕ್ಕೆ ವರದಿ ನೀಡಿದ್ದರು.

'ಅತಿಕ್ರಮಿಸಿದ ಭೂಮಿಗೆ ಪ್ರತಿಯಾಗಿ ಈಗಿನ ಮಾರುಕಟ್ಟೆ ಮೌಲ್ಯದ ದರವನ್ನು ಪಾವತಿಸಿದರೆ ಕಂಪನಿಯು ಜಮೀನನ್ನು ಬಳಕೆ ಮಾಡಬಹುದು' ಎಂದು ಸುಪ್ರೀಂ ಕೋರ್ಟ್ 2014ರಲ್ಲಿ ತೀರ್ಪು ನೀಡಿತ್ತು.

2015ರಲ್ಲಿ ಈಟಲ್‌ಟನ್ ಮಾಲೀಕರು 28.33 ಎಕರೆ ಜಮೀನನ್ನು ಜಿಲ್ಲಾಡಳಿತಕ್ಕೆ ಬಿಟ್ಟುಕೊಟ್ಟಿದ್ದು, 77.19 ಎಕರೆಯನ್ನು ತಮ್ಮ ವಶದಲ್ಲೇ ಉಳಿಸಿಕೊಂಡಿದ್ದರು. ಈ ಜಮೀನಿಗೆ ಸಂಬಂಧಿಸಿ 2015ರಲ್ಲಿ ರಾಜ್ಯ ಸಚಿವ ಸಂಪುಟ ಉಪಸಮಿತಿಯು ಭೇಟಿ ನೀಡಿ ಮಾರುಕಟ್ಟೆ ದರ ಅಂದಾಜಿಸಿತ್ತು. ಅಂತಿಮವಾಗಿ ಈಗಲ್‌ಟನ್ ರೆಸಾರ್ಟ್ ಸುತ್ತಮುತ್ತ ನಡೆದ ಭೂ ಖರೀದಿ ಆಧಾರದಲ್ಲಿ 77.19 ಎಕರೆಗೆ ಒಟ್ಟು ₹982 ಕೋಟಿ ದರ ಪಾವತಿಸುವಂತೆ ರಾಮನಗರದ ಅಂದಿನ ಜಿಲ್ಲಾಧಿಕಾರಿ ಅಂದಾಜಿಸಿದ್ದರು. ಈ ದರವನ್ನು ಪ್ರಶ್ನಿಸಿ ಈಗಲ್‌ಟನ್ ಮಾಲೀಕರು ಮತ್ತೆ ನ್ಯಾಯಾಲಯದ ಮೆಟ್ಟಿಲು ಏರಿದ್ದರು. ಆದರೆ ನ್ಯಾಯಾಲಯವು ಸರ್ಕಾರದ ಆದೇಶವನ್ನು ಎತ್ತಿ ಹಿಡಿದಿತ್ತು.

ಈಗಲ್‌ಟನ್ ಗಾಲ್ಫ್ ಅಂಗಳದ ಸದ್ಯದ ಚಿತ್ರಣ

ಕ್ರೀಡಾಂಗಣ ನಿರ್ಮಾಣಕ್ಕೆ ಉತ್ಸುಕ

77 ಎಕರೆ ಜಾಗ ರಾಮನಗರ ಜಿಲ್ಲಾಡಳಿತದ ವಶವಾದ ಬೆನ್ನಲ್ಲೇ ಕ್ರೀಡಾ ಸಚಿವ ನಾರಾಯಣ ಗೌಡ ಮುಖ್ಯಮಂತ್ರಿಗೆ ಪತ್ರ ಬರೆದಿದ್ದು, ಸದರಿ ಜಾಗವನ್ನು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ನಿರ್ಮಾಣಕ್ಕೆ ಬಿಟ್ಟುಕೊಡುವಂತೆ ಕೋರಿದ್ದರು. ಬೆಂಗಳೂರು ಹೊರವಲಯದಲ್ಲಿ ವ್ಯವಸ್ಥಿತ ಕ್ರೀಡಾಂಗಣದ ಅಗತ್ಯ ಇದ್ದು, ಸರ್ಕಾರ ಜಾಗ ನೀಡಿದಲ್ಲಿ ಕ್ರೀಡಾಪಟುಗಳಿಗೆ ಅನುಕೂಲ ಆಗುತ್ತದೆ ಎಂದು ಅವರು ಪತ್ರದಲ್ಲಿ ವಿವರಿಸಿದ್ದರು.

ದರ ನಿಗದಿ ಪ್ರಶ್ನಿಸಿ ಚಾಮುಂಡೇಶ್ವರಿ ಬಿಲ್ಡ್‌ಟೆಕ್ ಕಂಪನಿಯು ಹೈಕೋರ್ಟ್ ದ್ವಿಸದಸ್ಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿದೆ. ಕೋರ್ಟ್ ಸೂಚನೆಯಂತೆ ಕಾಂಪೌಂಡ್ ನಿರ್ಮಾಣ ನಿಲ್ಲಿಸಲಾಗಿದೆ

ಕೆ. ರಾಕೇಶ್‌ಕುಮಾರ್ ಜಿಲ್ಲಾಧಿಕಾರಿ, ರಾಮನಗರ

ಮಾಲೀಕರ ವಾದವೇನು?

ಸರ್ಕಾರ ಹಾಗೂ ರಾಮನಗರ ಜಿಲ್ಲಾಡಳಿತವು 2011 ಹಾಗೂ ಅದಕ್ಕೂ ಮುನ್ನ ನಿಗದಿಪಡಿಸಿದ್ದ ಮಾರ್ಗಸೂಚಿ ದರದಂತೆ ತಾನು ದಂಡ ಪಾವತಿಸಲು ಸಿದ್ಧವಿರುವುದಾಗಿ ಚಾಮುಂಡೇಶ್ವರಿ ಬಿಲ್ಡ್‌ಟೆಕ್ ಕಂಪನಿಯು ನ್ಯಾಯಾಲಯಕ್ಕೆ ತಿಳಿಸಿದೆ. ಒಟ್ಟು ₹12.35 ಕೋಟಿ ಹಣವನ್ನು ಪಾವತಿ ಮಾಡುವುದಾಗಿ ಹೇಳಿದೆ.

ಕಾಂಗ್ರೆಸ್ ಜತೆ ಕೈಜೋಡಿಸಲು ಸಿಪಿಎಂನಲ್ಲಿ ಒಮ್ಮತ?

ನವದೆಹಲಿ: ಬಿಜೆಪಿಯ ವಿರುದ್ಧದ ಹೋರಾಟದಲ್ಲಿ ಕಾಂಗ್ರೆಸ್ ಜತೆಗೆ ಸಹಮತ ಮುಂದುವರಿಸಲು ಸಿಪಿಎಂನಲ್ಲಿ ಒಮ್ಮತ ಮೂಡಿದೆ ಎನ್ನಲಾಗಿದೆ. ಇದಕ್ಕೆ ಸಂಬಂಧಿಸಿದ ಗೊತ್ತುವಳಿಯ ರೂಪುರೇಷೆಯೊಂದನ್ನು ಭಾನುವಾರ ಮುಕ್ತಾಯವಾದ 3 ದಿನಗಳ ಸಿಪಿಎಂ ಕೇಂದ್ರ ಸಮಿತಿ ಸಭೆಯಲ್ಲಿ ಅಂಗೀಕರಿಸಲಾಯಿತು.

ಈ ರೂಪುರೇಷೆಯ ಆಧಾರದಲ್ಲಿ, ಪಾಲಿಟ್ ಬ್ಯೂರೊವು ಗೊತ್ತುವಳಿಯ ಪಠ್ಯ ಸಿದ್ಧಪಡಿಸಲಿದೆ. ಜನವರಿಯಲ್ಲಿ ನಡೆಯುವ ಸಮಿತಿ ಸಭೆಯಲ್ಲಿ ಈ ಗೊತ್ತುವಳಿಯನ್ನು ಮಂಡಿಸಲಾಗುವುದು. ಏಪ್ರಿಲ್‌ನಲ್ಲಿ ಕೇರಳದ ಕಣ್ಣೂರಿನಲ್ಲಿ ನಡೆಯಲಿರುವ ಪಕ್ಷದ ಸಭೆಯಲ್ಲಿ ಒಪ್ಪಿಗೆ ಸಿಗುವ ನಿರೀಕ್ಷೆ ಇದೆ.

ಕಾಂಗ್ರೆಸ್ ಜೊತೆ ಸಹಯೋಗ ಮುಂದುವರೆಸುವುದರ ಕುರಿತು ಕೆಲ ನಾಯಕರು ವಿರೋಧ ವ್ಯಕ್ತಪಡಿಸಿದರು. ಆದರೆ ವಾದಗಳು ನಡೆಯಲಿಲ್ಲ. ಕಾಂಗ್ರೆಸ್ ಜತೆ ಸಾಗುವುದಕ್ಕೆ ಹೆಚ್ಚಿನವರಿಂದ ಸಹಮತ ದೊರಕಿತು ಎನ್ನಲಾಗಿದೆ.

ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸ್ ನೆಲೆ ಕಳೆದುಕೊಳ್ಳುತ್ತಿದೆ. ಈಗಿನ ಪರಿಸ್ಥಿತಿಯಲ್ಲಿ ಬಿಜೆಪಿಗೆ ಸಮರ್ಥ ಎದುರಾಳಿ ಕಾಂಗ್ರೆಸ್ ಅಲ್ಲ ಎಂದು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಮಲಯಾಳ ವಾರಪತ್ರಿಕೆ 'ಚಿಂತ'ದಲ್ಲಿ ಲೇಖನ ಬರೆದಿದ್ದರು. ಈ ಹಿನ್ನೆಲೆಯಲ್ಲಿ ಒಮ್ಮತ ಮೂಡುವುದು ಕಷ್ಟ ಎಂದೇ ಭಾವಿಸಲಾಗಿತ್ತು. ಆದರೆ ಅಂಥ ವಿರೋಧ ಉಂಟಾಗಲಿಲ್ಲ ಎಂದು ಮೂಲಗಳು ಹೇಳಿವೆ.

ಹಿಂದೆ ಸರಿದ ಮುಂಗಾರು

ನವದೆಹಲಿ (ಪಿಟಿಐ): ಮುಂಗಾರು ಮಾರುತವು ಇಡೀ ದೇಶದಿಂದ ಸೋಮವಾರ ಹಿಂದೆ ಸರಿಯಿತು. 1975ರಿಂದ ಈಚೆಗೆ ಏಳು ಬಾರಿ ಮುಂಗಾರು ಮಾರುತವು ನಿಗದಿಗಿಂತ ತಡವಾಗಿ ಹಿಂದೆ ಸರಿದಿದೆ ಎಂದು ಭಾರತೀಯ ಹವಾಮಾನ ಇಲಾಖೆ ಹೇಳಿದೆ.

ದೇಶದ ಬಹುತೇಕ ಭಾಗಗಳಲ್ಲಿ ಮಳೆ ಬೀಳುವುದು ಕಡಿಮೆಯಾಗಿದೆ. ಮುಂಗಾರು ಮಾರುತ ಹಿಂದೆ ಸರಿದಿದೆ. ಹಿಂಗಾರು ಮಾರುತಗಳು ಬೀಸಲು ಆರಂಭಿಸಿದ್ದು, ದಕ್ಷಿಣ ಭಾಗಗಳಲ್ಲಿ ಮಳೆ ಆರಂಭವಾಗಿವೆ ಎಂದು ಹವಾಮಾನ ಇಲಾಖೆ ಹೇಳಿದೆ.

2010ರಿಂದ 2021ರ ವರೆಗೆ 5 ಬಾರಿ ಮುಂಗಾರು ಅ.25ರಂದು ಹಿಂದಕ್ಕೆ ಹೋಗಿದೆ. 2010, 2016, 2017, 2020 ಮತ್ತು 2021ರಲ್ಲಿ ಈ ವಿದ್ಯಮಾನ ನಡೆದಿವೆ ಎಂದು ಹವಾಮಾನ ಇಲಾಖೆ ದತ್ತಾಂಶ ಹೇಳುತ್ತದೆ.

ಮುಂಗಾರು ಮಾರುತವು ಆಗ್ನೇಯ ದಿಕ್ಕಿನಿಂದ ಹಿಂದೆ ಸರಿಯುವ ಪ್ರಕ್ರಿಯೆ ಸಾಮಾನ್ಯವಾಗಿ ಸೆ.17ರಿಂದ ನಡೆಯುತ್ತದೆ. 2020ರಲ್ಲಿ ಸೆ.28ರಂದು ಈ ಪ್ರಕ್ರಿಯೆ ಆರಂಭವಾಗಿತ್ತು. 2019ರಲ್ಲಿ ಅ.9ರಂದು ಆರಂಭವಾಗಿತ್ತು. 2018ರಲ್ಲಿ ಸೆ.29ರಂದು ನಡೆದಿತ್ತು. 2017ರಲ್ಲಿ ಸೆ.27ರಂದು ನಡೆದಿತ್ತು. 2016ರಲ್ಲಿ ಸೆ.15ರಂದು ನಡೆದಿತ್ತು ಎಂದು ಹವಾಮಾನ ಇಲಾಖೆಯ ದಾಖಲೆಯಲ್ಲಿ ಹೇಳಲಾಗಿದೆ.

ಜೂನ್‌ನಿಂದ ಸೆಪ್ಟೆಂಬರ್ ವರೆಗಿನ ಮುಂಗಾರು ಋತುವಿನ ನಾಲ್ಕು ತಿಂಗಳ ಅವಧಿಯಲ್ಲಿ ದೇಶ ಸಾಧಾರಣ ಮಳೆ ಪಡೆದಿದೆ. ಈ ಅವಧಿಯಲ್ಲಿ ದೇಶದಲ್ಲಿ 87 ಸೆಂ. ಮೀ. ಮಳೆಯಾಗಿದೆ. 1961ರಿಂದ 2010ರ ವರೆಗಿನ ದೀರ್ಘಾವಧಿಯ ಸರಾಸರಿ 88 ಸೆಂ.ಮೀ.ಗೆ ಹೋಲಿಸಿದರೆ ಇದು ಅಲ್ಪ ಕಡಿಮೆ. ಸತತ ಮೂರನೇ ವರ್ಷ ದೇಶದಲ್ಲಿ ಸಾಧಾರಣ ಅಥವಾ ಸಾಧಾರಣಕ್ಕಿಂತ ಸ್ವಲ್ಪ ಹೆಚ್ಚು ಮಳೆ ದಾಖಲಾಗುತ್ತಿದೆ.

ಈ ಬಾರಿ ವಾಡಿಕೆಗಿಂತ ಜೂನ್‌ನಲ್ಲಿ ಶೇ 110ರಷ್ಟು, ಜುಲೈನಲ್ಲಿ ಶೇ 93ರಷ್ಟು ಮತ್ತು ಆಗಸ್ಟ್‌ನಲ್ಲಿ ಶೇ 76ರಷ್ಟು ಮಳೆಯಾಗಿದೆ. ಸೆಪ್ಟೆಂಬರ್‌ನಲ್ಲಿ ದಾಖಲೆಯ ಶೇ 135ರಷ್ಟು ಮಳೆಯಾಗಿದೆ.

ವಾರಾಣಸಿಯಲ್ಲಿ ₹5,200 ಕೋಟಿಗೂ ಅಧಿಕ ವೆಚ್ಚದ ಅಭಿವೃದ್ಧಿ ಯೋಜನೆಗಳಿಗೆ ಉದ್ಘಾಟನೆ

ಆರೋಗ್ಯ ಮೂಲಸೌಕರ್ಯ ಯೋಜನೆಗೆ ಚಾಲನೆ

ವಾರಾಣಸಿ (ಪಿಟಿಐ): ದೇಶದಲ್ಲಿ ಬೃಹತ್ ಪ್ರಮಾಣದಲ್ಲಿ ಆರೋಗ್ಯ ಮೂಲ ಸೌಕರ್ಯ ಬಲಪಡಿಸುವ ಅತಿ ದೊಡ್ಡ ಯೋಜನೆಯಾಗಿರುವ 'ಪ್ರಧಾನ ಮಂತ್ರಿ ಆಯುಷ್ಮಾನ್ ಭಾರತ ಆರೋಗ್ಯ ಮೂಲ ಸೌಕರ್ಯ ಮಿಷನ್'ಗೆ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಇಲ್ಲಿ ಚಾಲನೆ ನೀಡಿದರು.

ನಗರ ಮತ್ತು ಗ್ರಾಮೀಣ ಭಾಗದಲ್ಲಿ ಸಾರ್ವಜನಿಕ ಆರೋಗ್ಯ ಮೂಲಸೌಕರ್ಯ ಕ್ಷೇತ್ರದಲ್ಲಿ ಪ್ರಮುಖ ಆರೈಕೆ ಮತ್ತು ಪ್ರಾಥಮಿಕ ಆರೈಕೆ ಸೌಲಭ್ಯಗಳ ನಡುವಿರುವ ವ್ಯತ್ಯಾಸವನ್ನು ಕಡಿಮೆಗೊಳಿಸಲು ಈ ಯೋಜನೆ ಸಹಕಾರಿಯಾಗಿದೆ. ಇದು 10 ಪ್ರಮುಖ ರಾಜ್ಯಗಳಲ್ಲಿ ಗುರುತಿಸಿರುವ 17,788 ಗ್ರಾಮೀಣ ಆರೋಗ್ಯ ಮತ್ತು ಕಲ್ಯಾಣ ಕೇಂದ್ರಗಳಿಗೆ ನೆರವು ನೀಡುತ್ತದೆ. ಉಳಿದಂತೆ ಎಲ್ಲ ರಾಜ್ಯಗಳಲ್ಲಿ 11,024 ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕೇಂದ್ರಗಳನ್ನು ಆರಂಭಿಸಲು ನೆರವು ನೀಡುತ್ತದೆ.

ಈ ಯೋಜನೆಯ ಮೂಲಕ 5 ಲಕ್ಷ ಜನಸಂಖ್ಯೆಗಿಂತ ಅಧಿಕ ಜನಸಂಖ್ಯೆ ಇರುವ ದೇಶದ ಎಲ್ಲಾ ಜಿಲ್ಲೆಗಳಲ್ಲಿನ ಜಿಲ್ಲಾ ಆಸ್ಪತ್ರೆಗಳಲ್ಲಿ ಪ್ರತ್ಯೇಕ ವಿಭಾಗಗಳ ಮೂಲಕ ಪ್ರಮುಖ ಆರೈಕೆ ಸೌಲಭ್ಯ ದೊರಕಲಿದೆ. ಪ್ರತಿ ಜಿಲ್ಲೆಯಲ್ಲೂ ಸಮಗ್ರ ಸಾರ್ವಜನಿಕ ಆರೋಗ್ಯ ಪ್ರಯೋಗಾಲಯಗಳನ್ನು ಸ್ಥಾಪಿಸಲಾಗುತ್ತದೆ.ಮೋದಿ ಅವರು ಇದಕ್ಕೂ ಮೊದಲು ಉತ್ತರ ಪ್ರದೇಶದಲ್ಲಿ ಒಂಬತ್ತು ವೈದ್ಯಕೀಯ ಕಾಲೇಜುಗಳನ್ನು ಉದ್ಘಾಟಿಸಿದರು. ಅಲ್ಲದೆ ತಮ್ಮ ಲೋಕಸಭಾ ಕ್ಷೇತ್ರದಲ್ಲಿ ₹5,200 ಕೋಟಿಗೂ ಅಧಿಕ ವೆಚ್ಚದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಕೂಡ ಉದ್ಘಾಟಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು 'ಪ್ರಧಾನ ಮಂತ್ರಿ ಆಯುಷ್ಮಾನ್ ಭಾರತ ಆರೋಗ್ಯ ಮೂಲ ಸೌಕರ್ಯ ಮಿಷನ್'ಗೆ ಸೋಮವಾರ ವಾರಾಣಸಿಯಲ್ಲಿ ಚಾಲನೆ ನೀಡಿದರು. ಉತ್ತರ ಪ್ರದೇಶದ ರಾಜ್ಯಪಾಲ ಆನಂದಿಬೆನ್ ಪಟೇಲ್, ಹಾಗೂ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಇದ್ದಾರೆ– ಪಿಟಿಐ ಚಿತ್ರ

'ಬಿಜೆಪಿಗೆ ಸೋಲುವ ಭೀತಿ'

ಲಖನೌ: 'ಉತ್ತರಪ್ರದೇಶದಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಸೋಲುವ ಭೀತಿ ಎದುರಾಗಿದೆ. ಹಾಗಾಗಿ, ಬಿಜೆಪಿ ಸರ್ಕಾರವು ಹಲವು ಯೋಜನೆಗಳನ್ನು ಉದ್ಘಾಟಿಸುತ್ತಿದ್ದು, ಕೆಲವು ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸುತ್ತಿದೆ' ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಸೋಮವಾರ ಆರೋಪಿಸಿದ್ದಾರೆ.

ಸೋಮವಾರ ವರ್ಚ್ಯುವಲ್ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರಪ್ರದೇಶದ 9 ವೈದ್ಯಕೀಯ ಕಾಲೇಜುಗಳಿಗೆ ಚಾಲನೆ ನೀಡಿ, ಈ ಹಿಂದಿನ ಸರ್ಕಾರವನ್ನು ಟೀಕಿಸಿ ಮಾತನಾಡಿದ ಬಳಿಕ, ಅಖಿಲೇಶ್ ಪ್ರತಿಕ್ರಿಯೆ ನೀಡಿದ್ದಾರೆ.

ಮೀಸಲಾತಿ ನಿಗದಿ ಪ್ರಶ್ನಿಸಿ ಸಲ್ಲಿಸಿದ ಅರ್ಜಿ ವಿಚಾರಣೆ 28ಕ್ಕೆ

ನೀಟ್–ಪಿಜಿ ಕೌನ್ಸೆಲಿಂಗ್‌ಗೆ 'ಸುಪ್ರೀಂ' ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಇತರ ಹಿಂದುಳಿದ ವರ್ಗ (ಒಬಿಸಿ) ಹಾಗೂ ಆರ್ಥಿಕವಾಗಿ ದುರ್ಬಲ ವರ್ಗಕ್ಕೆ (ಇಡಬ್ಲ್ಯುಎಸ್) ವೈದ್ಯ ಶಿಕ್ಷಣದ ಅಖಿಲ ಭಾರತ ಕೋಟಾದಲ್ಲಿ ನಿಗದಿ ಮಾಡಿದ ಮೀಸಲಾತಿ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳನ್ನು ಇತ್ಯರ್ಥಪಡಿಸುವವರೆಗೆ ನೀಟ್ ಸ್ನಾತಕೋತ್ತರ ಕೌನ್ಸೆಲಿಂಗ್ ಪ್ರಕ್ರಿಯೆ ಆರಂಭಿಸಬಾರದು ಎಂದು ಸುಪ್ರೀಂ ಕೋರ್ಟ್, ಕೇಂದ್ರ ಸರ್ಕಾರಕ್ಕೆ ಸೋಮವಾರ ನಿರ್ದೇಶಿಸಿದೆ.

ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು ಈ ಬಗ್ಗೆ ತುರ್ತು ವಿಚಾರಣೆ ನಡೆಸಿತು.

ಕೇಂದ್ರ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಯ ವಿಚಾರಣೆ ಬಾಕಿ ಇದ್ದಾಗಲೇ ಕೌನ್ಸೆಲಿಂಗ್ ಪ್ರಕ್ರಿಯೆ ಮುಗಿದು ಹೋಗಲಿದೆ. ನ್ಯಾಯಾಲಯ ಮಧ್ಯ ಪ್ರವೇಶಿಸಬೇಕು ಎಂದು ಅರ್ಜಿದಾರರ ಪರವಾಗಿ ಹಾಜರಿದ್ದ ಹಿರಿಯ ವಕೀಲ ಅರವಿಂದ್ ದಾತಾರ್ ಮನವಿ ಮಾಡಿದರು. ಕೌನ್ಸೆಲಿಂಗ್ ಪ್ರಕ್ರಿಯೆ ಇದೇ 24ರಿಂದ ಆರಂಭವಾಗಿದ್ದು, 29ಕ್ಕೆ ಕೊನೆಗೊಳ್ಳಲಿದೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು.

ಆದರೆ, ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್, ಈ ಅಧಿಸೂಚನೆಯು ಸೀಟುಗಳ ಪರಿಶೀಲನೆಗಾಗಿ ಮಾತ್ರ ಹೊರಡಿಸಲಾದದ್ದು ಎಂದು ತಿಳಿಸಿದರು.

ಆದರೂ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ತಡೆಯುವಂತೆ ಆರೋಗ್ಯ ಸೇವೆಗಳ ನಿರ್ದೇಶನಾಲಯಕ್ಕೆ ಸೂಚಿಸಿದ ನ್ಯಾಯಾಲಯ, ಮೀಸಲಾತಿ ಸಿಂಧುತ್ವದ ಅರ್ಜಿಯ ವಿಚಾರಣೆಯನ್ನು ಇದೇ 28ಕ್ಕೆ ನಿಗದಿ ಮಾಡಿತು.

ವಾರ್ಷಿಕ ₹8 ಲಕ್ಷಕ್ಕಿಂತ ಕಡಿಮೆ ಆದಾಯ ಇರುವ ಇಡಬ್ಲ್ಯುಎಸ್ ವರ್ಗದವರು ಮೀಸಲಾತಿಗೆ ಅರ್ಹರು ಎಂಬ ಮಾನದಂಡವನ್ನು ರೂಪಿಸಲಾಗಿದೆ. ವಾರ್ಷಿಕ ₹8 ಲಕ್ಷಕ್ಕಿಂತ ಹೆಚ್ಚಿನ ಆದಾಯ ಇರುವ ಒಬಿಸಿ ವರ್ಗದವರನ್ನು ಕೆನೆಪದರ ಎಂದು ಗುರುತಿಸಿ ಮೀಸಲಾತಿ ವ್ಯಾಪ್ತಿಯಿಂದ ಹೊರಗೆ ಇರಿಸಲಾಗಿದೆ. ಇಡಬ್ಲ್ಯುಎಸ್ ವರ್ಗದವರಿಗೆ ₹8 ಲಕ್ಷದ ಆದಾಯ ಮಿತಿ ನಿಗದಿ ಮಾಡಲು ಯಾವ ಮಾನದಂಡ ಅನುಸರಿಸಲಾಗಿದೆ ಎಂಬುದನ್ನು ವಿವರಿಸಬೇಕು ಎಂದು ಕೋರಿ ಹಲವಾರು ಅರ್ಜಿಗಳು ಸಲ್ಲಿಕೆಯಾಗಿವೆ.

ಈ ಬಗ್ಗೆ ಅ.21ರಂದು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದ್ದ ನ್ಯಾಯಾಲಯವು, ಯಾವ ಮಾನದಂಡ ಇಟ್ಟುಕೊಂಡು ಈ ಆದಾಯ ಮಿತಿ ನಿಗದಿಪಡಿಸಲಾಗಿದೆ ಎಂದೂ ಕೇಳಿತ್ತು.

ಹವ್ಯಾಸಗಳಿಗೆ ಹತ್ತಿರ ಒತ್ತಡಗಳಿಂದ ದೂರ

ರಮ್ಯಾ ಶ್ರೀಹರಿ

ಬದುಕನ್ನು ಆಗಾಗ ಹೊಸ ಬೆಳಕಿನ ಪ್ರಭೆಯಲ್ಲಿ ಅವಲೋಕಿಸಿ, ಹಳೆಯದನ್ನು ತ್ಯಜಿಸಿ, ಹೊಸತನವನ್ನು ರೂಢಿಸಿಕೊಳ್ಳದಿದ್ದರೆ ಜೀವನದ ಉತ್ಸಾಹವೂ ಸೌಂದರ್ಯವೂ ಸವಿಯೂ ಕಳೆದುಹೋಗಿ ಪ್ರತಿದಿನವೂ ಹೊರಲಾರದ ಭಾರ ಹೊತ್ತುಕೊಂಡು ಆಯಾಸಪಡಬೇಕಾದೀತು. ನಿಂತ ನೀರು ಒತ್ತಡವನ್ನು ಸೃಷ್ಟಿಸಿ, ಹರಿದು ಹಗುರಾಗುವ ಮಾರ್ಗವಿಲ್ಲದೆ ಮಲಿನವಾಗುವುದರ ಜೊತೆಗೆ ಹಿಡಿದಿಟ್ಟ ಕಟ್ಟಡದ ಬುನಾದಿಯನ್ನೇ ಅಭದ್ರಗೊಳಿಸುತ್ತದೆ.

ಜೀವನದ ಅನೇಕ ಸವಾಲುಗಳಿಗೆ, ಬೇಸರ, ಒತ್ತಡ, ಅಶಾಂತಿ, ಅತೃಪ್ತಿಗಳಿಗೆ ಚಲನಶೀಲತೆಯೊಂದೇ ಪರಿಹಾರ. ಕಹಿ ಘಟನೆಗಳನ್ನು, ಕಹಿ ಸಂಬಂಧಗಳನ್ನು, ಸೋಲು, ನೋವು, ನಿರಾಸೆ, ಅವಮಾನಗಳನ್ನು ಎಷ್ಟೆಂದು ಒಳಗಿಟ್ಟುಕೊಳ್ಳುವುದು? ಪದೇ ಪದೇ ಅವುಗಳನ್ನೇ ನೆನೆಸಿಕೊಂಡು ಕೊರಗುವುದರಲ್ಲಿ ಯಾವ ಪುರುಷಾರ್ಥ ಸಾಧನೆಯಿದೆ? ಅವುಗಳನ್ನು ಹಿಂದೆ ಬಿಟ್ಟು ಒಂದೇ ಒಂದು ಹೆಜ್ಜೆ ಮುಂದಿಟ್ಟರೂ ಸಾಕು ಕಣ್ಣ ಮುಂದೆಯೇ ಇರುವ ಅನಂತ ಅವಕಾಶಗಳೂ, ಬಿಡುಗಡೆಯ ದಾರಿಗಳೂ ಕಾಣುವುವು.

ಅನುದಿನವೂ ಅನುರಣಿಸುವ ಏಕತಾನತೆಯನ್ನು, ಉತ್ತರವೇ ಇರದ ಪ್ರಶ್ನೆಗಳ ಸುಳಿಯನ್ನು ಬಿಡಿಸಿಕೊಂಡು ಮುಂದಡಿಯಿಡುವ ಚೈತನ್ಯವನ್ನು ಹವ್ಯಾಸಗಳು ನಮಗೆ ಒದಗಿಸುತ್ತವೆ.

> ಅನುದಿನವೂ ಅನುರಣಿಸುವ ಏಕತಾನತೆಯನ್ನು, ಉತ್ತರವೇ ಇರದ ಪ್ರಶ್ನೆಗಳ ಸುಳಿಯನ್ನು ಬಿಡಿಸಿಕೊಂಡು ಮುಂದಡಿಯಿಡುವ ಚೈತನ್ಯವನ್ನು ಹವ್ಯಾಸಗಳು ನಮಗೆ ಒದಗಿಸುತ್ತವೆ.

ಎಲ್ಲ ಸಮಸ್ಯೆಗಳನ್ನು ಭೂತಗನ್ನಡಿಯಲ್ಲಿ ನೋಡುವ ಮನಸ್ಸಿನ ತ್ರಾಸದಾಯಕ ಕೆಲಸಕ್ಕೆ ವಿರಾಮ ನೀಡಿ, ಸಮಸ್ಯೆಗಳು ಎಂದರೆ ವಿಶಾಲ ನೀಲಾಗಸದಲ್ಲಿ ತೇಲಿಹೋಗುತ್ತಿರುವ ಸಣ್ಣ ಮೋಡವಷ್ಟೇ ಎನಿಸುವ ನಿರಾತಂಕ, ಹಗುರ ಭಾವವನ್ನು ಹವ್ಯಾಸಗಳಿಂದ ಮೈಗೂಡಿಸಿಕೊಳ್ಳುವುದು ಸಾಧ್ಯವಿದೆ. ನಾವು ದಿನನಿತ್ಯದ ಏಳು ಬೀಳುಗಳನ್ನು ಎಷ್ಟು ಸುಲಲಿತವಾಗಿ, ಸರಾಗವಾಗಿ ನಿರ್ವಹಿಸುತ್ತೇವೆ ಎನ್ನುವುದರ ಆಧಾರದ ಮೇಲೆ ನಾವೆಷ್ಟು ಪ್ರಬುದ್ಧರಾಗುತ್ತಿದ್ದೇವೆ ಎನ್ನುವುದನ್ನು ಅಳೆಯಬಹುದು. ಎಲ್ಲವನ್ನೂ ಬಹಳ ಕಷ್ಟಪಟ್ಟು ಪ್ರಯಾಸದಿಂದ ಮಾಡಬೇಕು ಎನ್ನುವುದು ನಮ್ಮ ಭ್ರಮೆಯಷ್ಟೇ. ನಮ್ಮ ಬದುಕಿನ ಮೇಲೆ ಸಂಪೂರ್ಣ ಹಿಡಿತ ಸಾಧಿಸಬೇಕೆನ್ನುವ ಒತ್ತಡದಿಂದ ಉಂಟಾದ ಈ ಸ್ವಭಾವವನ್ನು ಕೈಬಿಟ್ಟು ಹರಿಯುವ, ಹಾರುವ, ಕುಣಿದು ಕುಪ್ಪಳಿಸಿವ, ನಲಿಯುವ ಪ್ರಾಕೃತಿಕ ಚಲನಶೀಲತೆಯನ್ನು, ಬಾಲ್ಯದ ವಿನೋದವನ್ನು, ನಿರಾಳತೆಯ ಸೌಖ್ಯವನ್ನು ಕಂಡುಕೊಳ್ಳುವ ವಿಧಾನವೇ ಹವ್ಯಾಸಗಳು. ವಿರಾಮದ ವೇಳೆಯಲ್ಲಿ ನಾವೇನು ಮಾಡುತ್ತೇವೆ ಎನ್ನುವುದು ನಮ್ಮ ಅಭಿರುಚಿ, ವ್ಯಕ್ತಿತ್ವ, ಜೀವನದೃಷ್ಟಿಯನ್ನು ತಿಳಿಸಿಕೊಡುತ್ತದೆಯಾದ್ದರಿಂದ ಒಬ್ಬರನ್ನೊಬ್ಬರು ಪರಿಚಯ ಮಾಡಿಕೊಳ್ಳುವಾಗ ಪರಸ್ಪರರ ಹವ್ಯಾಸಗಳೇನು ಎಂದು ತಿಳಿದುಕೊಳ್ಳಲು ಇಚ್ಛಿಸುತ್ತೇವೆ.

ಹವ್ಯಾಸಗಳು ಸರಳವಾಗಿರಬೇಕು; ಹೆಚ್ಚು ಖರ್ಚಿಲ್ಲದ, ಸಮಯವನ್ನು, ಮನೆಯ ಸ್ಥಳಾವಕಾಶವನ್ನು ಅತಿಯಾಗಿ ಬೇಡದ, ಆದಷ್ಟೂ ಮತ್ತೊಬ್ಬರ ಸಹಾಯವಿಲ್ಲದೆ ಒಂಟಿಯಾಗಿಯೇ ಮಾಡಬಹುದಾದ ಕ್ರಿಯೆಗಳಾಗಿರಬೇಕು. ಓದುವುದು ಹಲವರ ಹವ್ಯಾಸವಾದರೂ ತೀರ ಒತ್ತಡಕ್ಕೆ ಒಳಗಾದಾಗ ಹೊಸ ವಿಚಾರಗಳನ್ನು, ಸಂಕೀರ್ಣ ವಿಷಯಗಳನ್ನು ಗ್ರಹಿಸುವುದು ಕಷ್ಟ. ಹಾಗಾಗಿ ಒತ್ತಡ ನಿವಾರಿಸಬಲ್ಲ, ಸುಲಭ ಓದಿಗೆ ಸಿಗಬಲ್ಲ ನಮ್ಮ ನೆಚ್ಚಿನ ವಸ್ತು-ವಿಷಯ, ಲೇಖಕರ, ಪುಸ್ತಕಗಳ ಪಟ್ಟಿ ಮಾಡಿಕೊಳ್ಳುವುದು ಒಳ್ಳೆಯದು; ಅಂತಹ ಪುಸ್ತಕಗಳ ಸಂಗ್ರಹಣೆಯೂ ಒಂದು ಉತ್ತಮ ಹವ್ಯಾಸ. ಪ್ರತಿಯೊಂದು ಸಾರಿ ಓದಿದಾಗಲೂ ಹೊಸ ಹೊಳಹು ಮೂಡಿಸಬಲ್ಲ ಕಾವ್ಯದ ಪುಸ್ತಕಗಳು, ಸಾಧಾರಣ ವಿಷಯಗಳ ಅಸಾಧಾರಣ ರಸಮಯ ನಿರೂಪಣೆಯಿಂದ ಮನಮುಟ್ಟುವ ಕೃತಿಗಳನ್ನು ಒತ್ತಡ ನಿವಾರಣೆಯ ಸಲಕರಣೆಗಳನ್ನಾಗಿ ಉಪಯೋಗಿಸಬಹುದು.

ಕಲಿಕೆಯು ನೆಮ್ಮದಿಯನ್ನು ನೀಡುತ್ತದಾದರೂ ಒತ್ತಡದಲ್ಲಿ ಸಿಲುಕಿದ್ದಾಗ ಹೆಚ್ಚು ಕಲಿಯುವುದು ಸಾಧ್ಯವಿಲ್ಲ. ಹಾಗಾಗಿ ಹವ್ಯಾಸ ತೀರ ಕಲಿಕಾ ಕೇಂದ್ರಿತವಾಗಿಯೂ, ಯಾವುದೋ ಗುರಿ ಮುಟ್ಟುವ ಕ್ರಿಯೆಯಾಗಿಯೂ ಇರದಿದ್ದರೆ ಒಳಿತು. ಪರಿಪೂರ್ಣತೆ ಎನ್ನುವ ಗೀಳಿಗೆ ಹವ್ಯಾಸಗಳನ್ನು ಮಂಕಾಗಿಸುವ, ಅವನ್ನು ನಾವು ಬೇರೆಯವರೊಡನೆ ಹಂಚಿಕೊಳ್ಳಲು ನಾಚುವಂತೆ ಮಾಡುವ ವಿಕೃತಿಯಿದೆ. ಹಾಗಾಗಿ ಪರಿಪೂರ್ಣತೆಯ ಗೀಳಿನಿಂದ ತಪ್ಪಿಸಿಕೊಂಡು ಆತ್ಮವಿಶ್ವಾಸ ಹೊಂದುವುದು ಅನಿವಾರ್ಯ. ಹವ್ಯಾಸಗಳು ಕ್ರಿಯಾಶೀಲತೆಯನ್ನು ಪ್ರಚೋದಿಸುವಂತಿರಬೇಕು.

ಕಲೆಯಷ್ಟು ಒತ್ತಡ ನಿವಾರಕ ಮತ್ತೊಂದಿಲ್ಲ. ಬಣ್ಣಗಳ ಸಹವಾಸ ಮನಸ್ಸಿನ ಕೊಳೆಯನ್ನು ತೊಳೆಯಬಲ್ಲದು. ಒಂದು ಕ್ಯಾನ್ವಾಸಿನ ಮೇಲೆ ಸುಮ್ಮನೆ ಎರಡು ಅಕ್ರಿಲಿಕ್ ಬಣ್ಣಗಳನ್ನು (ತಿಳಿನೀಲಿ, ಗುಲಾಬಿ, ಹಳದಿ-ಹಸಿರು) ಕಲೆಸುತ್ತಾ, ಬಿಳಿ ಬಣ್ಣವನ್ನು ಬೆರೆಸಿ ತಿಳಿಯಾಗಿಸುತ್ತಾ, ಇನ್ನೆರಡು ಹೊಂದಿಕೊಳ್ಳುವ ಬಣ್ಣಗಳನ್ನು ಪಕ್ಕದಲ್ಲಿ ಸೇರಿಸುತ್ತಾ, ಬಣ್ಣಗಳು ಹರಡುವ, ಸೇರುವ, ಸೇರಿ ಬೇರೆ ಬಣ್ಣವಾಗುವ ಆಟ ನೋಡುತ್ತಾ, ಕ್ಯಾನ್ವಾಸ್ ಎಲ್ಲ ಬಣ್ಣದಿಂದ ತುಂಬಿದ ಮೇಲೆ, ಒಂದು ಸುಲಭವಾದ ಮರ, ಮೀನು, ಮುಖ ಏನನ್ನಾದರೂ ಕಪ್ಪುಬಣ್ಣದಲ್ಲಿ ಬರೆದು ನಂತರ ಅದನ್ನು ಸುಂದರ ಚಿತ್ರವಾಗಿಯೂ, ಮನದ ದುಗುಡ ಕಳೆದ ಸಂಕೇತವಾಗಿಯೂ ಗೋಡೆಗೆ ತೂಗುಹಾಕಬಹುದು. ಒಳಾಂಗಣ ಅಲಂಕಾರ ಮತ್ತು ಅದರ ಅವಿಭಾಜ್ಯ ಅಂಗಗಳಾದ ಬೇಡದ ವಸ್ತುಗಳನ್ನು ಹೊರಗೆಸೆಯುವ ಡಿ-ಕ್ಲಟರಿಂಗ್, ಪೀಠೋಪಕರಣಗಳ ಮರುಜೋಡಣೆ, ಒಳಾವರಣಕ್ಕೆ ಹೊಂದಿಕೆಯಾಗುವ ಸುಂದರವಾದ ವಸ್ತುಗಳ ಆಯ್ಕೆ, ನಮ್ಮ ಸ್ಪೇಸನ್ನು ಬದಲಾಯಿಸುವುದರ ಮೂಲಕ ನಮ್ಮ ಮೂಡನ್ನೂ ಬದಲಾಯಿಸುತ್ತದೆ.

ಮನವನ್ನು ಅರಳಿಸಲು ಕಾಗದದಂತಹ ಮಾಂತ್ರಿಕ ಮಾಧ್ಯಮ ಮತ್ತೊಂದಿಲ್ಲ. ಅದರ ನಯವಾದ ಮೈಯನ್ನು ಮಡಿಸಿ ಬೇಕಾದ ಆಕಾರಕ್ಕೆ ಸುಲಭವಾಗಿ ಬಾಗಿಸಿ ಬಳುಕಿಸುವ ಓರಿಗಮಿ, ಪೇಪರ್ ಕ್ವಿಲ್ಲಿಂಗ್ ಮುಂತಾದವು; ಹಾಗೆಯೇ ಕಸೂತಿ, ರಂಗೋಲಿ ಮುಂತಾದ ಪಾರಂಪರಿಕ ಕಲೆಗಳು ಒತ್ತಡವನ್ನು ನಿವಾರಿಸುವಲ್ಲಿ ಯಾವ ಧ್ಯಾನಕ್ಕೂ ಕಡಿಮೆಯಿಲ್ಲ.

ಹವ್ಯಾಸ ಅಂದ ತಕ್ಷಣ ಮನಸ್ಸಿಗೆ ಬರುವ ಬಾಲ್ಯದಲ್ಲಿ ಆಪ್ಯಾಯಮಾನವಾಗಿದ್ದ ಅಂಚೆಚೀಟಿ, ನಾಣ್ಯ, ಪ್ರವಾಸಿತಾಣಗಳ ಫೋಟೊ ಸಂಗ್ರಹಣೆಯಂತೆ ಅನೇಕ ನಮ್ಮಿಷ್ಟದ ವಸ್ತುಗಳನ್ನು ಸಂಗ್ರಹಿಸಬಹುದು. ಕಲಾತ್ಮಕ ಕಿವಿಯೋಲೆ, ಕೀಚೈನುಗಳು, ಸಣ್ಣ ಸಣ್ಣ ಆಟಿಕೆ, ಬೊಂಬೆಗಳು, ಕರಕುಶಲ ವಸ್ತುಗಳು, ಗ್ರೀಟಿಂಗ್ ಕಾರ್ಡುಗಳು, ದೃಶ್ಯಕಲಾ ಪ್ರದರ್ಶನಗಳಲ್ಲಿ ಸಿಗುವ ಆರ್ಟ್ ಕ್ಯಾಟಲಾಗ್‌ಗಳು, ನಾವು ವೀಕ್ಷಿಸಿದ ಕಾರ್ಯಕ್ರಮಗಳ, ಭೇಟಿಕೊಟ್ಟ ವಿಶಿಷ್ಟ ತಾಣಗಳ ಮಾಹಿತಿ-ಪತ್ರಿಕೆಗಳು ಇನ್ನೂ ಅನೇಕ ಇಂತಹ ವಸ್ತುಗಳನ್ನು ಸಂಗ್ರಹಿಸಿ ನೆನಪಿನ ಪುಟಗಳನ್ನು ತಿರುವಿಹಾಕುವಂತೆ ಆಗಾಗ ನೋಡುತ್ತಿದ್ದರೆ ನಮ್ಮ ಲೋಕ ನಾವು ಬಾಳಿದ ಬದುಕಿನ ನೆನಪಿನಲ್ಲಿ ಸುಭದ್ರವಾಗಿದೆ ಎನ್ನುವ ಸಮಾಧಾನ ದೊರೆತು ಒತ್ತಡ ನಿವಾರಣೆಯಾಗುತ್ತದೆ. ❖

ಊಟದಲ್ಲಿರಲಿ 6 ರಸಗಳು

ಡಾ. ವಿಜಯಲಕ್ಷ್ಮಿ ಪಿ.

ಕೆಲವರು ಸಿಹಿಪ್ರಿಯರಾದರೆ ಕೆಲವರು ಹುಳಿಪ್ರಿಯರು; ಖಾರವನ್ನು ಬಯಸುವವರು ಕೆಲವರಾದರೆ, 'ಉಪ್ಪಿಗಿಂತ ರುಚಿ ಇಲ್ಲ' ಎಂಬಂತೆ ಯಾವುದೇ ಆಹಾರಕ್ಕಾದರೂ ಉಪ್ಪು ಬೇಕೇ ಬೇಕು. ಸಿಹಿಯಿಂದ ಶುಗರ್ ಬರುತ್ತದೆಂದೂ, ಹುಳಿ ಅಸಿಡಿಟಿ ಮಾಡುತ್ತದೆಂದೂ, ಖಾರ ಉರಿ ಬರಿಸುತ್ತದೆಂದೂ, ಉಪ್ಪು ತಿಂದರೆ ಬಿ.ಪಿ. ಖಂಡಿತ ಎಂದು ಈ ರಸಗಳನ್ನು ಸೇವಿಸದೇ ಇರುವವರೂ ಇದ್ದಾರೆ. ಆದರೆ ವಿಜ್ಞಾನ ಹೇಳುತ್ತದೆ, ನೀವು ಏನು ತಿಂದರೂ, ದೇಹದಲ್ಲಿ ಪಾಕವಾದ ನಂತರ ಸಿಹಿಯೇ ಆಗುತ್ತದೆ ಎಂದು. ಆಹಾರದಲ್ಲಿ ಸಮತೆ ಬರಬೇಕಾದರೆ, ಆರೋಗ್ಯ ಪ್ರಾಪ್ತಿಯಾಗಬೇಕಾದರೆ, ಅದು ಷಡ್ರಸೋಪೇತ ಆಹಾರವಾಗಿರಬೇಕು. ಆದರೆ ಯಾವುದೇ ರಸವನ್ನು ಮಿತಿಮೀರಿ ಸೇವಿಸುವುದಾಗಲೀ ಅಥವಾ ಸಂಪೂರ್ಣವಾಗಿ ಸೇವಿಸದೇ ಇರುವುದಾಗಲೀ ಎರಡೂ ಅನಾರೋಗ್ಯಕಾರಕವೇ. ಹಾಗಾದರೆ ಯಾವ ರುಚಿಯ ಪರಿಣಾಮ ಏನು ಎಂಬುದರ ಬಗ್ಗೆ ಒಂದು ಸಣ್ಣ ಚಿಂತನೆ ಮಾಡೋಣ.

ಸಿಹಿ ಪ್ರಧಾನವಾಗಿರುವ ಆಹಾರ ಸಾಮಾನ್ಯವಾಗಿ ಸಪ್ತಧಾತುಗಳಿಗೆ ಪೋಷಣೆಯನ್ನೂ ದೇಹಬಲವನ್ನೂ ಶರೀರದ ಕಾಂತಿಯನ್ನೂ ಕಾಪಾಡುತ್ತದೆ. ಮಾತ್ರವಕ್ಕ, ಚರ್ಮದ ಆರೋಗ್ಯವನ್ನು ರಕ್ಷಿಸುತ್ತ, ಜೊತೆಗೆ ಇಂದ್ರಿಯಗಳ ದಾರ್ಢ್ಯವನ್ನು ಕಾಪಾಡುವಲ್ಲೂ ಮುಖ್ಯ ಪಾತ್ರ ವಹಿಸುತ್ತದೆ. ಸಿಹಿ ಎಂದರೆ ಕೇವಲ ಸಕ್ಕರೆ-ಬೆಲ್ಲಗಳು ಮಾತ್ರವಲ್ಲ, ಎಲ್ಲ ಏಕದಳ ಧಾನ್ಯಗಳೂ ಬೇಳೆಕಾಳುಗಳೂ ಮಧುರ(ಸಿಹಿ)ರಸದಿಂದ ಕೂಡಿರುವವುಗಳೇ. ಸಿಹಿಯನ್ನು ಸೇವಿಸದೇ ಸಂಪೂರ್ಣವಾಗಿ ವರ್ಜಿಸಿದರೆ ಚರ್ಮ ಸುಕ್ಕುಗಟ್ಟುವಿಕೆ, ಉತ್ಸಾಹಹಾನಿ ಮೊದಲಾದ ಅನೇಕ ತೊಂದರೆಗಳೂ ಉಂಟಾಗುತ್ತವೆ. ಹಾಗೆಂದು ಅತಿಯಾಗಿ ಸೇವಿಸಿದಿರೋ ಆಲಸ್ಯ, ಕೆಮ್ಮು, ದಮ್ಮು, ಹೊಟ್ಟೆಹುಳ, ಸ್ವರಹಾನಿ, ಮಲಪ್ರವೃತ್ತಿಯಲ್ಲಿ ವ್ಯತ್ಯಾಸ, ಥೈರಾಯ್ಡ್ ಮುಂತಾದ ರೋಗಗಳಿಗೂ ಕಾರಣವಾಗಬಹುದು. ಆದರೆ ಸಿಹಿ ತಿನ್ನುವುದರಿಂದ ಮಧುಮೇಹ ಬರುವುದಿಲ್ಲ; ವ್ಯಾಧಿ ಬಂದ ನಂತರ ಸಿಹಿಸೇವನೆಯು ರಕ್ತದಲ್ಲಿ ಸಕ್ಕರೆ ಅಂಶ ಹೆಚ್ಚಾಗಲು ಕಾರಣವಾಗುತ್ತದೆ.

> ರುಚಿ ಎಂದೋ ಒಳ್ಳೆಯದು ಎಂದೋ ಒಂದೇ ರುಚಿಯ ಅಹಾರವನ್ನು ಅತಿಯಾಗಿ ಸೇವಿಸುವುದು ಅನಾರೋಗ್ಯಕ್ಕೆ ದಾರಿ ಮಾಡಿಕೊಟ್ಟಂತೆ.

ಹಾಗೆಯೇ ಹುಳಿಯೂ ಸಹ; ಅದರ ಹೆಸರನ್ನು ಕೇಳಿದರೆ ಸಾಕು, ಬಾಯಲ್ಲಿ ನೀರು ಬರುವಂತಾಗುತ್ತದೆ. ಆದರೆ ಆಹಾರದಲ್ಲಿ ಆಮ್ಲ(ಹುಳಿ)ರಸವನ್ನು ಸೇರಿಸುವುದರಿಂದ, ಅದು ತಿಂದ ಆಹಾರವನ್ನು ಸಂಪೂರ್ಣವಾಗಿ ಜೀರ್ಣಿಸಿ ಪಚನಕ್ರಿಯೆಯನ್ನು ಚುರುಕುಗೊಳಿಸುತ್ತದೆ. ಹೊಟ್ಟೆ ಉಬ್ಬರಿಸದಂತೆ ನೋಡಿಕೊಂಡು, ಮಲಪ್ರವೃತ್ತಿ ಸರಿಯಾಗುವಂತೆ ಮಾಡುವಲ್ಲಿ ಹುಳಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಶರೀರದ ಸ್ನೇಹಾಂಶವನ್ನು ಕಾಪಾಡಲೂ ಸಹಕಾರಿಯಾಗುವ ರಸ ಹುಳಿ. ಆದರೆ ಹುಳಿ ಇಷ್ಟ ಎಂದು ಹುಳಿಮಜ್ಜಿಗೆ, ಹುಳಿಹಿಟ್ಟುಗಳಿಂದ ತಯಾರಿಸಿದ ಆಹಾರಸೇವನೆ, ಅದರಲ್ಲೂ ಹುಳಿಯನ್ನು ಶೈತ್ಯೀಕರಿಸಿ ಸೇವಿಸಿದರೆ ಹುಳುಕು ಹಲ್ಲು, ಬಾಲನೆರೆ, ಕೂದಲು ಉದುರುವಿಕೆ, ಶರೀರದೌರ್ಬಲ್ಯ, ಮೂಳೆ ಸವೆಯುವಿಕೆಗೆ ಕಾರಣವಾಗುತ್ತದೆ. ಹುಳಿಯನ್ನು ಅತಿಯಾಗಿ ಸೇವಿಸಬೇಕೆಂಬ ಬಯಕೆ ಉಂಟಾಗುವುದು ರಕ್ತಕ್ಷೀಣತೆಯ ಲಕ್ಷಣವೂ ಆಗಿದೆ.

ಉಪ್ಪಿಗಿಂತ ರುಚಿ ಇಲ್ಲ. ಆಹಾರಕ್ಕೆ ರುಚಿಯನ್ನು ನೀಡುವ ಪ್ರಧಾನ ರಸವೇ ಉಪ್ಪು. ಇದು ನಾಲಿಗೆಗೆ ರುಚಿಯಾಗುವುದರೊಂದಿಗೆ ಜೀರ್ಣಕ್ರಿಯೆಯನ್ನು ಚುರುಕುಗೊಳಿಸುವ ಕಾರ್ಯವನ್ನೂ ಮಾಡುತ್ತದೆ. ಉಪ್ಪು ಕಡಿಮೆಯಾದರೆ, ಸಂಧಿಮಾಂಸಗಳಲ್ಲಿ ಮೃದುತ್ವವು ಕಡಿಮೆಯಾಗಿ ಮಾಂಸಖಂಡಗಳು ಸೆಟಗೊಂಡಂತಾಗಿ, ಆಂತರಿಕ ಮತ್ತು ಬಾಹ್ಯ ಚಲನೆ ಕಷ್ಟವಾಗಿ ನೋವಿನಿಂದ ಕೂಡಿರುತ್ತದೆ. ಉಪ್ಪನ್ನು ಹೆಚ್ಚು ಸೇವಿಸುವುದು ಸಂಧಿಶಿಥಿಲತೆ, ಇಂದ್ರಿಯಗಳ ದೌರ್ಬಲ್ಯ, ಕಣ್ಣು ಕೆಂಪಾಗುವಿಕೆ, ಮೈನವೆ, ರಕ್ತಸ್ರಾವ - ಹೀಗೆ ಅನೇಕ ರೋಗಗಳ ಉತ್ಪತ್ತಿಗೆ ಕಾರಣವಾಗುತ್ತದೆ.

ಖಾರ ತಿನ್ನದಿದ್ದರೆ ದೇಹಕ್ಕೆ ಶಕ್ತಿ ಕಡಿಮೆಯಾಗುತ್ತದೆ ಎಂಬುದು ಹಲವರ ಅನಿಸಿಕೆ. ಖಾರದ ಪದಾರ್ಥಗಳು, ಸ್ವತಃ ಬಲವನ್ನು ಕೊಡದಿದ್ದರೂ, ತನ್ನ ಜೊತೆಗಿರುವ ಪದಾರ್ಥಗಳು ಧಾತುಪೋಷಕಗಳಾಗಲು ದಾರಿ ಮಾಡಿಕೊಡುವುದರಲ್ಲಿ ಎತ್ತಿದ ಕೈ. ಮೇದಸ್ಸನ್ನು ಕರಗಿಸಿ ಶರೀರ ಪಟುತ್ವವನ್ನು ಹೆಚ್ಚಿಸುತ್ತದೆ. ಆದರೆ ಖಾರವು ಮೇದಸ್ಸನ್ನು ಕರಗಿಸುವುದರ ಜೊತೆಗೆ ಶರೀರ ಸಾಮರ್ಥ್ಯವನ್ನೂ ಕುಂಠಿತಗೊಳಿಸುತ್ತದೆ. ಅಲ್ಲದೆ ಮಲಮೂತ್ರಗಳಲ್ಲಿ ರಕ್ತ ಪ್ರವೃತ್ತಿಯನ್ನು, ಮೈ ಉರಿಯನ್ನು ಉತ್ಪತ್ತಿ ಮಾಡುತ್ತದೆ. ಖಾರ ತಿಂದರೆ ಯಾವ ರೋಗವೂ ಬರದು ಎಂದು ನಂಬುವವರು ಅತಿಯಾಗಿ ಸೇವಿಸೀರಿ ಜೋಕೆ!

ಇನ್ನು ಆಹಾರದಲ್ಲಿ ಕಹಿ ಮತ್ತು ಒಗರು. ಈ ರುಚಿಗಳೂ ಬೇಕೇ ಬೇಕು. ಅದೆರಡು ದೇಹದಲ್ಲಿ ಯಾವ ಅಂಶವು ಅತಿಯಾಗದಂತೆ ಕಾಪಾಡುವಲ್ಲಿ ಪ್ರಮುಖ ಪಾತ್ರವನ್ನು ರವಹಿಸುತ್ತವೆ. ಅತಿಯಾಗಿ ಸೇವಿಸಿದರೆ ಗಂಟುನೋವು, ಸಂತಾನಹೀನತೆಗಳಿಗೂ ಕಾರಣವಾಗಬಹುದು. ನಿತ್ಯ ಬೇವು, ಮಂತ್ಯಗಳ ರಸ, ಕಷಾಯಗಳ ಸೇವನೆ ಮಹಾವ್ಯಾಧಿಗಳಿಗೆ ನಾಂದಿ.

ನಮ್ಮ ಸಾಂಪ್ರದಾಯಿಕ ಅಡುಗೆಗಳಲ್ಲಿ ಸಾಮಾನ್ಯವಾಗಿ ಉಪ್ಪು, ಹುಳಿ, ಖಾರ, ಬೆಲ್ಲ, ಜೊತೆಗೆ ಮೆಂತ್ಯ, ಸ್ವಲ್ಪ ಕೊತ್ತಂಬರಿ, ಸಾಸಿವೆ, ಎಣ್ಣೆ, ಬೇಳೆ, ತರಕಾರಿ, ಏಕದಳ ಧಾನ್ಯಗಳ ಹಿತಮಿತವಾದ ಮಿಶ್ರಣವಿದ್ದು ಸರ್ವ ಧಾತುಪೋಷಕ, ಆರೋಗ್ಯಕರ ವ್ಯಂಜನಗಳಾಗಿವೆ. ರುಚಿ ಎಂದೋ ಒಳ್ಳೆಯದು ಎಂದೋ ಒಂದೇ ರುಚಿಯ ಅಹಾರವನ್ನು ಅತಿಯಾಗಿ ಸೇವಿಸುವುದು ಅನಾರೋಗ್ಯಕ್ಕೆ ದಾರಿ ಮಾಡಿಕೊಟ್ಟಂತೆ.

ರಸಗಳ ಸಮತೋಲನ ಅರೋಗ್ಯಕ್ಕೆ ಕಾರಣ. ❖

ಕ್ಯಾನ್ಸರನ್ನು ಗೆಲ್ಲಲು ಶಿಸ್ತಿನ ಜೀವನ

ಪ್ರಸನ್ನ ಸಂತೇಕಡೂರು

ಕ್ಯಾನ್ಸರ್ ಎಂದರೆ ಮಾನವನ ಕೋಟಿ ಕೋಟಿ ಆರೋಗ್ಯವಂತ ಜೀವಕೋಶಗಳಲ್ಲಿ ಒಂದು ಜೀವಕೋಶ ತನ್ನ ನಿಯಂತ್ರಿತ ಕಾರ್ಯಗಳನ್ನು ಬದಲಾಯಿಸಿಕೊಂಡು ಅನಿಯಂತ್ರಿತ ಜೀವಕೋಶವಾಗಿ ತನ್ನಷ್ಟಕ್ಕೆ ತಾನು ವೇಗವಾಗಿ ಕೋಶ ವಿಭಜನೆ ಮಾಡಿಕೊಳ್ಳುತ್ತ ಒಂದು ಜೀವಕೋಶ ಎರಡಾಗಿ, ಎರಡು ನಾಲ್ಕಾಗಿ, ನಾಲ್ಕು ಎಂಟಾಗಿ ಕೆಲವೇ ದಿನಗಳಲ್ಲಿ ಕೋಟಿ ಕೋಟಿ ಜೀವಕೋಶಗಳ ದೊಡ್ಡ ಗಂಟಾಗುವುದಕ್ಕೆ ಕ್ಯಾನ್ಸರ್ ಎಂದು ಕರೆಯಬಹುದು.

ಈ ಕ್ಯಾನ್ಸರನ್ನು ಮುಖ್ಯವಾಗಿ ಎರಡು ವಿಭಾಗಗಳಾಗಿ ವಿಂಗಡಿಸಿದ್ದಾರೆ. ಒಂದು ಕೆಡುಕಿಲ್ಲದ (Malignant) ಮತ್ತು ಎರಡನೆಯದು ಕೇಡು ತರುವ (Benign) ಕ್ಯಾನ್ಸರ್ ಎಂದು ಕರೆಯುತ್ತಾರೆ. ಕೆಡುಕಿಲ್ಲದ ಕ್ಯಾನ್ಸರ್ ಒಂದು ಗಂಟಿನ ರೂಪದಲ್ಲಿ ಒಂದೇ ಜಾಗದಲ್ಲಿ ಕಾಣಿಸಿಕೊಳ್ಳುತ್ತದೆ. ಅದನ್ನು ಶಸ್ತ್ರಚಿಕಿತ್ಸೆಯ ಮೂಲಕ ಸುಲಭವಾಗಿ ತೆಗೆದುಹಾಕಬಹುದು. ಆದರೆ ಕೇಡು ತರುವ ಕ್ಯಾನ್ಸರ್ ಒಂದು ಕಡೆ ಬೆಳೆಯುವಾಗ ಕೆಲವು ಜೀವಕೋಶಗಳು ಆ ಗೆಡ್ಡೆಯಿಂದ ತಪ್ಪಿಸಿಕೊಂಡು ರಕ್ತನಾಳಗಳ ಮೂಲಕ ದೇಹದ ಬೇರೆ ಬೇರೆ ಅಂಗಗಳಿಗೆ ಹೋಗಿ ಅಲ್ಲಿನ ಜೀವಕೋಶಗಳ ಮೇಲೆ ಆಕ್ರಮಣ ಮಾಡಿ ಅಲ್ಲಿಯೂ ಕೂಡ ತಮ್ಮ ಅಧಿಪತ್ಯವನ್ನು ಸ್ಥಾಪಿಸಿ ಹೊಸ ಹೊಸ ಗೆಡ್ಡೆಗಳಾಗಿ ಆ ಅಂಗಗಳ ಪ್ರತಿನಿತ್ಯದ ಕಾರ್ಯಗಳಿಗೆ ಅಡೆತಡೆಯನ್ನು ಮಾಡುತ್ತವೆ. ಉದಾಹರಣೆಗೆ, ನಮ್ಮ ಯಕೃತ್ತು ಅಥವಾ ಲಿವರಿನಲ್ಲಿ ಆಗಿರುವ ಕ್ಯಾನ್ಸರ್ ಜೀವಕೋಶಗಳು ಶ್ವಾಶಕೋಶಗಳಿಗೆ ಅಥವಾ ಮೂತ್ರಪಿಂಡಗಳಿಗೆ ಹೋಗಿ ಅಲ್ಲಿಯೂ ಕ್ಯಾನ್ಸರ್ ಬೆಳೆಯುವ ಹಾಗೆ ಮಾಡುತ್ತವೆ. ಈ ಕ್ಯಾನ್ಸರ್ ಜೀವಕೋಶಗಳು ಹಲವು ಬಾರಿ ದೇಹದ ಇತರ ಅಂಗಗಳಿಗೆ ಅಥವಾ ಭಾಗಗಳಿಗೆ ವೇಗವಾಗಿ ಪಸರಿಸುವುದನ್ನು ಸ್ಥಾನಾಂತರ (Metastasis) ಎಂದು ಕರೆಯುತ್ತಾರೆ. ಜೊತೆಗೆ ರಕ್ತದಲ್ಲಿ ಕೀವು ಅಥವಾ ಸತ್ತ ಜೀವಕೋಶಗಳ ಭಗ್ನಾವಶೇಷಗಳ ಮಲಿನ ದ್ರವಗಳನ್ನು ಹೆಚ್ಚು ಹೆಚ್ಚು ಸೂಸುತ್ತವೆ. ಈ ಎಲ್ಲಾ ಕಾರಣಗಳಿಂದ ಸ್ಥಾನಾಂತರಗೊಂಡ ಕ್ಯಾನ್ಸರ್ ಜೀವಕೋಶಗಳು ಹೆಚ್ಚು ಹೆಚ್ಚು ಅಪಾಯಕಾರಿಯಾಗಿರುತ್ತವೆ. ದೇಹದ ಬೇರೆ ಬೇರೆ ಅಂಗಗಳ ಜೊತೆ ಈ ಕ್ಯಾನ್ಸರ್ ಜೀವಕೋಶಗಳು ಸೇರಿಕೊಳ್ಳುವುದರಿಂದ ಇವನ್ನು ಸುಲಭವಾಗಿ ಶಸ್ತ್ರಚಿಕಿತ್ಸೆ ಮಾಡಿ ತೆಗೆಯಲು ಸಾಧ್ಯವಿಲ್ಲ.

ಈ ರೀತಿ ದೇಹದ ಬೇರೆ ಬೇರೆ ಅಂಗಗಳ ಮೇಲೆ ಬೆಳೆಯುವ ಕ್ಯಾನ್ಸರ್‌ಗಳನ್ನು ವಿಂಗಡಿಸಿ ಅವುಗಳಿಗೆ ಬೇರೆ ಬೇರೆ ಹೆಸರನ್ನು ಕೊಟ್ಟಿದ್ದಾರೆ.

ಕ್ಯಾನ್ಸರ್‌ಗೆ ಕಾರಣಗಳು:

ಕ್ಯಾನ್ಸರ್ ಬರಲು ಬಹುಮುಖ್ಯ ಕಾರಣ ದೇಹದ ಬೇರೆ ಬೇರೆ ಜೀವಕೋಶಗಳಲ್ಲಿನ ವಂಶವಾಹಿನಿಗಳಲ್ಲಿ ಅಸಹಜ ಬದಲಾವಣೆಗಳಾಗುವುದರಿಂದ ಎಂದು ಹೇಳಬಹುದು (Mutations). ಈ ಅಸಹಜ ಬದಲಾವಣೆಗಳು ಬೇರೆ ಬೇರೆ ಕಾರಣಗಳಿಂದ ಆಗಬಹುದು. ಅವುಗಳಲ್ಲಿ ಬಹುಮುಖ್ಯವಾಗಿ ನಮ್ಮ ಜೀವನಶೈಲಿ ಎಂದು ಹೇಳಬಹುದು. ನಮ್ಮ ಜೀವನಶೈಲಿ ಉತ್ತಮವಾಗಿದ್ದರೆ ಹಲವು ಕ್ಯಾನ್ಸರ್‌ಗಳನ್ನು ನಾವು ಸುಲಭವಾಗಿ ತಡೆಗಟ್ಟಬಹುದು.

ಉತ್ತಮ ಜೀವನಶೈಲಿಯನ್ನು ಪ್ರತಿಯೊಬ್ಬರೂ ಸುಲಭವಾಗಿ ಬೆಳೆಸಿಕೊಳ್ಳಬಹುದು. ಬೆಳಿಗ್ಗೆ ಬೇಗ ಏಳುವುದು. ರಾತ್ರಿ ಸಮಯಕ್ಕೆ ಸರಿಯಾಗಿ ಮಲಗುವುದು. ಉತ್ತಮ ಸತ್ವಯುತ ಆಹಾರವನ್ನು ಹಿತವಾಗಿ ಮಿತವಾಗಿ ಸೇವಿಸುವುದು. ನೀರನ್ನು ಹೆಚ್ಚಾಗಿ ಕುಡಿಯುವುದು. ವಾಯುವಿಹಾರ ಮಾಡುವುದು, ದೈಹಿಕ ಶ್ರಮಕ್ಕೆ ಮಹತ್ವ ಕೊಡುವುದು. ವಾಯುಮಾಲಿನ್ಯದಿಂದ ದೂರ ಇರುವುದು. ಧೂಮಪಾನ, ಮದ್ಯಪಾನದಿಂದ ದೂರ ಇರುವುದು, ಟಿವಿ, ಮೊಬೈಲ್ ಫೋನ್, ಲ್ಯಾಪ್‌ಟಾಪ್‌ಗಳನ್ನು ಹಿತವಾಗಿ ಮಿತವಾಗಿ ಬಳಸುವುದು. ಕುಳಿತೇ ಮಾಡುವ ಕೆಲಸಗಳ ಮಧ್ಯೆ ಆಗಾಗ ಓಡಾಡುವುದು. ಕೆಲವು ಕ್ಯಾನ್ಸರ್ ಕಾರಕ ವೈರಸ್ಸುಗಳ ಸೋಂಕಿಗೆ ಲಸಿಕೆಗಳನ್ನು ಪಡೆಯುವುದು. ಹೆಚ್ಚು ಹೆಚ್ಚು ಕರಿದ ಆಹಾರಗಳನ್ನು, ಅತಿ ಹೆಚ್ಚು ಸಿಹಿಪದಾರ್ಥಗಳನ್ನು, ಅತಿ ಹೆಚ್ಚು ಎಣ್ಣೆಯ ಪದಾರ್ಥಗಳನ್ನು ಸೇವಿಸುವುದನ್ನು ತ್ಯಜಿಸುವುದು. ಮನೆಯಲ್ಲಿ ಗಾಳಿ ಬೆಳಕು ಸರಿಯಾಗಿ ಬರುವ ಹಾಗೆ ನೋಡಿಕೊಳ್ಳುವುದು, ಮುಂಜಾನೆ ಮತ್ತು ಸಂಜೆಯ ಸೂರ್ಯನ ಬೆಳಕಿನಲ್ಲಿ ಓಡಾಡುವುದು. ದೇಹದ ತೂಕ ಹೆಚ್ಚಾಗದಂತೆ ನೋಡಿಕೊಳ್ಳುವುದು. ಕೊಳೆತ ಅಥವಾ ಹಳಸಿದ ಆಹಾರ ಪದಾರ್ಥಗಳನ್ನು ಸೇವಿಸುವುದರಿಂದ ಮತ್ತು ಕೀಟನಾಶಕ, ಕಳೆನಾಶಕಗಳ ಜೊತೆಗೆ ಇನ್ನು ಕೆಲವು ವಿಷಯುಕ್ತ ರಾಸಾಯನಿಕ ವಸ್ತುಗಳು (carcinogens) ನಮ್ಮ ಆಹಾರದಲ್ಲಿ ಸೇರಿ ಕ್ಯಾನ್ಸರ್ ಬರಬಹುದು. ಇವನ್ನು ನಾವು ದೂರವಿಡುವುದರಿಂದ ಕ್ಯಾನ್ಸರನ್ನು ತಡೆಗಟ್ಟಬಹುದು. ಜೊತೆಗೆ ಮಧುಮೇಹ, ಬೊಜ್ಜು ಮತ್ತು ಸ್ಥೂಲಕಾಯತೆಯಿಂದ ಕೂಡ ಕ್ಯಾನ್ಸರ್ ಬರಬಹುದು. ❖

ಪ್ರಾಣಿಗಳಿರಲವ್ವ ಮನೆಯಲ್ಲಿ!

ಡಾ. ವಿನಯ ಶ್ರೀನಿವಾಸ್

ಅನಿವಾರ್ಯ ಕಾರಣಗಳಿಗಾಗಿ ಗೆಳತಿ ದೂರದ ಊರಿನಲ್ಲಿ ಒಬ್ಬಳೇ ಇರಬೇಕಾದ ಪರಿಸ್ಥಿತಿ ಬಂದಿತ್ತು. ಕಚೇರಿಯಲ್ಲಿ ಕೆಲಸದ ಒತ್ತಡ ಆಕೆಯನ್ನು ಹೈರಾಣಾಗಿಸುತ್ತಿದ್ದರೆ, ಮನೆಯಲ್ಲಿ ಒಂಟಿತನ ಬಹುವಾಗಿ ಬಾಧಿಸುತ್ತಿತ್ತು. ಆಗಲೇ ಅವಳು ಮನೆಯಲ್ಲಿ ಒಂದು ನಾಯಿಯನ್ನು ಸಾಕುವ ಆಲೋಚನೆ ಮಾಡಿದ್ದು. ಮೊದಲ ಒಂದೆರಡು ವಾರಗಳು ಆ ಮರಿಯ ಆರೈಕೆ ಮತ್ತು ನಿರ್ವಹಣೆ ತುಸು ಕಿರಿಕಿರಿ ಎನಿಸಿದರೂ ಬರು ಬರುತ್ತಾ ಅವಳು ಆ ದಿನಚರಿಗೆ ಹೊಂದಿಕೊಂಡಳು. ಅವಳು ಕಚೇರಿಯಿಂದ ಹಿಂದಿರುಗಿ ಬರುವುದನ್ನೇ ಕಾಯುವ ಆ ನಾಯಿ ಮರಿಯನ್ನು ಕಂಡರೆ ಅವಳಿಗೆ ಈಗ ಜೀವ! ಅದರ ಆರೈಕೆಯಲ್ಲಿ ಅವಳ ಒಂಟಿತನ ಈಗ ಮಾಯ!

ಹೌದು, ಮುದ್ದಿಗಾಗಿ ಸಾಕುವ ನಾಯಿ, ಬೆಕ್ಕು, ಪಕ್ಷಿಗಳು, ಮೊಲ ಮೊದಲಾದ ಪ್ರಾಣಿಗಳು ನಮ್ಮ ಒಂಟಿತನವನ್ನು ದೂರ ಮಾಡುತ್ತವೆ. ಅಷ್ಟೇ ಅಲ್ಲ, ನಮ್ಮ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಸುಸ್ಥಿತಿಯಲ್ಲಿಡಲೂ ನೆರವಾಗುತ್ತವೆ.

ಮನೆಯ ಹಿರಿಯರಿಗೆ ಮತ್ತು ಮಕ್ಕಳಿಗೆ ಈ ಪ್ರಾಣಿಗಳು ಒಳ್ಳೆಯ ಒಡನಾಡಿಗಳಾದಂತಾಗುತ್ತವೆ. ಆ ಪ್ರಾಣಿಗಳ ಆರೈಕೆಯಲ್ಲಿ ತನ್ಮಯರಾಗುವ ಹಿರಿಯರಿಗೆ ಸಮಯ ಕಳೆಯಲೂ ಇದು ಸಹಕಾರಿ. ನಿವೃತ್ತಿಯ ಬಳಿಕ ಹಿರಿಯರು ಯಾವುದೇ ನಿರ್ದಿಷ್ಟ ಕೆಲಸವಿಲ್ಲದೆ ಮಂಕಾಗುವುದು ಸಹಜ. ಅಂತಹ ಸಂದರ್ಭಗಳಲ್ಲಿ ಈ ಪ್ರಾಣಿಗಳಿಗೆ ಸಂಬಂಧಿಸಿದ ಕೆಲಸ ಕಾರ್ಯಗಳು ಅವರ ದಿನಚರಿಯಲ್ಲಿ ಸೇರ್ಪಟ್ಟು, ಅವರಿಗೂ ಬದುಕಿನಲ್ಲಿ ಏನೋ ಜವಾಬ್ದಾರಿಯಿದ್ದಂತೆ ಭಾಸವಾಗುತ್ತದೆ. ಮಕ್ಕಳಿಗೆ ಅದರಲ್ಲಿಯೂ ಒಂದೇ ಮಗು ಇರುವಂತಹ ಮನೆಗಳಲ್ಲಿ ಈ ಮುದ್ದು ಪ್ರಾಣಿಗಳು ಮಗುವಿನ ಬೆಳವಣಿಗೆಯಲ್ಲಿ ಧನಾತ್ಮಕವಾಗಿ ಸಹಕರಿಸಬಲ್ಲವು. ಆ ಪ್ರಾಣಿಗಳೊಂದಿಗೆ ಒಡನಾಡುವ ಮತ್ತು ಅವುಗಳ ಆರೈಕೆ ಮಾಡುವ ಮಕ್ಕಳಲ್ಲಿ ಇನ್ನೊಬ್ಬರಿಗಾಗಿ ಕಾಳಜಿ ಮಾಡುವ, ಪ್ರೀತಿ-ಅನುಭೂತಿಗಳನ್ನು ತೋರುವ, ಸಂಬಂಧಗಳನ್ನು ನಿರ್ವಹಿಸುವ ಗುಣಗಳು ಸ್ವಾಭಾವಿಕವಾಗಿಯೇ ಬೆಳೆಯುತ್ತವೆ. ಅಷ್ಟೇ ಅಲ್ಲ, ಸಣ್ಣ ವಯಸ್ಸಿನಿಂದಲೇ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡುವುದನ್ನು ಮಕ್ಕಳು ರೂಢಿ ಮಾಡಿಕೊಳ್ಳುತ್ತಾರೆ.

ಎಷ್ಟೋ ಬಾರಿ ಈ ಮುದ್ದು ಪ್ರಾಣಿಗಳ ಚಲನವಲನಗಳನ್ನು ಸೂಕ್ಷ್ಮವಾಗಿ ಗಮನಿಸುವುದೇ ವ್ಯಕ್ತಿಯ ಆತಂಕ ಹಾಗೂ ಒತ್ತಡವನ್ನು ಕಡಿಮೆ ಮಾಡಬಲ್ಲದು. ಅಕ್ವೇರಿಯಂನಲ್ಲಿರುವ ಮೀನುಗಳು ಅತ್ತಿಂದಿತ್ತ ಚಲಿಸುವುದನ್ನು ಒಂದಿಷ್ಟು ಸಮಯ ನೋಡುತ್ತಾ ಕುಳಿತರೆ ಎಂತಹ ಕುಗ್ಗಿದ ಮನಸ್ಸೂ ಪ್ರಫುಲ್ಲವಾಗಬಲ್ಲದು. ಮನೆಯಲ್ಲಿ ಸಾಕಿದ ನಾಯಿಯನ್ನು ದಿನದಲ್ಲಿ ಎರಡರಿಂದ ಮೂರು ಬಾರಿ ಹೊರಗೆ ಕರೆದುಕೊಂಡು ಹೋಗುವ ನೆಪದಲ್ಲಿ ನೀವೂ ಒಂದಿಷ್ಟು ನಡೆದಿರುತ್ತೀರಿ! ಅಷ್ಟೇ ಅಲ್ಲ, ಅದರೊಂದಿಗೆ ಆಟವಾಡುವಾಗ ನಿಮ್ಮ ದೇಹಕ್ಕೂ ಒಂದಿಷ್ಟು ವ್ಯಾಯಾಮವಾಗಿರುತ್ತದೆ. ಇದು ನಿಮ್ಮನ್ನು ಕ್ರಿಯಾಶೀಲರನ್ನಾಗಿಡಬಲ್ಲದು. ಅವುಗಳಿಗೆ ಸಂಬಂಧಿಸಿದ ಕೆಲಸಗಳನ್ನು ಮಾಡುತ್ತಾ ನೀವು ಸದಾ ಚಟುವಟಿಕೆಗಳಿಂದ ಕೂಡಿರುತ್ತೀರಿ. ಇದು ಪರೋಕ್ಷವಾಗಿ ನಿಮ್ಮ ಹೃದಯ ಮತ್ತು ಶ್ವಾಸಕೋಶಗಳ ಆರೋಗ್ಯವನ್ನೂ ಕಾಪಾಡಬಲ್ಲದು. ಅವು ನಿಮ್ಮ ಬರುವಿಕೆಗಾಗಿ ಕಾಯುವಾಗ, ನಿಮ್ಮೊಡನೆಯೇ ಟಿವಿ ವೀಕ್ಷಣೆಗೆ ಕೂರುವಾಗ ಅವುಗಳೊಂದಿಗೆ ಒಂದು ಬಗೆಯ ಭಾವನಾತ್ಮಕ ಬೆಸುಗೆ ಬೆಳೆಯುತ್ತದೆ. ಇದು ನಿಮ್ಮಲ್ಲಿ ಸುರಕ್ಷಾ ಮನೋಭಾವವನ್ನು ಹಾಗೂ ಸಂತಸವನ್ನು ತರಬಲ್ಲದು.

ಈ ಪ್ರಾಣಿಗಳೊಂದಿಗಿನ ಒಡನಾಟವು ವ್ಯಕ್ತಿಯ ಶರೀರದಲ್ಲಿ ಡೊಪೊನಿನ್ ಮತ್ತು ಸೆರೊಟೊನಿನ್ ಎಂಬ ನರವಾಹಕಗಳ ಸ್ರವಿಸುವಿಕೆಯನ್ನು ಹೆಚ್ಚಿಸುತ್ತದೆ. ಈ ನರವಾಹಕಗಳು ನಿಮ್ಮ ಉದ್ವೇಗವನ್ನು ಹತ್ತಿಕ್ಕಿ ಮನಸ್ಸನ್ನು ಪ್ರಶಾಂತವಾಗಿರಿಸಬಲ್ಲದು ಕೂಡ. ಅಷ್ಟೇ ಅಲ್ಲ, ಮನಸ್ಸು ಆತಂಕ ಮತ್ತು ಖಿನ್ನತೆಯಿಂದಲೂ ಹೊರಬರಬಹುದು.

ಮುದ್ದಿಗಾಗಿ ಪ್ರಾಣಿಗಳನ್ನು ಸಾಕುವವರು ಕೆಲವು ಪ್ರಾಣಿಜನ್ಯ ಕಾಯಿಲೆಗಳಿಗೆ ತುತ್ತಾಗುವ ಸಾಧ್ಯತೆಗಳಿರುತ್ತವೆ.

ಆದರೆ ಅವುಗಳ ನಿರ್ವಹಣೆಯಲ್ಲಿ ಕೆಲವು ಕ್ರಮಗಳನ್ನು ಅಳವಡಿಸಿಕೊಳ್ಳುವುದರಿಂದ ಅವುಗಳ ಆರೋಗ್ಯದ ಜೊತೆಗೆ ನಿಮ್ಮ ಆರೋಗ್ಯವನ್ನೂ ಕಾಪಾಡಿಕೊಳ್ಳಬಹುದು.

ನೆನಪಿಡಿ:

- ಪ್ರಾಣಿಗಳನ್ನು ಅಥವಾ ಅವುಗಳ ವಸ್ತುಗಳನ್ನು ಮುಟ್ಟಿದ ಬಳಿಕ ಸಾಬೂನಿನಿಂದ ಚೆನ್ನಾಗಿ ಕೈತೊಳೆದುಕೊಳ್ಳಿ.
- ನಾಯಿ ಅಥವಾ ಬೆಕ್ಕುಗಳನ್ನು ಸಾಕಿದ್ದರೆ ಅವುಗಳಿಗೆ ಕನಿಷ್ಠ ವಾರಕ್ಕೊಮ್ಮೆ ಸ್ನಾನ ಮಾಡಿಸಿ.
- ಅವು ಸಣ್ಣ ಮರಿಗಳಾಗಿದ್ದಾಗಲೇ ನಿಮ್ಮ ಆಜ್ಞೆಯನ್ನು ಪಾಲಿಸಲು ತರಬೇತಿಯನ್ನು ಕೊಡಿ. ಆಗ ಅವುಗಳೊಂದಿಗೆ ನೀವು ಇನ್ನೂ ಹೆಚ್ಚು ಖುಷಿಯಾಗಿರಬಹುದು.
- ನಾಯಿ ಮತ್ತು ಬೆಕ್ಕುಗಳಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ತಪ್ಪದೇ ಜಂತು ಹುಳುವಿಗಾಗಿ ಔಷಧವನ್ನು ಕೊಡಿಸಿ.
- ಪಶುವೈದ್ಯರ ಸಲಹೆಯ ಮೇರೆಗೆ ವರ್ಷಕ್ಕೊಮ್ಮೆ ರೇಬಿಸ್ ಕಾಯಿಲೆಯ ಮತ್ತು ಇತರ ಆರು ಕಾಯಿಲೆಗಳ ವಿರುದ್ಧದ ಲಸಿಕೆಯನ್ನು ಕೊಡಿಸಿ. (ಎಲ್ಲ ಕಾಯಿಲೆಗಳಿಗೂ ಒಂದೇ ಲಸಿಕೆ ಲಭ್ಯವಿದೆ.)
- ದಿನವೂ ಅವುಗಳಿಗಾಗಿಯೇ ಇರುವ ಬ್ರಷ್‌ನಿಂದ ಕೂದಲನ್ನು ಬಾಚಿ. ಇದರಿಂದ ಅವುಗಳ ಚರ್ಮ ಆರೋಗ್ಯವಾಗಿರುತ್ತದೆ.
- ನೀವು ಸಾಕಿದ ಬೆಕ್ಕು ಅಥವಾ ನಾಯಿ ಅಕಸ್ಮಾತ್ ನಿಮ್ಮನ್ನು ಕಚ್ಚಿದರೆ ಕೂಡಲೇ ವೈದ್ಯರ ಸಲಹೆಯನ್ನು ಪಡೆಯಿರಿ. ❖

❦ ಸುಭಾಷಿತ ❦

ಸಂವಹನ ಹದ ತಪ್ಪದಂತೆ ನೋಡಿಕೊಳ್ಳಿ. ಇಲ್ಲದಿದ್ದರೆ ಅದಕ್ಕಾಗಿ ನೀವು ಅಪಾರವಾದ ಬೆಲೆ ತೆರಬೇಕಾಗುತ್ತದೆ.

-ಶಿವ್ ಖೇರಾ

ಹೆಸರೊಂದೇ ಬದಲಾದರೆ ಸಾಕೇ? 'ಹಿಂದುಳಿದ' ಹಣೆಪಟ್ಟಿ ಅಳಿಸಿಹಾಕಿ

ಮುಂಬೈ ಕರ್ನಾಟಕ ಪ್ರಾಂತ್ಯಕ್ಕೆ ಶೀಘ್ರ 'ಕಿತ್ತೂರು ಕರ್ನಾಟಕ' ಎಂದು ಮರುನಾಮಕರಣ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ್ದಾರೆ. ಸ್ವಾತಂತ್ರ್ಯಪೂರ್ವದಲ್ಲಿ ಮುಂಬೈ ಪ್ರಾಂತ್ಯದ ಆಡಳಿತಕ್ಕೆ ಒಳಪಟ್ಟಿದ್ದ ರಾಜ್ಯದ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಧಾರವಾಡ, ಗದಗ, ಉತ್ತರ ಕನ್ನಡ ಹಾಗೂ ಹಾವೇರಿ ಜಿಲ್ಲೆಗಳನ್ನೊಳಗೊಂಡ ಪ್ರದೇಶವನ್ನು ಇದುವರೆಗೆ 'ಮುಂಬೈ ಕರ್ನಾಟಕ' ಎಂದೇ ಗುರುತಿಸುತ್ತಾ ಬರಲಾಗಿದೆ. ಈಗ ಆ ಪ್ರದೇಶದ ಹೆಸರನ್ನು ನಾಡಿನ ಅಸ್ಮಿತೆಯೊಂದಿಗೆ ಜೋಡಿಸಿ, 'ಕಿತ್ತೂರು ಕರ್ನಾಟಕ' ಎಂದು ಬದಲಾವಣೆ ಮಾಡಲು ಹೊರಟಿರುವುದರಿಂದ ಜನರನ್ನು ಒಂದು ರೀತಿಯಲ್ಲಿ ಭಾವನಾತ್ಮಕವಾಗಿ ಬೆಸೆಯಲು ಸಾಧ್ಯವಾಗುವುದೇನೋ ನಿಜ. ಆದರೆ, ಬರೀ ಹೆಸರು ಬದಲಾವಣೆಯಿಂದ ಅಲ್ಲಿನ ಜನರ ಸ್ಥಿತಿಗತಿಯಲ್ಲಿ ಯಾವ ಬದಲಾವಣೆಯೂ ಆಗಲಾರದು. ಇದಕ್ಕೆ ತಕ್ಕ ಉದಾಹರಣೆ, ಹೈದರಾಬಾದ್ ಕರ್ನಾಟಕ ಪ್ರದೇಶದ ಹೆಸರು 'ಕಲ್ಯಾಣ ಕರ್ನಾಟಕ' ಎಂದು ಬದಲಾದದ್ದು. ಎರಡು ವರ್ಷಗಳಿಂದ ಆ ಪ್ರದೇಶ ಹೆಸರಿನಲ್ಲಷ್ಟೇ 'ಕಲ್ಯಾಣ'ವನ್ನು ಅಂಟಿಸಿಕೊಂಡು ಕುಳಿತಿದ್ದು, ಮರುನಾಮಕರಣದ ನಂತರವೂ ಅಲ್ಲಿ ಹೇಳಿಕೊಳ್ಳುವಂತಹ ಮಹತ್ವದ ಕಲ್ಯಾಣ ಕೆಲಸಗಳೇನೂ ಆಗಿಲ್ಲ. ಬದಲಾವಣೆ ಎನ್ನುವುದು ಅಭಿವೃದ್ಧಿ ಚಟುವಟಿಕೆಗಳಲ್ಲಿ ವ್ಯಕ್ತವಾಗದೇ ಹೋದಾಗ ಅಂತಹ ಕೆಲಸ ದೊಡ್ಡಸ್ತಿಕೆ ಪ್ರದರ್ಶನದ ಕಸರತ್ತಾಗಿ ಗೋಚರಿಸುವುದೇ ವಿನಾ ಹೆಚ್ಚಿನದೇನನ್ನೂ ಸಾಧಿಸುವುದಿಲ್ಲ. ರಾಜ್ಯದಲ್ಲಿ ಉಪಚುನಾವಣೆ ನಡೆಯುತ್ತಿರುವಾಗ 'ಕಿತ್ತೂರು ಕರ್ನಾಟಕ' ನಾಮಕರಣದ ಘೋಷಣೆ ಹೊರಬಿದ್ದಿರುವುದರ ಹಿಂದೆ ರಾಜಕೀಯ ಲೆಕ್ಕಾಚಾರವೂ ಅಡಕವಾಗಿದೆ ಎನ್ನುವ ಮಾತುಗಳಲ್ಲಿ ಕೂಡ ಹುರುಳಿಲ್ಲದೇ ಇಲ್ಲ.



'ಹಿಂದುಳಿದ' ಹಣೆಪಟ್ಟಿಯನ್ನು ಅಭಿವೃದ್ಧಿ ಅಸ್ತ್ರದಿಂದ ಅಳಿಸಿಹಾಕಿದರೆ ಮಾತ್ರ ಮರುನಾಮಕರಣದಂತಹ ಚಟುವಟಿಕೆಗಳಿಗೆ ಅರ್ಥ ಬರಲು ಸಾಧ್ಯ

ನಾಮಕರಣ, ಪುನರ್ ನಾಮಕರಣಗಳ ಮೂಲಕ ಜನರ ಗಮನಸೆಳೆಯುವ ಪ್ರಯತ್ನಗಳು ಕರ್ನಾಟಕಕ್ಕೆ ಸೀಮಿತವಲ್ಲ. ದೇಶದ ವಿವಿಧ ಭಾಗಗಳಲ್ಲಿ ಊರುಗಳ ಹೆಸರುಗಳನ್ನು ಬದಲಿಸುವ, ಕ್ರೀಡಾಂಗಣ ಹಾಗೂ ಸರ್ಕಾರಿ ಕಾರ್ಯಕ್ರಮಗಳಿಗೆ ಮರುನಾಮಕರಣ ಮಾಡುವ ರಾಜಕಾರಣ ನಡೆಯುತ್ತಿದೆ. ನಾಮಕರಣ ಪ್ರಹಸನಗಳಿಂದ ಸರ್ಕಾರದ ಸಮಯ ಮತ್ತು ಸಂಪನ್ಮೂಲಗಳು ಪೋಲು ಆಗುವವೇ ವಿನಾ ಜನಸಾಮಾನ್ಯರಿಗೆ ಯಾವ ಉಪಯೋಗವೂ ಇಲ್ಲ. ಸರ್ಕಾರವೊಂದು ತನ್ನ ಸಾಧನೆಗಳ ಮೂಲಕ ಜನರ ಗಮನಸೆಳೆಯಬೇಕೇ ವಿನಾ ಹೆಸರು ಬದಲಾವಣೆಯ ರಾಜಕಾರಣದಿಂದಲ್ಲ. ಆಡಳಿತದ ವೈಫಲ್ಯವನ್ನು ಮರೆಮಾಚಿ ಜನರ ಗಮನವನ್ನು ಬೇರೆಡೆ ಸೆಳೆಯುವ ತಂತ್ರಗಾರಿಕೆಯ ಭಾಗವಾಗಿಯೂ ಕೆಲವೊಮ್ಮೆ ಇಂತಹ ಕಸರತ್ತುಗಳು ನಡೆಯುವುದುಂಟು. 'ಕಲ್ಯಾಣ ಕರ್ನಾಟಕ' ಎಂದು ಕರೆದ ಮಾತ್ರಕ್ಕೆ ಕಲ್ಯಾಣದ ಸಾಂಸ್ಕೃತಿಕ ಮತ್ತು ಸಾಮಾಜಿಕ ವೈಭವ ಮರುಕಳಿಸುವುದಿಲ್ಲ. ಹಾಗೆಯೇ ಮುಂಬೈ ಕರ್ನಾಟಕ ಪ್ರಾಂತ್ಯವನ್ನು 'ಕಿತ್ತೂರು ಕರ್ನಾಟಕ' ಎಂದು ಹೆಸರಿಸಿದ ಮಾತ್ರಕ್ಕೆ ಆ ಭಾಗದ ಸಾಮಾಜಿಕ ಸ್ಥಿತಿಗತಿ ಬದಲಾಗುವುದಿಲ್ಲ.

ಕಲ್ಯಾಣ ಕರ್ನಾಟಕದಷ್ಟು ಅಲ್ಲದಿದ್ದರೂ ಮುಂಬೈ ಕರ್ನಾಟಕ ಕೂಡ ರಾಜ್ಯದ ಇತರ ಭಾಗಗಳಿಗೆ ಹೋಲಿಸಿದರೆ ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿರುವುದನ್ನು ಯಾರೂ ಅಲ್ಲಗಳೆಯಲಾರರು. ಅದರಲ್ಲೂ ತುಂಬಾ ಸೂಕ್ಷ್ಮ ಎನ್ನಬಹುದಾದ ಮಹಾರಾಷ್ಟ್ರದ ಗಡಿ ಭಾಗದಲ್ಲಿ ಕನ್ನಡದ ಹಳ್ಳಿಗಳು ಅಭಿವೃದ್ಧಿಯಿಂದ ವಂಚಿತವಾಗಿರುವುದು ಕಳವಳ ಉಂಟುಮಾಡುವ ಸಂಗತಿ. ಗಡಿಭಾಗದಲ್ಲಿ ಕನ್ನಡದ ವಾತಾವರಣವು ಎದ್ದು ಕಾಣುವಂತೆ ಮಾಡಲು ಸರ್ಕಾರಕ್ಕೆ ಇನ್ನೂ ಸಾಧ್ಯವಾಗದಿರುವುದು ವಿಷಾದದ ಸಂಗತಿ. ಬರ ಮತ್ತು ಮಹಾಪೂರ ಎರಡರ ಹೊಡೆತಕ್ಕೂ ಸಿಲುಕಿ ನಲುಗಿದ ಪ್ರದೇಶ ಕೂಡ ಇದಾಗಿದೆ. ಕೃಷ್ಣಾ, ಮಲಪ್ರಭಾ, ಘಟಪ್ರಭಾ, ಭೀಮಾ ಮೊದಲಾದ ನದಿಗಳ ದಂಡೆ ಪ್ರದೇಶಗಳು ಪದೇ ಪದೇ ಮಹಾಪೂರದ ಸಂಕಷ್ಟ ಅನುಭವಿಸುತ್ತಲೇ ಇದ್ದರೂ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳಲು ಇನ್ನೂ ಸಾಧ್ಯವಾಗಿಲ್ಲ. ಹಾಗೆಯೇ ಬರದಿಂದ ತತ್ತರಿಸಿದ ಪ್ರದೇಶಗಳೂ ಈ ಪ್ರಾಂತ್ಯದಲ್ಲಿವೆ. ನೀರಾವರಿ ಸೌಲಭ್ಯ ಒದಗಿಸುವುದೂ ಸೇರಿದಂತೆ ಈ ಭಾಗದ ದಶಕಗಳ ಹಿಂದಿನ ಹಲವು ಬೇಡಿಕೆಗಳು ಇನ್ನೂ ಕಡತಗಳಲ್ಲೇ ಉಳಿದಿವೆ. ಸುವರ್ಣಸೌಧವನ್ನು ನಿರ್ಮಿಸಲು ರಾಜ್ಯ ಸರ್ಕಾರ ತೋರಿದ ಉತ್ಸಾಹವು ಆಡಳಿತ ವಿಕೇಂದ್ರೀಕರಣದ ವಿಚಾರದಲ್ಲಿ ಕಾಣುತ್ತಿಲ್ಲ. ವಿಧಾನಸೌಧವನ್ನು ಹೋಲುವಂತಹ ಕಟ್ಟಡವನ್ನು ಈ ಭಾಗದಲ್ಲಿ ನಿರ್ಮಿಸಿದ ಮಾತ್ರಕ್ಕೆ ಆಡಳಿತವೇನೂ ಇಲ್ಲಿನ ಜನರ ಮನೆಬಾಗಿಲಿಗೆ ತಲುಪಿದಂತಾಗಲಿಲ್ಲ. ಮುಂಬೈ ಕರ್ನಾಟಕ ಪ್ರಾಂತ್ಯದ ಕುರಿತು ಮುಖ್ಯಮಂತ್ರಿಯವರಿಗೆ ನೈಜ ಕಳಕಳಿ ಏನಾದರೂ ಇದ್ದರೆ ಗಡಿಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಯೋಜನೆ ರೂಪಿಸಿ, ತ್ವರಿತಗತಿಯಲ್ಲಿ ಅನುಷ್ಠಾನ ಆಗುವಂತೆ ನೋಡಿಕೊಳ್ಳಬೇಕು. ಸುವರ್ಣ ಸೌಧವನ್ನು ಬಳಸಿಕೊಂಡು ಆಡಳಿತ ವಿಕೇಂದ್ರೀಕರಣದ ಕಡೆಗೂ ದಿಟ್ಟಹೆಜ್ಜೆ ಇರಿಸಬೇಕು. ನೀರಾವರಿ ಸೌಲಭ್ಯ ಒದಗಿಸುವ ಕುರಿತಾದ ದಶಕಗಳ ಹಿಂದಿನ ಬೇಡಿಕೆಗಳನ್ನು ಆದ್ಯತೆ ಮೇರೆಗೆ ಈಡೇರಿಸಬೇಕು. ಅಭಿವೃದ್ಧಿ ಚಟುವಟಿಕೆಗಳು ಜರಡಿಯಿಂದ ಬಿದ್ದ ನೀರಿನಂತೆ ರಾಜ್ಯದ ಎಲ್ಲೆಡೆಯೂ ಸಮಾನವಾಗಿ ನಡೆಯುವಂತೆ ನೋಡಿಕೊಳ್ಳಬೇಕು. 'ಹಿಂದುಳಿದ' ಹಣೆಪಟ್ಟಿಯನ್ನು ಹೀಗೆ ಅಭಿವೃದ್ಧಿ ಅಸ್ತ್ರದಿಂದ ಅಳಿಸಿ ಹಾಕಿದರೆ ಮರು ನಾಮಕರಣದಂತಹ ಚಟುವಟಿಕೆಗಳಿಗೂ ಅರ್ಥ ಬರುತ್ತದೆ. ಇಲ್ಲದಿದ್ದರೆ ಯಾವುದೇ ಪ್ರಾಂತ್ಯದ ಹೆಸರಿನ ಬದಲಾವಣೆ ಎನ್ನುವುದು ಕೇವಲ ಭಾವನೆಯನ್ನು ಬಡಿದೆಬ್ಬಿಸುವ, ತೋರಿಕೆಯ ವ್ಯರ್ಥ ಕಸರತ್ತಾಗಿ ಉಳಿಯುತ್ತದೆ.

ದಿನದ ಟ್ವೀಟ್

ಮೂಲ ಸೌಕರ್ಯ ಬಲಗೊಳ್ಳಲಿ

ನ್ಯಾಯಾಲಯಗಳಲ್ಲಿ ಮೂಲ ಸೌಕರ್ಯಗಳ ಕೊರತೆಯಿದೆ ಎಂಬ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯವರ (ಸಿಜೆಐ) ಹೇಳಿಕೆ ದಿಟ. ಬಹುತೇಕ ನ್ಯಾಯಾಲಯಗಳಲ್ಲಿನ ಕಟಕಟೆಗೆ ತೋರುಹಲಗೆಗಳೇ ಇಲ್ಲ. ಬಹಳಷ್ಟು ಸಾಕ್ಷಿದಾರರು, ಜಾಮೀನುದಾರರು ಆರೋಪಿಗಳು ನಿಲ್ಲುವ ಕಟಕಟೆಗೆ ಹೋಗಿ ನಿಲ್ಲುತ್ತಾರೆ. ಇನ್ನು ಕುಡಿಯುವ ನೀರು, ಶೌಚಾಲಯ, ಕ್ಯಾಂಟೀನ್, ವಾಹನ ನಿಲುಗಡೆ ಸೌಲಭ್ಯಗಳು ಅವ್ಯವಸ್ಥೆಯಿಂದ ಕೂಡಿವೆ.

ಕೆ.ಬಿ.ಕೆ. ಸ್ವಾಮಿ, ವಕೀಲ

ಕಿಡಿನುಡಿ

ಇಸ್ಲಾಮಾಬಾದ್ ಮತ್ತು ಪ್ರತ್ಯೇಕತಾವಾದಿಗಳೊಂದಿಗೆ ಮಾತುಕತೆ ನಡೆಸಬೇಕೆಂದು ಪ್ರತಿಪಾದಿಸುವವರನ್ನು, ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ಪಾಕಿಸ್ತಾನ ಏನು ಮಾಡಿದೆ ಎಂದು ಕೇಳಬೇಕು. ಜಮ್ಮು-ಕಾಶ್ಮೀರದಲ್ಲಿ 2024ರ ವೇಳೆಗೆ ನಮ್ಮ ಪ್ರಯತ್ನಗಳ ಫಲವನ್ನು ನೀವು ನೋಡುತ್ತೀರಿ.

ಅಮಿತ್ ಶಾ, ಕೇಂದ್ರ ಗೃಹ ಸಚಿವ

25 ವರ್ಷಗಳ ಹಿಂದೆ

ಶನಿವಾರ, 26-10-1996

• **ಆಲಮಟ್ಟಿ: ಪರಿಶೀಲನೆಗೆ 14ರಂದು ತಜ್ಞರ ತಂಡ**

ನವದೆಹಲಿ, ಅ. 25 (ಪಿಟಿಐ)- ಆಲಮಟ್ಟಿ ಅಣೆಕಟ್ಟು ವಿವಾದದ ಕುರಿತು ಅಧ್ಯಯನ ನಡೆಸುವ ಸಲುವಾಗಿ ನೀರಾವರಿ ತಜ್ಞರ ನಿಯೋಗವೊಂದು ಮುಂದಿನ ತಿಂಗಳು 14ರಂದು ವಿವಾದಾಸ್ಪದ ಸ್ಥಳಕ್ಕೆ ಭೇಟಿ ನೀಡಲಿದೆ.

ಬಚಾವತ್ ಆಯೋಗದ ತೀರ್ಪನ್ನು ಉಲ್ಲಂಘಿಸಿ ಕರ್ನಾಟಕವು ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸುತ್ತಿದೆ ಎಂದು ಆಂಧ್ರಪ್ರದೇಶ ಆರೋಪಿಸಿದ ಹಿನ್ನೆಲೆಯಲ್ಲಿ ಪರಿಸ್ಥಿತಿ ಅಧ್ಯಯನಕ್ಕಾಗಿ ಕಳೆದ ಆಗಸ್ಟ್‌ನಲ್ಲಿ ಸಂಯುಕ್ತರಂಗ ಸರ್ಕಾರ ತಜ್ಞರ ನಿಯೋಗವನ್ನು ನೇಮಿಸಿತ್ತು.

• **ಚಿತ್ರದುರ್ಗ ದುರಂತ: ನೀರಿನಿಂದ 61 ಶವ ಮೇಲಕ್ಕೆ- ಮುಂದುವರಿದ ಶೋಧನೆ**

ಚಿತ್ರದುರ್ಗ, ಅ. 25- ಚಿತ್ರದುರ್ಗದ ಸಂತೆ ಹೊಂಡದಲ್ಲಿ ಪ್ರಯಾಣಿಕರ ಸಹಿತ ಮುಳುಗಿ ಹೋಗಿದ್ದ ಬಸ್ಸನ್ನು ಮೇಲಕ್ಕೆ ಎತ್ತಲಾಗಿದ್ದು ಈವರೆಗೆ 61 ಶವಗಳನ್ನು ಹೊರತೆಗೆಯಲಾಗಿದೆ. ಇನ್ನೂ ನೀರಿನಲ್ಲಿ ಉಳಿದಿರಬಹುದಾದ ಶವಗಳಿಗಾಗಿ ಶೋಧನೆ ಮುಂದುವರಿದಿದೆ. ಹೊರತೆಗೆದ ಶವಗಳನ್ನು ಅವರ ಕುಟುಂಬದವರು ಗುರುತಿಸಿದ್ದು ಅಂತಿಮ ಸಂಸ್ಕಾರಕ್ಕಾಗಿ ಅವರಿಗೆ ಒಪ್ಪಿಸಲಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 26-10-1971

• **ಮೈಸೂರಿನ ಕಾವೇರಿ ಯೋಜನೆ ಕಾಮಗಾರಿ ತಡೆಯಲು ನಕಾರ**

ನವದೆಹಲಿ, ಅ. 25- ಕಾವೇರಿ ಮತ್ತು ಅದರ ಉಪನದಿಗಳಾದ ಕಪಿಲಾ ಹಾಗೂ ಹೇಮಾವತಿ ಯೋಜನೆ ಕಾರ್ಯಗಳನ್ನು ಮುಂದುವರಿಸದಂತೆ ಮೈಸೂರನ್ನು ತಡೆಯಬೇಕೆಂಬ ತಮಿಳುನಾಡು ಹಾಗೂ ಕೇರಳ ಸರ್ಕಾರಗಳ ಪ್ರತ್ಯೇಕ ಮನವಿಗಳನ್ನು ಸುಪ್ರೀಂ ಕೋರ್ಟ್ ಇಂದು ತಿರಸ್ಕರಿಸಿತು.

ಆದರೆ, ಕಾವೇರಿ ಜಲವಿವಾದ ಸಂಬಂಧ ನ್ಯಾಯಮಂಡಲಿಯೊಂದನ್ನು ರಚಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಆದೇಶ ನೀಡಬೇಕೆಂಬ ತಮಿಳುನಾಡಿನ ಮೂಲ ಮೊಕದ್ದಮೆಯನ್ನು ನ್ಯಾಯಾಲಯ ವಿಚಾರಣೆಗೆ ಸ್ವೀಕರಿಸಿತು.

• **'ನಾಯಿಕೊಡೆ'ಗಳಂತಿರುವ ವ್ಯಾಪಾರಿಗಳನ್ನು ತಡೆಗಟ್ಟಲು ಅರಸು ಕರೆ**

ಬೆಂಗಳೂರು, ಅ. 25- 'ನಾಯಿಕೊಡೆಗಳಂತೆ' ಅನೇಕರು ರೇಷ್ಮೆ ವ್ಯಾಪಾರದಲ್ಲಿ ತೊಡಗಿರುವುದು ರಫ್ತು ವ್ಯಾಪಾರದ ಮೇಲೆ ದುಷ್ಪರಿಣಾಮವನ್ನುಂಟು ಮಾಡಿದೆ ಎಂದು ರೇಷ್ಮೆ ಮಂಡಳಿಯ ಅಧ್ಯಕ್ಷ ಶ್ರೀ ಡಿ.ದೇವರಾಜ ಅರಸು ಅವರು ಇಂದು ಇಲ್ಲಿ ತಿಳಿಸಿದರು.

ಇಂದು ಬಂದು ನಾಳೆ ರೇಷ್ಮೆ ರಫ್ತು ವ್ಯಾಪಾರದಿಂದ ನಿವೃತ್ತರಾಗುವ ಈ ಮಾರಕ ವ್ಯಾಪಾರಿಗಳನ್ನು ತಡೆಗಟ್ಟಲು ಪ್ರಯತ್ನಿಸಬೇಕೆಂದು ರೇಷ್ಮೆ ರಫ್ತುದಾರರಿಗೆ ಅವರು ಸಲಹೆ ಮಾಡಿದರು.

ಮುಖ್ಯಮಂತ್ರಿಯಲ್ಲದ ಮುಖ್ಯಮಂತ್ರಿ, ಪೊಲೀಸರಲ್ಲದ ಪೊಲೀಸರು, ಪತ್ರಿಕೆಗಳಲ್ಲದ ಪತ್ರಿಕೆಗಳು: ಹೀಗೆಲ್ಲಾ ಉಂಟು

ಆಳುವವರಿಗೆ ಅರಾಜಕತೆಯೇ ಪ್ರಿಯವಾದಾಗ...

ಅನುರಣನ

ನಾರಾಯಣ ಎ.

ಈ ಲೇಖನದಲ್ಲಿ ನೀವು ಓದಲಿರುವುದು ರಾಜಕೀಯ ತತ್ವಗಳನ್ನು. ತತ್ವಗಳನ್ನೆಲ್ಲಾ ಹೇಳುವ, ಕೇಳುವ ಕಾಲ ಇದಲ್ಲ. ಇದು ಶುದ್ಧ ಪ್ರಾಯೋಗಿಕ ರಾಜಕಾರಣದ ಕಾಲ. ಅಧಿಕಾರವೊಂದು ಕೈಯ್ಯಲ್ಲಿ ಇದ್ದರೆ, ಏನನ್ನಾದರೂ ಮಾಡಿ ದಕ್ಕಿಸಿಕೊಳ್ಳಬಹುದಾದ ಕಾಲ. ಇಷ್ಟು ಹೇಳಿದ ನಂತರವೂ ಲೇಖನದಲ್ಲಿ ಬರೆಯಲಾಗಿರುವ ಒಣ ತತ್ವಗಳನ್ನು ನೀವು ಓದುವುದೇ ಆಗಿದ್ದರೆ ಒಂದು ಮನವಿಯಿದೆ. ಇದರಲ್ಲಿ ಪ್ರಸ್ತಾಪಿಸಲಾಗಿರುವ ವಿಚಾರಗಳು ಯಾವುದೇ ವ್ಯಕ್ತಿ, ಸಂಘಟನೆ ಅಥವಾ ಸಮಕಾಲೀನ ಘಟನೆಗಳಿಗೆ ಸಂಬಂಧಿಸಿದಂತೆ ಕಂಡರೆ ಅದು ಕೇವಲ ಕಾಕತಾಳೀಯ.

ತತ್ವ ಒಂದು: ಯಾವುದೇ ದೇಶದ ಯಾವುದಾದರೂ ರಾಜ್ಯದಲ್ಲಿ ಯಾರು ಯಾರ ಮೇಲಾದರೂ ಮನಬಂದಂತೆ ನಡೆಸುವ ಬೀದಿ ಹಿಂಸೆಯನ್ನು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಆ ರಾಜ್ಯದ ಮುಖ್ಯಮಂತ್ರಿ ಸ್ಥಾನದಲ್ಲಿರುವ ವ್ಯಕ್ತಿಯೇ ಸಮರ್ಥಿಸುವುದಕ್ಕೆ ಮುಂದಾದರೆ ಅಂತಹ ವ್ಯಕ್ತಿಯನ್ನು ಮುಖ್ಯಮಂತ್ರಿ ಅಂತ ಕರೆಯಲು ಸಾಧ್ಯವಿಲ್ಲ. ಇನ್ನೇನೆಂದು ಕರೆಯುವುದು? ಗೊತ್ತಿಲ್ಲ. ಮುಖ್ಯಮಂತ್ರಿಯಾಗಿರುವ ವ್ಯಕ್ತಿಯು ಅರಾಜಕತೆಯನ್ನು ಸಮರ್ಥಿಸಿಕೊಳ್ಳುವುದು ಎಂದರೆ ಅದೊಂದು ಥರಾ ಆ ಸ್ಥಾನಕ್ಕೆ ತನ್ನ ಅನರ್ಹತೆಯನ್ನು ಆ ವ್ಯಕ್ತಿಯೇ ಸ್ವಯಂ ಘೋಷಿಸಿಕೊಂಡಂತೆ. ಯಾಕೆಂದರೆ, ಸರ್ಕಾರ ಎಂಬ ವ್ಯವಸ್ಥೆಯನ್ನು ಮನುಷ್ಯಕೋಟಿ ಆವಿಷ್ಕರಿಸಿಕೊಂಡದ್ದೇ ಒಬ್ಬರ ಮೇಲೆ ಒಬ್ಬರು ನಡೆಸಬಹುದಾದ ಸಂಭಾವ್ಯ ಹಿಂಸೆಯನ್ನು ಹತ್ತಿಕ್ಕುವುದಕ್ಕೋಸ್ಕರ. ಎಂತಹದ್ದೇ ಸಂದರ್ಭದಲ್ಲಾದರೂ ಆಡಳಿತ ಕಾನೂನು ಬದ್ಧವಾಗಿಯೇ (Rule of Law) ನಡೆಯುವಂತೆ ನೋಡಿಕೊಳ್ಳುವುದಕ್ಕೋಸ್ಕರ.

ಅಭಿವೃದ್ಧಿ, ಕಲ್ಯಾಣ ಯೋಜನೆ ಇತ್ಯಾದಿಗಳೆಲ್ಲಾ ಹೇಗೋ ನಡೆದುಹೋಗುತ್ತವೆ. ಅವುಗಳನ್ನು ಸರ್ಕಾರ ಮಾತ್ರ ಮಾಡಬೇಕೆಂದೇನೂ ಇಲ್ಲ. ಅಗತ್ಯಬಿದ್ದರೆ ಯಾರಾದರೂ ಮಾಡಬಹುದು. ಮುಖ್ಯಮಂತ್ರಿ ಸ್ಥಾನದಲ್ಲಿರುವ ಯಾರಾದರೂ ವ್ಯಕ್ತಿ ಇಷ್ಟನ್ನು ಕನಿಷ್ಠ ಅರ್ಥಮಾಡಿಕೊಳ್ಳದೆ ಹಿಂಸೆಯನ್ನು ಸಮರ್ಥಿಸುವ ಮಾತುಗಳನ್ನು ಹರಿಬಿಡುವುದು ಎಂದರೆ ಆ ವ್ಯಕ್ತಿ ತಾನು ಯಾವ ವ್ಯವಸ್ಥೆಯ ಮುಖ್ಯಸ್ಥನಾಗಿ ದ್ದಾನೋ ಆ ವ್ಯವಸ್ಥೆಯನ್ನೇ ಅಲ್ಲಗಳೆದಂತೆ. ಅದು ಸಂವಿಧಾನದ್ರೋಹ.

ಇಂತಹ ಮಾತುಗಳನ್ನು ಕೆಲವೊಮ್ಮೆ ಅಧಿಕಾರದಲ್ಲಿರುವ ಮಂದಿ ತಿಳಿಯದೆ ಆಡುವುದುಂಟು. ಆದರೆ ಆಡಿದ್ದಕ್ಕೆ ಕನಿಷ್ಠ ವಿಷಾದವನ್ನೂ ವ್ಯಕ್ತಪಡಿಸದೆ, ಒರಟೊರಟಾಗಿ ಅದರ ಸಮರ್ಥನೆಗಿಳಿದರೆ ಆಗ ಅದು ತಿಳಿಯದೆ ಎಸಗಿದ ಅಚಾತುರ್ಯ ಅಂತ ಆಗುವುದಿಲ್ಲ. ಅದು ಅಧಿಕಾರ ಚಲಾಯಿಸಲು ಬೇಕಾದಷ್ಟು ಪ್ರಬುದ್ಧತೆಯೇ ಇಲ್ಲದ ಸ್ಥಿತಿ. ಇಲ್ಲವೇ ಯಾರನ್ನೋ ಮೆಚ್ಚಿಸುವುದಕ್ಕೋಸ್ಕರ ಮಾಡಿಕೊಳ್ಳುವ ಆತ್ಮವಂಚನೆ. ಏನೇ ಆದರೂ ನಾಡಿನ ಮೇಲೆ ಅದು ಬೀರುವ ಪರಿಣಾಮ ಮಾತ್ರ ಒಂದೇ.

ತತ್ವ ಎರಡು: ಯಾವುದಾದರೂ ದೇಶದ ಯಾವುದಾದರೂ ರಾಜ್ಯದಲ್ಲಿ ಪೊಲೀಸರ ಕಣ್ಣೆದುರಿಗೇ ಪುಢಾರಿಗಳು ಮನಸೋ ಇಚ್ಛೆ ವರ್ತಿಸುವಷ್ಟು ಸ್ವಾತಂತ್ರ್ಯ ಹೊಂದಿದ್ದರೆ ಅಂತಹ ನಾಡಿನಲ್ಲಿ ಸರ್ಕಾರಇದೆ ಅಂತಲೇ ಹೇಳಲು ಸಾಧ್ಯವಿಲ್ಲ. ರಾಮಗೋಪಾಲ್ ವರ್ಮಾ ಅವರ ಒಂದು ಸಿನಿಮಾದ ಹೆಸರು 'ಸರ್ಕಾರ್'. ಆ ಹೆಸರು ಯಾಕೆಂದರೆ ಆ ಸಿನಿಮಾದಲ್ಲಿ ಪೊಲೀಸರು ಮಾಡುವ ಕೆಲಸವನ್ನೆಲ್ಲಾ ಒಂದು ಸಂಘಟನೆಯ ನಾಯಕ ಮತ್ತು ಅವನ ಅನುಯಾಯಿಗಳು ಮಾಡುತ್ತಿರುತ್ತಾರೆ. ಅದು ಪೊಲೀಸ್ ವ್ಯವಸ್ಥೆಯ ಅಣಕ. ತಪ್ಪಿತಸ್ಥರನ್ನು ಬಂಧಿಸುವುದು, ವಿಚಾರಣೆ ನಡೆಸುವುದೆಲ್ಲ ಪೊಲೀಸರ ಕೆಲಸ. ಪೊಲೀಸರೂ ಇಲ್ಲಿ ತಪ್ಪು-ಸರಿಗಳ ನಿರ್ಣಯ ಮಾಡಬೇಕಿರುವುದು ಕಾನೂನುಗಳ ಆಧಾರದಲ್ಲಿ. ಅದು ಬಿಟ್ಟು ಕಂಡಕಂಡವರೆಲ್ಲಾ ಕಾನೂನನ್ನು ಕಾಲ ಕಸದಂತೆ ಕಂಡು ಅರಣ್ಯನ್ಯಾಯ ನಿರ್ಣಯಕ್ಕೆ ಇಳಿದು ಬಿಟ್ಟರೆ ಅದನ್ನು ಅರಾಜಕತೆ ಅಂತ ಕರೆಯುವುದು. ಅದನ್ನು ಮುಖ್ಯಮಂತ್ರಿಯೇ ಸಮರ್ಥಿಸಿದರೆ ಅದಕ್ಕೆ ಏನೆನ್ನುವುದು? ನಾಡಿನ ದೌರ್ಭಾಗ್ಯ ಎಂದಷ್ಟೇ ಹೇಳಬಹುದು.

ವಿಕೃತ ಮನಸ್ಸಿನ ಸರ್ವಾಧಿಕಾರಿಗಳು ಆಳುವ ದೇಶಗಳಲ್ಲಿ ಕೂಡಾ ಆಳುವವರು ಬಳಸುವ ಪೋಷಾಕು, ಸಂಕೇತಗಳ ಜತೆ ಗುರುತಿಸಿಕೊಳ್ಳಲು ಪೊಲೀಸರು ಸ್ವಇಚ್ಛೆಯಿಂದ ಮುಂದಾಗುವುದಿಲ್ಲ. ಕತ್ತಲೆಯ ಖಂಡದ ವಿಫಲ ದೇಶಗಳಲ್ಲೂ (Failed States) ಪೊಲೀಸರು ಹೀಗೆಲ್ಲಾ ವರ್ತಿಸುವುದಕ್ಕೆ ಬಯಸುವುದಿಲ್ಲ. ಅಧಿಕೃತ ಕಚೇರಿಗಳಲ್ಲಿ ನಡೆಯುವ ಯಾವುದೇ ಆಚರಣೆ ಇರಲಿ ಅಲ್ಲಿ ಪೊಲೀಸರು ಒಂದೋ ಸಮವಸ್ತ್ರದಲ್ಲಿ ಕಾಣಿಸಿಕೊಳ್ಳಬೇಕು. ಸಮವಸ್ತ್ರವಿಲ್ಲದೆ ಕಾಣಿಸಿಕೊಳ್ಳುವುದು ಅನಿವಾರ್ಯವಾದರೂ ಅವರ ಉಡುಗೆ-ತೊಡುಗೆ ತಟಸ್ಥ ಸಂಕೇತಗಳನ್ನಷ್ಟೇ ಹೊಂದಿರಬೇಕು. ಪುಢಾರಿಗಳು ಬಳಸುವ ಸಂಕೇತಗಳ ಜತೆ ಕಾಣಿಸಿಕೊಳ್ಳುವುದು ಪೊಲೀಸರಾದವರಿಗೆ ಯಾವುದೇ ದೇಶದಲ್ಲಾದರೂ ಅವಮಾನದ ವಿಚಾರ. ಸರ್ವಾಧಿಕಾರಿಗಳ ಆಡಳಿತವುಳ್ಳ ನಾಡುಗಳಲ್ಲಿ ನಡೆಯದ್ದು, ನಾಡೊಂದು ನಾಗರಿಕತೆಯ ದಿನಗಳನ್ನು ನೋಡುವುದಕ್ಕೆ ಮೊದಲಿದ್ದ ಅವಸ್ಥೆಯಲ್ಲೂ ನಡೆಯದ್ದು ಯಾವ ನಾಡಲ್ಲೂ ನಡೆಯಬಾರದು. ಆದರೆ ಕೆಲವೊಂದು ದೇಶಗಳ ಕೆಲವೊಂದು ರಾಜ್ಯಗಳಲ್ಲಿ ಇದೂ ನಡೆಯುತ್ತದೆ. ಬಹುಶಃ ಅಲ್ಲಿನ ಆಳುವವರೆಲ್ಲ ಪುಢಾರಿಗಳ ಸಮರ್ಥನೆಗೆ ನಿಂತ ನಂತರ ಪೊಲೀಸರಿಗೂ ಪುಢಾರಿಗಳು ಬಳಸುವ ಸಂಕೇತಗಳಲ್ಲಿ ಕಾಣಿಸಿಕೊಳ್ಳುವುದು ತಮ್ಮ ಅಧಿಕೃತ ಸಮವಸ್ತ್ರಗಳಲ್ಲಿ ಕಾಣಿಸಿಕೊಳ್ಳುವುದಕ್ಕಿಂತ ಹೆಚ್ಚುಗಾರಿಕೆ ಅಂತ ಅನ್ನಿಸಿರಬೇಕು.

ಅಥವಾ ಅಲ್ಲಿನ ಪೊಲೀಸ್ ವ್ಯವಸ್ಥೆಯೊಳಗೆ ಪುಢಾರಿಗಳ ವರ್ತನೆಯನ್ನು ಸಮರ್ಥಿಸುವ ಸಿದ್ಧಾಂತವನ್ನು ಒಪ್ಪುವವರ ಪ್ರವೇಶ ದೊಡ್ಡ ಪ್ರಮಾಣದಲ್ಲೇ ಆಗಿರಬೇಕು. ಪೊಲೀಸರನ್ನು ಪೊಲೀಸರಾಗಿಯೇ ಉಳಿಸಿಕೊಳ್ಳಬೇಕೆನ್ನುವ ಕನಿಷ್ಠ ಪ್ರಜ್ಞೆ ಇರದ ನಾಯಕರಿಂದ ಆಳಿಸಿಕೊಳ್ಳುವ ನಾಡು ಬಹಳ ಕಾಲ ಸುಸ್ಥಿತಿಯಲ್ಲಿ ಉಳಿಯಲಾರದು.

ತತ್ವ ಮೂರು: ಯಾವುದೋ ದೇಶದ ಯಾವುದೋ ಒಂದು ರಾಜ್ಯದ ಮುಖ್ಯಮಂತ್ರಿ ಆಡಬಾರದನ್ನೆಲ್ಲಾ ಆಡುತ್ತಿರುವಾಗ, ಅಲ್ಲಿನ ಪೊಲೀಸರು ಗುರುತಿಸಿಕೊಳ್ಳಬಾರದ ಸಂಕೇತಗಳ ಜತೆ ಗುರುತಿಸಿಕೊಳ್ಳಲು ತೊಡಗಿದಾಗ, ಮಾಡಬಾರದವರ ಸಂಗ ಮಾಡತೊಡಗಿದಾಗ, ಇವೆಲ್ಲ ಎಂತಹ ಅಪಾಯಕಾರಿ ಬೆಳವಣಿಗೆಗಳು ಅಂತ ಎಚ್ಚರಿಸಬೇಕಾಗಿರುವುದು ಆ ನಾಡಿನ ಪತ್ರಿಕೆಗಳು. ಜೀವಂತ ಪತ್ರಿಕೆಗಳಿರುವ ನಾಡಿನಲ್ಲಿ ಪೊಲೀಸರು ಮೇಲೆ ಹೇಳಿದಂತೆ ವರ್ತಿಸಿದ್ದರೆ ಅಂತಹ ಘಟನೆಯಲ್ಲಿ ಭಾಗಿಯಾದವರ, ಅದಕ್ಕೆ ಪ್ರೇರಣೆಯಾದವರ, ಅದಕ್ಕೆ ಸೂಚನೆ ನೀಡಿದವರ ಜಾತಕಗಳನ್ನು ಜಾಲಾಡಿ ಜನರ ಮುಂದೆ ಇಡುವ ಕೆಲಸ ನಡೆಯುತ್ತಿತ್ತು. ಇಂತಹ ವರ್ತನೆಗಳಿಗೆ ಮುಖ್ಯಮಂತ್ರಿಯೇ ಮುಂತಾದವರಿಂದ ಬರುವ ಸಮರ್ಥನೆಯ ವಿರುದ್ಧ ಅಭಿಪ್ರಾಯ ಅಭಿಯಾನವೇ ನಡೆಯುತ್ತಿತ್ತು. ಇಷ್ಟೆಲ್ಲಾ ಮಾಡದೆ ಹೋದರೂ ಈ ವಿಚಾರವಾಗಿ ಒಂದು ಸಂಪಾದಕೀಯವನ್ನಾದರೂ ಬರೆದು ಕೈತೊಳೆದುಕೊಳ್ಳಬೇಕಿತ್ತು. ಕನಿಷ್ಠ ಇಷ್ಟನ್ನೂ ಮಾಡದ ಪತ್ರಿಕೆಗಳು ಯಾವುದಾದರೂ ನಾಡಲ್ಲಿ ಇದ್ದರೆ ಅವುಗಳನ್ನು ಪತ್ರಿಕೆಗಳು ಅಂತ ಕರೆಯಲು ಸಾಧ್ಯವಿಲ್ಲ. ಇನ್ನೇನು ಅಂತ ಕರೆಯುವುದೋ ಗೊತ್ತಿಲ್ಲ.

ತತ್ವ ನಾಲ್ಕು: ಕೊನೆಯದಾಗಿ ಯಾವುದಾದರೂ ದೇಶದ ಯಾವುದಾದರೂ ರಾಜ್ಯವೊಂದರಲ್ಲಿ- ಮುಖ್ಯಮಂತ್ರಿ ಅಂತ ಕರೆಯಲಾಗದ ವ್ಯಕ್ತಿ ಮುಖ್ಯಮಂತ್ರಿಯಾಗಿದ್ದಾಗ, ಪೊಲೀಸರು ಎಂದು ಕರೆಯಲಾಗದವರು ಪೊಲೀಸರಾಗಿದ್ದಾಗ, ಮಾಧ್ಯಮಗಳು ಅಂತ ಕರೆಯಲಾಗದ ಮಾಧ್ಯಮಗಳಿದ್ದಾಗ, ಅಲ್ಲಿನ ಲೇಖಕರು, ಕವಿಗಳು, ಚಿಂತಕರು, ತತ್ವಜ್ಞಾನಿಗಳು, ನಾಡೋಜರು, ಸಂತರು ಅಖಾಡಕ್ಕೆ ಇಳಿಯಬೇಕಾಗುತ್ತದೆ. ಆತ್ಮಘಾತುಕ ಹಾದಿಯಲ್ಲಿ ಸಾಗುತ್ತಿರುವ ವ್ಯವಸ್ಥೆಯ ಬಗ್ಗೆ ಎಚ್ಚರಿಸಬೇಕಾಗುತ್ತದೆ. ಇಂತಹ ಎಚ್ಚರಿಕೆಯ ಧ್ವನಿಗಳು ಕೇಳಿಸದೇ ಇರುವ ನಾಡನ್ನು ನಾಡೆಂದು ಕರೆಯುವುದಾದರೂ ಹೇಗೆ?

ಮಹಾಭಾರತದಲ್ಲಿ ದ್ರೌಪದಿ ವಸ್ತ್ರಾಪಹರಣ ನಡೆಯುವ ಹೊತ್ತಿಗೆ ಭೀಷ್ಮ, ದ್ರೋಣ, ಕೃಪಾದಿಗಳೆಲ್ಲಾ ಸುಮ್ಮಗಿದ್ದರೆ, ನೂರೊಂದು ಮಂದಿ ಕೌರವ ಸೋದರರ ಪೈಕಿ ಒಬ್ಬನಾದ ವಿಕರ್ಣ ಎಂಬಾತ ಮಾತ್ರ 'ಇದೇನು ನಡೆಯುತ್ತಿದೆ ಇಲ್ಲಿ' ಅಂತ ಪ್ರತಿಭಟಿಸುತ್ತಾನೆ. ಆತನನ್ನು ಬೆದರಿಸಿ ಹೊರಗಟ್ಟಲಾಗುತ್ತದೆ- ದೇಶದ್ರೋಹಿ, ರಾಜದ್ರೋಹಿ, ಧರ್ಮದ್ರೋಹಿ ಎಂಬಿತ್ಯಾದಿ ಬೈಗುಳಗಳು ವಿಕರ್ಣನ ವಿರುದ್ಧವೂ ಅಂದು ಬಳಕೆಯಾಗಿರಬಹುದು. ಆತನೇನೂ ಕೈಲಾಗದೆ ಮೈಪರಚಿಕೊಂಡ ಅನಾಮಿಕ ಕೌರವ ಸೋದರನಲ್ಲ, ಕೌರವ ಸೇನೆಯ ಪ್ರಮುಖರಲ್ಲಿ ಒಬ್ಬ ಎಂಬಂತೆ ಭಗವದ್ಗೀತೆಯ ಮೊದಲ ಅಧ್ಯಾಯದ ಎಂಟನೆಯ ಶ್ಲೋಕದಲ್ಲಿ ಆತನ ಹೆಸರು ಪ್ರಸ್ತಾಪವಾಗುತ್ತದೆ. ಆಳುವವರನ್ನು ಕೆಲವೊಮ್ಮೆ ಆಳುವವರ ಕಡೆಯವರೇ ಎಚ್ಚರಿಸಬೇಕು. ಕೌರವರ ನಡುವೆಯಾದರೂ ಒಬ್ಬ ವಿಕರ್ಣನಿದ್ದ. ಈಗ ಕೆಲವು ದೇಶಗಳ ಕೆಲವು ರಾಜ್ಯಗಳಲ್ಲಿ ಆಳುತ್ತಿರುವವರ ನಡುವೆ ವಿಕರ್ಣರಂತಹವರೂ ಉಳಿದಿಲ್ಲ ಅನ್ನಿಸುತ್ತದೆ.

ಚುರುಮುರಿ

ಪ್ರಶಸ್ತಿ ಪರ್ವ

• ಲಿಂಗರಾಜು ಡಿ.ಎಸ್.

'ಸಾ, ಈ ಸಾರಿ ರಾಜ್ಯೋತ್ಸವ ಪ್ರಶಸ್ತಿಯಲ್ಲಿ ರಾಜಕೀಯ ನಡೆಯಕುಲ್ಲ, ಅಪ್ಲಿಕೇಸನ್ ಹಾಕದಿದ್ದರೂ ಯೋಗ್ಯರಿಗೆ ಪ್ರಶಸ್ತಿ ಸಿಕ್ತದೆ ಅಂದದೆ ಸುನೀಲಣ್ಣ!' ಅಂತಂದೆ.

'ಆಗ್ಲೇ ಸಾವಿರಾರು ಅರ್ಜಿ ಬಂದವಂತೆ ತಗಾ! ಬೇಕಾದೋವುಕ್ಕೆಲ್ಲಾ ಹಂಚಿದ ಮ್ಯಾಲೆ ಏನಾದ್ರೂ ಉಳುದ್ರೆ ಯೋಗ್ಯರ ಅದ್ರಸ್ಟ. ರಾಜ್ಯೋತ್ಸವ ಪ್ರಶಸ್ತಿ ಖರೀದಿಗೆ ಸಿಗದಿದ್ರೆ ಅಡ್ನಾಡಿ ವೀನಿವರ್ಸಿಟಿ ಗೌರವ ಡಾಕ್ಟರೇಟ್ ಅದಲ್ಲೋ' ಯಂಟಪ್ಪಣ್ಣ ಕೋಪಾಮುದ್ರೆ ಹಾಕಿತು.

'ಪ್ರಶಸ್ತಿ ಯಾರ್‍ಯಾರಿಗೆ ಕೊಡಬಕು ಅಂತ ಬಸಣ್ಣ, ಸುನೀಲಣ್ಣನಿಗೆ ನಾನು ಮಾರ್ಗಸೂಚಿ ಕೊಡ್ತಾ ಇವ್ನಿ. ದುಂದುಗಾರಿಕೆ ಮಾಡ್ತಿರೋ ಬಿಡಿಎಗೆ 'ಅಶಿಸ್ತಾವಧಾನಿ' ಪ್ರಶಸ್ತಿ, ಗುಂಡಿಗಳ ನಡಂತರದೇಲಿ ಆ ಒಂದು, ಆ ಎರಡು ಅಂತ ರೋಡು ಹುಡಿಕ್ಯಂದು ನಡೆಯಂಗೆ ಮಾಡಿರೋ ಬಿಬಿಎಂಪಿಗೆ 'ಗುಂಡಿ ಗಾರುಡಿಗ' ಪ್ರಶಸ್ತಿ, ವಿದ್ಯುತ್ ನಿಗಮಗಳ ಕಳ್ಳಾಟಕ್ಕೆ 'ವಿದ್ಯುತ್ ವಿಕ್ರಮ' ಪ್ರಶಸ್ತಿ, ಕೇಂದ್ರ ಸರ್ಕಾರಕ್ಕೆ 'ಇಂಧನ ವಿಶಾರದ' ಪ್ರಶಸ್ತಿ ಕೊಡಬೇಕಾಯ್ತದೆ' ಅಂದ್ರು ತುರೇಮಣೆ.

'ಹಂಗಾದ್ರೆ ವೇಷ ಕಟ್ಟೋರಿಗೆ 'ಛದ್ಮಶ್ರೀ' ಪ್ರಶಸ್ತಿ, ವೃತ್ತಿಪರ ಪಕ್ಷಾಂತರಿಗಳಿಗೆ 'ಲಾಗಭೂಷಣ' ಪ್ರಶಸ್ತಿ, ಗಳಿಗ್ಗೊಂದು ಆಟ ಕಟ್ಟೋರಿಗೆ 'ಚಾಲ್‌ರತ್ನ', ಹಡಬಿಟ್ಟ ದುಡ್ಡಿನ ಹೊಟ್ಟೆ ಬೆಳೆಸಿಕಂಡೋರಿಗೆ 'ಭಾರದರತ್ನ', ಸಿಂಡಾಟದೋರಿಗೆ 'ಸ್ವಾರ್ಥರತ್ನ', ವಯಸ್ಸಾದ್ರೂ ಅಧಿಕಾರ ಬುಡದೋರಿಗೆ 'ತರುಣಶ್ರೀ' ಪ್ರಶಸ್ತಿ ಕೊಡಬೇಕಲ್ಲವೇನ್ರೋ?' ಅಂತು ಯಂಟಪ್ಪಣ್ಣ.

'ವಾಟ್ಸಪ್ಪಲ್ಲಿ ಸಿಟ್ಟು ಫಾರ್ವರ್ಡ್ ಮಾಡಿಕ್ಯಂಡು ತೆಪ್ಪಗಿರೋ ನಮ್ಮ ಸತ್‌ಪ್ರಜೆಗಳಿಗೆ ಏನು ಅವಾರ್ಡು ಕೊಡಬೌದು ಹೇಳಿ ಸಾ?' ನಾನು ಕೇಳಿದೆ.

'ನೋಡ್ಲಾ, ನಮ್ಮ ಇಲಾಖೇಲಿ ಒಬ್ಬರು ಉತ್ತರಭಾರತದ ಕಮಿಷನರ್ ಇದ್ರು. ಅವರಿಗೆ ಕನ್ನಡ ಸರಿಯಾಗಿ ಬರ್ತಿರಲಿಲ್ಲ. ಆದ್ರೂ ಮೀಟಿಂಗಲ್ಲಿ 'ಸರಿಯಾಗಿ ಕೆಲಸ ಮಾಡಬೇಕೂಪಾ, ಫೈಲು ಬೇಗ ಬೇಗ ಕ್ಲಿಯರ್ ಮಾಡಬೇಕೂಪಾ, ಜನಕ್ಕೆ ಅನುಕೂಲ ಆಗಬೇಕೂಪಾ' ಅನ್ನೋರು. ಹಂಗೇ ನಮ್ಮ ಜನಕ್ಕೆ ಎದ್ದೇಳ್ ಬೇಕೂಪಾ ಅಂತ ತಿವಿಯೋರು ಬೇಕಾಗ್ಯದೆ' ಅಂತ ಅಟಕಾಯಿಸಿದ್ರು.

ಸಂಗತ

'ಭವಿಷ್ಯ ವಿಜ್ಞಾನ' ದಾರಿದೀಪವಾಗಲಿ

ವರ್ತಮಾನವನ್ನು ಅರ್ಥೈಸಿಕೊಳ್ಳದೆ ಭವಿಷ್ಯ ಹಸನಾಗದು

• ಯೋಗಾನಂದ

'ನಾಳೆಯೊಡನೆ ಜೂಜಾಟ ಬೇಡ, ಇಂದೇ ಬದುಕನ್ನು ಪರಿಷ್ಕರಿಸಿಕೊಳ್ಳಿ'- ಫ್ರಾನ್ಸ್‌ನ ಲೇಖಕಿ ಸಿಮೋನ್ ಡಿ ಬೊವಾ ಹೇಳಿದ ಈ ಮಾತು 'ಕಾಲಜ್ಞಾನ'ದ ಬೆನ್ನೇರುವ ಪ್ರವೃತ್ತಿಗೆ ಚಾಟಿ ಬೀಸಿದಂತಿದೆ.

ವಾಸ್ತವವಾಗಿ 'ನಾಳೆ' ಎನ್ನುವುದೇ ಇಲ್ಲ! ಏಕೆಂದರೆ 'ನಾಳೆ' ಬಂದಾಗ ಅದು ಇಂದೇ ಆಗಿರುತ್ತದೆ. ಅತಿಯಾಗಿ ಹಚ್ಚಿಕೊಂಡರೆ ಗತವು ಖಿನ್ನತೆಗೂ ಭವಿತವ್ಯವು ಆತಂಕಕ್ಕೂ ಕಾರಣವಾಗಬಹುದು. ಜನಪದರು ಈ ದೃಷ್ಟಿಯಿಂದಲೇ 'ನಾಳೆ ಮನೆ ಹಾಳು' ಎನ್ನುತ್ತಾರೆ. ಬೆಳಗ್ಗೆ ಎದ್ದ ಕೂಡಲೆ 'ಎಳ್ಳು-ಜೀರಿಗೆ-ಕಬ್ಬು' ಬೆಳೆಯುವವರ ಕೃತಜ್ಞತೆಯಿಂದ ನೆನೆಯುವ ಮೂಲಕ ಇಂದಿನ ದಿನವನ್ನು ಅವರು ಉತ್ಸಾಹದಿಂದ ಬರಮಾಡಿಕೊಳ್ಳುವುದರಲ್ಲಿ ಅರ್ಥವಿದೆ. ಹಾಗಾಗಿ ವರ್ತಮಾನವೊಂದೇ ನೆಮ್ಮದಿ, ಶಾಂತಿಯ ನೆಲೆ.

ದಾಸವರೇಣ್ಯರ ದೃಷ್ಟಿಯಲ್ಲಿ ಇಂದಿನ ದಿನವೇ ಶುಭದಿನ. 'ಕಾಲಜ್ಞಾನ'ದ ಅಸಲಿಯತ್ತು ನಮಗೆ ಗೊತ್ತಿದ್ದೇ. ನಿಂತ ಗಡಿಯಾರವೂ ದಿನಕ್ಕೆರಡು ಬಾರಿ ನಿಖರ ಸಮಯ ತೋರಿಸುತ್ತದೆ. ವಿದ್ಯಮಾನಗಳು ನಡೆದ ನಂತರ ಚಿತ್ರ ವಿಚಿತ್ರ ಸಮರ್ಥನೆಗಳಿಂದ, ಮುನ್ನುಡಿದಂತೆಯೇ ಆಗಿವೆಯೆಲ್ಲ ಎಂದು ವಾದಕ್ಕಿಳಿಯುವುದಿದೆ.

ಒಂದು ವೃತ್ತಾಂತ ನೆನಪಿಗೆ ಬರುತ್ತದೆ. ಪಿಯು ಪರೀಕ್ಷೆಗೆ ಕೂತಿದ್ದ ವಿದ್ಯಾರ್ಥಿಯೊಬ್ಬ ನಾಲ್ಕು ಐಚ್ಛಿಕ ವಿಷಯಗಳ ಫಲಿತಾಂಶ ಹೇಗೆಂದು ಒಬ್ಬ 'ಕಾಲಜ್ಞಾನಿ'ಯ ಮೊರೆ ಹೋದ. ಆತ ಮೌನ ಮುರಿಯದೆ ಬಲಗೈನ ಒಂದು ಬೆರಳು ತೋರಿದ. ಫಲಿತಾಂಶ ಪ್ರಕಟವಾಯಿತು. ವಿದ್ಯಾರ್ಥಿ ಎರಡು ವಿಷಯಗಳಲ್ಲಿ ನಪಾಸಾಗಿದ್ದ. ನಾನು ನಿನಗೆ ಒಂದರ್ಧದಷ್ಟು ವಿಷಯಗಳು ಮಾತ್ರ ಪಾಸು ಅಂತ ಹೇಳಿದ್ದೆ ತಾನೆ ಎಂದಿದ್ದ ಕಾಲಜ್ಞಾನಿ! ಇನ್ನು ವಿವರಿಸುವ ಅಗತ್ಯವಿಲ್ಲ. ಫಲಿತಾಂಶ ಏನೇ ಇದ್ದರೂ ಸಮರ್ಥನೆ ಇದ್ದೇ ಇತ್ತು.

ಮುಂದಾಗುವುದನ್ನು ಹೇಳಲು ಅಸಾಧ್ಯ. ಭೂಕಂಪ, ನೆರೆ, ಸುನಾಮಿ, ಅಗ್ನಿಪರ್ವತ ಸ್ಫೋಟ, ರೋಗ ರುಜಿನಗಳು, ಅನ್ಯ ಆಗಸಕಾಯಗಳ ಡಿಕ್ಕಿಗಳ ಮಾತಿರಲಿ ಮಳೆ, ಚಂಡಮಾರುತಗಳನ್ನೂ ನಿಖರವಾಗಿ ಅರಿಯಲಾಗದು. ನಿನ್ನೆ ನೋಡಿದ್ದಾಗಿದೆ, ಇಂದಿನ ದಿನ ಆಪ್ತವಾಗಿಸಿಕೊಂಡರೆ ನಾಳೆಗೆ ಹೆದರುವ ಅಗತ್ಯವಿಲ್ಲ. ಭವಿಷ್ಯದತ್ತ ಧಾವಿಸಿದಷ್ಟೂ ನಮ್ಮ ಮುಂಗಾಣ್ಕೆಗಳ ನಿಷ್ಕೃಷ್ಟತೆ ಕಡಿಮೆ. ನಾವು ಜೀವಿಸಿರುವುದು ವರ್ತಮಾನದಲ್ಲೇ, ನಾಳೆ ಕನ್ನಡಿಯೊಳಗಿನ ಗಂಟು. ನಾಳಿನ ಬಗ್ಗೆ ಕೊರಗು ಅನುಭವಿಸಬೇಕಾದ ತಾಕಲಾಟಗಳನ್ನೇನೂ ತಿಳಿಗೊಳಿಸದು. ನಮ್ಮನ್ನು ಕಾಡುವ ಅತಿ ಘೋರ ಭಯವೆಂದರೆ ನಮಗೆ ಗೊತ್ತಿಲ್ಲದ್ದು ಸೃಷ್ಟಿಸುವಂಥದ್ದು. ಹಾಗೆ ನೋಡಿದರೆ ಭವಿಷ್ಯವೆಂಬ ಪ್ರಶ್ನೆಪತ್ರಿಕೆ ರಹಸ್ಯವಾಗಿದ್ದರೇನೆ ಚಂದ.

ಎಡಿಸನ್‌ನನ್ನು ಭೇಟಿಯಾಗಲು ಮಾತೆಯೊಬ್ಬಳು ಹತ್ತು ವರ್ಷದ ಮಗನೊಡನೆ ಬರುತ್ತಾಳೆ. 'ಅಣ್ಣ, ನೀನು ಒಂದಾದ ಮೇಲೊಂದರಂತೆ ಆವಿಷ್ಕಾರಗಳಲ್ಲಿ ಮಗ್ನನಾಗಿರುತ್ತಿ. ನನ್ನ ಮಗನಿಗೂ ನಿನ್ನ ಜಾಣ್ಮೆ ಹೇಳಿಕೊಡು' ಎನ್ನುವಳು. ಅದಕ್ಕೆ ಎಡಿಸನ್‌ನ ಪ್ರತಿಕ್ರಿಯೆ ಮಾರ್ಮಿಕ: 'ಬಹು ಸರಳ, ನಿನ್ನ ಮಗ ಗಡಿಯಾರ ನೋಡದೆ ವ್ಯಾಸಂಗ ಮಾಡಲಿ'. ಅಂತೆಯೆ ಐನ್‌ಸ್ಟೀನ್ 'ಸಾಪೇಕ್ಷತಾ ಸಿದ್ಧಾಂತ'ದ ಭಾಷೆಯಲ್ಲೇ 'ನಾಳೆ ಬಹು ಬೇಗನೆ ಬಂದುಬಿಡುತ್ತದೆ, ಅದನ್ನು ನಿರೀಕ್ಷಿಸಲೂ ನನಗೆ ಸಮಯವಿಲ್ಲ' ಎಂದರು!

ಅಂದಹಾಗೆ ಭವಿಷ್ಯವನ್ನು ವೈಜ್ಞಾನಿಕವಾಗಿ ಅಂದಾಜಿಸುವ 'ಭವಿಷ್ಯ ವಿಜ್ಞಾನ' (futurology) ಎಂಬ ಅಂತರ್ಶಿಸ್ತೀಯ ವಿಷಯವಿದೆ. ಮೌಢ್ಯ, ಅತಿಶಯೋಕ್ತಿರಹಿತವಾಗಿ ಪ್ರಸ್ತುತ ವಿದ್ಯಮಾನಗಳನ್ನು ಕಲೆಹಾಕಿ ಅವುಗಳನ್ನು ಕ್ರಮಬದ್ಧವಾಗಿ ಅಧ್ಯಯನ ಮಾಡಲಾಗುತ್ತದೆ. ಹವಾಮಾನ, ಮಾರುತಗಳ ದಿಕ್ಕು, ದಿಶೆ ಮತ್ತು ವೇಗ ಆಧರಿಸಿ ತಕ್ಕಮಟ್ಟಿಗೆ ಮಳೆಯ ಮುನ್ನೋಟ ಇದಕ್ಕೊಂದು ನಿದರ್ಶನ. ಭೂತಕಾಲ ವರ್ತಮಾನವನ್ನು, ವರ್ತಮಾನವು ಭವಿಷ್ಯತ್ ಕಾಲವನ್ನು ಪ್ರೇರಿಸುವುದು ಸಹಜ. ಈ ದಿಸೆಯಲ್ಲಿ ವೈಜ್ಞಾನಿಕ ಕಥೆಗಳು 'ಭವಿಷ್ಯ ವಿಜ್ಞಾನ'ಕ್ಕೆ ಪೂರಕವಾಗುವ ಉದಾಹರಣೆಗಳು ಇತಿಹಾಸದಲ್ಲಿ ಧಾರಾಳವಾಗಿವೆ.



ಇಸವಿ 1865. ಪ್ರಸಿದ್ಧ ವಿಜ್ಞಾನ ಸಾಹಿತಿ ಫ್ರಾನ್ಸಿನ ಜೂಲ್ಸ್ ವರ್ನೆ ಅವರ ಒಂದು ಕಥೆಯಲ್ಲಿ, ಅಲ್ಯೂಮಿನಿಯಂ ಗಗನನೌಕೆಯೊಂದು ಅಮೆರಿಕದ ಫ್ಲಾರಿಡಾದಿಂದ ಚಿಮ್ಮಿ ಚಂದ್ರನನ್ನು ತಾಸಿಗೆ 24,400 ಮೈಲಿಗಳ ವೇಗದಲ್ಲಿ ಸುತ್ತು ಹಾಕುವುದು. ನಂತರ ನೌಕೆ ಸುರಕ್ಷಿತವಾಗಿ ಧರೆಗೆ ಮರಳಿ ಪೆಸಿಫಿಕ್ ಸಾಗರದಲ್ಲಿ ತೇಲುತ್ತದೆ. 1968ರಲ್ಲಿ ಆತ ಬರೆದಂತೆಯೇ ಆಗಿತ್ತು. ಅಪೊಲೊ- 8ಯಾತ್ರೆ! ಒಂದೇ ವ್ಯತ್ಯಾಸವೆಂದರೆ, ನೌಕೆಯ ವೇಗ 200 ಮೈಲಿಗಳು ಕಡಿಮೆ. ವರ್ನೆ ಹೆಣೆದಿದ್ದು ಕಥೆಯಾದರೂ ಅದರಲ್ಲಿ ಕಾರ್ಯಕಾರಣ ಸಂಬಂಧಗಳು ವಿಜೃಂಭಿಸಿ ದ್ದವು. ತಾರ್ಕಿಕ ಲೆಕ್ಕಾಚಾರಗಳಿಗೆ ಸೋಲಿಲ್ಲ. ವರ್ನೆ ಕಾಲಜ್ಞಾನಿಯಾಗಿರಲಿಲ್ಲ!

ಅದು ಹಾಗೆಯೇ- ಮನುಷ್ಯನಿಗೆ ಪ್ರಕೃತಿಯೇ ದಾರಿದೀಪ. ವಿಮಾನಕ್ಕೆ ಹಾರಲು ಹಕ್ಕಿಯ, ಹಡಗಿಗೆ ತೇಲಿ ಸಾಗಲು ಮೀನಿನ ಕುಮ್ಮಕ್ಕು! ಮಹಾಭಾರತದ ಅರಣ್ಯಪರ್ವದಲ್ಲಿ 'ಬೆಳಕಿಗಿಂತ ವೇಗವಾಗಿ ಧಾವಿಸುವುದು ಯಾವುದು' ಎಂಬ ಯಕ್ಷನ ಪ್ರಶ್ನೆಗೆ ಧರ್ಮರಾಜನ ಸರಿ ಉತ್ತರ: 'ಮನಸ್ಸು'. ಇದು ಬೆಳಕಿ ಗಿಂತ ವೇಗವಾಗಿ ಸಾಗುವ ಯಾವುದೇ ವಸ್ತುವಿಲ್ಲ ಎನ್ನುವ ಐನ್‌ಸ್ಟೀನ್ ವಾದಕ್ಕೆ ಸಡ್ಡು ಹೊಡೆದಂತಿದೆ.

ನಮ್ಮ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಶಾಲಾಮಟ್ಟದಿಂದಲೇ 'ಭವಿಷ್ಯ ವಿಜ್ಞಾನ'ವನ್ನು ಒಂದು ವಿಷಯವನ್ನಾಗಿಡಬೇಕು. ಇದರಿಂದ ಮಕ್ಕಳಿಗೆ ವೈಜ್ಞಾನಿಕ ಚಿಂತನೆ, ವೈಚಾರಿಕತೆ ಮೈಗೂಡುತ್ತದೆ. ನಾಳೆಗಳನ್ನು ಅವರು ಮಿಥ್ಯ, ಮಾಯಾವಾದದ ಹಂಗಿಲ್ಲದೆ ಸಹಜವಾಗಿ ಎದುರು ನೋಡಿಯಾರು, ನಿರ್ವಹಿಸಿಯಾರು.

ವಾಚಕರ ವಾಣಿ

ವಿಶ್ವವಿದ್ಯಾಲಯಗಳ ಸುಧಾರಣೆಗೆ ಕ್ರಮ ಅಗತ್ಯ

ವಿಶ್ವವಿದ್ಯಾಲಯಗಳಲ್ಲಿನ ಗಂಭೀರ ಸಮಸ್ಯೆಗಳನ್ನು ಕುರಿತ 'ಪ್ರಜಾವಾಣಿ'ಯ ವರದಿಗಳು ಸಕಾಲಿಕವೂ ಅರ್ಥಪೂರ್ಣವೂ ಆಗಿವೆ. ಪ್ರಸ್ತುತ ಜಾತಿಯ ಆಲಯಗಳಾಗಿರುವ ಹಲವು ವಿಶ್ವವಿದ್ಯಾಲಯಗಳು ಜ್ಞಾನ ಉತ್ಪಾದನೆಯನ್ನು ಮರೆತಂತೆ ವರ್ತಿಸುತ್ತಿವೆ.

ಬಹುಪಾಲು ಬೋಧಕ ಮತ್ತು ಬೋಧಕೇತರ ಹುದ್ದೆಗಳ ನೇಮಕಗಳು ಹಣ, ಜಾತಿ, ಪ್ರಭಾವಗಳ ಹಿನ್ನೆಲೆಯಲ್ಲಿಯೇ ನಡೆಯುತ್ತಿವೆ. ದೇಶದ ಪ್ರಗತಿಯು ಶಿಕ್ಷಣದ ಪ್ರಗತಿಯನ್ನೂ ಆಧರಿಸಿದೆ. ಆದ್ದರಿಂದ ವಿಶ್ವವಿದ್ಯಾಲಯಗಳ ಸುಧಾರಣೆಗೆ ಸರ್ಕಾರ ಕ್ರಮ ಕೈಗೊಳ್ಳಬೇಕು.

ಹಂ.ಗು.ರಾಜೇಶ್, ಬೆಂಗಳೂರು

ಭಾಷೆ ಸುಧಾರಿಸಲಿ, ಘನತೆ ಕಾಯ್ದುಕೊಳ್ಳಿ

ಮಾತನಾಡುವ ಭಾಷೆ ಮನುಷ್ಯನ ವ್ಯಕ್ತಿತ್ವವನ್ನು ಪ್ರತಿಬಿಂಬಿಸುತ್ತದೆ ಎಂದು ತಿಳಿದಿದ್ದೇವೆ. ಇಂದು ರಾಜಕಾರಣಿಗಳು ಮಾತನಾಡುವ ಭಾಷೆಯನ್ನು ಕೇಳಿದರೆ ಏನು ಹೇಳಬೇಕೆಂಬುದೇ ತಿಳಿಯುತ್ತಿಲ್ಲ. ಯಾವ ಯಾವ ರೀತಿ? ಎಂತೆಂತಹ ಮಾತು? ಏಕವಚನ ಪ್ರಯೋಗ, ಛೀ, ಅಸಹ್ಯ ಎನಿಸುತ್ತದೆ. ಜನಪ್ರತಿನಿಧಿಗಳಾಗಿ ಜನರಿಗೆ ಮಾದರಿಯಾಗಿ, ಆದರ್ಶವಾಗಿ ಇರಬೇಕಾದವರು ನಡೆದುಕೊಳ್ಳುವ ರೀತಿಯೇ ಇದು? ಆಡುತ್ತಿರುವ ಮಾತುಗಳನ್ನು ನೋಡಿದರೆ ಇವರ ಬಗ್ಗೆ ಗೌರವ ಭಾವನೆಯೇ ಬರುವುದಿಲ್ಲ. ಎಲ್ಲವೂ ಅಧಿಕಾರಕ್ಕಾಗಿ.

ಇಂದು ನಮ್ಮ ಯುವಜನರ ಪರಿಸ್ಥಿತಿಯೂ ಹೀಗೆಯೇ ಇದೆ. ಚಲನಚಿತ್ರ ಒಳಗೊಂಡಂತೆ ಬೇರೆ ಬೇರೆ ಪ್ರಭಾವಗಳಿಂದಾಗಿ ಅವರಿಗೆ ಹಿರಿಯರನ್ನು ಹೇಗೆ ಮಾತನಾಡಿಸಬೇಕು, ಹೇಗೆ ಗೌರವಿಸಬೇಕು ಎಂಬ ಪರಿಜ್ಞಾನವೇ ಇಲ್ಲದಂತಾಗಿದೆ. ಚಿಕ್ಕ ಹುಡುಗರು ಸಹ 60-80ರ ವಯಸ್ಸಿನ ಹಿರಿಯರನ್ನು ಏನಣ್ಣಾ, ಬಾರೋ, ಹೋಗೋ, ಕೂತ್ಕೊಳ್ಳೋ, ಸರಿಯೋ ಎಂದೆಲ್ಲ ಮಾತನಾಡುತ್ತಾರೆ. ಪೊಲೀಸ್ ಠಾಣೆಗಳಲ್ಲಿ ರಾಜಕಾರಣಿಗಳು ಮತ್ತು ಪ್ರಭಾವಿಗಳನ್ನು ಬಿಟ್ಟರೆ ಪೊಲೀಸರು ಸಾಮಾನ್ಯವಾಗಿ ಎಲ್ಲರನ್ನೂ ಏಕವಚನದಲ್ಲೇ ಮಾತನಾಡಿಸುತ್ತಾರೆ. ಎಲ್ಲರಿಗೂ ಎಲ್ಲರ ಪರವಾಗಿ ಕೇಳುವುದು ಒಂದೇ, ಭಾಷೆಯನ್ನು ಸುಧಾರಿಸಿಕೊಳ್ಳಿ, ಘನತೆಯನ್ನು ಕಾಯ್ದುಕೊಳ್ಳಿ.

ಶಾಂತಿನಾಥ ಕೆ. ಹೋತಪೇಟಿ, ಹುಬ್ಬಳ್ಳಿ

ಇದು ಪಾರದರ್ಶಕತೆಯಲ್ಲವೇ?

ಕೇಂದ್ರೋದ್ಯಮಗಳ ಐಪಿಒ ಕುರಿತ ಅಭಿಪ್ರಾಯಗಳನ್ನು ಸಂವಾದದಲ್ಲಿ (ಪ್ರ.ವಾ., ಅ. 24) ಗಮನಿಸಿದೆ. ಒಂದು ಅಭಿಪ್ರಾಯ 'ಹೂಡಿಕೆದಾರರ ದೃಷ್ಟಿಯಿಂದ ಒಳ್ಳೆಯದು' ಎಂದಿದ್ದರೆ, ಮತ್ತೊಂದು 'ಪಾರದರ್ಶಕತೆ ಬರುತ್ತದೆ' ಎಂದಿದೆ. ಭಾರತದ ಷೇರುಪೇಟೆಯಲ್ಲಿ ಹೂಡಿಕೆ ಮಾಡಿರುವವರ ಸಂಖ್ಯೆಯು ಒಟ್ಟು ಜನಸಂಖ್ಯೆಯ ಕೇವಲ ಶೇ 4ರಷ್ಟು ಇದೆ. ಅಂದರೆ 136 ಕೋಟಿ ಜನಸಂಖ್ಯೆಯಲ್ಲಿ 5.4 ಕೋಟಿ ಜನರಷ್ಟೇ ಇದ್ದಾರೆ. ಅದಕ್ಕೆ ಪ್ರತಿಯಾಗಿ ಭಾರತೀಯ ಜೀವ ವಿಮಾ ನಿಗಮದಲ್ಲಿ ಇಂದು 40 ಕೋಟಿ ಪಾಲಿಸಿದಾರರಿದ್ದಾರೆ. ಮೊದಲನೆಯ ವಾದವನ್ನು ಒಪ್ಪುವುದಾದರೆ, 40 ಕೋಟಿ ಪಾಲಿಸಿದಾರರ ಹಣ ಹೂಡಿಕೆಯನ್ನು ಅಪಾಯಕ್ಕೊಡ್ಡಿ ಕೇವಲ 5.4 ಕೋಟಿ 'ಹೂಡಿಕೆದಾರರ ದೃಷ್ಟಿಯಿಂದ ಒಳ್ಳೆಯದು' ಎಂಬ ಅಭಿಪ್ರಾಯ ಎಷ್ಟು ಸರಿ?

ಇನ್ನು 'ಪಾರದರ್ಶಕತೆ ಬರುತ್ತದೆ' ಎಂಬ ವಾದ ಕೂಡ ಅಷ್ಟೇ ಬಾಲಿಶವಾದುದು. ಏಕೆಂದರೆ ಎಲ್‌ಐಸಿಯು ಅಸ್ತಿತ್ವಕ್ಕೆ ಬಂದಿದ್ದು ನಮ್ಮ ಸಂಸತ್ತಿನಲ್ಲಿ ಅಂಗೀಕರಿಸಿದ ಕಾಯ್ದೆಯ ಅಡಿಯಲ್ಲಿ. ಇದು ಪ್ರತೀ ಮೂರು ತಿಂಗಳಿಗೆ ಸರ್ಕಾರಕ್ಕೆ ತನ್ನ ಲೆಕ್ಕಪತ್ರಗಳನ್ನು ನೀಡುತ್ತಿದೆ. ಪ್ರತಿವರ್ಷ ಬಜೆಟ್ಟಿನಲ್ಲಿ ನಿಗಮದ ಆಯವ್ಯಯವನ್ನು ದೇಶದ ಜನರಿಗೆ ಸರ್ಕಾರವೇ ನೀಡುತ್ತಿದೆ. ಇದು ಪಾರದರ್ಶಕತೆಯಲ್ಲವೇ?

ಇನ್ನು ಪ್ರತಿವರ್ಷ ನಿಗಮವು ಗಳಿಸುವ ಒಟ್ಟಾರೆ ಲಾಭದಲ್ಲಿ ಶೇ 95ರಷ್ಟು ಹಣವನ್ನು ಪಾಲಿಸಿದಾರರಿಗೆ ಮತ್ತು ಶೇ 5ರಷ್ಟು ಹಣವನ್ನು ಸರ್ಕಾರಕ್ಕೆ ವಿತರಣೆ ಮಾಡುತ್ತಿದೆ. ಇದು ನಿಗಮದ ಒಟ್ಟಾರೆ ಕಾರ್ಯಕ್ಷಮತೆ. ಸರ್ಕಾರದ ಹೂಡಿಕೆಗೆ ಪ್ರತಿವರ್ಷ ಸಾವಿರಾರು ಕೋಟಿ ರೂಪಾಯಿಗಳ ಡಿವಿಡೆಂಡ್ ನೀಡುತ್ತಿದೆ. ಕೇಂದ್ರ ಸರ್ಕಾರದ ಜನಕಲ್ಯಾಣ ಯೋಜನೆಗಳಿಗೆ ಲಕ್ಷಾಂತರ ಕೋಟಿ ರೂಪಾಯಿಗಳನ್ನು ನೀಡುತ್ತಿದೆ. ಕೆರೆಯ ನೀರನು ಕೆರೆಗೆ ಚೆಲ್ಲಿ ಎಂಬ ದಾಸರ ಪದದಂತೆ ಜನರ ಹಣವನ್ನು ಜನಕಲ್ಯಾಣಕ್ಕೆ ಹೂಡಲಾಗುತ್ತಿದೆ. ಇಂತಹ 'ಚಿನ್ನದ ಮೊಟ್ಟೆ ಇಡುತ್ತಿರುವ ಕೋಳಿ'ಯನ್ನು ಸಾಯಿಸುವ ನಿಲುವು ಪಾಲಿಸಿದಾರರ ಹಿತಾಸಕ್ತಿಗೆ ವಿರುದ್ಧವಾದುದು.

ಟಿ.ಸುರೇಂದ್ರ ರಾವ್, ಬೆಂಗಳೂರು

ಬೋಧಕರ ಹುದ್ದೆ: ತ್ವರಿತವಾಗಿ ಭರ್ತಿಯಾಗಲಿ

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕರ ಕೊರತೆಯ ಬಗ್ಗೆ ಬೆಳಕು ಚೆಲ್ಲುವ ಲೇಖನದಲ್ಲಿ (ಪ್ರ.ವಾ., ಅ. 24) ನಮ್ಮ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಶೇ 50ರಷ್ಟು ಬೋಧಕರ ಹುದ್ದೆಗಳು ಖಾಲಿ ಇವೆ ಎಂಬ ವಿಷಯ ತಿಳಿದು ಗಾಬರಿಯಾಯಿತು. ಪಾಠಪ್ರವಚನಗಳ ಮೂಲಕ ಮಕ್ಕಳ ಭವಿಷ್ಯವನ್ನು ರೂಪಿಸುವ ವಿಶ್ವವಿದ್ಯಾಲಯಗಳ ಆಧಾರಸ್ತಂಭವಾದ ಬೋಧಕರೇ ಇಲ್ಲದ ಮೇಲೆ ಇನ್ನು ವಿಶ್ವವಿದ್ಯಾಲಯಗಳು ಇದ್ದು ಪ್ರಯೋಜನವೇನು? ಅತಿಥಿ ಉಪನ್ಯಾಸಕರನ್ನು ನೇಮಿಸಿಕೊಂಡು ಅವರಿಗೆ ಸೂಕ್ತ ತರಬೇತಿ ನೀಡದೆ, ಗೌರವಯುತವಾದ ಸಂಭಾವನೆಯನ್ನೂ ಸಕಾಲದಲ್ಲಿ ನೀಡದೆ, ಸೇವಾ ಅಭದ್ರತೆಯಲ್ಲಿ ಕಾರ್ಯನಿರ್ವಹಿಸುವವರಿಂದ ಎಂತಹ ಸೇವೆಯನ್ನು ನಿರೀಕ್ಷಿಸಲಾದೀತು?

ಇನ್ನು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನ ಮಾಡುತ್ತಿರುವುದು ಹೆಮ್ಮೆಯ ಸಂಗತಿಯಾದರೂ, ವಾಸ್ತವವಾಗಿ ಅನುಷ್ಠಾನ ಮಾಡಬೇಕಾದ ಬೋಧಕರೇ ಅಗತ್ಯ ಸಂಖ್ಯೆಯಲ್ಲಿ ಇಲ್ಲವೆಂದರೆ ಹೇಗೆ? ಇವೆಲ್ಲದರ ಪರಿಣಾಮವನ್ನು ನಿಜಕ್ಕೂ ಎದುರಿಸುವವರು ವಿದ್ಯಾರ್ಥಿಗಳು. ಕಲಿಯಬೇಕಿರುವ ಏನನ್ನೂ ಕಲಿಯದೆ ಸೂಕ್ತ ಉದ್ಯೋಗಗಳು ದೊರಕದೆ ಅವರು ನಿರುದ್ಯೋಗಿಗಳಾಗುತ್ತಿದ್ದಾರೆ. ಸುಧಾರಣೆಗಳು ಶುರುವಾಗಬೇಕಾದದ್ದು ಮೊದಲು, ವಿಶ್ವವಿದ್ಯಾಲಯಗಳ ಬಗ್ಗೆ ಆಳುವ ವರ್ಗದವರ ಮನೋಧೋರಣೆಗಳಿಂದ. ಇದು ಆದಾಯ ತರದ ವಲಯವೆಂಬ ತಿರಸ್ಕಾರ ಬಿಟ್ಟು ದೇಶದ ಭವಿಷ್ಯ ರೂಪಿಸುವ ಆದ್ಯತಾ ವಲಯವೆಂದು ಪರಿಗಣಿಸಿ, ಬೋಧಕ ಹುದ್ದೆಗಳನ್ನು ತ್ವರಿತವಾಗಿ, ಪಾರದರ್ಶಕ ವ್ಯವಸ್ಥೆಯ ಮೂಲಕ ತುಂಬಬೇಕಾಗಿದೆ.

ಮಧುಸೂದನ್, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚೀನಾ ಗಡಿ ತಕರಾರು
ಅಕ್ರಮ ಸಕ್ರಮದ ಹುನ್ನಾರ

ಚೀನಾ ಸೇನೆಯು ತನ್ನ ಗಡಿಯಲ್ಲಿನ ಭದ್ರತೆಯನ್ನು ಹೆಚ್ಚಿಸಿಕೊಳ್ಳಲು ಹೊಸ ಭೂ ಗಡಿ ರಕ್ಷಣಾ ಕಾನೂನನ್ನು ಅಂಗೀಕರಿಸಿದೆ. ಭಾರತದ ಜತೆ ಗಡಿ ಸಂಘರ್ಷ ತೀವ್ರವಾಗಿರುವ ಸಂದರ್ಭದಲ್ಲಿಯೇ ಚೀನಾ ಈ ಹೊಸ ಕಾನೂನನ್ನು ಜಾರಿಗೆ ತಂದಿದೆ. ಭಾರತದೊಂದಿಗೆ ಗಡಿ ವಿವಾದವಿರುವ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಉದ್ದಕ್ಕೂ ಚೀನಾ ಈಗ ಕೈಗೊಳ್ಳುತ್ತಿರುವ ವಿವಿಧ ಕಾಮಗಾರಿಗಳು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಈ ಕಾನೂನಿನ ಒಳಗೆ ಸೇರಿಸಿಕೊಂಡಿದೆ. ಅಂದರೆ ವಿವಾದಿತ ಗಡಿಯಲ್ಲಿ ಚೀನಾ ನಡೆಸುತ್ತಿರುವ ಕಾಮಗಾರಿಗಳಿಗೆ ಅಧಿಕೃತತೆಯ ಮುದ್ರೆ ಒತ್ತಿದೆ. ಭೂ ಗಡಿ ರಕ್ಷಣೆಗೆ ಸಂಬಂಧಿಸಿದಂತೆ ಈ ಕಾನೂನು ಏನು ಹೇಳುತ್ತದೆ ಎಂಬುದರ ವಿವರ ಹೀಗಿದೆ.

1. ವಿವಾದಿತ ಗಡಿ ಮತ್ತು ದೀರ್ಘಾವಧಿಯಿಂದ ಇರುವ ಗಡಿ ಸಂಘರ್ಷವನ್ನು ಹೇಗೆ ಬಗೆಹರಿಸಿಕೊಳ್ಳಬೇಕು ಎಂಬುದನ್ನು ಈ ಕಾನೂನಿನಲ್ಲಿ ವಿವರಿಸಲಾಗಿದೆ. 'ಪರಸ್ಪರರ ಗೌರವಕ್ಕೆ ಚ್ಯುತಿ ಬರದೇ ಇರುವ ರೀತಿಯಲ್ಲಿ, ಪರಸ್ಪರರ ಹಿತಾಸಕ್ತಿಗೆ ಅನುಗುಣವಾಗಿ, ಸ್ನೇಹಕ್ಕೆ ಧಕ್ಕೆ ಬರದೇ ಇರುವ ರೀತಿಯಲ್ಲಿ ಮಾತುಕತೆಯ ಮೂಲಕ ಇಂತಹ ಗಡಿ ವಿವಾದಗಳನ್ನು ಬಗೆಹರಿಸಿಕೊಳ್ಳಬೇಕು. ಈ ಸಂದರ್ಭದಲ್ಲಿ ದೇಶದ ಸಾರ್ವಭೌಮತೆಗೆ ಧಕ್ಕೆ ಬರದಂತೆ ಎಚ್ಚರವಹಿಸಬೇಕು' ಎಂದು ಈ ಕಾನೂನಿನಲ್ಲಿ ವಿವರಿಸಲಾಗಿದೆ.

ಭಾರತ ಮತ್ತು ಭೂತಾನ್ ಜತೆಗೆ ಚೀನಾ ಹೊಂದಿರುವ ಗಡಿ ವಿವಾದವು ತೀವ್ರವಾಗಿದೆ. ಈ ಹಿಂದಿನ ಎರಡು ವರ್ಷಗಳಲ್ಲಿ ಎರಡೂ ದೇಶಗಳ ಜತೆಗೆ ಚೀನಾ ಗಡಿ ಸಂಘರ್ಷ ನಡೆಸುತ್ತಲೇ ಇದೆ. ಎರಡೂ ದೇಶಗಳ ಜತೆಗೆ ಮಾತುಕತೆಯ ಮೂಲಕವೇ ಸಂಘರ್ಷ ಬಗೆಹರಿಸಿಕೊಳ್ಳಲು, ಹಲವು ಸುತ್ತಿನ ಮಾತುಕತೆ ನಡೆಸಲಾಗಿದೆ. ಆದರೆ ಸಂಘರ್ಷಕ್ಕೆ ಯಾವುದೇ ತಾರ್ಕಿಕ ಅಂತ್ಯ ದೊರೆತಿಲ್ಲ.

2. 'ದೇಶದ ಗಡಿಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಬೇಕು. ಇದರಿಂದ ಗಡಿ ಪ್ರದೇಶ ಅಭಿವೃದ್ಧಿಯಾಗುವುದಲ್ಲದೆ, ತುರ್ತು ಸಂದರ್ಭದಲ್ಲಿ ಸೇನಾ ಕಾರ್ಯಚರಣೆಗೆ ನೆರವಾಗಲಿದೆ' ಎಂದು ಈ ಕಾನೂನು ವಿವರಿಸುತ್ತದೆ. ಆದರೆ ಭಾರತದ ಜತೆಗೆ ವಿವಾದವಿರುವ ಎಲ್‌ಎಸಿಯ ಉದ್ದಕ್ಕೂ ಚೀನಾ ಅಭಿವೃದ್ಧಿ ಕಾರ್ಯಗಳನ್ನು ಈಗಾಗಲೇ ನಡೆಸುತ್ತಿದೆ. ಸರ್ವಋತು ಹೆದ್ದಾರಿ, ರೈಲು ಮಾರ್ಗಗಳು ಮತ್ತು ಇಂಧನ ಕೊಳವೆ ಮಾರ್ಗಗಳನ್ನು ಅಭಿವೃದ್ಧಿಪಡಿಸಿದೆ. ಎಲ್‌ಎಸಿಯಿಂದ ಕೆಲವೇ ಕಿ.ಮೀ. ಸಮಾನಾಂತರವಾಗಿ ಈ ಮಾರ್ಗಗಳು ಹಾದು ಹೋಗುತ್ತವೆ. ಈವರೆಗೆ ಇಂತಹ ಪ್ರದೇಶದಲ್ಲಿ 600 ಗ್ರಾಮಗಳನ್ನು ಚೀನಾ ಅಭಿವೃದ್ಧಿಪಡಿಸಿದೆ. ಆದರೆ ಈಗ ಈ ಅಭಿವೃದ್ಧಿ ಕಾರ್ಯಗಳನ್ನು ಹೊಸ ಕಾನೂನಿನ ಮೂಲಕ ಸಮರ್ಥಿಸಿಕೊಂಡಂತಾಗಿದೆ. ಗಡಿಯಲ್ಲಿ ಆಗಬೇಕು ಎಂದು ಚೀನಾ ಹೇಳಿರುವ ಅಭಿವೃದ್ಧಿಯ ಯೋಜನೆಗಳು ಈ ಮುಂದಿನಂತಿವೆ.

- ಗಡಿ ಗ್ರಾಮಗಳಲ್ಲಿ ಕೇವಲ ಸೇನೆ ಇರುವಿಕೆಯನ್ನು ಹೆಚ್ಚಿಸಿದರೆ, ಹೆಚ್ಚು ಅನುಕೂಲವಿಲ್ಲ. ಬದಲಿಗೆ ಅಲ್ಲಿನ ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕು. ಅವರ ಸಂಸ್ಕೃತಿಯನ್ನು ರಕ್ಷಿಸಬೇಕು. ಆರ್ಥಿಕ ಸ್ಥಿತಿ ಸುಧಾರಿಸಿದರೆ, ಅಲ್ಲಿನ ಜೀವನಮಟ್ಟ ಸುಧಾರಿಸುತ್ತದೆ. ಅದರಿಂದ ಗಡಿ ಪ್ರದೇಶಗಳಲ್ಲಿ ಸೇನೆ ಇರುವಿಕೆಗೆ ಹೆಚ್ಚು ನೆರವು ದೊರೆಯುತ್ತದೆ
- ಗಡಿ ಗ್ರಾಮಗಳಿಗೆ ಉತ್ತಮ-ಸರ್ವಋತು ರಸ್ತೆ ಮತ್ತು ರೈಲು ಮಾರ್ಗಗಳನ್ನು ನಿರ್ಮಿಸಬೇಕು. ಈ ಮೂಲಕ ಆ ಗಡಿ ಗ್ರಾಮಗಳಿಗೆ ವಾಣಿಜ್ಯ ಮತ್ತು ಆರ್ಥಿಕ ಚಟುವಟಿಕೆಗಳನ್ನು ವಿಸ್ತರಿಸಬೇಕು. ಇದರಿಂದ ಗಡಿ ಗ್ರಾಮಗಳು ಶಕ್ತವಾಗುತ್ತವೆ. ಗಡಿ ಪ್ರದೇಶಗಳಲ್ಲಿ ಭದ್ರತಾ ಯೋಜನೆಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ
- ಗಡಿ ಗ್ರಾಮಗಳಿಗೆ ಪೆಟ್ರೋಲ್-ಡೀಸೆಲ್ ಮತ್ತು ಅಡುಗೆ ಅನಿಲವನ್ನು ವರ್ಷದ ಎಲ್ಲಾ ಋತುಗಳಲ್ಲೂ ನಿರಂತರವಾಗಿ ಪೂರೈಕೆ ಮಾಡಲು ಅನುಕೂಲವಾಗುವಂತಹ ಕೊಳವೆ ಮಾರ್ಗವನ್ನು ಅಭಿವೃದ್ಧಿಪಡಿಸಬೇಕು. ಇದರಿಂದ ಈ ಜನರಿಗೆ ಅತ್ಯಗತ್ಯದ, ಜೀವನ ನಿರ್ವಹಣೆಯ ಸರಕುಗಳು ಸುಲಭವಾಗಿ ಲಭ್ಯವಿರುವಂತೆ ಆಗುತ್ತದೆ

ಈ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದರೆ, ಅಂತಿಮವಾಗಿ ಅದು ಚೀನಾ ಸೇನೆಯ ಕಾರ್ಯಾಚರಣೆಗೆ ನೆರವಾಗುತ್ತದೆ. ರಸ್ತೆ ಮತ್ತು ರೈಲು ಮಾರ್ಗವನ್ನು ಅಭಿವೃದ್ಧಿಪಡಿಸಿದರೆ, ತುರ್ತು ಸಂದರ್ಭದಲ್ಲಿ ಸೈನಿಕರು ಮತ್ತು ಸೇನಾ ಸಾಮಗ್ರಿಗಳನ್ನು ಗಡಿಗೆ ತ್ವರಿತವಾಗಿ ಸಾಗಿಸಲು ಸಾಧ್ಯವಾಗುತ್ತದೆ. ಇಂಧನ ಕೊಳವೆ ಮಾರ್ಗ ಅಭಿವೃದ್ಧಿಯಾದರೆ, ಗಡಿ ಸಂಘರ್ಷವು ದೀರ್ಘಾವಧಿಯವರೆಗೆ ವಿಸ್ತರಿಸಿದರೆ ಅಗತ್ಯವಿರುವ ಇಂಧನವನ್ನು ನಿರಂತರವಾಗಿ ಪೂರೈಸಲು ಸಾಧ್ಯವಾಗುತ್ತದೆ.

ಎಲ್‌ಎಸಿಯಲ್ಲಿ ತವಾಂಗ್ ಸಮೀಪ ವಿಮಾನ ಹೊಡೆದುರುಳಿಸುವ ಸಾಮರ್ಥ್ಯದ ಫಿರಂಗಿ ಜತೆಗೆ ಭಾರತೀಯ ಸೈನಿಕರು

ಎಲ್‌ಎಸಿಯ ಚೀನಾ ಭಾಗದಲ್ಲಿ ಚೀನಾ ಸೇನೆಯ ಶಿಬಿರ. ಇದು 2020ರ ಮೇ 22ರಂದು ಮ್ಯಾಕ್ಸರ್ ಟೆಕ್ನಾಲಜೀಸ್ ತೆಗೆದ ಉಪಗ್ರಹ ಚಿತ್ರ —ಎಎಫ್‌ಪಿ ಚಿತ್ರ

ಅಧಿಕಾರ ಕೇಂದ್ರೀಕರಣ

ಚೀನಾ ದೇಶವು ಇತ್ತೀಚೆಗೆ ಅಳವಡಿಸಿಕೊಳ್ಳುತ್ತಿರುವ ವಿದೇಶಾಂಗ ನೀತಿ, ಗಡಿ ನೀತಿ, ಆಂತರಿಕ ನೀತಿಗಳೆಲ್ಲವೂ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಅಧಿಕಾರವನ್ನು ಇನ್ನಷ್ಟು ಗಟ್ಟಿಗೊಳಿಸುವ ಉದ್ದೇಶವನ್ನು ಹೊಂದಿವೆ. 2012ರಲ್ಲಿ ಅಧಿಕಾರಕ್ಕೆ ಬಂದ ಬಳಿಕ ಜಿನ್‌ಪಿಂಗ್ ಅವರು ದೇಶದ ಏಕೈಕ ರಾಜಕೀಯ ಪಕ್ಷ ಚೀನಾ ಕಮ್ಯುನಿಸ್ಟ್ ಪಕ್ಷದ ಮೇಲಿನ ಹಿಡಿತವನ್ನು ಗಟ್ಟಿಗೊಳಿಸುತ್ತಲೇ ಸಾಗಿದ್ದಾರೆ. ಸರ್ಕಾರದಲ್ಲಿ ಕೂಡ ಅವರು ತಮ್ಮ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದ್ದಾರೆ. ಒಬ್ಬ ವ್ಯಕ್ತಿಗೆ ಎರಡು ಅವಧಿಗೆ ಮಾತ್ರ ಅಧ್ಯಕ್ಷ ಸ್ಥಾನ ಎಂಬ ನಿಯಮನ್ನು ಜಿನ್‌ಪಿಂಗ್ ಅವರು ಸಂವಿಧಾನ ತಿದ್ದುಪಡಿ ಮೂಲಕ ಬದಲಾಯಿಸಿದ್ದಾರೆ. ಜೀವನಪರ್ಯಂತ ಅಧ್ಯಕ್ಷರಾಗಿ ಉಳಿಯಲು ಈಗ ಅವರಿಗೆ ಸಂವಿಧಾನದ ಅಡ್ಡಿ ಇಲ್ಲ. ಹಾಗೆ ಉಳಿಯುವುದಕ್ಕಾಗಿ ಪ್ರಶ್ನಾತೀತರಾಗಿ ಬೆಳೆಯಲು ಬೇಕಾದ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ.

ದೇಶದೊಳಗೆ ಪ್ರಶ್ನಾತೀತರಾಗಲು ಅವರು ವಿದೇಶ ನೀತಿ ಮತ್ತು ಗಡಿಯನ್ನು ಬಳಸಿಕೊಳ್ಳುತ್ತಿದ್ದಾರೆ ಎಂಬುದು ಇತ್ತೀಚಿನ ವರ್ಷಗಳಲ್ಲಿ ನಿಚ್ಚಳವಾಗುತ್ತಾ ಹೋಗಿದೆ. ಭಾರತ–ಚೀನಾ ನಡುವಣ ನೈಜ ನಿಯಂತ್ರಣ ರೇಖೆಯಲ್ಲಿ (ಎಲ್‌ಎಸಿ) ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿರುವ ಸಂಘರ್ಷ, ಗಾಲ್ವನ್ ಜಟಾಪಟಿ ಮತ್ತು ದೋಕಲಾ ಮುಖಾಮುಖಿ ಅವುಗಳಿಗೆ ಕೆಲವು ಉದಾಹರಣೆಗಳು.

ಗಡಿ ವ್ಯವಹಾರಗಳನ್ನು ನೋಡಿಕೊಳ್ಳುವ ಹೊಣೆಯು ಚೀನಾ ಸೇನೆಯ ಭಾಗವಾಗಿರುವ ಕೇಂದ್ರ ಸೇನಾ ಆಯೋಗದ್ದಾಗಿತ್ತು. ಆದರೆ, ಹೊಸ ನೀತಿಯು ಇದನ್ನು ಬದಲಾಯಿಸಿದೆ. ಗಡಿ ನಿರ್ವಹಣೆಯ ಹೊಣೆಯನ್ನು ಪ್ರಭಾವಿ ಸ್ಟೇಟ್ ಕೌನ್ಸಿಲ್‌ಗೆ ವಹಿಸಲಾಗಿದೆ. ಪ್ರಧಾನಿ ಲಿ ಕೆಕಿಯಾಂಗ್ ಅವರು ಸ್ಟೇಟ್ ಕೌನ್ಸಿಲ್‌ನ ಮುಖ್ಯಸ್ಥ. ಗಡಿಯನ್ನು ತಮ್ಮ ಆಳ್ವಿಕೆಯ ಕೇಂದ್ರಕ್ಕೆ ತರಲು ಜಿನ್‌ಪಿಂಗ್ ಬಯಸಿದ್ದಾರೆಯೇ ಎಂಬ ಪ್ರಶ್ನೆ ಹುಟ್ಟಲು ಇದು ಕಾರಣವಾಗಿದೆ.

ಗಡಿಯತ್ತ ಗಮನ ಕೇಂದ್ರೀಕರಿಸಲು ಇನ್ನೊಂದು ಕಾರಣವೂ ಇದೆ. ನೇರವಾಗಿ ಪರಿಣಾಮ ಉಂಟು ಮಾಡುವ ಸರ್ಕಾರದ ನೀತಿಯಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯುವ ಸಾಮಾನ್ಯ ಕಾರ್ಯತಂತ್ರ ಇದು. ದೇಶದಾದ್ಯಂತ ಆಸ್ತಿ ತೆರಿಗೆ ಹೇರಬೇಕು ಎಂಬ ಯೋಜನೆಯನ್ನು ಜಿನ್‌ಪಿಂಗ್ ಹೊಂದಿದ್ದಾರೆ.

ಅತ್ಯಂತ ಹಿರಿಯ ಉಪಪ್ರಧಾನಿ ಹಾನ್ ಝೆಂಗ್ ಅವರಿಗೆ ಆಸ್ತಿ ತೆರಿಗೆ ಜಾರಿಯ ಹೊಣೆಯನ್ನು ಜಿನ್‌ಪಿಂಗ್ ವಹಿಸಿದ್ದಾರೆ ಎನ್ನಲಾಗಿದೆ. ಝೆಂಗ್ ಅವರು ಚೀನಾ ಕಮ್ಯುನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೊ ಸದಸ್ಯರೂ ಹೌದು. ಆಯ್ದ ಪ್ರದೇಶಗಳಲ್ಲಿ ಪ್ರಾಯೋಗಿಕವಾಗಿ ಜಾರಿ ಮಾಡಿ, ನಂತರ ದೇಶದಾದ್ಯಂತ ವಿಸ್ತರಿಸುವ ಯೋಜನೆಯನ್ನು ಜಿನ್‌ಪಿಂಗ್ ಹೊಂದಿದ್ದಾರೆ. ಆದರೆ, ಆಸ್ತಿ ತೆರಿಗೆ ಹೇರಿಕೆಗೆ ದೇಶದ ಎಲ್ಲೆಡೆ ತೀವ್ರ ವಿರೋಧ ವ್ಯಕ್ತವಾಗಿದೆ ಎಂದು ವರದಿಯಾಗಿದೆ.

ಅಧಿಕಾರಕ್ಕೆ ಇಮ್ರಾನ್ ಕಸರತ್ತು?
ಪಾಕ್ ಸೇನೆ–ಸರ್ಕಾರದ ನಡುವೆ ಜಟಾಪಟಿ

ಇಮ್ರಾನ್

ಪಾಕಿಸ್ತಾನದ ಗುಪ್ತಚರ ಸಂಸ್ಥೆ ಇಂಟರ್ ಸರ್ವಿಸಸ್ ಇಂಟೆಲಿಜೆನ್ಸ್ (ಐಎಸ್‌ಐ) ಮಹಾ ನಿರ್ದೇಶಕನ ನೇಮಕ ಸಂಬಂಧ, ಪ್ರಧಾನಿ ಇಮ್ರಾನ್ ಖಾನ್ ಮತ್ತು ಸೇನಾ ಮುಖ್ಯಸ್ಥ ಜ. ಖಮರ್ ಜಾವೇದ್ ಬಾಜ್ವಾ ನಡುವೆ ತೀವ್ರ ಜಟಾಪಟಿ ನಡೆದಿದೆ ಎಂದು ವರದಿಗಳು ಹೇಳುತ್ತಿವೆ. ಪಾಕಿಸ್ತಾನದ ರಾಜಕೀಯದ ಬಗ್ಗೆ ಅರಿವಿರುವವರಿಗೆ ಇದು ನಿಜಕ್ಕೂ ಆಶ್ಚರ್ಯಕರ ಸುದ್ದಿ.



ಬಾಜ್ವಾ

ಪಾಕಿಸ್ತಾನದ ಪ್ರಧಾನಿ ಯಾರಾಗಬೇಕು ಎಂಬುದು ಸೇರಿದಂತೆ ಎಲ್ಲ ನಿರ್ಧಾರಗಳನ್ನೂ ಸೇನೆಯೇ ಕೈಗೊಳ್ಳುತ್ತದೆ ಎಂಬುದು ರಹಸ್ಯ ಏನಲ್ಲ. ಹಾಗಾಗಿ, ಸೇನಾ ಮುಖ್ಯಸ್ಥರೇ ಅಲ್ಲಿ ಪ್ರಧಾನಿಗಿಂತ ಪ್ರಭಾವಿ. ಸೇನೆಯ ಜತೆಗೆ ಮಾಡಿಕೊಂಡ ಒಪ್ಪಂದಕ್ಕೆ ಅನುಗುಣವಾಗಿಯೇ ಇಮ್ರಾನ್ ಪ್ರಧಾನಿಯಾಗಿದ್ದಾರೆ ಎಂದೂ ಹೇಳಲಾಗುತ್ತಿದೆ. ಹೀಗಿರುವಾಗ, ಸೇನಾ ಮುಖ್ಯಸ್ಥ ಮತ್ತು ಇಮ್ರಾನ್ ನಡುವಣ ಕಿತ್ತಾಟವು ಜಗತ್ತಿನ ಗಮನ ಸೆಳೆದಿದೆ.

ಐಎಸ್‌ಐನ ಮುಖ್ಯಸ್ಥರಾಗಿದ್ದ ಫೈಝ್ ಹಮೀದ್ ಅವರನ್ನು ಪೆಶಾವರ ಕೋರ್‌ನ ಕಮಾಂಡರ್ ಆಗಿ ವರ್ಗಾಯಿಸಲಾಗಿದೆ. ಐಎಸ್‌ಐ ಮುಖ್ಯಸ್ಥ ಸ್ಥಾನಕ್ಕೆ ಕರಾಚಿ ಕೋರ್‌ನ ಕಮಾಂಡರ್ ನದೀಮ್ ಅಂಜುಂ ಅವರನ್ನು ನೇಮಕ ಮಾಡಲಾಗಿದೆ. ಆದರೆ, ಈ ನೇಮಕದ ಆದೇಶಕ್ಕೆ ಇಮ್ರಾನ್ ಖಾನ್ ಸಹಿ ಮಾಡಲು ಹಿಂದೆ ಮುಂದೆ ನೋಡಿದ್ದಾರೆ.

ಜ. ಬಾಜ್ವಾ ಅವರ ಹತ್ತು ವರ್ಷದ ಯೋಜನೆಯ ಭಾಗವಾಗಿ ಇಮ್ರಾನ್ ಅವರು ಪ್ರಧಾನಿ ಹುದ್ದೆಗೆ ಏರಿದ್ದಾರೆ. ಫೈಝ್ ಹಮೀದ್ ಅವರು ಬಾಜ್ವಾ ಅವರ ಕಾರ್ಯತಂತ್ರದಲ್ಲಿ ಒಂದು ಸಣ್ಣ ಎಳೆ ಮಾತ್ರ. ಅಂತಹುದೊಂದು ಸಣ್ಣ ಎಳೆಗಾಗಿ ಪ್ರಭಾವಿ ಸೇನಾ ಮುಖ್ಯಸ್ಥರನ್ನು ಇಮ್ರಾನ್ ಎದುರು ಹಾಕಿಕೊಳ್ಳಲು ಮುಂದಾಗಿದ್ದು ಏಕೆ ಎಂಬುದು ಮಾತ್ರ ವಿಶ್ಲೇಷಕರನ್ನು ಕಾಡುತ್ತಿರುವ ಪ್ರಶ್ನೆಯಾಗಿದೆ.

ಐಎಸ್‌ಐ ನೇಮಕ ಕುರಿತ ವಿವಾದವು ಶೀಘ್ರವೇ ಬಗೆಹರಿಯಲಿದೆ ಎಂದು ಪಾಕಿಸ್ತಾನದ ಗೃಹ ಸಚಿವ ಶೇಕ್ ರಶೀದ್ ಅಹ್ಮದ್ ಹೇಳಿದ್ದಾರೆ. ನಾಗರಿಕ ಸರ್ಕಾರ ಮತ್ತು ಸೇನೆಯ ನಡುವೆ ಯಾವುದೇ ವಿವಾದ ಇಲ್ಲ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ. ಆದರೆ, ಆಡಳಿತಾರೂಢ ಪಾಕಿಸ್ತಾನ್ ತೆಹ್ರೀಕ್–ಇ–ಇನ್ಸಾಫ್ ಪಕ್ಷದ ಮುಖ್ಯ ಸಚೇತಕ ಭಿನ್ನವಾದ ಹೇಳಿಕೆ ಕೊಟ್ಟಿದ್ದಾರೆ. ಲೆ. ಜ. ಫೈಝ್ ಅವರು ಹುದ್ದೆಯಲ್ಲಿ ಮುಂದುವರಿಯಬೇಕು ಎಂಬುದು ಇಮ್ರಾನ್ ಅವರ ಇಚ್ಛೆ ಎಂದು ಅವರು ಹೇಳಿಕೆ ಕೊಟ್ಟಿದ್ದಾರೆ.

ಆಧಾರ: ಪಿಟಿಐ, ಎಎಫ್‌ಪಿ

ಅಧಿಕಾರ ಲೆಕ್ಕಾಚಾರ

ಐಎಸ್‌ಐ ಮುಖ್ಯಸ್ಥ ಸ್ಥಾನ ಎಂಬುದು ಪಾಕಿಸ್ತಾನದ ಮಟ್ಟಿಗೆ ಅತ್ಯಂತ ಆಯಕಟ್ಟಿನ ಸ್ಥಾನ. ಈ ಸ್ಥಾನದಲ್ಲಿದ್ದ ಫೈಝ್ ಅವರು ಇಮ್ರಾನ್ ಅವರು ಅಧಿಕಾರ ಗಟ್ಟಿಮಾಡಿಕೊಳ್ಳಲು ಬೇಕಿದ್ದ ಎಲ್ಲ ನೆರವು ಕೊಟ್ಟಿದ್ದಾರೆ. ಹಾಗಾಗಿಯೇ ಅವಧಿ ಮುಗಿದ ಬಳಿಕವೂ ಅವರನ್ನು ಅದೇ ಹುದ್ದೆಯಲ್ಲಿ ಉಳಿಸಿಕೊಳ್ಳಬೇಕು ಎಂಬುದು ಇಮ್ರಾನ್ ಅವರ ಬೇಡಿಕೆ.

ಫೈಝ್ ಅವರಿಗೆ ಪೆಶಾವರ ಕೋರ್‌ನ (ವಿಭಾಗ) ಕಮಾಂಡರ್ ಆಗಿ ಹೆಚ್ಚುವರಿ ಹೊಣೆ ನೀಡಬೇಕು ಅಥವಾ ಐಎಸ್‌ಐ ಮುಖ್ಯಸ್ಥ ಹುದ್ದೆಯನ್ನು ಕೋರ್ ಕಮಾಂಡರ್ ಹುದ್ದೆಗೆ ಸಮನಾಂತರವಾಗಿಸಬೇಕು ಎಂಬ ಬೇಡಿಕೆಯನ್ನೂ ಇಮ್ರಾನ್ ಅವರು ಸೇನೆಯ ಮುಂದೆ ಇರಿಸಿದ್ದಾರೆ ಎನ್ನಲಾಗಿದೆ.

ಬಾಜ್ವಾ ಅವರು ಮುಂದಿನ ನವೆಂಬರ್‌ಗೆ ನಿವೃತ್ತರಾಗಲಿದ್ದಾರೆ. ಅವರ ನಿವೃತ್ತಿಯ ಬಳಿಕ ಸೇನಾ ಮುಖ್ಯಸ್ಥ ಹುದ್ದೆಗೆ ಫೈಝ್ ಅವರನ್ನು ನೇಮಿಸಬೇಕು ಎಂಬುದು ಇಮ್ರಾನ್ ಅವರ ಯೋಜನೆ. ಹಾಗಾದರೆ, 2023ರಲ್ಲಿ ಚುನಾವಣೆ ನಡೆಯುವ ಹೊತ್ತಿಗೆ ತಮ್ಮ ನಂಬಿಕಸ್ಥ ವ್ಯಕ್ತಿಯು ಸೇನಾ ಮುಖ್ಯಸ್ಥರಾಗಿರುತ್ತಾರೆ. ಅದು ಮರಳಿ ಅಧಿಕಾರಕ್ಕೆ ಬರಲು ಸಹಕಾರಿ ಎಂಬುದು ಇಮ್ರಾನ್ ಲೆಕ್ಕಾಚಾರ.

ಆದರೆ, ಹೆಸರು ಕೆಡಿಸಿಕೊಂಡಿರುವ ಫೈಝ್ ಅವರನ್ನು ಐಎಸ್‌ಐ ಮುಖ್ಯಸ್ಥರಾಗಿ ಇನ್ನೊಂದು ಅವಧಿಗೆ ಮುಂದುವರಿಸುವುದು ಸೇನೆಗೆ ಇಷ್ಟವಿಲ್ಲ. ಪೆಶಾವರ ಕೋರ್‌ನ ಮುಖ್ಯಸ್ಥರನ್ನಾಗಿ ಮಾಡುವುದು ಕೂಡ ಸೇನೆಗೆ ಬೇಕಿಲ್ಲ. ಹಾಗಾಗಿಯೇ ಸರ್ಕಾರ ಮತ್ತು ಸೇನೆಯ ನಡುವೆ ಜಟಾಪಟಿ ಆಗಿದೆ ಎನ್ನಲಾಗುತ್ತಿದೆ.

ನೆರೆಯೊಂದಿಗಿನ ಚೀನಾ ಗಡಿ ತಕರಾರು

ಭಾರತ, ಭೂತಾನ್, ಪಾಕಿಸ್ತಾನ, ಅಫ್ಘಾನಿಸ್ತಾನ, ಕಜಕಿಸ್ತಾನ, ಕಿರ್ಗಿಸ್ತಾನ, ಲಾವೋಸ್, ಮಂಗೋಲಿಯಾ, ಮ್ಯಾನ್ಮಾರ್, ನೇಪಾಳ, ಉತ್ತರ ಕೊರಿಯಾ, ರಷ್ಯಾ, ತಜಕಿಸ್ತಾನ, ವಿಯೆಟ್ನಾಂ ದೇಶಗಳು ಚೀನಾದ ನೆರೆಯ ರಾಷ್ಟ್ರಗಳಾಗಿವೆ.

ಚೀನಾವು ತನ್ನ ನೆರೆಯಲ್ಲಿರುವ ಹಲವು ದೇಶಗಳೊಂದಿಗೆ ಭೂ ಗಡಿ ಹಾಗೂ ಕಡಲ ಗಡಿ ವಿವಾದವನ್ನೂ ಹೊಂದಿದೆ.

ಗಡಿ ವಿವಾದ

ಭಾರತ: ಭಾರತದೊಂದಿಗೆ ಪೂರ್ವ ಲಡಾಖ್‌ನಲ್ಲಿ ಗಡಿ ವಿವಾದವಿದೆ. ಅರುಣಾಚಲ ಪ್ರದೇಶದ ಕೆಲವು ಭಾಗಗಳ ಮೇಲೆಯೂ ಹಕ್ಕು ಸಾಧಿಸಲು ಪ್ರಯತ್ನಿಸುತ್ತಿದೆ. ಗಡಿ ವಿವಾದ ಬಗೆಹರಿಸಿಕೊಳ್ಳುವ ದಿಸೆಯಲ್ಲಿ ಎರಡೂ ದೇಶಗಳ ನಡುವೆ ಮಾತುಕತೆ ನಡೆಯುತ್ತಿದೆ. ಎರಡೂ ದೇಶಗಳ ಸೇನೆಗಳು ಮುಖಾಮುಖಿಯಾಗಿದ್ದ ದೋಕಲಾ ಬಿಕ್ಕಟ್ಟನ್ನು, 2017ರಲ್ಲಿ ಮಾತುಕತೆ ಮೂಲಕ ಬಗೆಹರಿಸಿಕೊಳ್ಳಲಾಗಿದೆ.

ನೇಪಾಳ: ಟಿಬೆಟ್ ವಿಷಯವಾಗಿ ನೇಪಾಳದೊಂದಿಗಿನ ಗಡಿ ವಿವಾದ ಮುಂದುವರಿದಿದೆ.

ಭೂತಾನ್: ಭೂತಾನ್‌ನ ಪೂರ್ವ ವಲಯದ ಕೆಲವು ಪ್ರದೇಶಗಳನ್ನು ಒಳಗೊಂಡ ಭೂಭಾಗ ತನ್ನದು ಎಂದು ಚೀನಾ ವಾದಿಸುತ್ತಿದೆ.

ಲಾವೋಸ್: ಚೀನಾದ ಯುವಾನ್ ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟಿದ್ದ ಲಾವೋಸ್‌ನ ಕೆಲ ಪ್ರದೇಶಗಳೂ ಈಗಲೂ ತನ್ನವೇ ಎಂದು ಚೀನಾ ಹೇಳುತ್ತಿದೆ.

ಮಂಗೋಲಿಯಾ: ಮಂಗೋಲಿಯಾದ ಸ್ವಾಯತ್ತ ಪ್ರದೇಶವಾದ, 'ಇನ್ನರ್ ಮಂಗೋಲಿಯಾ'ದೊಂದಿಗೆ ಚೀನಾದ ಗಡಿ ವಿವಾದವಿದೆ.

ಮ್ಯಾನ್ಮಾರ್: ಚೀನಾದೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದ ಮ್ಯಾನ್ಮಾರ್, ಇತ್ತೀಚೆಗಷ್ಟೇ ಗಡಿಯಲ್ಲಿ ಚೀನಾ ತೊಂದರೆ ಮಾಡುತ್ತಿರುವುದಾಗಿ ಆರೋಪಿಸಿದೆ.

ಟಿಬೆಟ್: ಇತರ ಎಲ್ಲ ದೇಶಗಳಿಗಿಂತ ಚೀನಾ–ಟಿಬೆಟ್ ಗಡಿ ವಿವಾದವೇ ಚೀನಾದ ಬಹು ಪ್ರಮುಖ ವಿವಾದವಾಗಿದೆ. 1950ರಲ್ಲಿ ಟಿಬೆಟ್ ಮೇಲೆ ಚೀನಾ ಹಕ್ಕು ಸಾಧಿಸಿದೆ. ಬಳಿಕ ಟಿಬೆಟ್ ಧರ್ಮಗುರು ದಲೈಲಾಮಾ ಹಾಗೂ ಅವರ ಅನುಯಾಯಿಗಳು ದೇಶದಿಂದ ಪಲಾಯನಗೈದು ಭಾರತದಲ್ಲಿ ಆಶ್ರಯ ಪಡೆದಿದ್ದಾರೆ. ಇಲ್ಲಿ, ಗಡಿಪಾರಾದ ಸರ್ಕಾರ ಅಸ್ತಿತ್ವದಲ್ಲಿದೆ.

ಕಡಲ ಗಡಿ ವಿವಾದ

ತೈವಾನ್, ಫಿಲಿಪ್ಪೀನ್ಸ್, ಇಂಡೊನೇಷ್ಯಾ, ವಿಯೆಟ್ನಾಂ, ಮಲೇಷ್ಯಾ, ಜಪಾನ್, ಉತ್ತರ ಕೊರಿಯಾ, ದಕ್ಷಿಣ ಕೊರಿಯಾ, ಸಿಂಗಪುರ ಹಾಗೂ ಬ್ರೂನೈ ದೇಶಗಳೊಂದಿಗೆ ಚೀನಾ ಕಡಲ ಗಡಿ ವಿವಾದ ಹೊಂದಿದೆ.

ಅವುಗಳಲ್ಲಿ ದಕ್ಷಿಣ ಚೀನಾದ ಸಮುದ್ರ ಭಾಗದ ಕೆಲವು ಪ್ರದೇಶಗಳು ಹಾಗೂ ದ್ವೀಪಗಳ ವಿಚಾರವಾಗಿ ಬ್ರೂನೈ ದೇಶದೊಂದಿಗೆ ಇದ್ದ ವಿವಾದವು ಬಗೆಹರಿದಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಒಂದು ಗುಂಪಿನ ಜೊತೆ ನೆಲದ ಮೇಲೆ ಕುಳಿತು ಜನಪ್ರಿಯ 'ಮೆಹಂಗಾಯಿ ದಯಾ ಖಯಾತ್ ಜಾತ್ ಹೈ' ಹಾಡು ಹಾಡುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ವೈರಲ್ ಆಗಿದೆ. ಶಿವರಾಜ್ ಸಿಂಗ್ ತಮ್ಮ ಬೆಂಬಲಿಗರ ಜೊತೆ ಸೇರಿ ಹಣದುಬ್ಬರದ ವಿರುದ್ಧ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಈ ವಿಡಿಯೊವನ್ನು ಬಿಂಬಿಸಲಾಗುತ್ತಿದೆ.

ಈ ವಿಡಿಯೊವನ್ನು ತಿರುಚಲಾಗಿದೆ ಎಂದು ಲಾಜಿಕಲ್ ಇಂಡಿಯನ್ ವರದಿ ಮಾಡಿದೆ. ಅ.20 ಈ ವಿಡಿಯೊ ಚಿತ್ರೀಕರಿಸಲಾಗಿದೆ. ಮಧ್ಯಪ್ರದೇಶದ ಪನ್ನಾದ ಶ್ರೀ ಜಗದೀಶ್ ಸ್ವಾಮಿ ಮಂದಿರಕ್ಕೆ ಅವರು ಕುಟುಂಬದ ಜೊತೆ ಭೇಟಿ ನೀಡಿದ್ದರು. ಆಗ ಸಾಮಾನ್ಯ ಜನರ ಜೊತೆ ಕುಳಿತು ಕೀರ್ತನೆ ಮತ್ತು ಭಜನೆಗಳನ್ನು ಹಾಡಿದ್ದರು. ಈ ಕುರಿತು ಸ್ವತಃ ಅವರೇ ಟ್ವೀಟ್ ಕೂಡಾ ಮಾಡಿದ್ದರು. ಭಜನೆಗಳ ಜಾಗದಲ್ಲಿ 'ಮೆಹಂಗಾಯಿ' ಹಾಡನ್ನು ಸಾಫ್ಟ್‌ವೇರ್ ಬಳಸಿ ಸೇರಿಸಲಾಗಿದೆ ಎಂದು ಲಾಜಿಕಲ್ ಇಂಡಿಯನ್ ವರದಿ ಹೇಳಿದೆ.

ಗುಂಡಣ್ಣ

ಬೆರಗಿನ ಬೆಳಕು
ಗುರುರಾಜ ಕರಜಗಿ

ಪ್ರಯತ್ನದೊಂದಿಗೆ ದೈವಕೃಪೆ

ಗಾಳಿಯನು ಗುದ್ದಿದರೆ ಮೈ ನೋಯ್ವುದೊಂದೆ ಫಲ|
ಮೂಲಸತ್ತ್ವವ ಮರೆತ ಸಾಹಸಗಳಂತು||
ಮೇಳವಿಸೆ ಪೌರುಷಕೆ ದೈವಕೃಪೆಯಂದು ಫಲ|
ತಾಳಿ ಬಾಳಾವರೆಗೆ – ಮಂಕುತಿಮ್ಮ ||483||

ಪದ-ಅರ್ಥ: ನೋಯ್ವುದೊಂದೆ = ನೋಯ್ವುದು (ನೋಯುವುದು) + ಒಂದೆ, ಮೇಳವಿಸೆ = ಸೇರಿದಾಗ, ಬಾಳಾವರೆಗೆ = ಬಾಳು ಆ ವರೆಗೆ

ವಾಚ್ಯಾರ್ಥ: ಗಾಳಿಯನ್ನು ಗುದ್ದಿದರೆ ಮೈ ನೋಯುವುದೊಂದೆ ಫಲ. ತಮ್ಮ ಮೂಲಸತ್ವವನ್ನು ಮರೆತವರ ಸಾಹಸಗಳ ಫಲ ಇದೇ. ಪೌರುಷಕ್ಕೆ ದೈವಕೃಪೆ ಸೇರಿದಾಗ ಫಲ ದೊರೆಯುತ್ತದೆ. ಅಲ್ಲಿಯವರೆಗೆ ತಾಳಿಕೊಂಡು ಬಾಳು.

ವಿವರಣೆ: ಗಾಳಿಯನ್ನು ಗುದ್ದುವುದು ಎಂಬುದೊಂದು ವ್ಯರ್ಥಪ್ರಯತ್ನವನ್ನು ವರ್ಣಿಸುವ ರೀತಿ. ಗಾಳಿಯನ್ನು ಗುದ್ದಿದರೆ ಏನಾಗುತ್ತದೆ? ಕೇವಲ ಮೈ ಕೈ ನೋವು ಉಂಟಾಗುತ್ತದೆ. ಅದರ ಫಲವೇನೂ ಇಲ್ಲ. ಬದುಕಿನಲ್ಲಿ ಸಾರ್ಥಕತೆಗೆಂದು ಅನೇಕ ಸಾಹಸಗಳನ್ನು ಮಾಡುತ್ತೇವೆ. ಆದರೆ ಕೆಲವು ಮಾತ್ರ ಸಫಲವಾಗುತ್ತವೆ. ನಮ್ಮ ಮೂಲಸತ್ವವನ್ನು ಮರೆತು ಮಾಡಿದ ಪ್ರಯತ್ನಗಳು ಸಾಮಾನ್ಯವಾಗಿ ವಿಫಲವಾಗುತ್ತವೆ. ಯಾವುದು ನಮಗೆ ಜೈವಿಕವಾಗಿಯೋ, ಶಿಕ್ಷಣದ ಮೂಲಕವೋ, ಪರಿಸರದಿಂದಲೋ ದೊರಕಿ ನಮ್ಮನ್ನು ದಕ್ಷರನ್ನಾಗಿ, ಸಮರ್ಥರನ್ನಾಗಿ ಮಾಡಿದೆಯೋ, ಯಾವುದನ್ನು ಮಾಡುವುದರಲ್ಲಿ ಪರಿಣಿತಿ ಇದೆಯೋ ಅದು ಮೂಲಸತ್ವ. ಅದರಲ್ಲಿ ಮಾಡಿದ ಕೆಲಸ ಸಾಮಾನ್ಯವಾಗಿ ಯಶಸ್ಸು ನೀಡುತ್ತದೆ. ನನಗೆ ಪರಿಚಯದ ಶಿಕ್ಷಕರೊಬ್ಬರಿಗೆ ಯಾರೋ, ಒಂದು ಕಾರು ಕೊಂಡು ಟ್ಯಾಕ್ಸಿಯನ್ನಾಗಿ ಮಾಡಿ ಬಾಡಿಗೆ ಕೊಟ್ಟರೆ ತುಂಬ ಹಣ ಬರುತ್ತದೆ, ಎಂದು ತಲೆ ತುಂಬಿದರು. ಪಾಪ! ಮೇಷ್ಟ್ರಿಗೆ ಕಾರಿನ ವ್ಯವಹಾರ ಗೊತ್ತಿಲ್ಲ, ಕಾರು ಓಡಿಸಲೂ ಬರುವುದಿಲ್ಲ. ಹೇಳಿದವರ ಮಾತು ನಂಬಿ ಬಾಡಿಗೆಗೆ ಕೊಟ್ಟು ಹಣ, ಮನಃಶಾಂತಿ ಎರಡನ್ನೂ ಕಳೆದುಕೊಂಡರು. ಯಾಕೆಂದರೆ ಆ ವ್ಯವಹಾರ ಅವರ ಮೂಲಸತ್ವಕ್ಕೆ ಹೊಂದಿದ್ದಲ್ಲ. ಕಾರಿನ ವ್ಯವಹಾರದ ಒಳಹೊರಗನ್ನು ಚೆನ್ನಾಗಿ ತಿಳಿದುಕೊಂಡು ಮಾಡಿದ್ದರೆ ತೊಂದರೆಯಾಗುತ್ತಿರಲಿಲ್ಲವೇನೋ.

ಇನ್ನೊಂದು ಮುಖ್ಯ ವಿಷಯವೆಂದರೆ, ನಮ್ಮ ಪೌರುಷದ ಪ್ರಯತ್ನಕ್ಕೆ ದೈವಬಲವಿದ್ದರೆ ಮಾತ್ರ ಯಶಸ್ಸು ದೊರಕುವುದು. ಸಾಹಿತ್ಯದಲ್ಲಿ, ವಿಜ್ಞಾನದಲ್ಲಿ, ಆಟದಲ್ಲಿ, ಸಮಾಜಸೇವೆಯಲ್ಲಿ ದೊಡ್ಡ ಪ್ರಯತ್ನ ಮಾಡಿದವರು ಅನೇಕರಿದ್ದಾರೆ. ಆದರೆ ಯಶಸ್ಸು, ಖ್ಯಾತಿ ದೊರಕಿದ್ದು ಕೆಲವರಿಗೆ ಮಾತ್ರ. ಸುನೀಲ್ ಗಾವಸ್ಕರ್ ಭಾರತದ ಶ್ರೇಷ್ಠ ಕ್ರಿಕೆಟ್ ಆಟಗಾರ. ಅವರು ನನಗೆ ಆತ್ಮೀಯರೂ ಹೌದು. ಒಂದು ಬಾರಿ ನಾವು ಮಾತನಾಡುತ್ತ ಕುಳಿತಾಗ ಹಿರಿಯರೊಬ್ಬರು ಬಂದು, 'ಗಾವಸ್ಕರ್, ನಿಮ್ಮ ಸಾಧನೆ ಅದ್ಭುತವಾದದ್ದು. ನೀವು ಅತ್ಯಂತ ಶ್ರೇಷ್ಠ ಆಟಗಾರ' ಎಂದರು. ಆಗ ಗಾವಸ್ಕರ್, 'ಹಾಗೆ ಹೇಳಬೇಡಿ. ನನಗಿಂತ ದೊಡ್ಡ ಆಟಗಾರರಿದ್ದರು. ಆದರೆ ದೈವಕೃಪೆ ನನಗಿತ್ತು. ಆದ್ದರಿಂದ ಈ ಮರ್ಯಾದೆ ಬಂದಿತು' ಎಂದು ಹೇಳಿ ಒಂದು ಘಟನೆಯನ್ನು ವಿವರಿಸಿದರು. ಅವರು ಮೊದಲ ಬಾರಿಗೆ ವೆಸ್ಟ್ ಇಂಡೀಸ್‌ಗೆ ಹೋದಾಗ ಮೊದಲ ಟೆಸ್ಟ್‌ನಲ್ಲಿ ಬೇರೊಬ್ಬರನ್ನು ಆರಂಭಿಕ ಆಟಗಾರರನ್ನಾಗಿ ಆಡಿಸಿದರು. ಆತ ಪ್ರತಿಭಾಶಾಲಿ. ಆದರೆ ಏಳೆಂಟು ರನ್ ಮಾಡಿದಾಗ ಚೆಂಡು ಬ್ಯಾಟಿಗೆ ಸವರಿ ಸ್ಲಿಪ್ ಕಡೆಗೆ ಹೋದಾಗ ಗ್ಯಾರಿ ಸೋಬರ್ಸ ತಮಗೆ ಸುಲಭವಲ್ಲದ ಬಲಗಡೆಗೆ ಹಾರಿ, ನೆಲದಿಂದ ಒಂದೇ ಇಂಚು ಅಂತರದಲ್ಲಿ ಕ್ಯಾಚ್ ಹಿಡಿದರು. ಮರುಟೆಸ್ಟ್‌ನಲ್ಲಿ ಗಾವಸ್ಕರ್‌ರಿಗೆ ಸ್ಥಾನ ದಕ್ಕಿತು. ಅವರೂ ಆರು ರನ್ ಮಾಡಿದಾಗ ಚೆಂಡು ಇವರ ಬ್ಯಾಟಿನಿಂದ ಎಗರಿ ನೇರವಾಗಿ ಗ್ಯಾರಿ ಸೋಬರ್ಸರಿಗೆ ಅತ್ಯಂತ ಅನುಕೂಲವಾದ ಎದೆ ಎತ್ತರಕ್ಕೆ ಹೋಯಿತು. ಆದರೆ ಕೈಯಿಂದ ಚೆಂಡು ಹಾರಿ ಕೆಳಗೆ ಬಿತ್ತು. ಮರುಟೆಸ್ಟಿನಲ್ಲೂ ಒಂದು ಸುಲಭದ ಕ್ಯಾಚ್ ತಪ್ಪಿತು. 'ಹಾಗಾಗದಿದ್ದರೆ ನಾನು ಯಶಸ್ಸು ಪಡೆಯುತ್ತಿರಲಿಲ್ಲ. ಆ ಅವಕಾಶ ಭಗವಂತನ ಕೃಪೆ' ಎಂದರು. ಆ ಕೃಪೆಗೆ ಕಾಯ್ದು, ಬರುವವರೆಗೆ ತಾಳ್ಮೆಯಿಂದ ಕೆಲಸ ಮಾಡಬೇಕು.

ದಿನ ಭವಿಷ್ಯ
ಮಂಗಳವಾರ ಅಕ್ಟೋಬರ್ 26, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಸ್ವಾತಿ ಷಷ್ಠೀ ಗಂ. 59-11 (ಬೆ.ಘ್ರಾ. 5-58) ಮಂಗಳವಾರ ನಿತ್ಯ ನಕ್ಷತ್ರ ಆರ್ದ್ರೆ ಗಂ. 53-44 (ರಾ. 3-47) ಶಿವ ನಾಮ ಯೋಗ ಗಂ. 43-2 ಗರಜ ಕರಣ ಗಂ. 26-50 ವಿಷ ಗಂ. 10-45 ಅಮೃತ ಗಂ. 37-4 : ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 : ಸೂರ್ಯೋದಯ: 6-14 ಸೂರ್ಯಾಸ್ತ: 5-53 ಅದೃಷ್ಟ ಸಂಖ್ಯೆ 18

ಮೇಷ: ಆದಾಯ ಮೀರಿದ ಖರ್ಚಿನ ಸಾಧ್ಯತೆ ಇರುವುದರಿಂದ ಹಿಡಿತ ಸಾಧಿಸಲು ಯತ್ನಿಸುವಿರಿ. ಇತರರ ಕಷ್ಟ ಸುಖಗಳಿಗೆ ನೆರವಾಗಬೇಕಾದ ಅನಿವಾರ್ಯತೆ ಎದುರಾದೀತು.

ವೃಷಭ: ಏಕಾಗ್ರತೆಯಿಂದ, ಛಲಬಿಡದೆ ಯತ್ನದಲ್ಲಿ ಯಶಸ್ಸನ್ನು ಸಾಧಿಸಲಿದ್ದೀರಿ. ಸ್ನೇಹಿತರ ನೆರವಿನಿಂದಾಗಿ ಯತ್ನಕಾರ್ಯದಲ್ಲಿ ಸಿದ್ಧಿಯನ್ನು ಕಾಣುವಿರಿ. ಆತುರಕ್ಕೆ ಕಾರಣವಿಲ್ಲ.

ಮಿಥುನ: ಅನೇಕ ದಿನಗಳಿಂದ ಕಾಡುತ್ತಿರುವ ಸಮಸ್ಯೆಯನ್ನು ಅನ್ಯರೊಡನೆ ದೀರ್ಘವಾಗಿ ಚರ್ಚಿಸಿ, ಸಮಸ್ಯೆಯನ್ನು ಬಗೆಹರಿಸಿಕೊಳ್ಳುವಿರಿ. ಆದಾಯದಲ್ಲಿ ಚೇತರಿಕೆ.

ಕರ್ಕಾಟಕ: ಪರೋಪಕಾರ ಗುಣದಿಂದಾಗಿ ಅಕ್ಕಪಕ್ಕದವರ ನೆರವಿಗೆ ಧಾವಿಸಿ ಬರುವ ಸಾಧ್ಯತೆ. ನಿಮ್ಮ ಶಿಸ್ತು, ದೃಢ ನಿರ್ಧಾರದಿಂದಾಗಿ ಉತ್ತಮ ಪ್ರತಿಫಲವನ್ನು ಪಡೆದುಕೊಳ್ಳುವಿರಿ.

ಸಿಂಹ: ವೃತ್ತಿಯಲ್ಲಿ ಭರವಸೆ ಮೂಡುವ ಸಂತಸದ ಸಮಾಚಾರ ಕೇಳಿಬರಲಿದೆ. ಮನಸ್ಸಿನಲ್ಲಿನ ದುಗುಡ ದುಮ್ಮಾನಗಳು ದೂರವಾಗಿ ನೆಮ್ಮದಿ ಮೂಡುವುದು.

ಕನ್ಯಾ: ಅನ್ಯರೊಡನೆ ಮಾತನಾಡುವಾಗ ಎಚ್ಚರ ವಹಿಸುವುದು ಉತ್ತಮ. ವಿನಾ ಕಾರಣ ಟೀಕೆ ಟಿಪ್ಪಣಿಗಳಿಗೆ ತುತ್ತಾಗುವ ಸಾಧ್ಯತೆ ಕಂಡುಬರುತ್ತಿದೆ.

ತುಲಾ: ನಿಮ್ಮ ಚಾತುರ್ಯದಿಂದಾಗಿ ನಡೆಸಿದ ಪರಿಶೀಲನೆಯಿಂದಾಗಿ ಎದುರಾದ ಅಡಚಣೆಗಳು ದೂರ. ಪರಿಸರದ ಬಗ್ಗೆ ಚಿಂತನೆ ನಡೆಸಲಿದ್ದೀರಿ.

ವೃಶ್ಚಿಕ: ಯೋಗ್ಯ ನಿರ್ಣಯ ತೆಗೆದುಕೊಳ್ಳುವ ಸಲುವಾಗಿ ಹಿತೈಷಿಗಳೊಂದಿಗೆ ಚರ್ಚೆ ನಡೆಸಲಿದ್ದೀರಿ. ನಿಮ್ಮ ನಡೆ ನುಡಿಗಳು ಉತ್ತಮ ಪ್ರಶಂಸೆಗೆ ಪಾತ್ರವಾಗಲಿದೆ.

ಧನು: ಸ್ವಂತ ಉದ್ಯೋಗಿಗಳಿಗೆ ವ್ಯವಹಾರಸ್ಥರಿಗೆ ಉತ್ತಮ ಆದಾಯದ ನಿರೀಕ್ಷೆ. ಎಲ್ಲ ಅಡೆತಡೆಗಳನ್ನು ಮೀರಿ ನಿಮ್ಮ ಸ್ವಂತ ಕೆಲಸವನ್ನು ಈಡೇರಿಸಿಕೊಳ್ಳುವಿರಿ.

ಮಕರ: ಪ್ರತಿಭೆಗೆ ತಕ್ಕಂತೆ ಪ್ರಬುದ್ಧ ವಿಚಾರಗಳತ್ತ ಗಮನ ಹರಿಸಿ ಉತ್ತಮ ನಡೆಯನ್ನು ಪ್ರದರ್ಶಿಸುವಿರಿ. ಸಮಾಜದಲ್ಲಿ ಗೌರವಾದರಗಳು ನಿಮ್ಮನ್ನರಸಿ ಬರುವ ಸಾಧ್ಯತೆ. ಸಂಗಾತಿಯ ಆರೋಗ್ಯದ ಬಗ್ಗೆ ಆಲಸ್ಯ ಸಲ್ಲ.

ಕುಂಭ: ಮನಸ್ಸಿಗೆ ಚಿಂತೆಯೊಂದು ಕಾಡುವ ಸಾಧ್ಯತೆ ಇದ್ದರೂ ಪ್ರಾಜ್ಞರ ಸಲಹೆಯನ್ನು ಪಡೆಯುವುದರಿಂದ ಚಿಂತೆಗಳು ದೂರವಾಗುವವು. ಉತ್ತಮ ಕಾರ್ಯಗಳಿಗಾಗಿ ಧನ ವಿನಿಯೋಗ.

ಮೀನ: ಉದ್ವೇಗಕ್ಕೆ ಒಳಗಾಗುವ ಸಾಧ್ಯತೆಗಳಿದ್ದು ನಿಮ್ಮ ಅಂತರಂಗವನ್ನು ಆತ್ಮೀಯರಲ್ಲಿ ತೆರೆದುಕೊಳ್ಳಿ. ಸಾಂತ್ವಾನದ ಮಾತುಗಳಿಂದ ನೆಮ್ಮದಿ ದೊರಕುವುದು.

ನಿಮ್ಮ ಜನ್ಮದಿನ 26-ಅಕ್ಟೋಬರ್: ಇಂದು ಅತ್ಯಂತ ಶುಭದಾಯಕವಾಗಿದ್ದು, ಸಾಮಾಜಿಕ ಮತ್ತು ಆರ್ಥಿಕವಾಗಿ ಉನ್ನತ ಸ್ಥಾನವನ್ನು ಅಲಂಕರಿಸಲಿದ್ದೀರಿ. ಹೊಸ ಹೊಸ ಯೋಜನೆಗಳನ್ನು ರೂಢಿಸಿಕೊಳ್ಳುವ ಮೂಲಕ ಆರ್ಥಿಕ ಉನ್ನತಿಯ ಕನಸನ್ನು ಕಾಣುವಿರಿ. ಸಮಾಜದ ಅನೇಕರಿಗೆ ಅನ್ನದಾತರಾಗಿ, ಆಪದ್ಬಾಂಧವರಾಗಿ ಕಾಣುವಿರಿ.

ಪದಬಂಧ 4759
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆನೆಗೂ ಆಡಿಗೂ ಇರುವ ವ್ಯತ್ಯಾಸ (6)
4.ಮುಷ್ಕರ ಹೂಡುವವನು (4)
5.ಗಮನಕೊಟ್ಟು ವೀಕ್ಷಿಸಿದ ಆಕಾಶ (3)
7. ನವೆ ಹೀಗೆ ಉಂಟಾಗಿದೆ (3)
10.ಪುನಃ ಬರುವ ಸ್ಮರಣೆ (3)
12.ದುರಸ್ತಿಯನ್ನು ಹೀಗೆನ್ನಿ (3)
13.ಅದೇತಾನೆ ಮೂಡುತ್ತಿರುವ ಸೂರ್ಯ (4)
15.ಯಾತ್ರಿಕರು ಇಳಿದುಕೊಳ್ಳಲು ಮಾಡಿರುವ ವಸತಿ (6)

ಮೇಲಿಂದ ಕೆಳಕ್ಕೆ
1.ಆ ಜಾಗದಲ್ಲಿರುವ ಹೆಬ್ಬಾವು ಕಾಣುತ್ತಿದೆಯೇ? (4)
2.ರಭಸವಾಗಿ ಹರಿಯುತ್ತಿರುವ ದ್ರವ (2)
3.ಬರದಲ್ಲಿ ಹೊರಹಾಕುವಿಕೆ! (4)
6.ಹಜಾರವನ್ನು ಹೀಗೂ ಹೇಳುವರು (4)
7.ಕದಕ್ಕೆ ತಾಕಿಸಿರುವ ಕೆನ್ನೆ (3)
8.ಕಾರಿನಲ್ಲಿರುವ ಕಾಯಿಪಲ್ಲೆ (4)
9. ಅಕ್ಕಪಕ್ಕ ಎಂದು ಈ ರೀತಿ ಹೇಳಿ (4)
11.ಓಡುತ್ತಾ ಹೋಗಿ ಸುದ್ದಿ ಮುಟ್ಟಿಸುವವನು (4)
14.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ! (2)



4758ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪ್ರಸೂತಿಗೃಹ 4.ಸಮಸ್ಯೆ 5.ವರಾತ 6.ವದನ 7.ತಕಲಿ 9.ಅಂಕೆ 10.ಹರಿ 12.ಪರಮ 14.ಪ್ರಭಾವ 15.ಸುಲಭ 16.ಪರಾಕು 17.ವಚನಭ್ರಷ್ಟ

ಮೇಲಿಂದ ಕೆಳಕ್ಕೆ: 1.ಪ್ರಸಾಧನ 2.ತಿಳಿವಳಿಕೆ 3.ಹವನ 4.ಸತತ 8.ಕಚೇರಿ 9.ಅಂಬರ 10.ಹಯವದನ 11.ದಷ್ಟಪುಷ್ಟ 13.ಮಸುಕು 14.ಪ್ರಭವ

ಸುಡೊಕು 5145

9		7						
	6		4		9	8		7
5		8					6	
		6	5			7		9
7				6	1			
	5		8			3		6
8			3			4		2
	9			8			7	
6		4		9		1		3

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5144 ಸುಡೊಕು

7	1	5	9	4	6	3	2	8
3	4	6	5	8	2	7	9	1
2	8	9	3	7	1	5	6	4
9	6	4	1	3	7	8	5	2
5	2	8	4	6	9	1	3	7
1	3	7	8	2	5	9	4	6
4	9	3	2	1	8	6	7	5
6	5	1	7	9	4	2	8	3
8	7	2	6	5	3	4	1	9

ಡ್ರಗ್ಸ್ ಪ್ರಕರಣ: ದಿನವೂ ತಿರುವು

ಒಂದನೇ ಪುಟದಿಂದ

ಸಮೀರ್ ಅರ್ಜಿ ವಜಾ: 'ನನಗೆ ಬೆದರಿಕೆ ಇದೆ. ರಕ್ಷಣೆ ನೀಡಿ' ಎಂದು ಸಮೀರ್ ವಾಂಖೆಡೆ ಅವರು ಮುಂಬೈ ಪೊಲೀಸ್ ಆಯುಕ್ತರಿಗೆ ಪತ್ರ ಬರೆದಿದ್ದಾರೆ. ಅದರ ಬೆನ್ನಲ್ಲೇ ಎನ್‌ಡಿಪಿಎಸ್ ವಿಶೇಷ ನ್ಯಾಯಾಲಯಕ್ಕೂ ಅರ್ಜಿ ಸಲ್ಲಿಸಿದ್ದಾರೆ. 'ತನಿಖೆಯ ಹಾದಿ ತಪ್ಪಿಸುವುದಕ್ಕಾಗಿ ನನ್ನ ಮೇಲೆ ಲಂಚ ಪಡೆದ ಆರೋಪ ಮಾಡಲಾಗುತ್ತಿದೆ. ಆರೋಪ ಮಾಡಿರುವ, ಪ್ರಕರಣದ ಸಾಕ್ಷಿ ಪ್ರಭಾಕರ್ ಸೈಲ್ ಸಲ್ಲಿಸಿರುವ ಪ್ರಮಾಣಪತ್ರವನ್ನು ವಜಾ ಮಾಡಬೇಕು ಮತ್ತು ಆತ ಸಾಕ್ಷ್ಯ ಬಿಡುಗಡೆ ಮಾಡುವುದಕ್ಕೆ ನಿಷೇಧ ಹೇರಬೇಕು, ತಮ್ಮ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುವುದಕ್ಕೆ ತಡೆ ನೀಡಿ' ಎಂದು ಅವರು ಕೋರಿದ್ದರು. ಸಮೀರ್ ಅವರ ಮನವಿಯನ್ನು ಬೆಂಬಲಿಸಿ ಎನ್‌ಸಿಬಿ ಸಹ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿತ್ತು. ಆದರೆ ಎರಡೂ ಅರ್ಜಿಗಳನ್ನು ವಿಶೇಷ ನ್ಯಾಯಾಲಯವು ವಜಾ ಮಾಡಿದೆ. 'ಅರ್ಜಿದಾರರು ಕೋರುತ್ತಿರುವಂತೆ, ಆರೋಪಕ್ಕೆ ಸಂಬಂಧಿಸಿದ ಪ್ರಮಾಣಪತ್ರ ಮತ್ತು ಸಾಕ್ಷ್ಯ ಬಿಡುಗಡೆಗೆ ಸಾರಾಸಗಟಾಗಿ ತಡೆ ನೀಡಲು ಸಾಧ್ಯವಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದ ಮತ್ತೊಂದು ಅರ್ಜಿ ಬಾಂಬೆ ಹೈಕೋರ್ಟ್ ಎದುರು ಇದೆ. ತಮ್ಮ ವಿರುದ್ಧ ಕ್ರಮ ತೆಗೆದುಕೊಳ್ಳಬೇಡಿ ಎಂದು ಅರ್ಜಿದಾರರು ಸಂಬಂಧಿತ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಬಹುದು' ಎಂದು ಹೇಳಿ, ಅರ್ಜಿಗಳನ್ನು ತಿರಸ್ಕರಿಸಿತು.

ಕ್ಯಾಲಿಫೋರ್ನಿಯಾ: ಚಂಡಮಾರುತ

ಸ್ಯಾನ್ ಫ್ರಾನ್ಸಿಸ್ಕೊ (ಎಪಿ): ಈಚೆಗೆ ಕಾಳ್ಗಿಚ್ಚಿನಿಂದ ಬೆಂದು ಹೋಗಿದ್ದ ಕ್ಯಾಲಿಫೋರ್ನಿಯಾದಲ್ಲಿ ಚಂಡಮಾರುತ ಅಪ್ಪಳಿಸಿದ್ದು, ಭಾರಿ ಮಳೆ ಸುರಿಯುತ್ತಿದೆ ಹಾಗೂ ಹಲವೆಡೆ ಹೆದ್ದಾರಿಗಳು ಬಂದ್ ಆಗಿವೆ.

ಸ್ಯಾನ್ ಫ್ರಾನ್ಸಿಸ್ಕೊ ಕೊಲ್ಲಿ ಪ್ರದೇಶದಾದ್ಯಂತ ಪ್ರವಾಹದ ಸ್ಥಿತಿ ನಿರ್ಮಾಣವಾಗಿದೆ. ಮುನ್ನೆಚ್ಚರಿಕೆಯಾಗಿ ಬರ್ಕ್ಲಿಯಲ್ಲಿ ರಸ್ತೆಗಳನ್ನು ಮುಚ್ಚಲಾಗಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಕಂಗನಾಗೆ ಅತ್ಯುತ್ತಮ ನಟಿ, ಧನುಷ್, ಮನೋಜ್ ಬಾಜಪೇಯಿಗೆ ಅತ್ಯುತ್ತಮ ನಟ ಪ್ರಶಸ್ತಿ

ರಜನಿಕಾಂತ್‌ಗೆ ಫಾಲ್ಕೆ ಪ್ರಶಸ್ತಿ

ನವದೆಹಲಿ (ಪಿಟಿಐ): ಇಲ್ಲಿನ ವಿಜ್ಞಾನ ಭವನದಲ್ಲಿ ಸೋಮವಾರ ನಡೆದ 67ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು, ಖ್ಯಾತ ನಟ ರಜನಿಕಾಂತ್ ಅವರಿಗೆ 51ನೇ 'ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ' ನೀಡಿ ಗೌರವಿಸಿದರು.

ಭಾರತೀಯ ಸಿನಿಮಾದ ಪಿತಾಮಹ ದಾದಾಸಾಹೇಬ್ ಫಾಲ್ಕೆ ಅವರ ಹೆಸರಿನಲ್ಲಿ ಸಿನಿಮಾ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿಯನ್ನು ರಜನಿಕಾಂತ್ ಅವರ ಜೀವಮಾನದ ಸಾಧನೆಗಾಗಿ ನೀಡಲಾಗಿದೆ.

ನವದೆಹಲಿಯಲ್ಲಿ ಸೋಮವಾರ ನಡೆದ 67ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಟ ರಜನಿಕಾಂತ್ ಅವರಿಗೆ ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರು 2019ನೇ ಸಾಲಿನ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ನೀಡಿ ಗೌರವಿಸಿದರು –ಚಿತ್ರಕೃಪೆ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವಾಲಯ

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ರಜನಿಕಾಂತ್, 'ಪ್ರತಿಷ್ಠಿತ ಪ್ರಶಸ್ತಿ ನೀಡಿದ್ದಕ್ಕಾಗಿ ಸರ್ಕಾರಕ್ಕೆ ನನ್ನ ಧನ್ಯವಾದಗಳು. ನನ್ನ ಗುರು, ಹಾಗೂ ಚಿತ್ರ ನಿರ್ದೇಶಕ ಕೆ.ಬಾಲಚಂದರ್ ಅವರಿಗೆ ಪ್ರಶಸ್ತಿಯನ್ನು ಅರ್ಪಿಸುತ್ತೇನೆ. ನನ್ನ ಸಹೋದರ ಸತ್ಯನಾರಾಯಣ ರಾವ್ ಅವರಿಗೆ ಧನ್ಯವಾದಗಳು' ಎಂದು ಹೇಳಿದರು.

'ನನ್ನ ಸ್ನೇಹಿತ, ಚಾಲಕ ಮತ್ತು ಸಾರಿಗೆ ಸಹೋದ್ಯೋಗಿ ರಾಜ್ ಬಹದ್ದೂರ್ ಅವರು ನನ್ನಲ್ಲಿ ನಟನೆಯ ಪ್ರತಿಭೆಯನ್ನು ಗುರುತಿಸಿದರು ಮತ್ತು ನನ್ನನ್ನು ಚಿತ್ರರಂಗಕ್ಕೆ ಸೇರುವಂತೆ ಪ್ರೋತ್ಸಾಹಿಸಿದರು. ನನ್ನ ಸಿನಿಮಾಗಳನ್ನು ನಿರ್ಮಿಸಿದ ನಿರ್ದೇಶಕರು, ನಿರ್ಮಾಪಕರು, ತಂತ್ರಜ್ಞರು, ಕಲಾವಿದರು, ವಿತರಕರು, ಮಾಧ್ಯಮದವರು, ನನ್ನ ಎಲ್ಲಾ ಅಭಿಮಾನಿಗಳು, ಮತ್ತು ತಮಿಳು ಜನರಿಗೆ ಧನ್ಯವಾದಗಳು' ಎಂದರು.

ತಮಿಳು ನಟ ಧನುಷ್ ಮತ್ತು ಹಿಂದಿಯ ಮನೋಜ್ ಬಾಜಪೇಯಿ ಅವರು ಕ್ರಮವಾಗಿ 'ಅಸುರನ್' ಹಾಗೂ 'ಭೋನ್ಸ್ಲೆ' ಸಿನಿಮಾದಲ್ಲಿನ ನಟನೆಗಾಗಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದರು. ಬಾಲಿವುಡ್ ನಟಿ ಕಂಗನಾ ರನೌತ್ 'ಮಣಿಕರ್ಣಿಕಾ', 'ಪಂಗಾ' ಚಿತ್ರಗಳಲ್ಲಿನ ಅಭಿನಯಕ್ಕಾಗಿ ಅತ್ಯುತ್ತಮ ನಟಿ ಪ್ರಶಸ್ತಿ ಸ್ವೀಕರಿಸಿದರು.

2019ನೇ ಸಾಲಿನ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳನ್ನು ಮಾರ್ಚ್‌ನಲ್ಲೇ ಘೋಷಿಸಲಾಗಿತ್ತು. ಆದರೆ, ಕೋವಿಡ್ ಕಾರಣದಿಂದಾಗಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಮುಂದೂಡಲಾಗಿತ್ತು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

5ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಶ್ವೇತಾ ರಂಗನಾಥ ಕಾಷ್ಠಿ
ಮರಣ : 26/10/2016
ಸದಾ ನಿಮ್ಮ ನೆನಪಿನಲ್ಲಿರುವ
ಕಾಷ್ಠಿ ಕುಟುಂಬ

ಎರಡನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಗಾಯತ್ರಿ ಶೇಖರ್
ಜನನ: 17.03.1950 – ನಿಧನ: 26.10.2019
ಸದಾ ನಿಮ್ಮ ನೆನಪಿನಲ್ಲಿರುವ:
ಬಿ.ಹೆಚ್. ಚಂದ್ರಶೇಖರ್ ಮತ್ತು ಕುಟುಂಬವರ್ಗದವರು

'ಅಕ್ಷಿ' ಸಿನಿಮಾ, ವಿಕ್ರಮ್ ಮೋರ್‌ಗೆ ರಾಷ್ಟ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: 67ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯ ಕನ್ನಡ ಭಾಷೆ ವಿಭಾಗದಲ್ಲಿ ಮನೋಜ್ ಕುಮಾರ್ ನಿರ್ದೇಶಕದ 'ಅಕ್ಷಿ' ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ ಪಡೆದಿದೆ. ನಟ ರಕ್ಷಿತ್ ಶೆಟ್ಟಿ ನಟನೆಯ 'ಅವನೇ ಶ್ರೀಮನ್ನಾರಾಯಣ' ಚಿತ್ರದಲ್ಲಿನ ಸಾಹಸ ನಿರ್ದೇಶನಕ್ಕಾಗಿ ವಿಕ್ರಮ್ ಮೋರ್ ಅವರಿಗೆ ಅತ್ಯುತ್ತಮ ಸಾಹಸ ನಿರ್ದೇಶನ ಪ್ರಶಸ್ತಿ ದೊರಕಿದೆ. ಉಪರಾಷ್ಟ್ರಪತಿ ಎಂ.ವೆಂಕಯ್ಯ ನಾಯ್ಡು ಅವರು ಪ್ರಶಸ್ತಿ ಪ್ರದಾನಿಸಿದರು.

ಕಲಾದೇಗುಲ ಶ್ರೀನಿವಾಸ್ ಹಾಗೂ ಮನೋಜ್ ಕುಮಾರ್

ವಿಕ್ರಮ್ ಮೋರ್

ಪ್ರಶಸ್ತಿ ಸ್ವೀಕರಿಸಿದ ಬಳಿಕ ತಮ್ಮ ಸಂತಸ ಹಂಚಿಕೊಂಡ ಮನೋಜ್ ಕುಮಾರ್, 'ಒಳ್ಳೆಯ ವಿಷಯಾಧಾರಿತ ಚಿತ್ರಕ್ಕೆ ಸಿಕ್ಕಿದ ಈ ಮನ್ನಣೆಯಿಂದಾಗಿ, ಇಂಥ ಸಿನಿಮಾಗಳನ್ನು ತೆರೆಯ ಮೇಲೆ ತರಲು ಪ್ರಯತ್ನಿಸುತ್ತಿರುವವರಿಗೆ ಮತ್ತಷ್ಟು ಪ್ರೋತ್ಸಾಹ ದೊರಕಿದಂತಾಗಿದೆ. ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರೂ ಈ ಚಿತ್ರದಲ್ಲೊಂದು ಹಾಡು ಹಾಡಿದ್ದಾರೆ. ಅದು ಅವರು ಕನ್ನಡದಲ್ಲಿ ಹಾಡಿದ ಕೊನೆಯ ಗೀತೆ. ಹೀಗಾಗಿ ಈ ಪ್ರಶಸ್ತಿಯನ್ನು ಇಡೀ ಚಿತ್ರತಂಡವು ಅವರಿಗೆ ಅರ್ಪಿಸುತ್ತಿದೆ. ನನ್ನ ತಂದೆ, ತಾಯಿ ಸುರಿಸಿದ ಬೆವರಿನ ಮಳೆಗೆ ಈ ಪ್ರಶಸ್ತಿ ಸಿಕ್ಕಿದೆ ಎಂದು ಅಂದುಕೊಳ್ಳುತ್ತೇನೆ. ಈ ಸಿನಿಮಾಗೆ ವರನಟ ಡಾ.ರಾಜ್‌ಕುಮಾರ್ ಅವರ ನೇತ್ರದಾನ ಪ್ರೇರಣೆ. ಈ ಪ್ರೇರಣೆಯೇ ನಮ್ಮನ್ನು ಇಲ್ಲಿಯವರೆಗೂ ಕರೆತಂದಿದೆ' ಎಂದರು.

'ಸಿನಿಮಾವನ್ನು ಶೀಘ್ರದಲ್ಲೇ ಚಿತ್ರಮಂದಿರಗಳಲ್ಲಿ ಬಿಡುಗಡೆಗೊಳಿಸುತ್ತೇವೆ. ಪ್ರಾಮಾಣಿಕವಾದ ಪ್ರಯತ್ನಕ್ಕೆ ಯಶಸ್ಸಿಗೆ ಎನ್ನುವುದಕ್ಕೆ ಇದೊಂದು ಉದಾಹರಣೆ. ಪರಿಶ್ರಮಕ್ಕೆ ತಕ್ಕ ಫಲ 'ಅಕ್ಷಿ' ಎನ್ನುವುದಕ್ಕೆ ಇದು ಸಾಕ್ಷಿ. ಈ ಸಿನಿಮಾ ಕೇವಲ ಕನ್ನಡಕ್ಕಷ್ಟೇ ಸೀಮಿತ ಅಲ್ಲ. ಒಟಿಟಿಯಲ್ಲೂ ಬಿಡುಗಡೆ ಮಾಡುವ ಚಿಂತನೆ ಇದೆ' ಎಂದರು ಅಕ್ಷಿ ಸಿನಿಮಾದ ನಿರ್ಮಾಪಕ ಕಲಾದೇಗುಲ ಶ್ರೀನಿವಾಸ್.

ಸತತ ಎರಡನೇ ಬಾರಿಗೆ ರಾಷ್ಟ್ರ ಪ್ರಶಸ್ತಿ ಪಡೆದ ಸಂಭ್ರಮದಲ್ಲಿ ಮಾತನಾಡಿದ ವಿಕ್ರಮ್ ಮೋರ್, 'ಕೆ.ಜಿ.ಎಫ್ ಹಾಗೂ ಅವನೇ ಶ್ರೀಮನ್ನಾರಾಯಣ ಚಿತ್ರದಲ್ಲಿನ ಸಾಹಸ ದೃಶ್ಯಗಳು ಎರಡೂ ಒಂದಕ್ಕಿಂತ ಒಂದು ವಿಭಿನ್ನ. ಈ ಎರಡೂ ಚಿತ್ರಕ್ಕಾಗಿ ನಾನೂ ಭಿನ್ನವಾಗಿ ಸಾಹಸ ನಿರ್ದೇಶನ ಮಾಡಬೇಕಾಗಿ ಬಂತು. ಕೆ.ಜಿ.ಎಫ್ ಮಾಸ್ ಕಮರ್ಷಿಯಲ್ ಸಿನಿಮಾ ಹಾಗೂ ಇಲ್ಲಿನ ಸಾಹಸ ದೃಶ್ಯಗಳು ಹಿಂಸಾತ್ಮಕವಾಗಿತ್ತು. ಅವನೇ ಶ್ರೀಮನ್ನಾರಾಯಣ ಕಥೆಯೇ ಬೇರೆ. ಇಲ್ಲಿ ಬಹಳ ಸರಳವಾದ ಸಾಹಸ ದೃಶ್ಯಗಳಿದ್ದವು. ಇಂಥ ಚಿತ್ರಗಳಲ್ಲಿ ಕಾರ್ಯನಿರ್ವಹಿಸಲು ಅವಕಾಶ ದೊರಕಿರುವುದೇ ನನ್ನ ಅದೃಷ್ಟ' ಎಂದರು.

ಪಿ.ಆರ್.ರಾಮದಾಸ್ ನಾಯ್ಡು ಅವರು ಬರೆದ 'ಕನ್ನಡ ಸಿನಿಮಾ: ಜಾಗತಿಕ ಸಿನಿಮಾ; ವಿಕಾಸ, ಪ್ರೇರಣೆ, ಪ್ರಭಾವ' ಕೃತಿಗೆ ಸಿನಿಮಾ ಕುರಿತ ಉತ್ತಮ ಕೃತಿ(ವಿಶೇಷ ಮನ್ನಣೆ) ಪ್ರಶಸ್ತಿ ದೊರೆತಿದೆ. ಅಮೋಘವರ್ಷ ಜೆ.ಎಸ್. ನಿರ್ಮಿಸಿರುವ 'ವೈಲ್ಡ್ ಕರ್ನಾಟಕ'ವು ಅತ್ಯುತ್ತಮ ಎಕ್ಸ್‌ಪ್ಲೋರೇಷನ್ ಚಿತ್ರ ಪ್ರಶಸ್ತಿ ದೊರಕಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ಮನೆಕೆಲಸ (೧೧,೦೦೦ - 13000) / ಹೊಂನರ್ಸ್ (13,000-15000) ಹೆಂಗಸರು/ ಹುಡುಗಿಯರು ಬೇಕಾಗಿದ್ದಾರೆ. ಊಟ - ವಸತಿ ಸೌಕರ್ಯವಿದೆ. ಉಡುಪಿ 7411499276

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC, Degree,ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000- 56,000/- ವಸತಿಯೂಟವಿದೆ. 7204853296, 7204396011

ತಕ್ಷಣ ಬೇಕಾಗಿದ್ದಾರೆ ಕರ್ನಾಟಕದ ಎಲ್ಲಾಜಿಲ್ಲೆಗಳಲ್ಲಿನ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC,PUC, ಡಿಗ್ರಿಯಾದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ ESI/PF ನೊಂದಿಗೆ 16,800-32000/- 7829215432, 9538804499

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ/ ಆಫೀಸ್ ಕೆಲಸಗಳಿಗೆ ಯುವಕ/ಯುವತಿಯರು ಬೇಕಾಗಿದ್ದಾರೆ (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ Salary+OT 16,800- 45000/-.9902839010, 9980295449

ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ,ಐಟಿಐ,ಡಿಪ್ಲೊ ಮಾದವರು 16,600 - 62000/- (ಮನೆಯಲ್ಲಿಯೇ ಕೆಲಸ) ವಸತಿಯೂಟದೊಂದಿಗೆ 8123884588, 8123884788

Part-Time Jobs

ಮನೆಯಿಂದಲೇ ಕುಳಿತು ಫಾರಂನಲ್ಲಿ ಅಂಕಿಗಳು ತುಂಬುವ ಮೂಲಕ,ಗಳಿಸಿ 15,000-20,000/-. ಕೊರಿಯರ್ ಬುಕ್,ಪೆನ್ ಚಾರ್ಜಸ್ ನಾವೇ ಕೊಡುತ್ತೇವೆ. 9108059956, 9901929956

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಭವಿಷ್ಯ

Astrology

★॥ಕೇರಳದ ಶ್ರೀಭಗವತಿಭದ್ರಕಾಳಿ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀಪುರುಷ ವಶೀಕರಣ, ದಾಂಪತ್ಯ,ಕಂಕಣಬಾಗ್ಯ, ಸಾಲದಬಾದೆ ಇನ್ನೂಯಾವುದೇ ಕಠಿಣಸಮಸ್ಯೆಗಳಿಗೆ 11ಗಂಟೆಗಳಲ್ಲಿ ಪರಿಹಾರ. ಪಂಡಿತ್. ಜಯರಾಮ್‌ಭಟ್. 9900263706

★॥ಸ್ತ್ರೀವಶೀಕರಣ ಸ್ಪೆಷಲಿಸ್ಟ್॥★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ ಕರೆಮಾಡಿ. ಪಂಡಿತ್.ಜೈದೇವಭಟ್. 9901724082

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ, 7022443071

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

॥ಶ್ರೀಧರ್ಮಶಾಸ್ತ್ರಂ ವಶೀಕರಣಂ॥ ಸರ್ವಸಿದ್ಧಿ ಸಾಧಕರು, ಸಮಸ್ಯೆ ಏನೇಯಿರಲಿ ಎಷ್ಟೇ ಕಠಿಣವಾಗಿರಲಿ ವಶೀಕರಣ ಪದ್ಧತಿಯಿಂದ ಶೀಘ್ರದಲ್ಲಿ ಶಾಸ್ತ್ರೋಕ್ತ ಪರಿಹಾರ ಕಲ್ಪಿಸುವರು. ವೇದಬ್ರಾಹ್ಮಣ ಶ್ರೀಶ್ರೀಮೃತ್ಯುಂಜಯರಾವ್ 9686980376

ವಶೀಕರಣ ಸ್ಪೆಷಲಿಸ್ಟ್: ಸ್ತ್ರೀಪುರುಷ ವಶೀಕರಣ, ಲೈಂಗಿಕ ವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ. ಸ್ತ್ರೀಯರಿಗೆ ಉಚಿತ ಪರಿಹಾರ. 9448687421

CONNECT

ಹುಟ್ಟು ಹಬ್ಬದ ಶುಭಾಶಯಗಳು

ಅಂಧರ ಬಾಳಿನ ಆಶಾಕಿರಣ
ಆಚಾರ್ಯ ಶ್ರೀ ರಾಕುಂ ಗುರೂಜೀರವರ
61ನೇ ವರ್ಷದ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು
ಶುಭ ಕೋರುವವರು: ಆಚಾರ್ಯ ಶ್ರೀ ರಾಕುಂ ಶಾಲೆಯ ಶಿಕ್ಷಕ ವೃಂದದವರು ಹಾಗೂ ಮಕ್ಕಳು

★॥ಶ್ರೀಕಬ್ಬಾಳಮ್ಮ ದೇವಿ॥★ ಜ್ಯೋತಿಷ್ಯಾಲಯ ಪ್ರೀತಿಪ್ರೇಮ,ದಾಂಪತ್ಯಕಿರಿಕಿರಿ, ಸಾಲದಬಾದೆ,ವ್ಯಾಪಾರ, ಶತ್ರುಕಾಟ,ಇನ್ಯಾವುದೇ ಕಠಿಣ ಸಮಸ್ಯೆಗಳಿಗೆ ಕೇವಲ 30 ನಿಮಿಷದಲ್ಲಿ ಶಾಶ್ವತಪರಿಹಾರ. ''ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ವಿಶೇಷ ಪರಿಹಾರ'' ನಂ.1.ವಶೀಕರಣ ಸ್ಪೆಷಲಿಸ್ಟ್ ಸಹದೇವ್‌ಭಟ್. 9900222591

★॥ಶ್ರೀಅನ್ನಪೂರ್ಣೇಶ್ವರಿದೇವಿ ಆರಾಧನೆಯಿಂದ॥★ ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ, ಸಾಲಬಾದೆ, ಮಾಟಮಂತ್ರ ಯಾವುದೇ ಸಮಸ್ಯೆಗಳಿಗೆ ಕೇವಲ 30 ನಿಮಿಷದಲ್ಲಿ ಪರಿಹಾರ. 'ಬ್ರಹ್ಮಾನಂದ ಗುರೂಜಿ'. 8050061378

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಫೋನಿನ ಮುಖಾಂತರ ಉಚಿತವಾಗಿ ಭವಿಷ್ಯ ತಿಳಿಸುತ್ತಾರೆ ಸ್ತ್ರೀ ಪುರುಷ ವಶೀಕರಣ, ಶತ್ರುನಾಶ, ಸಾಲ ಭಾದೆ, ವ್ಯವಹಾರ, ದಾಂಪತ್ಯ ಕೇವಲ 1ಗಂಟೆಯಲ್ಲಿ ಪರಿಹಾರ: 9901922598

ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಉಚಿತ ಭವಿಷ್ಯ, ಖಚಿತ ಪರಿಹಾರ. ರೈತರ ಸಮಸ್ಯೆಗಳಿಗೆ ತಾಯತ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

ಪ್ರವಾಸ

Travel

ಅಂಡಮಾನ್ ಹವಳದ್ವೀಪ Royal Package ಅಕ್ಟೊಬರ್, ನವೆಂಬರ್, ಡಿಸೆಂಬರ್‌ನಲ್ಲಿ 5 ದಿನಗಳು ವಿಮಾನದಲ್ಲಿ. ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9739847429/ 9845560219.

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 16/12/21 ಗುಜರಾತ್ ಪ್ರವಾಸ. 26/12/21 ರಾಜಸ್ತಾನ್ ಪ್ರವಾಸ. 9/12/21 ಮಧ್ಯಪ್ರದೇಶ ಪ್ರವಾಸ.23/12/21 ಶಿರಿಡಿ ಪ್ರವಾಸ. 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
For Lineage & Single/ Multi Column Classifieds Display ads
BOOK YOUR AD ON SUNDAY & GET 50% OFF ON WEEKDAYS
For more information contact:
9880856233 / 9845114560
9606912256

ಪಾಕ್ ಜತೆ ಮಾತುಕತೆಗೆ ಸಲಹೆ: ಅಬ್ದುಲ್ಲಾ ವಿರುದ್ಧ ಶಾ ವಾಗ್ದಾಳಿ

ಶ್ರೀನಗರ (ಪಿಟಿಐ): ಕೇಂದ್ರ ಸರ್ಕಾರವು ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸಬೇಕೆಂದು ಸಲಹೆ ನೀಡಿರುವ ನ್ಯಾಷನಲ್ ಕಾನ್ಫರೆನ್ಸ್‌ನ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಅವರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ನಾವು ಜಮ್ಮು-ಕಾಶ್ಮೀರದ ಯುವ ಜನರೊಂದಿಗೆ ಮಾತನಾಡಿ, ದೇಶದಲ್ಲೇ ಈ ರಾಜ್ಯವನ್ನು ಅಭಿವೃದ್ಧಿ ರಾಜ್ಯವನ್ನಾಗಿ ಮಾಡುತ್ತೇವೆ ಎಂದು ಹೇಳಿದ್ದಾರೆ.

ರಾಜ್ಯದಲ್ಲಿ 370ನೇ ವಿಧಿಯನ್ನು ರದ್ದುಗೊಳಿಸಿದ ಬಳಿಕ ಇದೇ ಮೊದಲಬಾರಿ ಮೂರು ದಿನಗಳ ಜಮ್ಮು ಮತ್ತು ಕಾಶ್ಮೀರದ ಪ್ರವಾಸ ಕೈಗೊಂಡಿರುವ ಅಮಿತ್ ಶಾ ಅವರು ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

ಎಸ್‌ಕೆಐಸಿಸಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸರ್ಕಾರವು ಪಾಕಿಸ್ತಾನದೊಂದಗೆ ಮಾತನಾಡಬೇಕೆಂದು ಫಾರೂಕ್ ಅಬ್ದುಲ್ಲಾ ಸಲಹೆ ನೀಡಿರುವ ವಿಷಯವನ್ನು ಪತ್ರಿಕೆಗಳಲ್ಲಿ ಓದಿದೆ. ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವರು ಸ್ವತಂತ್ರರು. ಆದರೆ, ನಮ್ಮ ಸರ್ಕಾರವು ಕಾಶ್ಮೀರದ ಯುವ ಜನರೊಂದಿಗೆ ಮಾತನಾಡಲು ಬಯಸುತ್ತದೆ' ಎಂದರು.

ಜಮ್ಮು–ಕಾಶ್ಮೀರದ ಶ್ರೀನಗರದಲ್ಲಿ ಸೋಮವಾರ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸುವ ಮುನ್ನ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಬೆಂಬಲಿಗರು ಹಸ್ತಲಾಘವ ನೀಡಿದರು –ಪಿಟಿಐ ಚಿತ್ರ

ಗುಂಡು ನಿರೋಧಕ ಗಾಜಿನ ಕವಚ ತೆಗೆದ ಶಾ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಪ್ರವಾಸದಲ್ಲಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು, ಸೋಮವಾರ ಶ್ರೀನಗರದ ಶೇರ್-ಇ-ಕಾಶ್ಮೀರ ಅಂತರರಾಷ್ಟ್ರೀಯ ಕನ್ವೆನ್ಷನ್ ಕೇಂದ್ರದಲ್ಲಿ (ಎಸ್‌ಕೆಐಸಿಸಿ) ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತಮ್ಮ ಭಾಷಣಕ್ಕೂ ಮುನ್ನ, ಗುಂಡುನಿರೋಧಕ (ಬುಲೆಟ್ ಪ್ರೂಫ್) ಗಾಜಿನ ಕವಚವನ್ನು ತೆಗೆದುಹಾಕಿದರು.

'ಇಂದು ನಾನು ನಿಮ್ಮೊಂದಿಗೆ ಮುಕ್ತವಾಗಿ ಮಾತನಾಡಲು ಬಯಸುತ್ತೇನೆ. ಅದಕ್ಕಾಗಿಯೇ ಇಲ್ಲಿ ಬುಲೆಟ್ ಪ್ರೂಫ್ ಶೀಲ್ಡ್ ಅಥವಾ ಭದ್ರತೆ ಇಲ್ಲ. ನಾನೀಗ ನಿಮ್ಮ ಮುಂದೆ ನಿಮ್ಮಂತೆಯೇ ನಿಂತಿದ್ದೇನೆ' ಎಂದು ಶಾ ಅವರು ಹೇಳಿದರು.

ಶಾ ಅವರು ಕಾಶ್ಮೀರಿ ಗೌನ್ ಫೆರಾನ್ ಧರಿಸಿದ್ದರು.

ಸುಡಾನ್‌ನಲ್ಲಿ ತುರ್ತು ಪರಿಸ್ಥಿತಿ

ಖಾರ್ಟೂಮ್, ಕೈರೊ (ಎಎಫ್‌ಪಿ, ಎಪಿ): ಸುಡಾನ್‌ನಲ್ಲಿ ಪ್ರಧಾನಿ ಮತ್ತು ಇತರ ಹಿರಿಯ ಸರ್ಕಾರಿ ಅಧಿಕಾರಿಗಳನ್ನು ಸೋಮವಾರ ಬಂಧಿಸಲಾಗಿದ್ದು, ಅಲ್ಲಿನ ಸೇನಾ ಜನರಲ್ ತುರ್ತುಪರಿಸ್ಥಿತಿಯನ್ನು ಘೋಷಿಸಿದ್ದಾರೆ.

ದೂರದರ್ಶನದ ಭಾಷಣದಲ್ಲಿ, ಜನರಲ್ ಅಬ್ದೆಲ್-ಫತ್ತಾಹ್ ಬುರ್ಹಾನ್ ಅವರು ದೇಶದ ಆಡಳಿತ ಸಾರ್ವಭೌಮ ಮಂಡಳಿಯನ್ನು ವಿಸರ್ಜಿಸುವುದಾಗಿ ಘೋಷಿಸಿ, ಪ್ರಧಾನಿ ಅಬ್ದಲ್ಲಾ ಹಮ್‌ಡೋಕ್ ನೇತೃತ್ವದ ಸರ್ಕಾರವನ್ನು ವಿಸರ್ಜಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

ಸುಡಾನ್ ಸೇನಾ ಕ್ಷಿಪ್ರಕ್ರಾಂತಿಯ ಸಾಧ್ಯತೆಯು ಗಂಭೀರ ಅಪಾಯದ ಮುನ್ಸೂಚನೆ ನೀಡಿದೆ ಎಂದು ಅಮೆರಿಕವು ಹೇಳಿದ ಬೆನ್ನಲ್ಲೇ ಈ ವಿದ್ಯಮಾನಗಳು ಜರುಗಿವೆ.

'ಸುಡಾನ್ ಪರಿವರ್ತನಾ ಸರ್ಕಾರವನ್ನು ಸೇನಾಪಡೆಯು ಸ್ವಾಧೀನಪಡಿಸಿಕೊಳ್ಳುವ ಸಾಧ್ಯತೆಯ ವರದಿಗಳಿಂದ ಅಮೆರಿಕಕ್ಕೆ ಗಂಭೀರವಾದ ಅಪಾಯದ ಮುನ್ಸೂಚನೆ ದೊರೆತಿದೆ' ಎಂದು ಆಫ್ರಿಕಾದ ಅಮೆರಿಕ ವಿಶೇಷ ಪ್ರತಿನಿಧಿ ಜೆಫ್ರಿ ಫೆಲ್ಟ್‌ಮನ್ ಹೇಳಿದ್ದರು.

ಐಷಾರಾಮಿ ಹಡಗಿನಲ್ಲಿ ಮಾದಕವಸ್ತು ಪ್ರಕರಣ

'ನಿಷ್ಪಕ್ಷಪಾತ ತನಿಖೆ ಬೇಕಿಲ್ಲದವರಿಂದ ಬೆದರಿಕೆ'

ಮುಂಬೈ (ಪಿಟಿಐ): 'ಐಷಾರಾಮಿ ಹಡಗಿನಲ್ಲಿ ಡ್ರಗ್ಸ್ ಪ್ರಕರಣದ ತನಿಖೆಯನ್ನು ಪ್ರಾಮಾಣಿಕವಾಗಿ ಮತ್ತು ನಿಷ್ಪಕ್ಷಪಾತವಾಗಿ ನಡೆಸುವುದು ಕೆಲವು ಸ್ಥಾಪಿತ ಶಕ್ತಿಗಳಿಗೆ ಬೇಕಾಗಿಲ್ಲ. ಹೀಗಾಗಿ ನನ್ನ ವಿರುದ್ಧ ಲಂಚದ ಆರೋಪ ಮಾಡಲಾಗುತ್ತಿದೆ. ನನ್ನನ್ನು ಬಂಧಿಸುವ ಮತ್ತು ಕೆಲಸದಿಂದ ವಜಾ ಮಾಡುವ ಬೆದರಿಕೆ ಹಾಕಲಾಗುತ್ತಿದೆ' ಎಂದು ಎನ್‌ಸಿಬಿ ವಲಯ ನಿರ್ದೇಶಕ ಸಮೀರ್ ವಾಂಖೆಡೆ ಆರೋಪಿಸಿದ್ದಾರೆ.

ಎನ್‌ಡಿಪಿಎಸ್ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿರುವ ಅರ್ಜಿಯಲ್ಲಿ ಅವರು ಈ ಆರೋಪ ಮಾಡಿದ್ದಾರೆ. 'ಡ್ರಗ್ಸ್ ಪ್ರಕರಣದಲ್ಲಿ ನಾನು ಮಹಾರಾಷ್ಟ್ರ ಸರ್ಕಾರದ ಸಚಿವ ನವಾಬ್ ಮಲಿಕ್ ಅವರ ಅಳಿಯನನ್ನು ಬಂಧಿಸಿದ್ದೆ. ಅವರಿಗೆ ಈಗಾಗಲೇ ಜಾಮೀನು ದೊರೆತಿದೆ. ಆದರೆ ಅವರನ್ನು ಬಂಧಿಸಿದ ಕಾರಣಕ್ಕೆ ನನ್ನನ್ನು ಗುರಿ ಮಾಡಲಾಗುತ್ತಿದೆ. ನನಗೆ ಮತ್ತು ನನ್ನ ಕುಟುಂಬದವರಿಗೆ ಬೆದರಿಕೆ ಹಾಕಲಾಗುತ್ತಿದೆ. ಇದರಿಂದ ರಕ್ಷಣೆ ನೀಡಿ' ಎಂದು ಅವರು ಕೋರಿದ್ದರು.

'ನನ್ನ ತಾಯಿ ಮರಣ ಹೊಂದಿದ್ದಾರೆ. ಆದರೆ ಅವರ ಹೆಸರಿನಲ್ಲೂ ನನ್ನ ಮೇಲೆ ದೌರ್ಜನ್ಯ ನಡೆಸಲಾಗುತ್ತಿದೆ. ಪ್ರಭಾವಿ ವ್ಯಕ್ತಿಯ ಕುಟುಂಬದ ವಿರುದ್ಧ ಕ್ರಮ ತೆಗೆದುಕೊಂಡೆ ಎಂಬ ಒಂದೇ ಕಾರಣಕ್ಕೆ ಹೀಗೆ ಮಾಡಲಾಗುತ್ತಿದೆ' ಎಂದು ಅವರು ಆರೋಪಿಸಿದ್ದಾರೆ.

ಇದೇ ರೀತಿಯ ಅರ್ಜಿಯನ್ನು ಅವರು ಮುಂಬೈ ಪೊಲೀಸ್ ಆಯುಕ್ತರಿಗೂ ಸಲ್ಲಿಸಿದ್ದಾರೆ.

ಸಮೀರ್ ಮುಸ್ಲಿಂ: ಸಚಿವ ಮಲಿಕ್ ಆರೋಪ

ಸಮೀರ್ ವಾಂಖೆಡೆ ಅವರ ಜನನ ಪ್ರಮಾಣ ಪತ್ರವೊಂದನ್ನು ಟ್ವೀಟ್ ಮಾಡಿರುವ ಸಚಿವ ನವಾಬ್ ಮಲಿಕ್ ಅವರು, 'ಎಲ್ಲಾ ಮೋಸ ಇಲ್ಲಿಂದಲೇ ಆರಂಭವಾಗಿದೆ' ಎಂದು ಆರೋಪಿಸಿದ್ದಾರೆ.

'ಜನನ ಪ್ರಮಾಣ ಪತ್ರದಲ್ಲಿ ಸಮೀರ್ ವಾಂಖೆಡೆ ಅವರ ಹೆಸರು, ಸಮೀರ್ ದಾವೂದ್ ವಾಂಖೆಡೆ ಎಂದು ಇದೆ. ಮುಸ್ಲಿಮರಾದ ಸಮೀರ್ ದಾವೂದ್ ವಾಂಖೆಡೆ, ಮೀಸಲಾತಿ ಪಡೆಯುವ ಉದ್ದೇಶದಿಂದ ತಾವು ಹಿಂದೂ ಪರಿಶಿಷ್ಟ ಜಾತಿಗೆ ಸೇರಿದವರು ಎಂದು ಜಾತಿ ಪ್ರಮಾಣ ಪತ್ರ ಸೃಷ್ಟಿಸಿದ್ದಾರೆ. ಈ ಮೂಲಕ ಮೀಸಲಾತಿ ಅಡಿಯಲ್ಲಿ ಕೆಲಸಕ್ಕೆ ಸೇರಿದ್ದಾರೆ' ಎಂದು ಮಲಿಕ್ ಟ್ವೀಟ್ ಮಾಡಿದ್ದಾರೆ.

ಜತೆಗೆ ಸಮೀರ್ ಅವರ ಮೊದಲ ಪತ್ನಿ ಡಾ.ಶಬಾನಾ ಕುರೇಶಿ ಅವರ ಜತೆ ಸಮೀರ್ ಅವರ ಚಿತ್ರವನ್ನು ನವಾಬ್ ಮಲಿಕ್ ಟ್ವೀಟ್ ಮಾಡಿದ್ದಾರೆ.

ಮಲಿಕ್ ಅವರ ಆರೋಪಗಳನ್ನು ಸಮೀರ್ ಅಲ್ಲಗಳೆದಿದ್ದಾರೆ. 'ನಾನು ಭಾರತದ ನಿಜವಾದ ಸಂಸ್ಕೃತಿಯನ್ನು ಬಿಂಬಿಸುವ ಬಹುಧರ್ಮದ, ಜಾತ್ಯತೀತ ಕುಟುಂಬಕ್ಕೆ ಸೇರಿದವನು. ನನ್ನ ತಂದೆ ದಯಾನ್‌ದೇವ್ ಕಚೂರ್‌ಜಿ ವಾಂಖೆಡೆ ಅವರು ರಾಜ್ಯ ಅಬಕಾರಿ ಇಲಾಖೆಯಲ್ಲಿ ಹಿರಿಯ ಇನ್‌ಸ್ಪೆಕ್ಟರ್ ಆಗಿ ಸೇವೆ ಸಲ್ಲಿಸಿ, ನಿವೃತ್ತರಾಗಿದ್ದಾರೆ. ನನ್ನ ತಂದೆಯ ಪತ್ನಿ ಮತ್ತು ನನ್ನ ತಾಯಿ ಝಹೀದಾ ಅವರು ಮುಸ್ಲಿಂ. ನಾನು ಹುಟ್ಟಾ ಹಿಂದೂ' ಎಂದು ಸಮೀರ್ ವಿವರಣೆ ನೀಡಿದ್ದಾರೆ.

'ನಾನು ಮೊದಲು ಮದುವೆಯಾದದ್ದು ಡಾ.ಶಬಾನಾ ಕುರೇಶಿ ಅವರನ್ನು. ಆದರೆ, ನಮ್ಮಿಬ್ಬರಿಗೆ ವಿಚ್ಛೇದನವಾಗಿದೆ. 2017ರಲ್ಲಿ ನಾನು ಕ್ರಾಂತಿ ದೀನನಾತ್ ರೇಡ್ಕರ್ ಅವರನ್ನು ಮದುವೆಯಾಗಿದ್ದೇನೆ. ನಾವಿಬ್ಬರೂ ಹಿಂದೂಗಳು' ಎಂದು ಸಮೀರ್ ಮಾಹಿತಿ ನೀಡಿದ್ದಾರೆ.

'ನನ್ನ ವೈಯಕ್ತಿಕ ಜೀವನದ ಮಾಹಿತಿಯನ್ನು ಬಹಿರಂಗಪಡಿಸಿ, ನವಾಬ್ ಮಲಿಕ್ ಅವರು ಅವಹೇಳನ ಮಾಡುತ್ತಿದ್ದಾರೆ. ಇಂತಹ ದಾಳಿಗಳಿಂದ ನಾನು ನೊಂದಿದ್ದೇನೆ' ಎಂದು ಅವರು ಹೇಳಿದ್ದಾರೆ.

'ನಾನು ದಯಾನ್‌ದೇವ್... ದಾವೂದ್ ಅಲ್ಲ. ನಾನು ಹಿಂದೂ. ನನ್ನ ದಿವಂಗತ ಪತ್ನಿ ಮುಸ್ಲಿಂ. ನನ್ನ ಮಗ ಅತ್ಯಂತ ಪವಿತ್ರವಾದ ಭಕ್ತಿಯಿಂದ ತಾಯ್ನಾಡಿನ ಸೇವೆ ಸಲ್ಲಿಸುತ್ತಿದ್ದಾನೆ' ಎಂದು ಸಮೀರ್ ಅವರ ತಂದೆ, ದಯಾನ್‌ದೇವ್ ವಾಂಖೆಡೆ ಹೇಳಿದ್ದಾರೆ.

ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ ಇಂದಿನಿಂದ: ಸೈನಾ ನೆಹ್ವಾಲ್, ಶ್ರೀಕಾಂತ್ ಕಣಕ್ಕೆ

ಸಿಂಧು, ಸಮೀರ್ ವರ್ಮಾ ಮೇಲೆ ನಿರೀಕ್ಷೆ

ಪ್ಯಾರಿಸ್ (ಪಿಟಿಐ): ನಿರಾಸೆ ಮರೆತು ಮುನ್ನುಗ್ಗುವ ಛಲದಲ್ಲಿರುವ ಭಾರತದ ಬ್ಯಾಡ್ಮಿಂಟನ್ ಪಟುಗಳು ಮಂಗಳವಾರ ಇಲ್ಲಿ ಆರಂಭವಾಗುವ ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ.

ಎರಡು ಒಲಿಂಪಿಕ್ಸ್ ಪದಕ ಗೆದ್ದಿರುವ ಪಿ.ವಿ. ಸಿಂಧು, ಲಂಡನ್ ಒಲಿಂಪಿಕ್ಸ್ ಕಂಚು ವಿಜೇತ ಸೈನಾ ನೆಹ್ವಾಲ್ ಹಾಗೂ ಸಮೀರ್ ವರ್ಮಾ ಭಾರತದ ಭರವಸೆಯಾಗಿದ್ದಾರೆ.

ಕಳೆದ ವಾರ ಮುಕ್ತಾಯವಾದ ಡೆನ್ಮಾರ್ಕ್ ಓಪನ್ ಟೂರ್ನಿಯಲ್ಲಿ ಸಿಂಧು ಕ್ವಾರ್ಟರ್‌ಫೈನಲ್‌ನಲ್ಲಿ ಎಡವಿದ್ದರು.

ಈ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಮೊದಲ ಪಂದ್ಯದಲ್ಲಿ ಅವರು ಡೆನ್ಮಾರ್ಕ್‌ನ ಜೂಲಿ ಡವಾಲ್ ಜಾಕೋಬ್‌ಸನ್ ಅವರನ್ನು ಎದುರಿಸಲಿದ್ದಾರೆ. ಪ್ರಶಸ್ತಿ ಜಯದ ಕನಸು ಈಡೇರಬೇಕಾದರೆ ಅವರು ಆಕ್ರಮಣಕಾರಿ ಶೈಲಿಯ ಆಟಕ್ಕೆ ಮರಳಬೇಕಿದೆ. ಮೊದಲ ಹಣಾಹಣಿಯಲ್ಲಿ ಗೆದ್ದರೆ ಸಿಂಧು ಅವರಿಗೆ ಮುಂದಿನ ಪಂದ್ಯಗಳಲ್ಲಿ ಡೆನ್ಮಾರ್ಕ್‌ನ ಲಿನ್ ಕ್ರಿಸ್ಟೊಫರ್ಸನ್ ಅವರನ್ನು ಎದುರಿಸುವ ಸಾಧ್ಯತೆಯಿದೆ.

ಸಮೀರ್ ವರ್ಮಾ– ಪಿಟಿಐ ಚಿತ್ರ

ಪಿ.ವಿ.ಸಿಂಧು– ರಾಯಿಟರ್ಸ್ ಚಿತ್ರ

ಡೆನ್ಮಾರ್ಕ್ ಓಪನ್ ಟೂರ್ನಿಯಲ್ಲಿ ಮೊದಲ ಸುತ್ತಿನಲ್ಲೇ ನಿರ್ಗಮಿಸಿದ್ದ ಸೈನಾ ಇಲ್ಲಿ ಲಯ ಕಂಡುಕೊಳ್ಳುವ ವಿಶ್ವಾಸದಲ್ಲಿದ್ದಾರೆ. ಮೊದಲ ಪಂದ್ಯದಲ್ಲಿ ಅವರು ಜಪಾನ್‌ನ ಸಯಕಾ ತಕಹಶಿ ಎದುರು ಆಡಲಿದ್ದಾರೆ.

ಸಮೀರ್ ವರ್ಮಾ ಡೆನ್ಮಾರ್ಕ್ ಓಪನ್ ಟೂರ್ನಿಯಲ್ಲಿ ಶ್ರೇಷ್ಠ ಸಾಮರ್ಥ್ಯ ತೋರಿ ಎಂಟರಘಟ್ಟ ತಲುಪಿದ್ದರು. ಆದರೆ ಗಾಯದ ಹಿನ್ನೆಲೆಯಲ್ಲಿ ಕ್ವಾರ್ಟರ್‌ಫೈನಲ್‌ನಿಂದ ಹಿಂದೆ ಸರಿದಿದ್ದರು. ಪುರುಷರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಅವರು ಇಂಡೊನೇಷ್ಯಾದ ಕೆಂಟೊ ಮೊಮೊಟಾ ಎದುರು ಆಡಲಿದ್ದಾರೆ.

ಸಿಂಗಲ್ಸ್ ವಿಭಾಗದಲ್ಲಿ ಕಿದಂಬಿ ಶ್ರೀಕಾಂತ್, ಲಕ್ಷ್ಯ ಸೇನ್, ಬಿ.ಸಾಯಿ ಪ್ರಣೀತ್, ಎಚ್.ಎಸ್. ಪ್ರಣಯ್, ಸೌರಭ್ ವರ್ಮಾ ಹಾಗೂ ಪರುಪಳ್ಳಿ ಕಶ್ಯಪ್ ಕೂಡ ಕಣಕ್ಕಿಳಿಯುವರು.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ, ಎಂ.ಆರ್. ಅರ್ಜುನ– ಧೃವ ಕಪಿಲ, ಮನು ಅತ್ರಿ–ಬಿ.ಸುಮೀತ್ ರೆಡ್ಡಿ ಆಡಲಿದ್ದರೆ, ಮಹಿಳಾ ಡಬಲ್ಸ್‌ನಲ್ಲಿ ಅಶ್ವಿನಿ ಪೊನ್ನಪ್ಪ– ಎನ್.ಸಿಕ್ಕಿರೆಡ್ಡಿ, ಮೇಘನಾ ಜಕ್ಕಂಪುಡಿ– ಎಸ್. ರಾಮ್ ಪೂರ್ವಿಶಾ ಜೋಡಿಗಳು ಅದೃಷ್ಟ ಪರೀಕ್ಷಿಸಲಿದ್ದಾರೆ.

ಸಾತ್ವಿಕ್‌ಸಾಯಿರಾಜ್– ಅಶ್ವಿನಿ ಮಿಶ್ರ ಡಬಲ್ಸ್‌ನಲ್ಲಿ ಆಡಲಿದ್ದಾರೆ.

ಬೆಂಗಳೂರಿನಲ್ಲಿ ನಡೆದ ಎಸ್‌.ಎ. ಶ್ರೀನಿವಾಸನ್ ಸ್ಮಾರಕ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆದ ಧಾರವಾಡ ವಲಯ ತಂಡದವರು. ನಿಂತವರು ಎಡದಿಂದ: ಅಂಗದರಾಜ ಹಿತ್ತಲಮನಿ, ಮುದಸ್ಸಿರ್ ನಜರ್, ಇಂದ್ರಸೇನ ದಾನಿ, ಮಹೇಶ ಪಾಟೀಲ (ತಂಡದ ವ್ಯವಸ್ಥಾಪಕ), ಆರ್ಮುಗಮ್ ಎಂ.ಜಿ. (ತರಬೇತುದಾರರು), ಸ್ವಪ್ನಿಲ್ ಎಳವೆ (ನಾಯಕ), ವೈಷ್ಣವ ಸಂಘಮಿತ್ರ, ಆಕಾಶ ಕಟಾಂಬ್ಳೆ, ಸುಧನ್ವ ಕುಲಕರ್ಣಿ, ವೀರೇಂದ್ರ ಸಾಂಬ್ರಾಣಿ, ಅಮರ್ ಘಾಲೆ. ಕುಳಿತವರು; ರೋಹಿತ್ ಕುಮಾರ ಎ.ಸಿ., ಪರೀಕ್ಷಿತ್ ಒಕ್ಕುಂದ, ರೋಹಿತ್ ಎಸ್‌. ಪಾಟೀಲ, ವಿಜಯಕುಮಾರ ಪಾಟೀಲ, ರೋಷನ್ ಜವಳಿ ಹಾಗೂ ಸೋಮೇಶ್ವರ ನಾವಳ್ಳಿಮಠ

ಎಸ್‌.ಎ. ಶ್ರೀನಿವಾಸನ್ ಸ್ಮಾರಕ ಕ್ರಿಕೆಟ್ ಟೂರ್ನಿ

ಧಾರವಾಡ ವಲಯ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಏಳು ವಿಕೆಟ್‌ಗಳ ಗೆಲುವು ದಾಖಲಿಸಿದ ಧಾರವಾಡ ವಲಯ ತಂಡ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಬೆಂಗಳೂರಿನಲ್ಲಿ ಆಯೋಜಿಸಿದ್ದ 25 ವರ್ಷದ ಒಳಗಿನವರ ಎಸ್.ಎ. ಶ್ರೀನಿವಾಸನ್ ಸ್ಮಾರಕ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆಗಿದೆ.

ಸೋಮವಾರ ನಡೆದ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ ಧಾರವಾಡ ವಲಯ ತುಮಕೂರು ವಲಯ ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ತುಮಕೂರು ವಲಯ 49.5 ಓವರ್‌ಗಳಲ್ಲಿ 195 ರನ್ ಗಳಿಸಿತು. ಈ ಗುರಿಯನ್ನು ಧಾರವಾಡ ವಲಯ 31.4 ಓವರ್‌ಗಳಲ್ಲಿ ಮೂರು ವಿಕೆಟ್ ಕಳೆದುಕೊಂಡು ತಲುಪಿತು. ಸುಧನ್ವ ಕುಲಕರ್ಣಿ (ಅಜೇಯ 50), ವಿಜಯಕುಮಾರ ಪಾಟೀಲ (115) ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದರು. ಸೋಮೇಶ್ವರ ನಾವಳ್ಳಿಮಠ ಹಾಗೂ ರೋಹಿತ್ ಕುಮಾರ ತಲಾ 3 ವಿಕೆಟ್ ಉರುಳಿಸಿದರು.

ಸ್ವಪ್ನಿಲ್ ಎಳವೆ ನಾಯಕತ್ವದ ಧಾರವಾಡ ವಲಯ, ಟೂರ್ನಿಯಲ್ಲಿ ಆಡಿದ ಎಲ್ಲಾ ಐದು ಪಂದ್ಯಗಳಲ್ಲಿ ಜಯ ಸಾಧಿಸಿ ಒಟ್ಟು 20 ಅಂಕಗಳನ್ನು ಗಳಿಸಿದೆ. ಗುಂಪಿನ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಸಂಪಾದಿಸಿದೆ. ಈ ವಲಯ ತನ್ನ ಹಿಂದಿನ ಪಂದ್ಯಗಳಲ್ಲಿ ರಾಯಚೂರು, ಅಧ್ಯಕ್ಷರ ಇಲೆವನ್, ಬೆಂಗಳೂರು ನಗರ, ಉಪಾಧ್ಯಕ್ಷರ ಇಲೆವನ್ ಮತ್ತು ತುಮಕೂರು ವಲಯ ತಂಡಗಳನ್ನು ಮಣಿಸಿತ್ತು.

ಸಂಕ್ಷಿಪ್ತ ಸ್ಕೋರು: ತುಮಕೂರು ವಲಯ: 49.5 ಓವರ್‌ಗಳಲ್ಲಿ 195 (ದರ್ಶನ್ ಎನ್.ಆರ್. 63,ನಿರ್ಮಿತ್ ಶಶಿಧರ್ 20, ಹೇಮಂತ್ ಕುಮಾರ್ 29, ಅಫ್ರೀದ್ ಅಹಮದ್ 28; ಸೋಮೇಶ್ವರ ನಾವಳ್ಳಿಮಠ 46ಕ್ಕೆ3, ರೋಹಿತ್ ಕುಮಾರ್ 34ಕ್ಕೆ3). ಧಾರವಾಡ ವಲಯ: 31.4 ಓವರ್‌ಗಳಲ್ಲಿ 3ಕ್ಕೆ 196 (ಸುಧನ್ವ ಕುಲಕರ್ಣಿ ಔಟಾಗದೆ 50, 'ಎ' ವಿಜಯಕುಮಾರ್ ಪಾಟೀಲ 115). ಫಲಿತಾಂಶ: ಧಾರವಾಡ ವಲಯಕ್ಕೆ ಏಳು ವಿಕೆಟ್‌ಗಳ ಜಯ

ಬಾಕ್ಸಿಂಗ್: ಸಂಜೀತ್, ಸಚಿನ್‌ಗೆ ಮುನ್ನಡೆ

ಬೆಲ್‌ಗ್ರೇಡ್ (ಪಿಟಿಐ): ಏಷ್ಯನ್ ಚಾಂಪಿಯನ್, ಭಾರತದ ಸಂಜೀತ್ ಹಾಗೂ ಸಚಿನ್ ಕುಮಾರ್ ಅವರಿಗೆ ಎಐಬಿಎ ವಿಶ್ವ ಪುರುಷರ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಮೊದಲ ಸುತ್ತಿನಲ್ಲಿ ಬೈ ಸಿಕ್ಕಿದೆ.

ದಾಖಲೆ ಸಂಖ್ಯೆಯ ಸ್ಪರ್ಧಿಗಳು ಪಾಲ್ಗೊಂಡಿರುವ ಚಾಂಪಿಯನ್‌ಷಿಪ್‌ನ ಡ್ರಾವನ್ನು ಸೋಮವಾರ ಪ್ರಕಟಿಸಲಾಯಿತು. ಇದೇ 30ರಂದು ನಡೆಯುವ 80 ಕೆಜಿ ವಿಭಾಗದ ಎರಡನೇ ಸುತ್ತಿನ ಬೌಟ್‌ನಲ್ಲಿ ಸಚಿನ್ ಕುಮಾರ್ ಅವರು ಅಮೆರಿಕದ ರಾಬಿ ಗೊಂಜಾಲೆಜ್ ಅವರನ್ನು ಎದುರಿಸಲಿದ್ದಾರೆ. ಸಂಜೀತ್ (92 ಕೆಜಿ) ತಮ್ಮ ಮೊದಲ ಬೌಟ್‌ನಲ್ಲಿ 29ರಂದು ರಷ್ಯಾದ ಆ್ಯಂಡ್ರೆ ಸ್ಟಾಟ್‌ಸ್ಕಿ ಅವರಿಗೆ ಮುಖಾಮುಖಿಯಾಗುವರು.

100 ರಾಷ್ಟ್ರಗಳ 600ಕ್ಕೂ ಅಧಿಕ ಬಾಕ್ಸರ್‌ಗಳು ಸ್ಪರ್ಧೆಯಲ್ಲಿದ್ದು, ಕೆಲವೊಂದು ವಿಭಾಗಗಳ ಸ್ಪರ್ಧಿಗಳು ಕ್ವಾರ್ಟರ್‌ಫೈನಲ್ ಹಂತಕ್ಕೇರಲು ಕನಿಷ್ಠ ಮೂರು ಬೌಟ್‌ಗಳನ್ನು ಗೆಲ್ಲಬೇಕಿದೆ. ಐದು ಬಾರಿಯ ಏಷ್ಯನ್ ಪದಕ ಜಯಿಸಿರುವ ಶಿವ ಥಾಪಾ (63.5 ಕೆಜಿ) ಅವರಲ್ಲಿ ಒಬ್ಬರು.

ಶಿವ ತಮ್ಮ ಮೊದಲ ಬೌಟ್‌ನಲ್ಲಿ ಮಂಗಳವಾರ ಕೀನ್ಯಾದ ವಿಕ್ಟರ್ ಒದಿಯಾಂಬೊ ನ್ಯಾದೆರಾ ಅವರನ್ನು ಎದುರಿಸುವರು. ಇದೇ ದಿನ ದೀಪಕ್ ಕುಮಾರ್ (51 ಕೆಜಿ) ಅವರು ಕಿರ್ಗಿಸ್ತಾನದ ಅಜತ್ ಉಸೆನಲಿಯೆವ್ ಅವರೊಂದಿಗೆ, ಗೋವಿಂದ್ ಸಹಾನಿ (48 ಕೆಜಿ) ಅವರು ಈಕ್ವೆಡಾರ್‌ನ ಬಿಲ್ಲಿ ಜೋವಾ ಒರ್ಟಿಜ್ ಎದುರು ಸೆಣಸುವರು. 29ರಂದು ಆಕಾಶ್ ಕುಮಾರ್ (54 ಕೆಜಿ) ಅವರು ಜರ್ಮನಿಯ ಒಮರ್ ಸಲಾಹ್ ವಿರುದ್ಧ ಕಣಕ್ಕಿಳಿಯುವರು.

ಸಂಜೀತ್(ಬಲ)– ಟ್ವಿಟರ್ ಚಿತ್ರ

ಬುಧವಾರ ವೀರೇಂದ್ರ ಸಿಂಗ್ (60 ಕೆಜಿ), ಆರ್ಮೆನಿಯಾದ ಕರೆನ್ ತೋನಾಕನ್ಯನ್, ನಿಶಾತ್ ದೇವ್ (71 ಕೆಜಿ) ಅವರು ಹಂಗರಿಯ ಲಾಜ್ಲೊ ಕೊಜಕ್ ವಿರುದ್ಧ ಅದೃಷ್ಟ ಪರೀಕ್ಷಿಸಲಿದ್ದಾರೆ. ಭಾರತವನ್ನು ಪ್ರತಿನಿಧಿಸುತ್ತಿರುವ ಎಲ್ಲ ಬಾಕ್ಸರ್‌ಗಳು ಆಯಾ ತೂಕ ವಿಭಾಗಗಳಲ್ಲಿ ರಾಷ್ಟ್ರೀಯ ಚಾಂಪಿಯನ್ ಆಗಿದ್ದಾರೆ.

ಇಂದಿನಿಂದ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್

ಬೆಂಗಳೂರು: ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್ ಉದ್ಯಾನನಗರಿಯಲ್ಲಿ ಮಂಗಳವಾರ ಆರಂಭವಾಗಲಿದೆ.

ಬಸವನಗುಡಿ ಈಜು ಕೇಂದ್ರದಲ್ಲಿ ಈಜು ಸ್ಪರ್ಧೆಗಳು, ಹಲಸೂರಿನ ಕೆನ್ಸಿಂಗ್ಟನ್ ಈಜುಕೊಳದಲ್ಲಿ ಡೈವಿಂಗ್ ಹಾಗೂ ನೆಟ್ಟಕಲ್ಲಪ್ಪ ಈಜು ಕೇಂದ್ರದಲ್ಲಿ ವಾಟರ್‌ಪೋಲೊ ಸ್ಪರ್ಧೆಗಳು ನಡೆಯಲಿವೆ.

ಎರಡು ಬಾರಿಯ ಒಲಿಂಪಿಯನ್ ಕೇರಳದ ಸಜನ್ ಪ್ರಕಾಶ್, ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಭಾಗವಹಿಸಿದ್ದ ಕರ್ನಾಟಕದ ಶ್ರೀಹರಿ ನಟರಾಜ್ ಪದಕಗಳ ಬೇಟೆಗೆ ಸಜ್ಜಾಗಿದ್ದಾರೆ. ಮಹಿಳಾ ವಿಭಾಗದಲ್ಲಿ ಗುಜರಾತ್‌ನ ಮಾನಾ ಪಟೇಲ್ (ಟೋಕಿಯೊ ಕೂಟಕ್ಕೆ ಅರ್ಹತೆ ಗಳಿಸಿದ್ದರು) ಕೂಡ ಮಿಂಚುವ ಹಂಬಲದಲ್ಲಿದ್ದಾರೆ.

ಶ್ರೀಹರಿ ನಟರಾಜ್

ಬೆಳಗ್ಗೆ 8.30ರಿಂದ ಹೀಟ್ಸ್ ನಡೆಯಲಿದ್ದು, ಸಂಜೆ 5 ಗಂಟೆಯಿಂದ ಫೈನಲ್ಸ್ ಸ್ಪರ್ಧೆಗಳು ನಿಗದಿಯಾಗಿವೆ.

ಸ್ನೂಕರ್: ಪಂಕಜ್‌ಗೆ ಅಗ್ರಸ್ಥಾನ

ಮುಂಬೈ(ಪಿಟಿಐ): ಕರ್ನಾಟಕದ ಪಂಕಜ್ ಅಡ್ವಾಣಿ ಅವರು ಇಲ್ಲಿ ನಡೆಯುತ್ತಿರುವ ಜಿಎಸ್‌ಸಿ ವಿಶ್ವ ಸ್ನೂಕರ್ ಅರ್ಹತಾ ಟೂರ್ನಿಯಲ್ಲಿ ಅಗ್ರಸ್ಥಾನ ಗಳಿಸಿದರು. ಆಡಿದ ಎಲ್ಲ 12 ಪಂದ್ಯಗಳಲ್ಲೂ ಅವರು ಜಯಭೇರಿ ಬಾರಿಸಿದರು.

ಹಲವು ಬಾರಿ ಏಷ್ಯನ್ ಹಾಗೂ ವಿಶ್ವ ಸ್ನೂಕರ್ ಚಾಂಪಿಯನ್ ಆಗಿರುವ 36 ವರ್ಷದ ಪಂಕಜ್, ಇಲ್ಲಿ ಒಟ್ಟು 10,760 ಪಾಯಿಂಟ್ಸ್ ಕಲೆಹಾಕಿದರು.

ರಾಷ್ಟ್ರೀಯ ಚಾಂಪಿಯನ್ ಆದಿತ್ಯ ಮೆಹ್ತಾ (10,156 ಪಾಯಿಂಟ್ಸ್) ಎರಡನೇ ಸ್ಥಾನ ಗಳಿಸಿದರೆ, ಲಕ್ಷ್ಮಣ್ ರಾವತ್, 9,396 ಪಾಯಿಂಟ್ಸ್‌ನೊಂದಿಗೆ ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು. ಪಂಕಜ್ ಹಾಗೂ ಆದಿತ್ಯ, ವಿಶ್ವ ಸ್ನೂಕರ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಗಳಿಸಿದ್ದು, ಡಿಸೆಂಬರ್‌ನಲ್ಲಿ ದೋಹಾದಲ್ಲಿ ನಡೆಯುವ ಸಾಧ್ಯತೆಯಿದೆ.

ಪಂಕಜ್ ಅಡ್ವಾಣಿ

ಮಹಿಳೆಯರ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್

ಸೆಮಿಗೆ ಮಂಜು ರಾಣಿ, ನಿಖತ್

ಹಿಸ್ಸಾರ್ (ಪಿಟಿಐ): ರೈಲ್ವೆ ಸ್ಪೋರ್ಟ್ಸ್ ಪ್ರಮೋಷನ್ ಮಂಡಳಿಯ ಮಂಜು ರಾಣಿ ಮತ್ತು ತೆಲಂಗಾಣದ ನಿಖತ್ ಜರೀನ್ ಅವರು ಮಹಿಳೆಯರ ರಾಷ್ಟ್ರೀಯ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದಿರುವ ಮಂಜು ರಾಣಿ 48 ಕೆಜಿ ವಿಭಾಗದಲ್ಲಿ ಪಂಜಾಬ್‌ನ ಮೀನಾಕ್ಷಿ ವಿರುದ್ಧ 5–0ಯಿಂದ ಜಯ ಗಳಿಸಿದರು. ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗಳಿಸಿರುವ ನಿಖತ್ ಜರೀನ್ 52 ಕೆಜಿ ವಿಭಾಗದಲ್ಲಿ ಅಸ್ಸಾಂನ ಮಂಜು ಬಸುಮತರಿ ವಿರುದ್ಧ ಪಾರಮ್ಯ ಮೆರೆದು 5–0 ಅಂತರದ ಗೆಲುವು ಸಾಧಿಸಿದರು.

ನಿಖತ್ ಜರೀನ್ –ಪಿಟಿಐ ಚಿತ್ರ

48 ಕೆಜಿ ವಿಭಾಗದ ಬೌಟ್‌ನಲ್ಲಿ ತಮಿಳುನಾಡಿನ ಎಸ್.ಕಲೈವಾಣಿ ಹಿಮಾಚಲಪ್ರದೇಶದ ಜ್ಯೋತಿಕಾ ಬಿಷ್ಟ್ ಅವರನ್ನು ಮಣಿಸಿ ನಾಲ್ಕರ ಘಟ್ಟ ಪ್ರವೇಶಿಸಿದರು. ಅಸ್ಸಾಂನ ಜಮುನಾ ಬೋರೊ 54 ಕೆಜಿ ವಿಭಾಗದಲ್ಲಿ ಉತ್ತರಾಖಂಡದ ಗಾಯತ್ರಿ ಕಸನ್ಯಾಳ್ ವಿರುದ್ಧ 5–0ಯಿಂದ ಗೆದ್ದರು. ಜಮುನಾ 2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗಳಿಸಿದ್ದರು.

54 ಕೆಜಿ ವಿಭಾಗದ ಮತ್ತೊಂದು ಹಣಾಹಣಿಯಲ್ಲಿ ರೈಲ್ವೆ ಮಂಡಳಿಯ ಶಿಖಾ, ಯೂತ್ ವಿಶ್ವ ಚಾಂಪಿಯನ್‌ಷಿಪ್‌ನ ಪ್ರಶಸ್ತಿ ವಿಜೇತೆ ಮಣಿಪುರದ ಬೇಬಿರೋಜಿಸಾನ ನೌರೆಮ್ ವಿರುದ್ಧ 5–0ಯಿಂದ ಜಯ ಸಾಧಿಸಿದರು. 50 ಕೆಜಿ ವಿಭಾಗದ ಬೌಟ್‌ನಲ್ಲಿ ಪಂಜಾಬ್‌ನ ಕೋಮಲ್ 5–0ಯಿಂದ ಮಹಾರಾಷ್ಟ್ರದ ಅಂಜಲಿ ಗುಪ್ತಾ ಅವರನ್ನು ಮಣಿಸಿದರು.

ಷೇರುಪೇಟೆ ವಹಿವಾಟು 146



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,114
ಇಂದಿನ ಅಂತ್ಯ	18,125
▲	11
ದಿನದ ಗರಿಷ್ಠ	18,241

ವಿನಿಮಯ ದರ

$ ಡಾಲರ್	75.08
£ ಪೌಂಡ್	103.28
€ ಯುರೊ	93.76
¥ ಯೆನ್ (100ಕ್ಕೆ)	66

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹442

'ಬ್ರೆಂಟ್: ಬ್ಯಾರಲ್‌ಗೆ 90 ಡಾಲರ್ ದಾಟುವ ಸಂಭವ'

ಲಂಡನ್/ನವದೆಹಲಿ (ರಾಯಿಟರ್ಸ್/ಪಿಟಿಐ): ಜಾಗತಿಕ ತೈಲ ಬೇಡಿಕೆಯು ಮತ್ತೆ ಚೇತರಿಕೆ ಕಂಡಿರುವುದರಿಂದ ಬ್ರೆಂಟ್ ಕಚ್ಚಾತೈಲ ದರವು ವರ್ಷಾಂತ್ಯದ ವೇಳೆಗೆ ಬ್ಯಾರಲ್‌ಗೆ 90 ಡಾಲರ್‌ಗಳನ್ನೂ ಮೀರುವ ಸಾಧ್ಯತೆ ಇದೆ ಎಂದು ಗೋಲ್ಡ್‌ಮನ್ ಸ್ಯಾಚ್ಸ್ ಸಂಸ್ಥೆಯು ಸೋಮವಾರ ಹೇಳಿದೆ.

ಸಂಸ್ಥೆಯು ತನ್ನ ಈ ಹಿಂದಿನ ವರದಿಯಲ್ಲಿ ತೈಲ ದರವು ಬ್ಯಾರಲ್‌ಗೆ 90 ಡಾಲರ್‌ಗಳಿಗೆ ತಲುಪುವ ಸಾಧ್ಯತೆ ಇದೆ ಎಂದು ಹೇಳಿತ್ತು. ಏಷ್ಯಾದಲ್ಲಿ ತೈಲ ಬಳಕೆಯು ಚೇತರಿಕೆ ಕಂಡಿದೆ. ಹೀಗಾಗಿ ಜಾಗತಿಕ ತೈಲ ಬೇಡಿಕೆಯು ಕೋವಿಡ್‌ಗೂ ಮುಂಚೆ ಪ್ರತಿ ದಿನಕ್ಕೆ ಇದ್ದ 10 ಕೋಟಿ ಬ್ಯಾರಲ್‌ಗಳಿಗೆ ಶೀಘ್ರವೇ ತಲುಪುವ ನಿರೀಕ್ಷೆ ಇದೆ ಎಂದು ತಿಳಿಸಿದೆ.

ಪೂರೈಕೆಯಲ್ಲಿ ಕೊರತೆ ಮತ್ತು ಹೆಚ್ಚಾಗುತ್ತಿರುವ ಬೇಡಿಕೆಯಿಂದಾಗಿ ಕಚ್ಚಾ ತೈಲ ದರಗಳು ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿವೆ. ಬ್ರೆಂಟ್ ಕಚ್ಚಾ ತೈಲ ದರವು ಸೋಮವಾರ ಶೇ 0.73ರಷ್ಟು ಹೆಚ್ಚಾಗಿ ಬ್ಯಾರಲ್‌ಗೆ 85.26 ಡಾಲರ್‌ಗಳಿಗೆ ಏರಿಕೆ ಆಗಿದೆ.

ಏರ್ ಇಂಡಿಯಾ ಮಾರಾಟ: ಪಾಂಡೆ ಟ್ವೀಟ್

ಷೇರು ಖರೀದಿ ಒಪ್ಪಂದ: ಟಾಟಾ ಸನ್ಸ್, ಸರ್ಕಾರ ಸಹಿ

ನವದೆಹಲಿ (ಪಿಟಿಐ): ಏರ್ ಇಂಡಿಯಾ ವಿಮಾನಯಾನ ಕಂಪನಿಯನ್ನು ₹ 18 ಸಾವಿರ ಕೋಟಿಗೆ ಮಾರಾಟ ಮಾಡುವ ಸಂಬಂಧ ಕೇಂದ್ರ ಸರ್ಕಾರವು ಟಾಟಾ ಸನ್ಸ್ ಜೊತೆ ಷೇರು ಖರೀದಿ ಒಪ್ಪಂದಕ್ಕೆ ಸೋಮವಾರ ಸಹಿ ಹಾಕಿದೆ ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣೆ ಇಲಾಖೆಯ (ಡಿಐಪಿಎಎಂ) ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ಅವರು ಟ್ವೀಟ್ ಮಾಡಿದ್ದಾರೆ.

ಏರ್ ಇಂಡಿಯಾದ ಹಣಕಾಸು ವಿಭಾಗದ ನಿರ್ದೇಶಕ ವಿನೋದ್ ಹೆಜಮಾಡಿ, ನಾಗರಿಕ ವಿಮಾನಯಾನ ಸಚಿವಾಲಯದ ಜಂಟಿ ಕಾರ್ಯದರ್ಶಿ ಸತ್ಯೇಂದ್ರ ಮಿಶ್ರಾ ಮತ್ತು ಟಾಟಾ ಸಮೂಹದ ಸೂರ್ಯಪ್ರಕಾಶ್ ಮುಖ್ಯೋಪಾಧ್ಯಾಯ ಅವರು ಷೇರು ಖರೀದಿ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

₹ 2,700 ಕೋಟಿ ನಗದು ಪಾವತಿಸಿ, ₹ 15,300 ಕೋಟಿ ಮೊತ್ತದ ಸಾಲವನ್ನು ವಹಿಸಿಕೊಳ್ಳುವ ಮೂಲಕ ಏರ್ ಇಂಡಿಯಾ ಕಂಪನಿಯನ್ನು ತನ್ನದಾಗಿಸಿಕೊಳ್ಳುವ ಟಾಟಾ ಸಮೂಹದ ಪ್ರಸ್ತಾವಕ್ಕೆ ಕೇಂದ್ರ ಸರ್ಕಾರವು ಈಗಾಗಲೇ ಒಪ್ಪಿಗೆ ನೀಡಿದೆ.

ಏರ್ ಇಂಡಿಯಾದಲ್ಲಿನ ಶೇ 100ರಷ್ಟು ಷೇರನ್ನು ಮಾರಾಟ ಮಾಡುವ ಆಸಕ್ತಿ ಇದೆ ಎಂಬ ಪತ್ರವನ್ನು ಕೇಂದ್ರ ಸರ್ಕಾರವು ಅಕ್ಟೋಬರ್ 11ರಂದು ಟಾಟಾ ಸಮೂಹಕ್ಕೆ ನೀಡಿದೆ.

ಚಿನ್ನದ ದರ ₹ 182 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನದ ದರ ಏರಿಕೆ ಆಗಿದ್ದರೆ, ಬೆಳ್ಳಿ ದರ ಇಳಿಕೆ ಕಂಡಿದೆ. 10ಗ್ರಾಂ ಚಿನ್ನದ ದರ ₹ 182ರಷ್ಟು ಹೆಚ್ಚಾಗಿ ₹ 47,023ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹ 178ರಷ್ಟು ಇಳಿಕೆಯಾಗಿ ₹ 64,721ಕ್ಕೆ ತಲುಪಿತು.

ಮಾರಾಟ ಜಾಲ ವಿಸ್ತರಿಸಲಿದೆ ಹೀರೊ ಎಲೆಕ್ಟ್ರಿಕ್

ನವದೆಹಲಿ (ಪಿಟಿಐ): ಹೀರೊ ಎಲೆಕ್ಟ್ರಿಕ್ ಕಂಪನಿಯು ಪ್ರಸಕ್ತ ಹಣಕಾಸು ವರ್ಷದ ಅಂತ್ಯದ ವೇಳೆಗೆ ತನ್ನ ಮಾರಾಟ ಕೇಂದ್ರಗಳ ಒಟ್ಟು ಸಂಖ್ಯೆಯನ್ನು ಒಂದು ಸಾವಿರಕ್ಕೆ ಹೆಚ್ಚಿಸುವುದಾಗಿ ಸೋಮವಾರ ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ 500ಕ್ಕೂ ಅಧಿಕ ನಗರಗಳಲ್ಲಿ 700ಕ್ಕೂ ಅಧಿಕ ಮಾರಾಟ ಮಳಿಗೆಗಳನ್ನು ಹೊಂದಿದ್ದು, ದೇಶದಾದ್ಯಂತ ಇನ್ನೂ 300 ಹೊಸ ಕೇಂದ್ರಗಳನ್ನು ಆರಂಭಿಸುವುದಾಗಿ ಕಂಪನಿ ತಿಳಿಸಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಗ್ರಾಹಕ ಸ್ನೇಹಿ ನೀತಿಗಳು, ಉತ್ತಮ ಮೂಲಸೌಕರ್ಯ ಹಾಗೂ ಜಾಗೃತಿಯ ಕಾರಣಗಳಿಂದಾಗಿ ಮಾರಾಟ ಜಾಲ ವಿಸ್ತರಣೆ ಮಾಡಲು ಉತ್ತೇಜನ ದೊರೆತಿದೆ ಎಂದು ಕಂಪನಿಯು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಡಿಜಿಟಲ್ ಮೂಲಕವೇ ಎಲ್ಲವನ್ನೂ ಗ್ರಾಹಕರಿಗೆ ವಿವರಿಸಲು ಆಗುವುದಿಲ್ಲ. ಗ್ರಾಹಕರನ್ನು ಸಂತೃಪ್ತಿಪಡಿಸಲು ಸುಸಜ್ಜಿತವಾದ ಮಾರಾಟ ಕೇಂದ್ರಗಳು ಅಗತ್ಯ ಎಂದು ಕಂಪನಿಯ ಸಿಇಒ ಸೋಹಿಂದರ್ ಗಿಲ್ ಹೇಳಿದ್ದಾರೆ.

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1430 (1450)
ಸೋಯಾ (ರಿಫೈನ್ಡ್)	₹1303 (1305)
ಸೂರ್ಯಕಾಂತಿ (ರಿಫೈನ್ಡ್)	₹1360 (1360)
ಪಾಮೋಲಿನ್	₹1200 (1200)

ಮುಂಬೈ ಧಾರಣೆ

ಶೇಂಗಾ

25-10-2021

ಜಾವಾ 70/80(ಹೊಸ)	10400-10450
ಜಾವಾ 80/90(ಹೊಸ)	10100-10150
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1440 (1460)
ಒಂದು ವಾರದ ಡೆಲಿವರಿ	1435 (1455)
ಸೋಯಾ ಕಚ್ಚಾ	1255 (1255)
ಪಾಮ್ ವಾರದ ಡೆಲಿವರಿ	1198 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1280 (1280)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

48,050 (47,750)

ಬೆಳ್ಳಿ ಕೆ.ಜಿ 65,600 (65,300)

ಆವರಣದಲ್ಲಿ ಶನಿವಾರದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	450
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-5000
ಚಿತ್ರದುರ್ಗ	
ಆಪಿ	46639-47069
ಬೆಟ್ಟೆ	39619-40199
ಕೆಂಪುಗೋಟು	30300-30700
ರಾಶಿ	46129-46579
ಕುಮಟ	
ಚಿಪ್ಪು	30509-39999

ಕೋಕ	20169-34019
ಫ್ಯಾಕ್ಟರಿ	13509-19079
ಹೊಸಚಾಲಿ	44569-47799
ಹಳೆಚಾಲಿ	44000-50000
ಪುತ್ತೂರು	
ಕೋಕ	10500-26000
ಹೊಸತು	35500-50000
ಶಿರಸಿ	
ಬೆಟ್ಟೆ	38123-43899
ಬಿಳಿಗೋಟು	18219-43299
ಚಾಲಿ	43099-47839
ರಾಶಿ	40219-47699
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	48972-50510

ಗೊರಬಲು	16200-38889
ರಾಶಿ	41509-49209
ಸರಕು	48100-66896
ಸಾಗರ	
ಬಿಳಿಗೋಟು	28899-37989
ಚಾಲಿ	41499-45870
ಕೋಕ	18899-36399
ಕೆಂಪುಗೋಟು	35819-35819
ರಾಶಿ	40199-48809
ಸಿಪ್ಪೆಗೋಟು	6786-25005
ರಾಮನಗರ ರೇಷ್ಮೆ	
ಮಿಶ್ರತಳಿ	303-479
ದ್ವಿತಳಿ	321-557

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	12700	12975	199.85 ಸೆಂಟ್ಸ್
ಎಸಿ	---	5000	5300	
ಆರ್‌ಪಿ	---	6000	6250	
ಆರ್‌ಸಿ	---	3400	3625	2134 ಡಾಲರ್ಸ್

'ದಿ ಬಿಗ್ ಟೆಕ್ ಷೋ' ಉದ್ಘಾಟಿಸಿದ ಸಚಿವ ಅಶ್ವತ್ಥ ನಾರಾಯಣ ಹೇಳಿಕೆ

'ಎಂಜಿನಿಯರಿಂಗ್ ಸಂಶೋಧನೆಗೆ ₹ 600 ಕೋಟಿ ಮೀಸಲು'

ಪ್ರಜಾವಾಣಿ ವಾರ್ತೆ

ಮೈಸೂರು: 'ಎಲೆಕ್ಟ್ರಾನಿಕ್ ಸಿಸ್ಟಂ ಡಿಸೈನ್ ಆ್ಯಂಡ್ ಮ್ಯಾನುಫ್ಯಾಕ್ಚರಿಂಗ್ ಘಟಕಗಳ ಸ್ಥಾಪನೆಗೆ ಸರ್ಕಾರ ಶೇ 20 ಸಬ್ಸಿಡಿ ನೀಡುತ್ತಿದೆ. ಬೆಂಗಳೂರು ಹೊರತಾಗಿಸಿ ಇತರೆಡೆ ಎಂಜಿನಿಯರಿಂಗ್ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ ₹ 600 ಕೋಟಿ ಮೀಸಲಿಟ್ಟಿದೆ' ಎಂದು ಐಟಿ, ಬಿಟಿ, ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣ ಹೇಳಿದರು.

ನಗರದಲ್ಲಿ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) 'ಬಿಯಾಂಡ್ ಬೆಂಗಳೂರು' ಅಭಿಯಾನದಡಿಯಲ್ಲಿ ಸೋಮವಾರ ಆಯೋಜಿಸಿದ್ದ 'ದಿ ಬಿಗ್ ಟೆಕ್ ಷೋ' ಉದ್ಘಾಟಿಸಿ ಮಾತನಾಡಿದ ಅವರು, 'ಐಟಿ, ಬಿಟಿ ಉದ್ಯೋಗಗಳು ಎಲ್ಲ ನಗರಗಳಲ್ಲಿ ದೊರೆಯಲೆಂದೇ ಭೂಸುಧಾರಣಾ ಕಾಯ್ದೆ ಮತ್ತು ಕೃಷಿ ತಿದ್ದುಪಡಿ ಕಾಯ್ದೆಗಳನ್ನು ತರಲಾಗಿದೆ. ಶೇ 50ರಷ್ಟು ಕೃಷಿ ಆಧಾರಿತ ಉದ್ಯಮಗಳು ರಾಜ್ಯದಲ್ಲಿವೆ. ರೈತರು, ಪ್ರತಿಭಾನ್ವಿತ ವಿದ್ಯಾರ್ಥಿಗಳು ತಂತ್ರಜ್ಞಾನ ಆಧಾರಿತ ಉದ್ಯಮ ವಿಸ್ತರಣೆಯ ಪ್ರಯೋಜನ ಪಡೆಯಲಿದ್ದಾರೆ. ಎಲ್ಲ ಪದವಿಗಳಲ್ಲಿ ತಾಂತ್ರಿಕ ಶಿಕ್ಷಣದ ವಿಷಯವನ್ನು ಕಡ್ಡಾಯಗೊಳಿಸಲು ಚಿಂತಿಸಲಾಗಿದೆ' ಎಂದರು.

ಮೈಸೂರಿನಲ್ಲಿ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) 'ಬಿಯಾಂಡ್ ಬೆಂಗಳೂರು' ಅಭಿಯಾನದಡಿಯಲ್ಲಿ ಸೋಮವಾರ ಆಯೋಜಿಸಿದ್ದ 'ದಿ ಬಿಗ್ ಟೆಕ್ ಶೋ' ಕಾರ್ಯಕ್ರಮವನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್‌.ಅಶ್ವತ್ಥ ನಾರಾಯಣ ಉದ್ಘಾಟಿಸಿದರು. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ನಿರ್ದೇಶಕಿ ಮೀನಾ ನಾಗರಾಜ್, ಜಿಲ್ಲಾಧಿಕಾರಿ ಬಗಾದಿ ಗೌತಮ್, ರಾಜ್ಯ ಐಟಿ ಬಿಟಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣ ರೆಡ್ಡಿ, ವಿಧಾನ ಪರಿಷತ್ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮೇಯರ್ ಸುನಂದಾ ಫಾಲನೇತ್ರ, ಕೆಡಿಇಎಂ ಮುಖ್ಯಸ್ಥ ಬಿ.ವಿ.ನಾಯ್ಡು ಇದ್ದರು

> **ರಾಜ್ಯದ ನವೋದ್ಯಮಗಳಿಗೆ ಶೇ 90ರಷ್ಟು ವಿದೇಶಿ ಹೂಡಿಕೆ ಇದೆ. ಸ್ಥಳೀಯರೂ ಬಂಡವಾಳ ಹೂಡಿದರೆ, ಆರ್ಥಿಕತೆಗೆ ವೇಗ ಸಿಗಲಿದೆ**
> **ಡಾ.ಸಿ.ಎನ್.ಅಶ್ವತ್ಥ ನಾರಾಯಣ,** ಐಟಿ, ಬಿಟಿ, ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವ

> **ರಾಜ್ಯವು 2025ರ ವೇಳೆಗೆ ಡಿಜಿಟಲ್ ಆರ್ಥಿಕತೆಯಲ್ಲಿ ₹ 2.25 ಲಕ್ಷ ಕೋಟಿ ವಹಿವಾಟು ಗುರಿಯನ್ನು ಸಾಧಿಸಬೇಕು**
> **ರಾಜೀವ್ ಚಂದ್ರಶೇಖರ್,** ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಖಾತೆ ರಾಜ್ಯ ಸಚಿವ

ಮುಖ್ಯಾಂಶಗಳು

- ಉದ್ಯಮ ಕ್ಷೇತ್ರಕ್ಕೆ ಪೂರಕವಾಗಿ ಶಿಕ್ಷಣ ವ್ಯವಸ್ಥೆ ಸುಧಾರಣೆ
- ಕಂಪನಿಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸಲು ಸರ್ಕಾರ ಬದ್ಧ

'ತಂತ್ರಜ್ಞಾನ ವಹಿವಾಟು ಮತ್ತು ರಫ್ತಿನಲ್ಲಿ ರಾಜ್ಯವು ಮೊದಲ ಸ್ಥಾನದಲ್ಲಿದ್ದು ಉದ್ಯಮವನ್ನು ವಿಸ್ತರಿಸಲು ಮೈಸೂರು, ಮಂಗಳೂರು ಮತ್ತು ಹುಬ್ಬಳ್ಳಿ-ಧಾರವಾಡ ಪ್ರಶಸ್ತವಾಗಿದೆ. ರಾಜ್ಯದ ಎರಡನೇ ಹಾಗೂ ಮೂರನೇ ಶ್ರೇಣಿಯ ನಗರಗಳಲ್ಲಿ ಹೂಡಿಕೆ ಮಾಡಲು ಉತ್ಸುಕವಾಗಿರುವ ಜಾಗತಿಕ ಕಂಪನಿಗಳಿಗೆ ಸೌಲಭ್ಯ ಒದಗಿಸಲು ಸರ್ಕಾರ ಬದ್ಧವಾಗಿದೆ' ಎಂದು ತಿಳಿಸಿದರು.

ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಐ.ಟಿ. ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ವರ್ಚುವಲ್ ಮೂಲಕ ಮಾತನಾಡಿದರು. ಕೆಡಿಇಎಂ ಜೊತೆ ಭೇರುಂಡ ಫೌಂಡೇಶನ್, ಐಎಸ್‌ಎಸಿ ಹಾಗೂ ಕೆಟಿಎಸ್ ಜೊತೆ ಎಂಒಯು ಒಪ್ಪಂದ ಮಾಡಿಕೊಂಡವು.

ಚೇತರಿಕೆ ಹಾದಿಗೆ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಸೋಮವಾರದ ವಹಿವಾಟಿನಲ್ಲಿ ನಾಲ್ಕು ದಿನಗಳ ನಕಾರಾತ್ಮಕ ಚಲನೆಯಿಂದ ಹೊರಬಂದವು.

ಮುಂಬೈ ಷೇರುಪೇಟೆಯು ವಹಿವಾಟಿನ ಆರಂಭದಲ್ಲಿ ಇಳಿಮುಖವಾಗಿತ್ತು. ಆ ಬಳಿಕ ಚೇತರಿಕೆ ಹಾದಿಗೆ ಮರಳಿ 146 ಅಂಶ ಹೆಚ್ಚಾಗಿ 60,967 ಅಂಶಗಳಿಗೆ ತಲುಪಿತು. ಬಿಎಸ್‌ಇ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇ 1.76ರವರೆಗೂ ಇಳಿಕೆ ಕಂಡಿವೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 11 ಅಂಶ ಹೆಚ್ಚಾಗಿ 18,125 ಅಂಶಗಳಿಗೆ ತಲುಪಿತು.

ಐಸಿಐಸಿಐ ಬ್ಯಾಂಕ್ ಷೇರು ಮೌಲ್ಯವು ಶೇ 10.80ರಷ್ಟು ಏರಿಕೆ ಕಂಡಿತು. ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್ ನಿವ್ವಳ ಲಾಭವು ₹ 5,511 ಕೋಟಿಗೆ ತಲುಪಿರುವುದು ಬ್ಯಾಂಕ್‌ನ ಷೇರು ಮೌಲ್ಯ ಹೆಚ್ಚಳಕ್ಕೆ ಕಾರಣ ಆಗಿದೆ.

ಷೇರುಪೇಟೆಯ ವಹಿವಾಟು ಮಂದಗತಿಯಲ್ಲಿ ಆರಂಭ ಆಯಿತು. ಬಳಿಕ ಬ್ಯಾಂಕಿಂಗ್ ವಲಯದ ಷೇರುಗಳ ಬೆಂಬಲದಿಂದಾಗಿ ವಹಿವಾಟು ಚೇತರಿಕೆ ಹಾದಿಗೆ ಮರಳಿತು ಎಂದು ಜಿಯೋಜಿತ್ ಹಣಕಾಸು ಸೇವೆಗಳ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ರೂಪಾಯಿ ಮೌಲ್ಯ 18 ಪೈಸೆ ಇಳಿಕೆ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 18 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹ 75.08ಕ್ಕೆ ತಲುಪಿದೆ. ಕಚ್ಚಾ ತೈಲ ದರ ಏರಿಕೆ ಹಾಗೂ ಅಮೆರಿಕದ ಡಾಲರ್ ಮೌಲ್ಯ ವೃದ್ಧಿಯಿಂದ ರೂಪಾಯಿ ಮೌಲ್ಯ ಇಳಿಕೆ ಕಂಡಿದೆ.

ಪಶ್ಚಿಮ ಬಂಗಾಳದ ರಾಜ್ಯಪಾಲ ಏಮ್ಸ್‌ಗೆ ದಾಖಲು

ನವದೆಹಲಿ (ಪಿಟಿಐ): 'ಪಶ್ಚಿಮ ಬಂಗಾಳದ ರಾಜ್ಯಪಾಲ ಜಗದೀಪ್ ಧನಕರ್ ಅವರನ್ನು ಸೋಮವಾರ ಮಧ್ಯಾಹ್ನ ಇಲ್ಲಿನ ಏಮ್ಸ್‌ಗೆ ದಾಖಲಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಧನಕರ್ ಅವರು ಮಲೇರಿಯಾದಿಂದ ಬಳಲುತ್ತಿದ್ದು, ಏಮ್ಸ್‌ನ ಹಳೆಯ ಖಾಸಗಿ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವೈದ್ಯಕೀಯ ವಿಭಾಗದ ಹೆಚ್ಚುವರಿ ಪ್ರಾಧ್ಯಾಪಕ ಡಾ. ನೀರಜ್ ನಿಶ್ಚಲ್ ಅವರು ರಾಜ್ಯಪಾಲರ ಆರೋಗ್ಯದ ಮೇಲೆ ನಿಗಾವಹಿಸಿದ್ದಾರೆ.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕೊಹ್ಲಿ ಬಳಗದ ಬೌಲರ್‌ಗೆ ಹಲವರಿಂದ ಬೆಂಬಲ: ಪಾಕಿಸ್ತಾನದಲ್ಲಿ ಜಯದ ಸಂಭ್ರಮ

ಮೊಹಮ್ಮದ್ ಶಮಿ ವಿರುದ್ಧ ಟೀಕೆಗಳ ಮಳೆ

ನವದೆಹಲಿ / ದುಬೈ / ಶಾರ್ಜಾ (ಎಎಫ್‌ಪಿ/ಪಿಟಿಐ): ಭಾರತವನ್ನು ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಬಾಬರ್ ಆಜಂ ಬಳಗ ಮಣಿಸಿದ ಹಿನ್ನೆಲೆಯಲ್ಲಿ ಪಾಕಿಸ್ತಾನದಲ್ಲಿ ಭಾನುವಾರ ರಾತ್ರಿ ಆರಂಭಗೊಂಡಿದ್ದ ಸಂಭ್ರಮ ಸೋಮವಾರವೂ ಮುಂದುವರಿದಿದೆ. ಇದೇ ವೇಳೆ ವಿರಾಟ್ ಕೊಹ್ಲಿ ಬಳಗದ ವಿರುದ್ಧ ಭಾರತದಲ್ಲಿ ಆನ್‌ಲೈನ್ ದಾಳಿ ನಡೆದಿದೆ. ತಂಡದ ವೇಗದ ಬೌಲರ್ ಮೊಹಮ್ಮದ್ ಶಮಿ ಅವರನ್ನು ನಿಂದಿಸಲಾಗಿದೆ.

ಮೊಹಮ್ಮದ್ ಶಮಿ

ಭಾನುವಾರ ರಾತ್ರಿ ನಡೆದ ಸೂಪರ್ 12 ಹಂತದ ಎರಡನೇ ಗುಂಪಿನ ಪಂದ್ಯದಲ್ಲಿ ಪಾಕಿಸ್ತಾನ 10 ವಿಕೆಟ್‌ಗಳ ಜಯ ಸಾಧಿಸಿತ್ತು. ಇದು, ವಿಶ್ವಕಪ್ ಒಂದರಲ್ಲಿ ಭಾರತದ ವಿರುದ್ಧ ಪಾಕಿಸ್ತಾನ ಗಳಿಸಿದ ಮೊದಲ ಜಯವಾಗಿತ್ತು. 29 ವರ್ಷಗಳಲ್ಲಿ 12 ಬಾರಿ ಮುಖಾಮುಖಿಯಾದಾಗಲೂ ಗೆಲುವು ಭಾರತದ್ದಾಗಿತ್ತು. ಈ ಜಯದೊಂದಿಗೆ ತಂಡವು ವಿಶ್ವಕಪ್ ಅನ್ನೇ ಗೆದ್ದಿದೆ ಎಂಬ ಪ್ರತೀತಿ ಪಾಕಿಸ್ತಾನದ ಅಭಿಮಾನಿಗಳಲ್ಲಿ ಉಂಟಾಗಿದೆ. ಐತಿಹಾಸಿಕ ಗೆಲುವು ತಂದುಕೊಟ್ಟ ನಾಯಕ ಬಾಬರ್ ಆಜಂ, ಭಾರತದ ಬ್ಯಾಟರ್‌ಗಳನ್ನು ಕಂಗೆಡಿಸಿದ ವೇಗಿ ಶಾಹೀನ್ ಶಾ ಅಫ್ರಿದಿ ಮತ್ತು ದಿಟ್ಟ ಬ್ಯಾಟಿಂಗ್ ಮಾಡಿದ ವಿಕೆಟ್ ಕೀಪರ್ ರಿಜ್ವಾನ್ ಅಹಮ್ಮದ್ ಬಗ್ಗೆ ಪಾಕಿಸ್ತಾನದಲ್ಲಿ ಅಭಿಮಾನದ ಹೊಳೆ ಹರಿದಿದೆ.

> ತಂಡಕ್ಕೆ ಅಭಿನಂದನೆಗಳು. ಈ ಗೆಲುವಿನಲ್ಲಿ ಬಾಬರ್ ಆಜಂ, ಮೊಹಮ್ಮದ್ ರಿಜ್ವಾನ್ ಮತ್ತು ಶಾಹೀನ್ ಶಾ ಅಫ್ರಿದಿ ವಹಿಸಿದ ಪಾತ್ರ ಮಹತ್ವದ್ದು. **ಇಮ್ರಾನ್ ಖಾನ್** ಪಾಕಿಸ್ತಾನ ಪ್ರಧಾನಮಂತ್ರಿ

ಪಂದ್ಯದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ನಾಯಕ ವಿರಾಟ್ ಕೊಹ್ಲಿ ಅವರು ಭಾರತಕ್ಕೆ ನಿರೀಕ್ಷೆಗೆ ತಕ್ಕ ಆಟ ಆಡಲು ಆಗಲಿಲ್ಲ ಎಂದು ಒಪ್ಪಿಕೊಂಡಿದ್ದರು. ಆದರೂ ಬದ್ಧ ರಾಜಕೀಯ ವೈರಿ ಪಾಕಿಸ್ತಾನದ ಕ್ರಿಕೆಟ್ ತಂಡದ ವಿರುದ್ಧ ಮೊದಲ ಸೋಲಿಗೆ ಮೊಹಮ್ಮದ್ ಶಮಿ ಅವರೇ ಪ್ರಮುಖ ಕಾರಣ ಎಂದು ಕೆಲವರು ಕಿಡಿಕಾರಿದ್ದಾರೆ. ಅವರ ಇನ್‌ಸ್ಟಾಗ್ರಾಂ ಖಾತೆಗೆ ಸಂದೇಶಗಳು ಪ್ರವಾಹೋಪಾದಿಯಲ್ಲಿ ಹರಿದು ಬಂದಿದ್ದು ಕೆಲವರು 'ಮೋಸಗಾರ' ಎಂದು ದೂರಿದ್ದಾರೆ.

ಇದೇ ವೇಳೆ ಶಮಿ ಪರವಾಗಿಯೂ ಅನೇಕರು ಮಾತನಾಡಿದ್ದಾರೆ. ತಂಡದ ಸೋಲಿಗೆ ಅವರನ್ನು ದೂರುವುದು ಸರಿಯಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ. ಶಮಿ ಅವರಿಗೆ ಬೆಂಬಲ ನೀಡಲು ನಾಗರಿಕ ಸಮಾಜ ಮುಂದಾಗಬೇಕು ಎಂದು ಆಗ್ರಹಿಸಿದ್ದಾರೆ. ಕಪ್ಪುವರ್ಣೀಯರ ಬಗ್ಗೆ ಕಾಳಜಿ ವಹಿಸಿ ಪಂದ್ಯದ ಆರಂಭಕ್ಕೂ ಮೊದಲು ಮೊಣಕಾಲೂರಿದ ಆಟಗಾರರು ತಂಡದ ಸದಸ್ಯನೊಬ್ಬನ ಬಗ್ಗೆ ಟೀಕೆಗಳು ಬಂದಾಗ ಎದ್ದು ನಿಲ್ಲಲು ಸಾಧ್ಯವಿಲ್ಲವೇ ಎಂದು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲ ಟ್ವೀಟ್ ಮೂಲಕ ಪ್ರಶ್ನಿಸಿದ್ದಾರೆ.

ಪಂದ್ಯದ ನಂತರ ಪಾಕಿಸ್ತಾನ ಆಟಗಾರರು ಸೆಲ್ಫಿ ತೆಗೆದು ಸಂಭ್ರಮಿಸಿದರು

ಪಟಾಕಿ ಸಿಡಿಸಿ, ಗುಂಡು ಹಾರಿಸಿ ಸಂಭ್ರಮ: ಪಾಕಿಸ್ತಾನದಲ್ಲಿ ಅಭಿಮಾನಿಗಳು ಪಟಾಕಿ ಸಿಡಿಸಿ, ಕೆಲವು ಕಡೆಗಳಲ್ಲಿ ಗುಂಡು ಹಾರಿಸಿ ಸಂತಸ ವ್ಯಕ್ತಪಡಿಸಿದ್ದಾರೆ. ಕಾಶ್ಮೀರ ಸೇರಿದಂತೆ ಭಾರತದಲ್ಲೂ ಕೆಲವು ಕಡೆಗಳಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸಲಾಗಿದೆ. ಇದಕ್ಕೆ ಪ್ರತಿಕ್ರಿಯಿಸಿರುವ ಲೋಕಸಭಾ ಸದಸ್ಯ ಬಿಜೆಪಿಯ ಗೌತಮ್ ಗಂಭೀರ್ 'ನಾಚಿಕೆಗೇಡಿನ ವಿಷಯ' ಎಂದಿದ್ದಾರೆ.

ರೋಹಿತ್ ಶರ್ಮಾ ಕೈಬಿಡಬೇಕೇ...?


ವಿರಾಟ್ ಕೊಹ್ಲಿ

ಪಂದ್ಯದ ನಂತರ ಪತ್ರಿಕಾಗೋಷ್ಠಿಯಲ್ಲಿ, ರೋಹಿತ್ ಶರ್ಮಾ ಅವರ ಫಾರ್ಮ್ ಬಗ್ಗೆ ತೂರಿಬಂದ ಪ್ರಶ್ನೆಗೆ ಉತ್ತರಿಸಿದ ನಾಯಕ ವಿರಾಟ್ ಕೊಹ್ಲಿ 'ನೀವು ರೋಹಿತ್ ಶರ್ಮಾ ಅವರನ್ನು ತಂಡದಿಂದ ಕೈಬಿಡಬೇಕು ಎಂದು ಬಯಸುತ್ತೀರಾ' ಎಂದು ಮರುಪ್ರಶ್ನೆ ಹಾಕಿದ್ದಾರೆ.

ರೋಹಿತ್ ಬದಲಿಗೆ ಇಶಾನ್ ಕಿಶನ್ ಅವರಿಗೆ ಸ್ಥಾನ ನೀಡಬಾರದೇ ಎಂಬ ಪ್ರಶ್ನೆಗೆ ಜೋರಾಗಿ ನಕ್ಕು ತಲೆ ತಗ್ಗಿಸಿ 'ಇದು ಅನಿರೀಕ್ಷಿತ ಪ್ರಶ್ನೆ ಮತ್ತು ಸಲಹೆ.ನಾವು ಆಡಿದ ಕೊನೆಯ ಪಂದ್ಯದಲ್ಲಿ ರೋಹಿತ್ ಕಾಣಿಕೆ ಏನೆಂಬುದು ನಿಮಗೆ ಗೊತ್ತಿಲ್ಲವೇ? ನನ್ನಿಂದ ನಂಬಲು ಸಾಧ್ಯವಾಗುತ್ತಿಲ್ಲ, ಹಾಗೇನೇನಾದರೂ ವಿವಾದ ಸೃಷ್ಟಿಸುವ ಉದ್ದೇಶವಿದ್ದರೆ ಮೊದಲೇ ಹೇಳಿಬಿಡಿ. ಅದಕ್ಕೆ ತಕ್ಕಂತೆ ಉತ್ತರಿಸುತ್ತೇನೆ' ಎಂದು ಕೊಹ್ಲಿ ಸಿಡಿಮಿಡಿಗೊಂಡರು.

ವೀರೇಂದ್ರ ಸೆಹ್ವಾಗ್ ದಿಗ್ಭ್ರಮೆ

ಮೊಹಮ್ಮದ್ ಶಮಿ ಮೇಲಿನ ಆನ್‌ಲೈನ್ ದಾಳಿಗೆ ಮಾಜಿ ಕ್ರಿಕೆಟಿಗ ವೀರೇಂದ್ರ ಸೆಹ್ವಾಗ್ ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ. ಶಮಿ ಅವರಿಗೆ ಬೆಂಬಲ ವ್ಯಕ್ತಪಡಿಸಿರುವ ಸೆಹ್ವಾಗ್ 'ನಾವೆಲ್ಲ ಶಮಿ ಅವರೊಂದಿಗಿದ್ದೇವೆ. ಅವರೊಬ್ಬ ಚಾಂಪಿಯನ್ ಆಟಗಾರ ಆಗಿದ್ದಾರೆ. ಭಾರತದ ಜೆರ್ಸಿ ತೊಟ್ಟು ಆಡುವ ಪ್ರತಿಯೊಬ್ಬರ ಮನದಲ್ಲೂ ಭಾರತ ಇರುತ್ತದೆ. ಆದ್ದರಿಂದ ಆನ್‌ಲೈನ್ ಮೂಲಕ ನಡೆಸುವ ಆಕ್ರಮಣಕ್ಕೆ ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಮುಂದಿನ ಪಂದ್ಯದಲ್ಲಿ ನಿಮ್ಮ ಸಾಮರ್ಥ್ಯ ತೋರಿಸಿ ಶಮಿ' ಎಂದು ಸೆಹ್ವಾಗ್ ಟ್ವೀಟ್ ಮಾಡಿದ್ದಾರೆ. ಹರಭಜನ್ ಸಿಂಗ್, ಯಜುವೇಂದ್ರ ಚಾಹಲ್, ಆರ್.ಪಿ.ಸಿಂಗ್ ಮೊದಲಾದವರು ಕೂಡ ಶಮಿ ಪರವಾಗಿ ಟ್ವೀಟ್ ಮಾಡಿದ್ದಾರೆ.

ಮೊಹಮ್ಮದ್ ರಿಜ್ವಾನ್– ಎಎಫ್‌ಪಿ ಚಿತ್ರ

ಟ್ವೆಂಟಿ–20ಯಲ್ಲಿ ಮುಖಾಮುಖಿ

ಪಂದ್ಯಗಳು		24
ತಂಡ	ರ‍್ಯಾಂಕಿಂಗ್	ಜಯ
ಪಾಕಿಸ್ತಾನ	3	14
ನ್ಯೂಜಿಲೆಂಡ್	4	10

ವಿಶ್ವಕಪ್‌ನಲ್ಲಿ ಬಲಾಬಲ

ತಂಡ	ಪಂದ್ಯ	ಜಯ	ಸೋಲು	ಟೈ
ಪಾಕಿಸ್ತಾನ	35	20	14	1
ನ್ಯೂಜಿಲೆಂಡ್	30	15	13	2

ಆರಂಭ: ರಾತ್ರಿ 7.30 (ಭಾರತೀಯ ಕಾಲಮಾನ)

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಇಂದು ನ್ಯೂಜಿಲೆಂಡ್ ಪಾಕಿಸ್ತಾನ ಹಣಾಹಣಿ

ಕೇನ್ ವಿಲಿಯಮ್ಸನ್– ರಾಯಿಟರ್ಸ್ ಚಿತ್ರ

ಮಂಗಳವಾರ ನಡೆಯಲಿರುವ ಪಂದ್ಯದಲ್ಲಿ ಪಾಕಿಸ್ತಾನ ತಂಡ ನ್ಯೂಜಿಲೆಂಡ್ ವಿರುದ್ಧ ಸೆಣಸಲಿದೆ. ಈಚೆಗೆ ಕ್ರಿಕೆಟ್ ಸರಣಿ ಆಡಲು ಬಂದು ಭದ್ರತೆಯ ನೆಪ ಹೇಳಿ ದಿಢೀರ್ ವಾಪಸ್ ಹೋದ ನ್ಯೂಜಿಲೆಂಡ್ ಕ್ರಮದಿಂದ ಪಾಕಿಸ್ತಾನಕ್ಕೆ ಮುಖಭಂಗವಾಗಿತ್ತು. ಇದರ ಸೇಡು ತೀರಿಸಿಕೊಳ್ಳುವ ಹಂಬಲವೂ ಬಾಬರ್ ಆಜಂ ಬಳಗಕ್ಕೆ ಇದೆ. ನ್ಯೂಜಿಲೆಂಡ್ ವಾಪಸ್ ಹೋದ ಕಾರಣ ಪಾಕ್ ತಂಡದ ವಿಶ್ವಕಪ್ ಸಿದ್ಧತೆಯ ಮೇಲೆಯೂ ದುಷ್ಪರಿಣಾಮ ಉಂಟಾಗಿತ್ತು.

ಬೌಲಿಂಗ್ ಮತ್ತು ಬ್ಯಾಟಿಂಗ್ ವಿಭಾಗದಲ್ಲಿ ಪಾಕಿಸ್ತಾನ ಈಗ ಬಲಿಷ್ಠವಾಗಿದೆ. ಹೀಗಾಗಿ ಕೇನ್ ವಿಲಿಯಮ್ಸನ್ ಪಡೆಗೆ ಈ ಪಂದ್ಯ ಕಠಿಣ ಸವಾಲು ಆಗುವ ಸಾಧ್ಯತೆ ಇದೆ. ಅಭ್ಯಾಸ ಪಂದ್ಯಗಳಲ್ಲಿ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ವಿರುದ್ಧ ನ್ಯೂಜಿಲೆಂಡ್ ಸೋತಿತ್ತು.

ಗುರ್ಬಾಜ್–ನಜೀಬುಲ್ಲಾ ಭರ್ಜರಿ ಬ್ಯಾಟಿಂಗ್; ರಶೀದ್‌ಗೆ ನಾಲ್ಕು ವಿಕೆಟ್

ಮುಜೀಬ್ ಮ್ಯಾಜಿಕ್; ಅಫ್ಗಾನಿಸ್ತಾನ ಜಯಭೇರಿ

ಶಾರ್ಜಾ (ಎಎಫ್‌ಪಿ): ಚುಟುಕು ಕ್ರಿಕೆಟ್‌ನಲ್ಲಿ ಜೀವನಶ್ರೇಷ್ಠ ಬೌಲಿಂಗ್ ಸಾಧನೆ ಮಾಡಿದ ಮುಜೀಬ್ ಉರ್ ರಹಮಾನ್ ಅವರ ಅಮೋಘ ದಾಳಿಯ ನೆರವಿನಿಂದ ಅಫ್ಗಾನಿಸ್ತಾನ ತಂಡ ಸ್ಕಾಟ್ಲೆಂಡ್ ವಿರುದ್ಧ 130 ರನ್‌ಗಳ ಜಯ ಸಾಧಿಸಿತು.

ಶಾರ್ಜಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಎರಡನೇ ಗುಂಪಿನ ಪಂದ್ಯದಲ್ಲಿ ಅಫ್ಗಾನಿಸ್ತಾನ ಮುಂದಿಟ್ಟ 191 ರನ್‌ಗಳ ಗೆಲುವಿನ ಗುರಿಬೆನ್ನತ್ತಿದ ಸ್ಕಾಟ್ಲೆಂಡ್ 60 ರನ್‌ಗಳಿಗೆ ಆಲೌಟಾಯಿತು. 20 ರನ್‌ಗಳಿಗೆ ಐದು ವಿಕೆಟ್ ಉರುಳಿಸಿದ ಮುಜೀಬ್ ಮತ್ತು ಒಂಬತ್ತಕ್ಕೆ ನಾಲ್ಕು ವಿಕೆಟ್ ಕಬಳಿಸಿದ ರಶೀದ್ ಖಾನ್ 10.2 ಓವರ್‌ಗಳಲ್ಲಿ ಸ್ಕಾಟ್ಲೆಂಡ್ ಇನಿಂಗ್ಸ್‌ಗೆ ಅಂತ್ಯ ಹಾಡಿದರು. ಐದು ಮಂದಿ ಬ್ಯಾಟರ್‌ಗಳು ಶೂನ್ಯಕ್ಕೆ ಔಟಾದರೆ, ಮೂವರು ಮಾತ್ರ ಎರಡಂಕಿ ಮೊತ್ತ ದಾಟಿದರು.

ನಜೀಬುಲ್ಲಾ ಜದ್ರಾನ್ –ಪಿಟಿಐ ಚಿತ್ರ

ಸತತ ಎರಡು ಎಸೆತಗಳಲ್ಲಿ ಎರಡು ವಿಕೆಟ್ ಸೇರಿದಂತೆ ಒಂದೇ ಓವರ್‌ನಲ್ಲಿ ಮೂರು ವಿಕೆಟ್ ಉರುಳಿಸಿದ ಮುಜೀಬ್ ತಂಡಕ್ಕೆ ಟ್ವೆಂಟಿ–20 ಕ್ರಿಕೆಟ್‌ನಲ್ಲಿ ಅತಿ ದೊಡ್ಡ ಅಂತರದ ಜಯದ ಕೊಡುಗೆ ನೀಡಿದರು.

ಅಫ್ಗಾನ್ ಬ್ಯಾಟರ್‌ಗಳ ಅಬ್ಬರ: ಟಾಸ್ ಗೆದ್ದ ಅಫ್ಗಾನಿಸ್ತಾನ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತ್ತು. ಆರಂಭಿಕ ಜೋಡಿ ಹಜರತ್ ಉಲ್ಲಾ ಜಜೈ ಮತ್ತು ಮೊಹಮ್ಮದ್ ಶೆಹಜಾದ್ ಅವರ ಅಬ್ಬರದ ಬೆನ್ನಲ್ಲೇ ಮಿಂಚಿದ ರಹಮಾನುಲ್ಲ ಗುರ್ಬಾಜ್ ಮತ್ತು ನಜೀಬುಲ್ಲಾ ಜದ್ರಾನ್ ಅವರ ಅಮೋಘ ಬ್ಯಾಟಿಂಗ್ ಬಲದಿಂದಾಗಿ ಅಫ್ಗಾನಿಸ್ತಾನ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 190 ರನ್ ಕಲೆ ಹಾಕಿತು.

ಆರಂಭದ ಕೆಲವು ಎಸೆತಗಳನ್ನು ತಾಳ್ಮೆಯಿಂದ ಎದುರಿಸಿದ ಹಜರತ್ ಉಲ್ಲಾ ಜಜೈ ಮತ್ತು ಮೊಹಮ್ಮದ್ ಶೆಹಜಾದ್ ನಂತರ ಬೌಂಡರಿಗಳನ್ನು ಗಳಿಸಲು ಶುರು ಮಾಡಿದರು. 35 ಎಸೆತಗಳಲ್ಲಿ 54 ರನ್ ಕಲೆ ಹಾಕಿದರು. ಷರೀಫ್ ಎಸೆತದಲ್ಲಿ ಮೊಹಮ್ಮದ್ ಶೆಹಜಾದ್ ಔಟಾದರು. ಈ ಸಂದರ್ಭದಲ್ಲಿ ಜಜೈ ಜೊತೆಗೂಡಿದ ಗುರ್ಬಜ್ ರನ್ ಗಳಿಕೆಯ ವೇಗ ಹೆಚ್ಚಿಸಿದರು.

30 ಎಸೆತಗಳಲ್ಲಿ ತಲಾ ಮೂರು ಸಿಕ್ಸರ್ ಮತ್ತು ಬೌಂಡರಿ ಸಿಡಿಸಿದ ಜಜೈ 44 ರನ್ ಗಳಿಸಿ ಔಟಾದರು. ನಂತರ ಗುರ್ಬಾಜ್ ಮತ್ತು ಜದ್ರಾನ್ ಜೋಡಿ ಸ್ಫೋಟಕ ಬ್ಯಾಟಿಂಗ್ ಮೂಲಕ ಬೌಲರ್‌ಗಳನ್ನು ಕಂಗೆಡಿಸಿದರು. ಮೂರನೇ ವಿಕೆಟ್‌ಗೆ ಇವರಿಬ್ಬರು 87 ರನ್ ಕಲೆ ಹಾಕಿದರು. ಕೊನೆಯ ಓವರ್‌ಗಳಲ್ಲಿ ಜದ್ರಾನ್ ಮತ್ತಷ್ಟು ಆಕ್ರಮಣಕಾರಿಯಾದರು. ಐದು ಬೌಂಡರಿ ಮತ್ತು ಮೂರು ಸಿಕ್ಸರ್‌ಗಳು ಅವರ ಬ್ಯಾಟಿನಿಂದ ಹರಿದು ಬಂದವು.

ಮುಜೀಬ್ ಉರ್ ರಹಮಾನ್ ಸಂಭ್ರಮ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಅಫ್ಗಾನಿಸ್ತಾನ 4ಕ್ಕೆ 190 (20 ಓವರ್)
ಜಜೈ ಬಿ ವ್ಯಾಟ್ 44 (30 ಎ, 4x3, 6x3), ಶೆಹಜಾದ್ ಸಿ ಗ್ರೀವ್ಸ್ ಬಿ ಷರೀಫ್ 22 (15 ಎ, 4x2, 6x1), ಗುರ್ಬಾಜ್ ಸಿ ಕೊಯೆಟ್ಜರ್ ಬಿ ಡೇವಿ 46 (37 ಎ, 4x1, 6x4), ನಜೀಬುಲ್ಲ ಸಿ ವ್ಹೀಲ್ ಬಿ ಷರೀಫ್ 59 (34 ಎ, 4x5, 6x3), ನಬಿ ಔಟಾಗದೆ 11 (4ಎ, 4x5)
ಇತರೆ (ಲೆಗ್ ಬೈ 3, ವೈಡ್ 5) 8
ವಿಕೆಟ್ ಪತನ: 1-54 (ಮೊಹಮ್ಮದ್ ಶೆಹಜಾದ್, 5.5), 2-82 (ಹಜರತ್ ಉಲ್ಲಾ ಜಜೈ, 9.5), 3-169 (ರಹಮಾನುಲ್ಲಾ ಗುರ್ಬಜ್, 18.3), 4-190 (ನಜೀಬುಲ್ಲ ಜದ್ರಾನ್, 19.6)
ಬೌಲಿಂಗ್: ಬ್ರಾಡ್ ವ್ಹೀಲ್ 4–0–42–0, ಮೈಕೆಲ್ ಲೀಸ್ಕ್ 1–0–18–0, ಸಫಿಯಾನ್ ಷರೀಫ್ 4–0–33–2, ಜೋಶ್ ಡೇವಿ 4–0–41–1, ಮಾರ್ಕ್ ವ್ಯಾಟ್ 4–0–23–1, ಕ್ರಿಸ್ ಗ್ರೀವ್ಸ್ 3–0–30–0

ಸ್ಕಾಟ್ಲೆಂಡ್ 60 (10.2 ಓವರ್)
ಮುನ್ಸಿ ಬಿ ಮುಜೀಬ್ 25 (18ಎ, 4X2, 6X2), ಕೊಯಿಟ್ಜರ್ ಬಿ ಮುಜೀಬ್ 10 (7ಎ, 4X2), ಕ್ಯಾಲಮ್ ಎಲ್‌ಬಿಡಬ್ಲ್ಯು ಮುಜೀಬ್ 0 (1ಎ), ಬೆರಿಂಗ್ಟನ್ ಎಲ್‌ಬಿಡಬ್ಲ್ಯು ಮುಜೀಬ್ 0 (3ಎ), ಮ್ಯಾಥ್ಯು ಸಿ ಶಹಜಾದ್ ಬಿ ನವೀನ್ ಉಲ್ ಹಕ್ 0 (1ಎ), ಲೀಸ್ಕ್ ಎಲ್‌ಬಿಡಬ್ಲ್ಯು ರಶೀದ್ 0 (5ಎ), ಗ್ರೀವ್ಸ್ ಎಲ್‌ಬಿಡಬ್ಲ್ಯು ರಶೀದ್ 12 (12ಎ, 4X1), ವ್ಯಾಟ್ ಬಿ ಮುಜೀಬ್ 1 (3ಎ), ಡೇವಿ ಎಲ್‌ಬಿಡಬ್ಲ್ಯು ರಶೀದ್ 4 (7ಎ), ಸಫಿಯಾನ್ ಔಟಾಗದೆ 3 (4ಎ), ಬ್ರಾಡ್ ಬಿ ರಶೀದ್ 0 (1ಎ)
ಇತರೆ (ಲೆಗ್‌ಬೈ 2, ವೈಡ್ 3) 5
ವಿಕೆಟ್ ಪತನ: 1–28 (ಕೈಲ್ ಕೊಯಿಟ್ಜರ್, 3.2), 2–28 (ಕ್ಯಾಲಮ್ ಮೆಕ್‌ಲೋಡ್, 3.3), 3–28 (ರಿಚಿ ಬೆರಿಂಗ್ಟನ್, 3.6), 4–30 (ಮ್ಯಾಥ್ಯು ಕ್ರಾಸ್, 4.3), 5–36 (ಜಾರ್ಜ್ ಮುನ್ಸಿ, 5.3), 6–38 (ಮೈಕೆಲ್ ಲೀಸ್ಕ್, 6.3), 7–45 (ಮಾರ್ಕ್ ವ್ಯಾಟ್, 7.5), 8–53 (ಕ್ರಿಸ್ ಗ್ರೀವ್ಸ್, 8.5), 9–60 (ಜೋಶ್ ಡೇವಿ, 10.1), 10–60 (ಬ್ರಾಡ್ ವೀಲ್, 10.2).
ಬೌಲಿಂಗ್: ಮೊಹಮ್ಮದ್ ನಬಿ 1–0–11–0, ಮುಜೀಬ್ ಉರ್ ರೆಹಮಾನ್ 4–0–20–5, ನವೀನ್ ಉಲ್ ಹಕ್ 2–0–12–1, ರಶೀದ್ ಖಾನ್ 2.2–0–9–4, ಕರೀಂ ಜನತ್ 1–0–6–0

ಫಲಿತಾಂಶ: ಅಫ್ಗಾನಿಸ್ತಾನಕ್ಕೆ 130 ರನ್‌ಗಳ ಜಯ

ಆ್ಯಷಸ್ ಸರಣಿ: ಇಂಗ್ಲೆಂಡ್ ತಂಡಕ್ಕೆ ಸ್ಟೋಕ್ಸ್ ಬಲ

ಲಂಡನ್ (ಪಿಟಿಐ): ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಅವರು ಆಸ್ಟ್ರೇಲಿಯಾ ಎದುರು ಈ ವರ್ಷಾಂತ್ಯದಲ್ಲಿ ನಡೆಯುವ ಆ್ಯಷಸ್ ಟೆಸ್ಟ್ ಕ್ರಿಕೆಟ್ ಸರಣಿಗೆ ಇಂಗ್ಲೆಂಡ್ ತಂಡಕ್ಕೆ ಸೇರ್ಪಡೆಯಾಗಿದ್ದಾರೆ.

ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವ ದೃಷ್ಟಿಯಿಂದ ಹಾಗೂ ಬೆರಳಿನ ಗಾಯದಿಂದ ಚೇತರಿಸಿಕೊಳ್ಳುವ ಉದ್ದೇಶದಿಂದ ಸ್ಟೋಕ್ಸ್ ಅನಿರ್ದಿಷ್ಟಾವಧಿಗೆ ಕ್ರಿಕೆಟ್‌ನಿಂದ ದೂರ ಉಳಿದಿದ್ದರು. ಈ ವರ್ಷದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯ ಮೊದಲಾರ್ಧದ ವೇಳೆ ಅವರ ಎಡಗೈ ತೋರುಬೆರಳಿಗೆ ಗಾಯವಾಗಿತ್ತು.

'ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡಲು ವಿರಾಮ ತೆಗೆದುಕೊಂಡಿದ್ದೆ. ಬೆರಳಿನ ಗಾಯದಿಂದ ಚೇತರಿಸಿಕೊಳ್ಳಲು ಸಮಯ ಬೇಕಿತ್ತು. ಈಗ ಸಹ ಆಟಗಾರರೊಂದಿಗೆ ಬೆರೆಯಲು ಕಾತರನಾಗಿದ್ದು, ಆಸ್ಟ್ರೇಲಿಯಾಕ್ಕೆ ತೆರಳಲು ಸಜ್ಜಾಗಿದ್ದೇನೆ' ಎಂದು ಸ್ಟೋಕ್ಸ್ ಹೇಳಿದ್ದಾಗಿ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ತಿಳಿಸಿದೆ.

'ಸ್ಟೋಕ್ಸ್ ಎರಡು ಬಾರಿ ಬೆರಳಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಸದ್ಯ ಅವರು ತರಬೇತಿಯನ್ನು ಪುನರಾರಂಭಿಸಲು ಇಸಿಬಿ ವೈದ್ಯಕೀಯ ತಂಡವು ಒಪ್ಪಿಗೆ ನೀಡಿದೆ' ಎಂದು ಇಸಿಬಿ ಹೇಳಿದೆ.

ಬವುಮಾ, ಕೀರನ್ ಬಳಗಕ್ಕೆ ಜಯದ ನಿರೀಕ್ಷೆ

ದಕ್ಷಿಣ ಆಫ್ರಿಕಾ–ವೆಸ್ಟ್ ಇಂಡೀಸ್ ಹಣಾಹಣಿ ಇಂದು

ಕ್ರಿಸ್ ಗೇಲ್ –ಎಎಫ್‌ಪಿ ಚಿತ್ರ

ದುಬೈ (ಪಿಟಿಐ): ಮೊದಲ ಪಂದ್ಯಗಳಲ್ಲಿ ಸೋತು ನಿರಾಸೆಗೆ ಒಳಗಾಗಿರುವ ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್ ತಂಡಗಳು ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಮಂಗಳವಾರ ಮುಖಾಮುಖಿಯಾಗಲಿವೆ. ಎರಡೂ ತಂಡಗಳು ಈ ಪಂದ್ಯದಲ್ಲಿ ಬ್ಯಾಟಿಂಗ್‌ಗೆ ಒತ್ತು ನೀಡಲು ಮುಂದಾಗುವ ಸಾಧ್ಯತೆ ಇದೆ.

ಮೊದಲ ಪಂದ್ಯದಲ್ಲಿ ಉಭಯ ತಂಡಗಳೂ ಬ್ಯಾಟಿಂಗ್ ವೈಫಲ್ಯ ಅನುಭವಿಸಿದ್ದವು. ಹಾಲಿ ಚಾಂಪಿಯನ್ ವೆಸ್ಟ್ ಇಂಡೀಸ್ 55 ರನ್‌ಗಳಿಗೆ ಪತನಗೊಂಡಿದ್ದರೆ ದಕ್ಷಿಣ ಆಫ್ರಿಕಾ 118 ರನ್ ಗಳಿಸಿ ಎದುರಾಳಿಗಳಿಗೆ ಮಣಿದಿತ್ತು. ಇತ್ತೀಚಿನ ಕೆಲವು ಪಂದ್ಯಗಳಲ್ಲಿ ದಕ್ಷಿಣ ಆಫ್ರಿಕಾದ ಆರಂಭಿಕ ಬ್ಯಾಟರ್‌ಗಳು ಸತತ ವೈಫಲ್ಯ ಅನುಭವಿಸಿದ್ದಾರೆ. ಡೇವಿಡ್ ಮಿಲ್ಲರ್ ಒಳಗೊಂಡ ಮಧ್ಯಮ ಕ್ರಮಾಂಕವೂ ನಿರೀಕ್ಷೆಗೆ ತಕ್ಕ ಸಾಮರ್ಥ್ಯ ತೋರುತ್ತಿಲ್ಲ.

ತಂಡದ ಬೌಲಿಂಗ್ ವಿಭಾಗ ಬಲಿಷ್ಠವಾಗಿದೆ. ಕಗಿಸೊ ರಬಾಡ, ಆ್ಯನ್ರಿಚ್ ನಾರ್ಕಿಯಾ, ತಬ್ರೇಜ್ ಸಂಶಿ ಮತ್ತು ಕೇಶವ್ ಮಹಾರಾಜ್ ಅವರ ಬೌಲಿಂಗ್‌ನಲ್ಲಿ ಯಾವುದೇ ತಂಡದ ಬ್ಯಾಟರ್‌ಗಳನ್ನು ನಿಯಂತ್ರಿಸುವಷ್ಟು ಮೊನಚು ಇದೆ.

ಎರಡು ಬಾರಿ ಪ್ರಶಸ್ತಿ ಗೆದ್ದಿರುವ ವೆಸ್ಟ್ ಇಂಡೀಸ್ ತಂಡದಲ್ಲಿ ಕ್ರಿಸ್ ಗೇಲ್ ಹೊರತುಪಡಿಸಿ ಬೇರೆ ಯಾರಿಗೂ ಮೊದಲ ಪಂದ್ಯದಲ್ಲಿ ಮಿಂಚಲು ಆಗಲಿಲ್ಲ. ಆರಂಭದಲ್ಲಿ ಅನುಭವಿಸಿದ ಆಘಾತದಿಂದ ತಂಡವನ್ನು ಮೇಲೆತ್ತಲು ಆ ಪಂದ್ಯದಲ್ಲಿ ಯಾರೂ ಮುಂದಾಗಲಿಲ್ಲ. ಒಂಬತ್ತು ಬ್ಯಾಟರ್‌ಗಳು ಭರ್ಜರಿ ಹೊಡೆತಗಳಿಗೆ ಕೈ ಹಾಕಿ ವಿಕೆಟ್ ಕಳೆದುಕೊಂಡಿದ್ದರು.

ಹೀಗಿದ್ದೂ ಈ ತಂಡವನ್ನು ಲಘುವಾಗಿ ಪರಿಗಣಿಸುವಂತಿಲ್ಲ. ಯಾವುದೇ ಸಂದರ್ಭದಲ್ಲಿ ಹಳಿಗೆ ಮರಳುವ ಸಾಮರ್ಥ್ಯ ಕೀರನ್ ಪೊಲಾರ್ಡ್ ಬಳಗಕ್ಕೆ ಇದೆ.


ಆ್ಯನ್ರಿಚ್ ನಾರ್ಕಿಯ –ರಾಯಿಟರ್ಸ್ ಚಿತ್ರ

ವಿಶ್ವಕಪ್‌ನಲ್ಲಿ ಬಲಾಬಲ

ತಂಡ	ಪಂದ್ಯ	ಜಯ	ಸೋಲು	ಟೈ
ದಕ್ಷಿಣ ಆಫ್ರಿಕಾ	31	18	13	-
ವೆಸ್ಟ್ ಇಂಡೀಸ್	32	17	13	2

ಹಿಂದಿನ 5 ಪಂದ್ಯಗಳ ಫಲಿತಾಂಶ

ದಕ್ಷಿಣ ಆಫ್ರಿಕಾ
ಆಸ್ಟ್ರೇಲಿಯಾ ವಿರುದ್ಧ 5 ವಿಕೆಟ್ ಸೋಲು
ಶ್ರೀಲಂಕಾ ವಿರುದ್ಧ 10 ವಿಕೆಟ್ ಗೆಲುವು
ಶ್ರೀಲಂಕಾ ವಿರುದ್ಧ 9 ವಿಕೆಟ್ ಗೆಲುವು
ಶ್ರೀಲಂಕಾ ವಿರುದ್ಧ 28 ರನ್ ಗೆಲುವು
ಐರ್ಲೆಂಡ್ ವಿರುದ್ಧ 49 ರನ್ ಗೆಲುವು
ವೆಸ್ಟ್ ಇಂಡೀಸ್
ಇಂಗ್ಲೆಂಡ್ ವಿರುದ್ಧ 6 ವಿಕೆಟ್ ಸೋಲು
ಪಾಕಿಸ್ತಾನ ಎದುರು ಫಲಿತಾಂಶವಿಲ್ಲ
ಪಾಕಿಸ್ತಾನ ಎದುರು ಫಲಿತಾಂಶವಿಲ್ಲ
ಪಾಕಿಸ್ತಾನ ಎದುರು 7 ರನ್ ಸೋಲು
ಪಾಕಿಸ್ತಾನ ಎದುರು ಫಲಿತಾಂಶವಿಲ್ಲ

ಟಿ20 ರ‍್ಯಾಂಕಿಂಗ್

ದಕ್ಷಿಣ ಆಫ್ರಿಕಾ	ವೆಸ್ಟ್ ಇಂಡೀಸ್
5	9

ಪಂದ್ಯ ಆರಂಭ ಮಧ್ಯಾಹ್ನ 3.30 (ಭಾರತೀಯ ಕಾಲಮಾನ)

ಲೈವ್ ಸ್ಟಾರ್ ಸ್ಪೋರ್ಟ್ಸ್